ಶನಿವಾರ, ಡಿಸೆಂಬರ್ 3, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಪೋಷಕರು ಮಕ್ಕಳೊಂದಿಗೆ ಮನಬಿಚ್ಚಿ ಮಾತಾಡಿದರೆ ಬಹುತೇಕ ಸಮಸ್ಯೆಗಳಿಗೆ ಪರಿಹಾರ ಸಿಗಲಿದೆ

PRM/KA/RERA/1251/446/PR/181122/005482
For more details, visit: rera.karnataka.gov.in

A home ~~near, close to, next to, opposite, behind, 10 minutes from, 5 minutes away,~~ at KR PURAM

Just ₹5,499/SFT. better priced than others in the market (₹7500/SFT.)

LAUNCHING
CASAGRAND
MERIDIAN
BANG ON OMR, KR PURAM

MARKET PRICE	CASAGRAND LAUNCH PRICE	EARLY BIRD OFFER PRICE	
~~₹7,500~~ PER SFT.	~~₹5,799~~ PER SFT.	₹5,499 PER SFT. (For the first 25 bookings only)	2 & 3 BHK Superior & Pinnacle Homes at KR Puram from ₹85L

BIG REASONS TO BUY

- Bang on OMR Main Rd near hanging bridge
- Close to KR Puram & Baiyappanahalli Metro Station
- 70+ world-class amenities
- Best priced project in KR Puram

SALIENT FEATURES

- Elegantly crafted **215 apartments** spread across **3.35 acres**
- Superior **2 & 3 BHK** apartments with **B+G+14 floors structure**
- **7000 sqft lavish clubhouse** with world-class amenities - Gym, infinity swimming pool, sky cinema, galaxy lounge & more
- **80% open space** & **2.27 acres** of landscaped greenery & recreational amenities
- **Vaastu compliant** homes designed with zero dead space

INCREDIBLY PRICED

TYPE	Size (sft)	Casagrand Launch Price (₹)	Early Bird Price (₹)
2 BHK	1302 - 1522	~~88 L - 1.13 Cr~~	85 L - 1.08 Cr
3 BHK	1633 - 2045	~~1.14 Cr - 1.5 Cr~~	1.09 Cr - 1.44 Cr

Total Units: **215** | Sold Out: **23** | Available Units: **192**

COMPLETION IN 18 MONTHS

*T&C apply.

CREDAI

Exclusive site visit available | Visit model house at site

77956 54058 | www.casagrand.co.in

CASAGRAND
building aspirations

ಶನಿವಾರ, ಡಿಸೆಂಬರ್ 3, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ
ಚೀನಾದಲ್ಲಿ ನಡೆಯುತ್ತಿರುವ 'ವೈಟ್ ಪೇಪರ್' ಪ್ರತಿಭಟನೆಗೆ ನವದೆಹಲಿಯಲ್ಲಿ ಶುಕ್ರವಾರ ಟಿಬೆಟಿಯನ್ ಬಾಲಕಿಯೊಬ್ಬಳು ಬೆಂಬಲ ಸೂಚಿಸಿದ ಪರಿ

ಸಿಎಂ ಭೂಪೇಂದ್ರ ತವರು ಕ್ಷೇತ್ರದಲ್ಲಿ ಪ್ರತಿಷ್ಠೆ ಪಣ

ಗುಜರಾತ್ ಚುನಾವಣೆ

ಅಖಾಡದಲ್ಲೊಂದು ಸುತ್ತು

• ಮಂಜುನಾಥ ಹೆಬ್ಬಾರ್

ಘಟ್ಲೋಡಿಯಾ (ಗುಜರಾತ್): ಗುಜರಾತ್‌ಗೆ ಕಡಿಮೆ ಅವಧಿಯಲ್ಲೇ ಇಬ್ಬರು ಮುಖ್ಯಮಂತ್ರಿಗಳನ್ನು ನೀಡಿದ ಕ್ಷೇತ್ರವಿದು. 2017ರ ಚುನಾವಣೆಯಲ್ಲಿ ಬಿಜೆಪಿಗೆ ದಾಖಲೆ ಅಂತರದಿಂದ ಗೆಲುವು ತಂದುಕೊಟ್ಟ ಕ್ಷೇತ್ರವೂ ಹೌದು. ಅಂದಹಾಗೆ, ಇದು ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರ ತವರು ಕ್ಷೇತ್ರ.

ಬಿಜೆಪಿಗೆ ಪ್ರತಿಷ್ಠೆಯ ಕಣವಾಗಿರುವ ಈ ಕ್ಷೇತ್ರದಲ್ಲಿ 2012ರಲ್ಲಿ ಕಾಂಗ್ರೆಸ್ 44 ಸಾವಿರ ಹಾಗೂ 2017ರಲ್ಲಿ 57 ಸಾವಿರ ಮತಗಳನ್ನು ಪಡೆದಿತ್ತು. ಕಾಂಗ್ರೆಸ್ ಈ ಚುನಾವಣೆಯಲ್ಲಿ ಪ್ರಬಲ ಅಭ್ಯರ್ಥಿಯನ್ನು ಕಣಕ್ಕೆ ಇಳಿದಿದೆ. ರಾಜ್ಯಸಭಾ ಸದಸ್ಯೆ ಅಮಿ ಯಾಜ್ನಿಕ್ ಅವರು ಕೈ ಪಾಳಯದ ಅಭ್ಯರ್ಥಿ. ಗುಜರಾತ್ ಹೈಕೋರ್ಟ್‌ನಲ್ಲಿ ಸರ್ಕಾರಿ ವಕೀಲರಾಗಿದ್ದ ಯಾಜ್ನಿಕ್ ಅವರು 2018ರ ಚುನಾವಣೆಯಲ್ಲಿ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದರು.

ಗುಜರಾತ್‌ನ ಆರ್ಥಿಕ ರಾಜಧಾನಿ ಅಹಮದಾಬಾದ್‌ನಿಂದ 10 ಕಿ.ಮೀ. ದೂರದಲ್ಲಿರುವ ಈ ಕ್ಷೇತ್ರವು ಸಾಕಷ್ಟು ಅಭಿವೃದ್ಧಿ ಹೊಂದಿರುವ ವಾಣಿಜ್ಯ ಹಾಗೂ ವಸತಿ ಪ್ರದೇಶವೆಂದು ಗುರುತಿಸಿಕೊಂಡಿದೆ. ಅಹಮದಾಬಾದ್ ಜಿಲ್ಲೆಯ 21 ಕ್ಷೇತ್ರಗಳ ಪೈಕಿ ಇದೂ ಒಂದು. ಕ್ಷೇತ್ರದಲ್ಲಿ 3.74 ಲಕ್ಷ ಮತದಾರರು ಇದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪ್ರತಿನಿಧಿಸುವ ಗಾಂಧಿನಗರ ಲೋಕಸಭಾ ಕ್ಷೇತ್ರದ ಭಾಗವಾಗಿದೆ ಈ ಕ್ಷೇತ್ರ.

2008ರಲ್ಲಿ ಕ್ಷೇತ್ರಗಳ ಮರುವಿಂಗಡಣೆ ಬಳಿಕ ಕ್ಷೇತ್ರ ಅಸ್ತಿತ್ವಕ್ಕೆ ಬಂತು. 2012ರಲ್ಲಿ ಬಿಜೆಪಿಯ ಮಾಜಿ ಮುಖ್ಯಮಂತ್ರಿ ಆನಂದಿಬೆನ್ ಪಟೇಲ್ ಈ ಕ್ಷೇತ್ರದಿಂದ ಆಯ್ಕೆಯಾದರು. ಅವರ ಗೆಲುವಿನ ಅಂತರ 1.10 ಲಕ್ಷ ಮತಗಳು. ಆನಂದಿಬೆನ್ ಪಟೇಲ್ ಅವರಿಗೆ ಭೂಪೇಂದ್ರ ಅವರು ನಿಕಟವರ್ತಿ.

2017ರಲ್ಲಿ ಪಟೇಲ್ ಅವರು ಘಟ್ಲೋಡಿಯಾ ಕ್ಷೇತ್ರದಿಂದ ಮೊದಲ ಬಾರಿ ವಿಧಾನಸಭಾ ಚುನಾವಣೆ ಎದುರಿಸಿದರು. ಆ ಚುನಾವಣೆಯಲ್ಲಿ ದಾಖಲೆ ಅಂತರದಲ್ಲಿ ಗೆದ್ದರು. ಅವರ ಗೆಲುವಿನ ಅಂತರ 1.17 ಲಕ್ಷ ಮತಗಳು. ಈ ಕ್ಷೇತ್ರದಲ್ಲಿ ಪಾಟೀದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಕ್ಷೇತ್ರವು 2015ರ ಪಾಟೀದಾರ ಆಂದೋಲನದ ಕೇಂದ್ರಬಿಂದು ಆಗಿತ್ತು. ಆದರೂ, ಈ ಕ್ಷೇತ್ರದಿಂದ ಬಿಜೆಪಿಯ ಗೆಲುವಿನ ಓಟಕ್ಕೆ ಧಕ್ಕೆ ಆಗಿರಲಿಲ್ಲ. ಪಾಟೀದಾರ್ ಆಂದೋಲನವು ಚುನಾವಣಾ ವಿಷಯವೇ ಆಗಿಲ್ಲ. ಅದೊಂದು ಮುಗಿದ ಅಧ್ಯಾಯ ಎಂದು ಜನರು ಹೇಳುತ್ತಾರೆ. ಕ್ಷೇತ್ರದ ಉದ್ದಕ್ಕೂ ಬಿಜೆಪಿ ಬ್ಯಾನರ್‌ಗಳೇ ಎದ್ದು ಕಾಣುತ್ತವೆ. ಉಳಿದ ಪಕ್ಷಗಳು ಸದ್ದಿಲ್ಲದೆ ಪ್ರಚಾರದಲ್ಲಿ ತೊಡಗಿವೆ.

ಕಳೆದ ಎರಡು ಚುನಾವಣೆಗಳಲ್ಲಿ ಕಾಡ್ವಾ ಪಾಟೀದಾರ್ ಸಮುದಾಯವು ಬಿಜೆಪಿಯಿಂದ ದೂರ ಸರಿದಿತ್ತು. ಈ ಸಮುದಾಯವನ್ನು ಮತ್ತೆ ತನ್ನತ್ತ ಸೆಳೆದುಕೊಳ್ಳಲು ಮಹತ್ವದ ಹೆಜ್ಜೆ ಇರಿಸಿದ್ದ ಬಿಜೆಪಿ, ಭೂಪೇಂದ್ರ ಪಟೇಲ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿತ್ತು. ಪಟೇಲ್ ಅವರು ತಳಮಟ್ಟದಿಂದ ಹಂತ ಹಂತವಾಗಿ ಬೆಳೆದವರು. ನಗರಸಭೆಯಿಂದ ತಮ್ಮ ರಾಜಕೀಯ ಆರಂಭಿಸಿದವರು. ಅವರು ಅಹಮದಾಬಾದ್ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. 'ಅವರ ಬಗ್ಗೆ ಕ್ಷೇತ್ರದಲ್ಲಿ ಸದಭಿಪ್ರಾಯ ಇದೆ. ಕಾಂಗ್ರೆಸ್ ಹಾಗೂ ಎಎಪಿ ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿರುವುದರಿಂದ ಈ ಸಲ ಗೆಲುವಿನ ಅಂತರ ಕಡಿಮೆಯಾಗಬಹುದು' ಎನ್ನುತ್ತಾರೆ ಘಟ್ಲೋಡಿಯಾದ ನಿವಾಸಿ ಮನೀಷ್.

'ಕ್ಷೇತ್ರದ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಉತ್ತಮ ರಸ್ತೆಗಳಿವೆ. ಎಲ್ಲ ಮೂಲಸೌಕರ್ಯ ವ್ಯವಸ್ಥೆಗಳಿವೆ. ಕುಡಿಯುವ ನೀರು ಹಾಗೂ ಒಳಚರಂಡಿ ಸೌಲಭ್ಯಗಳಿವೆ. 10 ವರ್ಷಗಳಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸಗಳು ಆಗಿವೆ. ಬೇರೆ ಕ್ಷೇತ್ರಗಳಿಗೆ ಹೋಲಿಸಿದರೆ ಇಲ್ಲಿ ಅಭಿವೃದ್ಧಿ ಎದ್ದು ಕಾಣುತ್ತದೆ' ಎಂದೂ ಅವರು ಹೇಳುತ್ತಾರೆ.

ವ್ಯಾಪಾರಿ ನೀಲೇಶ್ ಷಾ, 'ಮುಖ್ಯಮಂತ್ರಿಯವರ ತವರು ಕ್ಷೇತ್ರವಾದರೂ ಇಲ್ಲಿ ಸಮರ್ಪಕ ಒಳಚರಂಡಿ ವ್ಯವಸ್ಥೆ ಇಲ್ಲ. ಮಳೆಗಾಲದಲ್ಲಿ ಮನೆಗಳಿಗೆ ನೀರು ನುಗ್ಗುತ್ತದೆ. ಕುಡಿಯುವ ನೀರು ಸರಿಯಾಗಿ ಪೂರೈಕೆಯಾಗುತ್ತಿಲ್ಲ' ಎಂದು ಅಳಲು ತೋಡಿಕೊಳ್ಳುತ್ತಾರೆ.

ವಿಜಯ್ ಪಟೇಲ್ ಎಎಪಿಯ ಅಭ್ಯರ್ಥಿ. ಎಎಪಿ ಅಭ್ಯರ್ಥಿ ಹಾಗೂ ಕಾರ್ಯಕರ್ತರು ಮನೆ ಮನೆಗೆ ತೆರಳಿ ಪ್ರಚಾರ ಮಾಡಿ ಬಿಜೆಪಿ ಸರ್ಕಾರದ ವೈಫಲ್ಯಗಳನ್ನು ತಿಳಿಸುತ್ತಿದ್ದಾರೆ. ಕಳೆದ ಎಂಟು ವರ್ಷಗಳಲ್ಲಿ ಬೆಲೆಗಳು ಯಾವ ರೀತಿ ಗಗನಕ್ಕೆ ಏರಿವೆ ಎಂಬುದನ್ನು ಉದಾಹರಣೆ ಸಹಿತ ಮತದಾರರಿಗೆ ತಿಳಿಸುತ್ತಿದ್ದಾರೆ.

'ಭೂಪೇಂದ್ರ ಪಟೇಲ್ ಮೃದು ಸ್ವಭಾವದವರು. ಆದರೆ, ಕ್ಷೇತ್ರದಲ್ಲಿ ಐದು ವರ್ಷಗಳಲ್ಲಿ ಅದ್ಭುತ ಕೆಲಸವನ್ನೇನೂ ಮಾಡಿಲ್ಲ. ಜತೆಗೆ, ಉತ್ತಮ ಮುಖ್ಯಮಂತ್ರಿ ಎಂದು ಹೇಳಲು ಸಾಧ್ಯವಿಲ್ಲ. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಹೇಳಿದ್ದನ್ನು ಅವರು ಪಾಲನೆ ಮಾಡುತ್ತಾರೆ. ಅವರು ರಬ್ಬರ್ ಸ್ಟ್ಯಾಂಪ್ ಅಷ್ಟೇ' ಎಂದು ಎಎಪಿ ಕಾರ್ಯಕರ್ತ ಅಜಯ್ ಬಾರೋಟ್ ದೂರುತ್ತಾರೆ.

ನರ್ಮದಾ ನೀರು ತಡೆದಿದ್ದ ಕಾಂಗ್ರೆಸ್: ಮೋದಿ

ಅಹಮದಾಬಾದ್ (ಪಿಟಿಐ): ಕಾಂಗ್ರೆಸ್‌ಗೆ ನಂಬಿಕೆ ಇರುವುದು ಯೋಜನೆಗಳನ್ನು ಸ್ಥಗಿತ ಗೊಳಿಸುವುದರಲ್ಲಿ, ವಿಳಂಬ ಮಾಡುವುದರಲ್ಲಿ ಮತ್ತು ದಾರಿ ತಪ್ಪಿಸುವುದರಲ್ಲಿ ಮಾತ್ರ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಗುಜರಾತ್‌ನ ಬನಾಸಕಾಂತಾ ಜಿಲ್ಲೆಯಲ್ಲಿ ಗುರುವಾರ ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಮೋದಿ ಅವರು ಪ್ರಚಾರ ನಡೆಸಿದರು. 'ರಾಜ್ಯದ ಬರಪೀಡಿತ ಪ್ರದೇಶಗಳಿಗೆ ನೀರು ಬರುವುದನ್ನು ಕಾಂಗ್ರೆಸ್ ತಡೆದು ನಿಲ್ಲಿಸಿತ್ತು. ನರ್ಮದಾ ನದಿಗೆ ಸರ್ದಾರ್ ಸರೋವರ ಅಣೆಕಟ್ಟು ಕಟ್ಟುವುದನ್ನು ವಿರೋಧಿಸಿದ್ದವರನ್ನು ಕಾಂಗ್ರೆಸ್ ಬೆಂಬಲಿಸಿತ್ತು. ಈ ಕಾರಣದಿಂದಲೇ ಇಷ್ಟು ವರ್ಷ ಈ ಪ್ರದೇಶಗಳಿಗೆ ನರ್ಮದಾ ನೀರು ಬಂದಿರಲಿಲ್ಲ' ಎಂದು ಮೋದಿ ಆರೋಪಿಸಿದ್ದಾರೆ.

ಆಣಂದ್ ಜಿಲ್ಲೆಯ ಸೊಜಿತ್ರಾದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾತನಾಡಿದರು –ಪಿಟಿಐ ಚಿತ್ರ

'ಇಲ್ಲಿ ಬರ ಬಂದಾಗ ಬಾವಿ ತೋಡುವ ಕೆಲಸ ನೀಡಲಾಗುತ್ತಿತ್ತು. ಆ ಕಾಮಗಾರಿಗಳಲ್ಲಿ ಕಾಂಗ್ರೆಸ್ ನಾಯಕರು ಲಂಚ ಹೊಡೆಯುತ್ತಿದ್ದರು. ನರ್ಮದಾ ನೀರನ್ನು ಇಲ್ಲಿಗೆ ತಂದರೆ, ಅಂತಹ ಲಂಚ ನಿಂತು ಹೋಗುತ್ತದೆ ಎಂಬ ಕಾರಣಕ್ಕೆ ಯೋಜನೆಯನ್ನು ವಿಳಂಬ ಮಾಡುತ್ತಾ, ಸ್ಥಗಿತಗೊಳಿಸುತ್ತಾ ಬಂದಿದ್ದರು. ಈಗ ಬಿಜೆಪಿ ಅಧಿಕಾರಕ್ಕೆ ಬಂದಿದ್ದರಿಂದ ಇಲ್ಲಿಗೆ ನರ್ಮದಾ ನೀರನ್ನು ಹರಿಸಲು ಸಾಧ್ಯವಾಗಿದೆ' ಎಂದು ಮೋದಿ ಹೇಳಿದ್ದಾರೆ.

'ಬಡವರಿಗೆ ನೀಡಲು ಎಂದು ಪಡಿತರ ನೀಡುತ್ತಿದ್ದರೆ, ಅದು ಅನರ್ಹರಿಗೆ ಹೋಗುತ್ತಿತ್ತು. ನಾವು ನಾಲ್ಕು ಕೋಟಿ ನಕಲಿ ಪಡಿತರ ಚೀಟಿಗಳನ್ನು ರದ್ದುಪಡಿಸಿದೆವು. ಇಂತಹ ಅಕ್ರಮಗಳನ್ನು ಮೋದಿ ಬಿಡುವುದಿಲ್ಲ. ಹೀಗಾಗಿಯೇ ಈಗ ನನ್ನನ್ನು ಕಾಂಗ್ರೆಸ್ಸಿಗರು ತೆಗಳುತ್ತಾರೆ' ಎಂದು ಪ್ರಧಾನಿ ಮೋದಿ ಆರೋಪಿಸಿದರು..

ಗುಜರಾತ್: ಶೇ 63.14ರಷ್ಟು ಮತದಾನ

ಗುಜರಾತ್ ವಿಧಾನಸಭೆಯ 89 ಕ್ಷೇತ್ರಗಳಿಗೆ ಗುರುವಾರ ನಡೆದ ಮತದಾನದ ಅಂತಿಮ ವರದಿಯನ್ನು ಚುನಾವಣಾ ಆಯೋಗವು ನೀಡಿದೆ. ಮೊದಲ ಹಂತದ ಮತದಾನದಲ್ಲಿ ಶೇ 63.14ರಷ್ಟು ಜನರು ತಮ್ಮ ಹಕ್ಕು ಚಲಾಯಿಸಿದ್ದಾರೆ. 2017ರ ಚುನಾವಣೆಗೆ (ಶೇ 66.75ರಷ್ಟು ಮತದಾನ) ಹೋಲಿಸಿದರೆ ಈ ಬಾರಿಯ ಮತದಾನದ ಪ್ರಮಾಣವು ಕಡಿಮೆಯಾಗಿದೆ ಎಂದು ಆಯೋಗವು ಹೇಳಿದೆ.

ಬುಡಕಟ್ಟು ಸಮುದಾಯಗಳ ಪ್ರಾಬಲ್ಯವಿರುವ ನರ್ಮದಾ ಜಿಲ್ಲೆಯಲ್ಲಿ ಅತಿಹೆಚ್ಚಿನ ಪ್ರಮಾಣದ ಮತದಾನ ದಾಖಲಾಗಿದೆ. ಜಿಲ್ಲೆಯ ಒಟ್ಟು ಮತದಾರರಲ್ಲಿ ಶೇ 78.24ರಷ್ಟು ಜನರು ತಮ್ಮ ಹಕ್ಕು ಚಲಾಯಿಸಿದ್ದಾರೆ. ನಂತರದ ಸ್ಥಾನದಲ್ಲಿ ತಾಪಿ ಜಿಲ್ಲೆಯಿದ್ದು, ಅಲ್ಲಿ ಶೇ 76.91ರಷ್ಟು ಮತದಾನ ನಡೆದಿದೆ. ಬೋಟದ್ ಜಿಲ್ಲೆಯಲ್ಲಿ ಅತ್ಯಂತ ಕಡಿಮೆ ಶೇ 57.58ರಷ್ಟು ಮತದಾನ ನಡೆದಿದೆ. ಎರಡನೇ ಹಂತದ ಮತದಾನವು ಡಿ.5ರಂದು ನಡೆಯಲಿದೆ. ಡಿ. 8ರಂದು ಮತಎಣಿಕೆ ನಡೆಯಲಿದೆ.

ಪ್ರಜಾ ಮತ
ಜನತಂತ್ರದ ಹಬ್ಬ 2022

ನುಡಿ-ಕಿಡಿ

ಮೊದಲ ಹಂತದ ಮತದಾನದ ನಂತರ ಕಾಂಗ್ರೆಸ್ ಮತಯಂತ್ರಗಳ ಬಗ್ಗೆ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಮತಯಂತ್ರಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ಆರೋಪಿಸಿದೆ. ಫಲಿತಾಂಶಕ್ಕೂ ಮೊದಲೇ ಕಾಂಗ್ರೆಸ್ ಸೋಲೊಪ್ಪಿಕೊಂಡಿರುವುದನ್ನು ಇದು ತೋರಿಸುತ್ತದೆ

ನರೇಂದ್ರ ಮೋದಿ, ಪ್ರಧಾನಿ

ಗುಜರಾತ್‌ನಲ್ಲಿ ಬಿಜೆಪಿಯ ಡಬಲ್ ಎಂಜಿನ್ ಸರ್ಕಾರ ವಿಫಲವಾಗಿದೆ. ಬೆಲೆ ಏರಿಕೆ ಮತ್ತು ನಿರುದ್ಯೋಗ ತಾಂಡವವಾಡುತ್ತಿದೆ. ರಾಜ್ಯದ ಸರ್ಕಾರಿ ಇಲಾಖೆ ಮತ್ತು ಸಂಸ್ಥೆಗಳಲ್ಲಿ ಐದು ಲಕ್ಷ ಹುದ್ದೆಗಳು ಖಾಲಿ ಇವೆ. ಅವುಗಳಲ್ಲಿ ಬಹುತೇಕವು ಎಸ್‌ಸಿ, ಎಸ್‌ಟಿ ಮತ್ತು ಒಬಿಸಿ ವರ್ಗಗಳಿಗೆ ಹೋಗುತ್ತವೆ ಎಂದೇ ಬಿಜೆಪಿ ಸರ್ಕಾರ ನೇಮಕಾತಿ ನಡೆಸುತ್ತಿಲ್ಲ

ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ಅಧ್ಯಕ್ಷ

ಬಹು ಮಾಧ್ಯಮ ಪ್ರಜಾವಾಣಿ@75
www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಎಚ್.ಆರ್. ಲೀಲಾವತಿ
ಸೆಲೆಬ್ರಿಟಿ LIVE
ಗಾಯಕಿ

ಲೀಲಾ ಗಾನ
ಬೆಳಿಗ್ಗೆ 10 ಗಂಟೆಗೆ

ಪಾರದರ್ಶಕ ಕೊಲಿಜಿಯಂ ವ್ಯವಸ್ಥೆ ಹಳಿ ತಪ್ಪಿಸದಿರಿ: 'ಸುಪ್ರೀಂ'

ನವದೆಹಲಿ (ಪಿಟಿಐ): ಈಗಾಗಲೇ ಇರುವ ಕೊಲಿಜಿಯಂ ವ್ಯವಸ್ಥೆಯು ಉನ್ನತ ನ್ಯಾಯಾಲಯದ ಅತ್ಯಂತ ಪಾರದರ್ಶಕ ಸಂಸ್ಥೆಗಳಲ್ಲಿ ಒಂದೆನಿಸಿದೆ. ಸಂಬಂಧಪಡದ ಕೆಲವರ ಹೇಳಿಕೆಗಳ ಆಧಾರದ ಮೇಲೆ ಈ ವ್ಯವಸ್ಥೆಯ ಹಳಿ ತಪ್ಪಿಸಬಾರದು ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಖಡಕ್ಕಾಗಿ ಹೇಳಿದೆ.

ಸಾಂವಿಧಾನಿಕ ನ್ಯಾಯಾಲಯಗಳಿಗೆ ನ್ಯಾಯಾಧೀಶರನ್ನು ನೇಮಕ ಮಾಡುವ ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ವ್ಯವಸ್ಥೆಯ ಬಗ್ಗೆ ಸರ್ಕಾರದ ಜತೆಗೆ ಉಂಟಾಗಿರುವ ವಿವಾದ, ಕೊಲಿಜಿಯಂನಲ್ಲಿ ಹಿಂದೊಮ್ಮೆ ಸದಸ್ಯರಾಗಿದ್ದ ಉನ್ನತ ನ್ಯಾಯಾಲಯದ ಮಾಜಿ ನ್ಯಾಯಾಧೀಶರು ಕೊಲಿಜಿಯಂ ವ್ಯವಸ್ಥೆಯ ಕಾರ್ಯನಿರ್ವಹಣೆ ಕುರಿತು ನೀಡಿರುವ ಹೇಳಿಕೆ ಪ್ರತಿಕ್ರಿಯಿಸಲು ಬಯಸುವುದಿಲ್ಲ ಎಂದು ಅದು ಹೇಳಿದೆ.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ಪೀಠವು, 'ಹಿಂದೆ ಕೊಲಿಜಿಯಂನ ಭಾಗವಾಗಿದ್ದವರು (ಮಾಜಿ ನ್ಯಾಯಮೂರ್ತಿಗಳು) ಅವರದೇ ಕಾಲದಲ್ಲಿ ಕೊಲಿಜಿಯಂ ತೆಗೆದುಕೊಂಡ ನಿರ್ಧಾರಗಳನ್ನು ಟೀಕಿಸುವುದು ಇತ್ತೀಚಿನ ದಿನಗಳಲ್ಲಿ ಒಂದು ಫ್ಯಾಷನ್ ಆಗಿ ಮಾರ್ಪಟ್ಟಿದೆ. ಅವರ ಟೀಕೆಗಳ ಬಗ್ಗೆ ನಾವು ಏನನ್ನೂ ಹೇಳಲು ಬಯಸುವುದಿಲ್ಲ' ಎಂದಿತು.

'ಕೊಲಿಜಿಯಂ ಕೆಲವರ ಹೇಳಿಕೆಗಳ ಆಧಾರದ ಮೇಲೆ ಕೆಲಸ ಮಾಡುವುದಿಲ್ಲ. ಅದು ತನ್ನ ಕರ್ತವ್ಯಕ್ಕೆ ಅನುಗುಣವಾಗಿ ಕಾರ್ಯನಿರ್ವಹಿಸಲಿದೆ. ಇದು ಅತ್ಯಂತ ಪಾರದರ್ಶಕ ಸಂಸ್ಥೆಗಳಲ್ಲಿ ಒಂದು' ಎಂದು ಪೀಠ ಹೇಳಿದೆ.

ಆರ್‌ಟಿಐ ಕಾರ್ಯಕರ್ತೆ ಅಂಜಲಿ ಭಾರದ್ವಾಜ್ ಅವರ ಅರ್ಜಿಯ ವಿಚಾರಣೆ ನಡೆಸುವಾಗ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿಕೆ • ಪ್ರಜಾವಾಣಿ ವರದಿ ಉಲ್ಲೇಖ

'ಶೇ 42ರಷ್ಟು ಅನುದಾನ ಬಳಕೆ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ರಾಜ್ಯದಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆಯಡಿ (ಎಸ್‌ಸಿಎಸ್‌ಪಿ- ಟಿಎಸ್‌ಪಿ) 2022–23ನೇ ಸಾಲಿಗೆ ಸರ್ಕಾರ ₹ 29,165.81 ಕೋಟಿ ಹಂಚಿಕೆ ಮಾಡಿದೆ. ಅದರಲ್ಲಿ 2022ರ ನವೆಂಬರ್ ಅಂತ್ಯದವರೆಗೆ ₹13,702.45 ಕೋಟಿ ಬಿಡುಗಡೆಯಾಗಿದ್ದು, ₹12,227 ಕೋಟಿ ವೆಚ್ಚವಾಗಿದೆ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಈ ವಿವರ ನೀಡಿದ ಅವರು, 'ಹಂಚಿಕೆಯಾದ ಅನುದಾನದಲ್ಲಿ ನವೆಂಬರ್ ಅಂತ್ಯದವರೆಗೆ ಶೇ 42ರಷ್ಟು, ಬಿಡುಗಡೆಯಾದ ಅನುದಾನದಲ್ಲಿ ಶೇ 89ರಷ್ಟು ಬಳಕೆಯಾಗಿದೆ. ಇದುವರೆಗೆ ಯಾವ ವರ್ಷವೂ ಇಷ್ಟೊಂದು ಅನುದಾನ ಬಳಕೆಯಾಗಿರಲಿಲ್ಲ. ಅನುದಾನ ಬಳಕೆಗೆ 2023ರ ಮಾರ್ಚ್‌ವರೆಗೂ ಕಾಲಾವಕಾಶ ಇದೆ. ಆದರೂ, 2022ರ ಡಿಸೆಂಬರ್ ಒಳಗೆ ಪೂರ್ತಿ ಅನುದಾನ ಬಳಸುವಂತೆ ಇಲಾಖೆಗಳಿಗೆ ಸೂಚನೆ ನೀಡಿದ್ದೇನೆ' ಎಂದು ತಿಳಿಸಿದರು.

ಎಸ್‌ಸಿಎಸ್‌ಪಿ- ಟಿಎಸ್‌ಪಿ ಅನುದಾನದಲ್ಲಿ ಅಕ್ಟೋಬರ್ ಅಂತ್ಯದವರೆಗೆ ಶೇ 14.75ರಷ್ಟು ಮಾತ್ರ ಬಳಕೆಯಾದ ಬಗ್ಗೆ 'ಪ್ರಜಾವಾಣಿ'ಯು ಡಿ.1ರ ಸಂಚಿಕೆಯಲ್ಲಿ 'ದಲಿತ ಕಲ್ಯಾಣ- ಖರ್ಚಾಗದ ಹಣ' ಶೀರ್ಷಿಕೆಯಡಿ ವಿಶೇಷ ವರದಿಯನ್ನು ಪ್ರಕಟಿಸಿತ್ತು.

'ಪ್ರಜಾವಾಣಿ'ಯ ವಿಶೇಷ ವರದಿಯನ್ನು ಉಲ್ಲೇಖಿಸಿದ ಸಚಿವರು, 'ಅದರಲ್ಲಿ ಪ್ರಕಟವಾಗಿರುವುದಕ್ಕಿಂತ ಹೆಚ್ಚು ಅನುದಾನ ಬಳಕೆ ಆಗಿದೆ. ಅನುದಾನದಲ್ಲಿ ಕೃಷಿ ಇಲಾಖೆಯಲ್ಲಿ ಶೇ 14, ಅರಣ್ಯ ಇಲಾಖೆಯಲ್ಲಿ ಶೇ 12, ಉನ್ನತ ಶಿಕ್ಷಣ ಇಲಾಖೆಯಲ್ಲಿ ಶೇ 6, ಪ್ರಾಥಮಿಕ ಶಿಕ್ಷಣ ಇಲಾಖೆಯಲ್ಲಿ ಶೇ 18 ಹಾಗೂ ಕೌಶಲಾಭಿವೃದ್ಧಿ ಇಲಾಖೆಯಲ್ಲಿ ಶೇ 5ರಷ್ಟು ಅನುದಾನ ಮಾತ್ರ ಬಳಕೆ ಆಗಿರುವುದು ನಿಜ. ನಿರೀಕ್ಷಿತ ಪ್ರಗತಿ ಸಾಧಿಸದ ಇಲಾಖೆಗಳ ಅಧಿಕಾರಿಗಳಿಗೆ ನೋಟಿಸ್ ನೀಡಲು ಹಾಗೂ ಅಂತಹ ಇಲಾಖೆಗಳ ಅನುದಾನವನ್ನು ಹೆಚ್ಚುವರಿ ಅನುದಾನ ಕೋರಿರುವ ಇಲಾಖೆಗಳಿಗೆ ಮರು ಹಂಚಿಕೆಗೆ ಗುರುವಾರ ನಡೆದ ನೋಡಲ್ ಏಜೆನ್ಸಿ ಸಭೆಯಲ್ಲಿ ನಿರ್ಧರಿಸಿದ್ದೇವೆ' ಎಂದರು.

ಮರಕ್ಕೆ ಕಟ್ಟಿ ಹಲ್ಲೆ, ಕ್ರಮಕ್ಕೆ ಸೂಚನೆ

ಮರಕ್ಕೆ ಕಟ್ಟಿ ಹಲ್ಲೆ ನಡೆಸಿದ್ದರಿಂದ ಮನನೊಂದು, ಕೋಲಾರ ಜಿಲ್ಲೆಯ ಪರಿಶಿಷ್ಟ ಜಾತಿಯ ಯುವಕ ಉದಯ್ ಕಿರಣ್ ಆತ್ಮಹತ್ಯೆ ಮಾಡಿಕೊಂಡಿದ್ದು, ಈ ಘಟನೆಯನ್ನು ಸಚಿವರು ಖಂಡಿಸಿದರು.

'ಈ ಪ್ರಕರಣದಲ್ಲಿ ತಪ್ಪಿತಸ್ಥರು ಎಷ್ಟೇ ಬಲಾಢ್ಯರಾಗಿದ್ದರೂ ಅವರ ವಿರುದ್ಧ ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಬೇಕು ಎಂದು ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ಸೂಚನೆ ನೀಡಿದ್ದೇನೆ. ಸಂತ್ರಸ್ತನ ಕುಟುಂಬದವರನ್ನು ಶೀಘ್ರವೇ ಭೇಟಿ ಮಾಡುತ್ತೇನೆ' ಎಂದರು. 'ಹಿಂದುಳಿದ ವರ್ಗಗಳ ಇಲಾಖೆಯ ಎಲ್ಲ ವಿದ್ಯಾರ್ಥಿನಿಲಯಗಳಿಗೆ ಹೊಸ ದಿಂಬು ಹಾಗೂ ಹಾಸಿಗೆ ಖರೀದಿಸಲು ಸರ್ಕಾರ ₹ 100 ಕೋಟಿ ವಿಶೇಷ ಅನುದಾನ ಬಿಡುಗಡೆ ಮಾಡಿದೆ' ಎಂದು ಮಾಹಿತಿ ನೀಡಿದರು.

'25 ಜಾತಿಗಳ ಮೀಸಲಾತಿ ವರದಿ 3 ತಿಂಗಳಲ್ಲಿ ಸಲ್ಲಿಕೆ'

ಉಡುಪಿ: 'ರಾಜ್ಯದ ವಿವಿಧೆಡೆ ಸಂಗ್ರಹಿಸಿದ ಮಾಹಿತಿ ಆಧರಿಸಿ 25 ವಿವಿಧ ಜಾತಿಗಳ ಮೀಸಲಾತಿಗೆ ಸಂಬಂಧಿಸಿದ ವರದಿಯನ್ನು ಒಂದು ತಿಂಗಳಲ್ಲಿ ಸರ್ಕಾರಕ್ಕೆ ಸಲ್ಲಿಸಲು ಸಿದ್ಧತೆ ನಡೆಯುತ್ತಿದೆ' ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಅವರು, 'ಈಗಾಗಲೇ 17 ಜಾತಿಗಳಿಗೆ ಸಂಬಂಧಿಸಿ ಅಧ್ಯಯನ ವರದಿ ಸಿದ್ಧಪಡಿಸಲಾಗಿದೆ. ಜಾತಿಯೇ ಇಲ್ಲದ ಅನಾಥ ಮಕ್ಕಳಿಗೂ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡುವಂತೆ ವರದಿಯಲ್ಲಿ ಶಿಫಾರಸು ಮಾಡಲಾಗಿದೆ ಎಂದು ತಿಳಿಸಿದರು.

ಉತ್ತರ ಕನ್ನಡ ಜಿಲ್ಲೆಯ ಕುಡುಬಿ ಜಾತಿಯವರು ತಮ್ಮನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಮನವಿ ಮಾಡಿದ್ದಾರೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮೀಸಲಾತಿಗೆ ಸೇರಿಸುವುದು ಹಿಂದುಳಿದ ವರ್ಗಗಳ ಆಯೋಗದ ವ್ಯಾಪ್ತಿಗೆ ಬರುವುದಿಲ್ಲ. ಆದರೆ ಅನುಸೂಚಿತ ಬುಡಕಟ್ಟು ಎಂದು ಗುರುತಿಸುವ ಅಧಿಕಾರ ಆಯೋಗಕ್ಕೆ ಇದೆ. ಅದರಂತೆ, ಕುಡುಬಿ ಜಾತಿಯವರನ್ನು ಅನುಸೂಚಿತ ಬುಡಕಟ್ಟು ಜಾತಿ ಪಟ್ಟಿಗೆ ಸೇರಿಸಲು ಪ್ರಯತ್ನ ನಡೆದಿದೆ ಎಂದರು.

> ಆಯೋಗದ ಅಧ್ಯಕ್ಷನಾಗಿರುವುದರಿಂದ ರಾಜಕೀಯ ಮಾತನಾಡುವುದಿಲ್ಲ. ಚುನಾವಣೆಗೆ ನಿಲ್ಲುವ ಸಂದರ್ಭ ಬಂದಲ್ಲಿ ರಾಜಿನಾಮೆ ನೀಡಿ ಈ ಬಗ್ಗೆ ನಿರ್ಧರಿಸುತ್ತೇನೆ.
>
> **ಕೆ.ಜಯಪ್ರಕಾಶ್ ಹೆಗ್ಡೆ,** ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ

ಪಂಚಮಸಾಲಿ ಮೀಸಲಾತಿ ಕುರಿತಂತೆ ಜಯ ಮೃತ್ಯುಂಜಯ ಸ್ವಾಮೀಜಿ ಅವರು ಆಯೋಗಕ್ಕೆ ಡಿ. 19ರ ಗಡುವು ನೀಡಿರುವುದಕ್ಕೆ ಪ್ರತಿಕ್ರಿಯಿಸಿದ ಹೆಗ್ಡೆ, 'ಮೀಸಲಾತಿ ಕುರಿತ ಮನವಿ, ಆದೇಶ, ವಾಸ್ತವಾಂಶದ ಪರಿಶೀಲನೆ ಮಾಡಿ ವರದಿ ನೀಡುವ ಜವಾಬ್ದಾರಿ ಸಾಂವಿಧಾನಿಕ ಸಂಸ್ಥೆಯಾಗಿರುವ ಆಯೋಗಕ್ಕೆ ಇದೆ' ಎಂದರು.

ಚುನಾಯಿತ ಪ್ರತಿನಿಧಿಯಾದರೆ ಒಳ್ಳೆಯದು: ಅನೇಕ ಕೆಲಸಗಳಿಗಾಗಿ ಜನರು ಈಗಲೂ ತಮ್ಮ ಬಳಿ ಬರುತ್ತಾರೆ. ಚುನಾಯಿತ ಜನಪ್ರತಿನಿಧಿಯಾದರೆ ನೇರವಾಗಿ ಅವರ ಕೆಲಸ ಮಾಡಿಕೊಡಲು ಸಾಧ್ಯವಾಗುತ್ತದೆ ಎಂದರು.

ರಥೋತ್ಸವ ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಕಾನಮಡುಗು ಶರಣಬಸವೇಶ್ವರ ಸ್ವಾಮಿ ರಥೋತ್ಸವ ಶುಕ್ರವಾರ ನಡೆಯಿತು –ಪ್ರಜಾವಾಣಿ ಚಿತ್ರ/ಕರಿಬಸವರಾಜ ಜಿ.

ವಾಣಿಜ್ಯ ತೆರಿಗೆ ಇಲಾಖೆ: 18 ಮಂದಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವಂಚನೆಯಲ್ಲಿ ಶಾಮೀಲಾದ ಆರೋಪದ ಮೇಲೆ ವಾಣಿಜ್ಯ ತೆರಿಗೆ ಇಲಾಖೆಯ ಜಂಟಿ ಆಯುಕ್ತೆ, ಮೂವರು ಸಹಾಯಕ ಆಯುಕ್ತರು ಸೇರಿದಂತೆ 18 ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ಜಿಎಸ್‌ಟಿ ವಂಚಿಸಲು ಅನುಕೂಲವಾಗುವಂತೆ ಸರಕು ಸಾಗಣೆ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲು ಲಂಚ ಪಡೆಯುತ್ತಿದ್ದ ಆರೋಪ ಈ ಎಲ್ಲರ ಮೇಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸೂಚನೆಯಂತೆ 18 ಮಂದಿಯನ್ನೂ ಅಮಾನತುಗೊಳಿಸಿ ಇತ್ತೀಚೆಗೆ ಆದೇಶ ಹೊರಡಿಸಲಾಗಿದೆ.

ವಾಣಿಜ್ಯ ತೆರಿಗೆ ಇಲಾಖೆಯ ಮೈಸೂರು ವಲಯದ ಜಾರಿ ವಿಭಾಗದ ಜಂಟಿ ಆಯುಕ್ತೆ ಎಸ್.ಜಿ. ಸವಿತಾ, ಜಾರಿ ವಿಭಾಗದ ಸಹಾಯಕ ಆಯುಕ್ತರಾದ ವಿ. ಉಮಾದೇವಿ (ಚಿಕ್ಕಬಳ್ಳಾಪುರ), ಕೆ.ಜಿ. ಶ್ರೀರಂಗಪ್ಪ (ಚಿತ್ರದುರ್ಗ), ಬಿ.ಎಲ್. ಕೇಶವಮೂರ್ತಿ (ಮಡಿಕೇರಿ) ಅಮಾನತುಗೊಂಡಿರುವ ಹಿರಿಯ ಅಧಿಕಾರಿಗಳು.

ಇಲಾಖೆಯ ಜಾರಿ ವಿಭಾಗದ ವಾಣಿಜ್ಯ ತೆರಿಗೆ ಅಧಿಕಾರಿಗಳಾದ ನಳಿನಾಕುಮಾರಿ, ಗಾಯತ್ರಿ ಎನ್.ಟಿ. (ಮೈಸೂರು), ಜಯರಾಂ ಎಸ್., ಜನಾರ್ದನ್ ಆರ್., ಅಪ್ಪು ಪೂಜಾರಿ (ಬೆಂಗಳೂರು), ವಾಣಿಜ್ಯ ತೆರಿಗೆ ನಿರೀಕ್ಷಕರಾದ ಸಿ.ಎನ್. ಪಾಟೀಲ್ (ಬೆಳಗಾವಿ), ವಾಸುದೇವ್ ಎಚ್.ಎಸ್. (ಮಡಿಕೇರಿ), ಯೋಗಾನಂದ್ ಕೆ. (ಮೈಸೂರು), ರಂಗಸ್ವಾಮಿ ಆರ್., ವಿಜಯ್‌ಕುಮಾರ್ ಜೆ. (ಚಿತ್ರದುರ್ಗ), ಶ್ರೀಧರ್ ಎಸ್., ದಿನೇಶ್ ಎಸ್. ಮತ್ತು ಉಮೇಶ್ ಆರ್. (ಬೆಂಗಳೂರು ಕೇಂದ್ರ ಕಚೇರಿ) ಹಾಗೂ ಮಡಿಕೇರಿಯ ಜಾರಿ ವಿಭಾಗದ ಸಹಾಯಕ ಆಯುಕ್ತರ ಕಚೇರಿಯ ಪ್ರಥಮ ದರ್ಜೆ ಸಹಾಯಕ ಧನರಾಜ್ ಎಂ.ಕೆ. ಅವರನ್ನು ಅಮಾನತು ಮಾಡಲಾಗಿದೆ.

ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳು ಲಂಚದ ಆಸೆಗೆ ಜಿಎಸ್‌ಟಿ ವಂಚಿಸಿ ಸರಕು ಸಾಗಣೆ ಮಾಡಲು ಅವಕಾಶ ಕಲ್ಪಿಸುತ್ತಿರುವ ಕುರಿತು ಖಾಸಗಿ ಸುದ್ದಿವಾಹಿನಿ ಕುಟುಕು ಕಾರ್ಯಾಚರಣೆ ನಡೆಸಿತ್ತು. ಲಂಚ ನೀಡಿದರೆ ಜಿಎಸ್‌ಟಿ ಪಾವತಿಸದೇ ಸರಕು ಸಾಗಿಸಲು ಅವಕಾಶ ಮಾಡಿಕೊಡುವುದಾಗಿ ಈ ಎಲ್ಲ ಅಧಿಕಾರಿಗಳು ಹಾಗೂ ಸಿಬ್ಬಂದಿ ಒಪ್ಪಿಕೊಂಡಿರುವುದು ರಹಸ್ಯ ಕ್ಯಾಮೆರಾಗಳಲ್ಲಿ ಸೆರೆಯಾಗಿತ್ತು. ಈ ಸಂಬಂಧ ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತರ ಆದೇಶದಂತೆ ಇಲಾಖೆಯ ಅಧಿಕಾರಿಗಳು ಪ್ರಾಥಮಿಕ ವಿಚಾರಣೆ ನಡೆಸಿದ್ದರು.

'ಅಕ್ರಮದಲ್ಲಿ ಶಾಮೀಲಾಗಿರುವ ರೀತಿಯಲ್ಲಿ 18 ಮಂದಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಮಾತನಾಡಿರುವ ವಿಡಿಯೊ ಸಾಕ್ಷ್ಯ ಆಧರಿಸಿ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ. ಈ ಕುರಿತು ಹೆಚ್ಚಿನ ತನಿಖೆ ನಡೆಯುತ್ತಿದೆ. ಆರೋಪಗಳು ದೃಢಪಟ್ಟರೆ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ. ಶಿಖಾ 'ಪ್ರಜಾವಾಣಿ'ಗೆ ತಿಳಿಸಿದರು.

ಮಾಮನಿ ಪತ್ನಿಗೆ ಟಿಕೆಟ್: ಸಿ.ಎಂ ಭರವಸೆ

ರಾಮದುರ್ಗ (ಬೆಳಗಾವಿ): ಇತ್ತೀಚೆಗೆ ನಿಧನರಾದ ವಿಧಾನಸಭೆ ಉಪಸಭಾಧ್ಯಕ್ಷ, ಸವದತ್ತಿ ಶಾಸಕ ಆನಂದ ಮಾಮನಿ ಅವರ ಪತ್ನಿ ರತ್ನಾ ಅವರಿಗೆ ಬಿಜೆಪಿ ಟಿಕೆಟ್ ನೀಡುವ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದ್ದಾರೆ.

ತಾಲ್ಲೂಕಿನ ದೊಡ್ಡಮಂಗಡಿಯಲ್ಲಿ ಬಸವೇಶ್ವರರ ಪುತ್ಥಳಿ ಅನಾವರಣ ಮಾಡಿದ ಬಳಿಕ ರತ್ನಾ ಮಾಮನಿ ಅವರೊಂದಿಗೆ ಮಾತನಾಡಿದ ಮುಖ್ಯಮಂತ್ರಿ, 'ನಿಮ್ಮ ವಿಚಾರವಾಗಿ ದೆಹಲಿಯಲ್ಲಿ ಮಾತನಾಡಿದ್ದೇನೆ. ಕಾಳಜಿ ಮಾಡಬೇಡಿ' ಎಂದರು.

ನೈಜ ಆರೋಪಿ ಬದಲು ಬೇರೊಬ್ಬನ ಬಂಧನ- ಶಿಸ್ತುಕ್ರಮಕ್ಕೆ ಆದೇಶ

ಇನ್‌ಸ್ಪೆಕ್ಟರ್, ಎಸ್‌.ಐ.ಗೆ ₹ 5 ಲಕ್ಷ ದಂಡ

ಪ್ರಜಾವಾಣಿ ವಾರ್ತೆ

ಮಂಗಳೂರು: ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ ಕಾಯ್ದೆ (ಪೋಕ್ಸೊ) ಪ್ರಕರಣದಲ್ಲಿ ನಿಜವಾದ ಆರೋಪಿ ಬಂಧಿಸದೆ, ಅದೇ ಹೆಸರಿನ ಬೇರೆ ವ್ಯಕ್ತಿಯನ್ನು ಬಂಧಿಸಿ ಸುಮಾರು 1 ವರ್ಷ ನ್ಯಾಯಾಂಗ ಬಂಧನದಲ್ಲಿರುವಂತೆ ಮಾಡಿದ ಇಬ್ಬರು ತನಿಖಾಧಿಕಾರಿಗಳಿಗೆ ಸ್ಥಳೀಯ ನ್ಯಾಯಾಲಯ ₹ 5 ಲಕ್ಷ ದಂಡ ವಿಧಿಸಿದೆ.

ನಗರದ ಮಹಿಳಾ ಪೊಲೀಸ್ ಠಾಣೆಯಲ್ಲಿ ಈ ಹಿಂದೆ ಇನ್‌ಸ್ಪೆಕ್ಟರ್ ಆಗಿದ್ದ ರೇವತಿ (ಪ್ರಕರಣದ ತನಿಖಾಧಿಕಾರಿ) ಮತ್ತು ಎಸ್.ಐ ಆಗಿದ್ದ ರೋಸಮ್ಮ ಪಿ.ಪಿ. ಅವರು, ಬಂಧನಕ್ಕೊಳಗಾಗಿದ್ದ ಆರೋಪಿಯ ಹೆಸರಿನ ನವೀನ್ ಸಿಕ್ವೇರಾ ಅವರಿಗೆ ತಮ್ಮ ಕಿಸೆಯಿಂದ ₹5 ಲಕ್ಷ ಪರಿಹಾರ ನೀಡಬೇಕು ಎಂದು ದಕ್ಷಿಣ ಕನ್ನಡ ಜಿಲ್ಲಾ ಎರಡನೇ ಹೆಚ್ಚುವರಿ ತ್ವರಿತ ಗತಿಯ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಇಬ್ಬರು ಪೊಲೀಸ್ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳುವಂತೆ ರಾಜ್ಯ ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರಿಗೆ ನ್ಯಾಯಾಧೀಶರಾದ ಕೆ.ಯು.ರಾಧಾಕೃಷ್ಣ ಆದೇಶಿಸಿದ್ದಾರೆ. ನವೀನ್ ಸಿಕ್ವೇರಾ ಅವರನ್ನು ನಿರಪರಾಧಿ ಎಂದು ಪರಿಗಣಿಸಿ ಬಿಡುಗಡೆ ಮಾಡಿದ್ದಾರೆ.

ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ನಡೆದಿದ್ದ ಬಾಲಕಿ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಆರೋಪಿ ನವೀನ್ ಆರೋಪಿಯಾಗಿದ್ದ. ಬಾಲಕಿ ಹೇಳಿಕೆ ಆಧರಿಸಿ ಸಬ್ ಇನ್‌ಸ್ಪೆಕ್ಟರ್ ರೋಸಮ್ಮ ಪಿ.ಪಿ ಅವರು ಪೋಕ್ಸೊ ಕಾಯ್ದೆಯಡಿ 2021ರ ನವೆಂಬರ್‌ನಲ್ಲಿ ಪ್ರಕರಣ ದಾಖಲಿಸಿದ್ದು, ತನಿಖೆಯನ್ನು ಇನ್‌ಸ್ಪೆಕ್ಟರ್ ರೇವತಿ ಅವರಿಗೆ ಹಸ್ತಾಂತರಿಸಿದ್ದರು. ತನಿಖೆ ವೇಳೆ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣಾ ಎ.ಎಸ್.ಐ ಕುಮಾರ್, ನೈಜ ಆರೋಪಿಯ ಬದಲು ನವೀನ್ ಸಿಕ್ವೇರಾ ಎಂಬುವರನ್ನು ಬಂಧಿಸಿದ್ದರು.

ಸಂತ್ರಸ್ತ ಬಾಲಕಿಯು ದೂರಿನಲ್ಲಿ ಮತ್ತು ನ್ಯಾಯಾಧೀಶರ ಮುಂದೆ ನೀಡಿದ್ದ ಹೇಳಿಕೆಯಲ್ಲಿ ಆರೋಪಿ ಹೆಸರನ್ನು ನವೀನ್ ಎಂದು ಉಲ್ಲೇಖಿಸಿದ್ದಳು. ಪ್ರಕರಣದಲ್ಲಿ ಸಾಕ್ಷ್ಯ ಹೇಳಿದವರು ಕೂಡಾ ಆರೋಪಿಯ ಹೆಸರನ್ನು ನವೀನ್ ಎಂದು ಉಲ್ಲೇಖಿಸಿದ್ದರು. ಲೇಡಿಗೋಷನ್ ಆಸ್ಪತ್ರೆಯ ವೈದ್ಯಕೀಯ ದಾಖಲೆಗಳಲ್ಲೂ ನವೀನ್ ಎಂಬ ಹೆಸರು ನಮೂದಾಗಿತ್ತು. ನವೀನ್ ಸಿಕ್ವೇರಾ ಎಂಬುವರನ್ನು ಆರೋಪಿಯನ್ನಾಗಿಸಿ ಇನ್‌ಸ್ಪೆಕ್ಟರ್ ರೇವತಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ನ್ಯಾಯಾಲಯದಲ್ಲಿ ವಿಚಾರಣೆಯ ಸಂದರ್ಭದಲ್ಲಿ ಸಂತ್ರಸ್ತೆಯು ಆರೋಪಿ ನವೀನ್ ವಯಸ್ಸು ಸುಮಾರು 25ರಿಂದ 26 ಎಂದು ತಿಳಿಸಿದ್ದಳು. ಆದರೆ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದ ನವೀನ್ ಸಿಕ್ವೇರಾ ಅವರಿಗೆ 47 ವರ್ಷ ವಯಸ್ಸಾಗಿತ್ತು.

'ಪೊಲೀಸರು ತಪ್ಪು ವ್ಯಕ್ತಿಯನ್ನು ಬಂಧಿಸಿದ್ದಾರೆ. ಬಂಧಿತ ವ್ಯಕ್ತಿಯ ಗುರುತು ಪತ್ತೆಗೆ ಸಂತ್ರಸ್ತೆಯ ಮುಂದೆ ಹಾಜರುಪಡಿಸದೇ, ನೇರ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ' ಎಂದು ನವೀನ್ ಸಿಕ್ವೇರಾ ಪರ ವಕೀಲ ರಾಜೇಶ್ ಕುಮಾರ್ ಅಮ್ಟಾಡಿ ಮತ್ತು ಗಿರೀಶ್ ಶೆಟ್ಟಿ ವಾದಿಸಿದ್ದರು. ಇದು ವಿಚಾರಣೆ ವೇಳೆಯೂ ಸಾಬೀತಾಗಿತ್ತು.

ನವೀನ್ ಸಿಕ್ವೇರಾ ಅವರನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ. ನಿಜವಾದ ಆರೋಪಿ ನವೀನ್ ಪತ್ತೆಗೆ ಪೊಲೀಸರು ಕ್ರಮಕೈಗೊಂಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅಸ್ಪೃಶ್ಯರ ಅವಹೇಳನ ಮಾಡಿಲ್ಲ: ಎಚ್‌ಡಿಕೆ

ತುಮಕೂರು: 'ಅಸ್ಪೃಶ್ಯರ ಬಗ್ಗೆ ನಾನು ಅವಹೇಳನಕಾರಿಯಾಗಿ ಮಾತನಾಡಿಲ್ಲ. ಬಿಜೆಪಿ ಆಡಳಿತದಲ್ಲಿ ಮುಸ್ಲಿಂ ಸಮುದಾಯವನ್ನು ಹೇಗೆ ನಡೆಸಿಕೊಳ್ಳುತ್ತಿದೆ ಎಂಬರ್ಥದಲ್ಲಿ ಮಾತನಾಡಿದ್ದೇನೆ' ಎಂದು ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

'ಜೆಡಿಎಸ್ ಅಧಿಕಾರಕ್ಕೆ ಬಂದಲ್ಲಿ ಸಿ.ಎಂ.ಇಬ್ರಾಹಿಂ ಏಕೆ ಮುಖ್ಯಮಂತ್ರಿ ಆಗಬಾರದು. ಅವರೇನು ಅಸ್ಪೃಶ್ಯರೆ' ಎಂದು ಅವರು ಪ್ರಶ್ನಿಸಿದ್ದರು. ಈ ಸಂಬಂಧ ಕುಮಾರಸ್ವಾಮಿ ವಿರುದ್ಧ ಛಲವಾದಿ ಮಹಾಸಭಾವು ದೊಡ್ಡಬಳ್ಳಾಪುರ ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿರುವ ಹಿನ್ನೆಲೆಯಲ್ಲಿ ಅವರು, ನಗರ ಹೊರವಲಯದ ದಿಬ್ಬೂರಿನಲ್ಲಿ ಶುಕ್ರವಾರ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು.

ವಿದ್ಯಾರ್ಥಿವೇತನ: ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರಿನ ವಿಜಯಲಕ್ಷ್ಮಿ ಆರ್.ಎಲ್.ಜಾಲಪ್ಪ ಎಜುಕೇಷನ್ ಫೌಂಡೇಷನ್‌ನಿಂದ 2022–23ನೇ ಸಾಲಿನ ಶೈಕ್ಷಣಿಕ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಬಿಪಿಎಲ್ ಕಾರ್ಡ್ ಹೊಂದಿರುವ, ಅತಿ ಸಣ್ಣ ರೈತ, ಕೂಲಿ ಕಾರ್ಮಿಕರ ಕುಟುಂಬಗಳ ಪದವಿಪೂರ್ವ, ಐಟಿಐ, ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ, ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಅಧ್ಯಯನ ಮಾಡುತ್ತಿರುವ ಆರ್ಯ ಈಡಿಗ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳು ಡಿ. 31ರೊಳಗೆ ಅರ್ಜಿ ಸಲ್ಲಿಸಬಹುದು.

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ಚಿತ್ರದುರ್ಗ, ದಾವಣಗೆರೆ ಮತ್ತು ಬಳ್ಳಾರಿ ಜಿಲ್ಲೆಯ ಆರ್ಯ ಈಡಿಗ ಜನಾಂಗಕ್ಕೆ ಸೇರಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಿದೆ.

ಅರ್ಜಿಗಳನ್ನು www.jalappaedufoundation.org ನಿಂದ ಪಡೆದು ಸೂಕ್ತ ದಾಖಲೆಗಳೊಂದಿಗೆ ಡಿ. 31ರೊಳಗೆ ಸಲ್ಲಿಸಬೇಕು. ವಿಳಾಸ: ಆರ್.ಎಲ್.ಜಾಲಪ್ಪ ಎಜುಕೇಷನ್ ಫೌಂಡೇಷನ್, ನಂ.126, ಸಿಲ್ವರ್ ಸ್ಟಾರ್ ಹೋಟೆಲ್, 6ನೇ ಅಡ್ಡರಸ್ತೆ, ಗಾಂಧಿನಗರ, ಬೆಂಗಳೂರು 560009. ಮಾಹಿತಿಗೆ ಮೊ 9900355995 ಸಂಪರ್ಕಿಸಬಹುದು.

ರಂಗಪ್ಪಗೆ ಫೆಲೋಶಿಪ್

ಮೈಸೂರು: 'ಯುನೆಸ್ಕೊ ಅಂಗ ಸಂಸ್ಥೆಯಾದ ಇಟಲಿಯ 'ದಿ ವರ್ಲ್ಡ್ ಅಕಾಡೆಮಿ ಆಫ್ ಸೈನ್ಸಸ್ (ಟಿಡಬ್ಲ್ಯುಎಎಸ್) ಫೆಲೋಶಿಪ್‌ಗೆ ಈ ಸಾಲಿನಲ್ಲಿ ನನ್ನನ್ನು ಆಯ್ಕೆ ಮಾಡಲಾಗಿದೆ' ಎಂದು ವಿಜ್ಞಾನಿ ಹಾಗೂ ನಿವೃತ್ತ ಕುಲಪತಿ ಪ್ರೊ. ಕೆ.ಎಸ್.ರಂಗಪ್ಪ ತಿಳಿಸಿದರು.

'ಇದುವರೆಗಿನ ವೈಜ್ಞಾನಿಕ ಸಾಧನೆಗಳನ್ನು ಪರಿಗಣಿಸಿ ಅಕಾಡೆಮಿ ಆಯ್ಕೆ ಮಾಡಿದೆ. ರಾಜ್ಯದ ವಿಶ್ವವಿದ್ಯಾಲಯಗಳಿಂದ ಆಯ್ಕೆಯಾದ ಮೊದಲ ವ್ಯಕ್ತಿ ಎನಿಸಿದ್ದೇನೆ. 2022ನೇ ಸಾಲಿನಲ್ಲಿ ದೇಶದಿಂದ ಆಯ್ಕೆಯಾದ ಏಕೈಕ ವ್ಯಕ್ತಿಯಾಗಿದ್ದೇನೆ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಹತ್ಯೆಗೆ ಸುಪಾರಿ: ಪ್ರಿಯಾಂಕ್ ಖರ್ಗೆ ವಿರುದ್ಧ ಆರೋಪ

ಕಲಬುರಗಿ: 'ಶಾಸಕ ಪ್ರಿಯಾಂಕ್ ಖರ್ಗೆ ಅವರು ನನ್ನ ಹತ್ಯೆಗೆ ಸುಪಾರಿ ನೀಡಿದ್ದಾರೆ. ವಿಜಯಪುರ ಅಥವಾ ಸೊಲ್ಲಾಪುರ ಗ್ಯಾಂಗ್‌ಗೆ ಹೇಳಲಾಗಿದೆ' ಎಂದು ಬಿಜೆಪಿ ಮುಖಂಡ ಮಣಿಕಂಠ ರಾಠೋಡ ಆರೋಪಿಸಿದರು.

'ಯಡ್ರಾಮಿ ಠಾಣೆ ವ್ಯಾಪ್ತಿಯಲ್ಲಿ ಶಿವಲಿಂಗಪ್ಪ ಎಂಬಾತನಿಂದ ಎರಡು ವಿದೇಶಿ ಪಿಸ್ತೂಲ್ ಮತ್ತು 30 ಜೀವಂತ ಗುಂಡು ವಶಪಡಿಸಿಕೊಳ್ಳಲಾಗಿದೆ. ವಿಚಾರಣೆ ವೇಳೆ ಆರೋಪಿಯು ಶಾಸಕನ ಸಹಚರನ ಹೆಸರು ಹೇಳಿದ್ದಾನೆ. ಆದ್ದರಿಂದ ನನಗೆ ಶಾಸಕ ಪ್ರಿಯಾಂಕ್ ಖರ್ಗೆ ಮತ್ತು ಅವರ ಬೆಂಬಲಿಗರಿಂದ ಜೀವ ಭಯವಿದೆ' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಆರೋಪಗಳು ಸುಳ್ಳಾಗಿದ್ದು, ಇದರ ಬಗ್ಗೆ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಶಾಸಕ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಜನವರಿಯಿಂದ ಮಾರುತಿ ಕಾರು ಬೆಲೆ ಏರಿಕೆ 7
ಛತ್ತೀಸಗಡ ಸಿ.ಎಂ ಉಪ ಕಾರ್ಯದರ್ಶಿ ಬಂಧನ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,868	18,696	₹55,150 (ಬೆಂಗಳೂರು)	₹66,100 (ಬೆಂಗಳೂರು)	81.33

ಗಡಿ ಭಾಗದ ಕನ್ನಡ ಶಾಲೆಗಳ ಅಭಿವೃದ್ಧಿಗೆ ₹ 100 ಕೋಟಿ: ಮುಖ್ಯಮಂತ್ರಿ ಘೋಷಣೆ

ಗಡಿ ಕನ್ನಡಿಗರಿಗೆ ವಿಶೇಷ ಯೋಜನೆ

ಪ್ರಜಾವಾಣಿ ವಾರ್ತೆ

ರಾಮದುರ್ಗ (ಬೆಳಗಾವಿ ಜಿಲ್ಲೆ): 'ರಾಜ್ಯದ ಗಡಿ ಭಾಗದ 1,800 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕನ್ನಡಿಗರ ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿಗೆ ಪೂರಕವಾಗಿ ಎರಡು ವಿಶೇಷ ಯೋಜನೆ ರೂಪಿಸಲಾಗಿದ್ದು, ಈ ವರ್ಷವೇ ಜಾರಿಗೊಳಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ತಾಲ್ಲೂಕಿನ ಸಾಲಹಳ್ಳಿಯಲ್ಲಿ ₹ 671.28 ಕೋಟಿ ಅಂದಾಜು ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಿಲಾನ್ಯಾಸ ಹಾಗೂ ಬಸವೇಶ್ವರರ ಕಂಚಿನ ಪುತ್ಥಳಿ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು.

'ಮಹಾರಾಷ್ಟ್ರ, ಗೋವಾ, ತೆಲಂಗಾಣ, ತಮಿಳುನಾಡು ರಾಜ್ಯಗಳ ಗಡಿಗೆ ಹೊಂದಿಕೊಂಡಿರುವ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ರಸ್ತೆ, ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯ ಕಲ್ಪಿಸುವುದು ಈ ಯೋಜನೆಗಳ ಗುರಿ' ಎಂದು ಹೇಳಿದರು.

'ಹೊರ ರಾಜ್ಯಗಳ ಕನ್ನಡ ಶಾಲೆಗಳ ಅಭಿವೃದ್ಧಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ₹100 ಕೋಟಿ ನೀಡಲಾಗುವುದು. ಈ ಕೆಲಸವೂ ಇದೇ ವರ್ಷ ಆಗಲಿದೆ' ಎಂದು ತಿಳಿಸಿದರು.

'ಕನ್ನಡಿಗರು ವಿಶ್ವದ ಯಾವುದೇ ಮೂಲೆಯಲ್ಲಿ, ಯಾವುದೇ ರಾಜ್ಯದಲ್ಲಿರಲಿ ಅವರ ರಕ್ಷಣೆ, ಅಭಿವೃದ್ಧಿಗೆ ಬದ್ಧ. ಗೋವಾ, ಮಹಾರಾಷ್ಟ್ರದ ಸೊಲ್ಲಾಪುರ ಹಾಗೂ ಕೇರಳದ ಕಾಸರಗೋಡಿನಲ್ಲಿ ತಲಾ ₹10 ಕೋಟಿಯಲ್ಲಿ ಕನ್ನಡ ಭವನ ನಿರ್ಮಿಸಲಾಗುವುದು' ಎಂದು ಘೋಷಿಸಿದರು.

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಸಾಲಹಳ್ಳಿಯಲ್ಲಿ ಶುಕ್ರವಾರ ನಡೆದ ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾಗ್ಯಲಕ್ಷ್ಮಿ ಬಾಂಡ್ ವಿತರಿಸಿದರು

'ಮಹಾರಾಷ್ಟ್ರ ಸಚಿವರ ನಡೆ ಸರಿಯಲ್ಲ'

ರಾಮದುರ್ಗ: 'ಈಗಿನ ತ್ವೇಷಮಯ ವಾತಾವರಣದಲ್ಲಿ ಮಹಾರಾಷ್ಟ್ರದ ಸಚಿವರು ಬೆಳಗಾವಿಗೆ ಬರುವುದು ಸರಿಯಲ್ಲ. ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಮಹಾರಾಷ್ಟ್ರದ ಮುಖ್ಯ ಕಾರ್ಯದರ್ಶಿಗೆ ಫ್ಯಾಕ್ಸ್ ಮೂಲಕ ಸಂದೇಶ ನೀಡಿದ್ದಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

'ಎರಡೂ ರಾಜ್ಯಗಳ ಹಿತದೃಷ್ಟಿಯಿಂದ ಈ ರೀತಿಯ ಪರಿಸ್ಥಿತಿಯಲ್ಲಿ ಬರಬಾರದು ಎಂಬ ಸಂದೇಶ ಕಳಿಸಿದ್ದೇವೆ. ಅದಾಗಿಯೂ ಬಂದರೆ; ಕರ್ನಾಟಕ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುತ್ತದೆ' ಎಂದರು.

ಈ ಹಿಂದೆ ಮಹಾರಾಷ್ಟ್ರದ ಸಚಿವರು ಗಡಿ ಜಿಲ್ಲೆಗೆ ಬರುವುದನ್ನು ತಡೆಯಲು ಜಿಲ್ಲಾಡಳಿತ 'ಪ್ರತಿಬಂಧಕಾಜ್ಞೆ' ಹೊರಡಿಸಿತ್ತು.

'ಮಹಾರಾಷ್ಟ್ರದ ಜತ್‌ನಲ್ಲಿರುವ ಕನ್ನಡಿಗರಿಗೆ ನೀರಾವರಿ ಸೌಲಭ್ಯಕ್ಕಾಗಿ ಮಹಾರಾಷ್ಟ್ರದ ಮುಖ್ಯಮಂತ್ರಿ ₹2,000 ಕೋಟಿ ಘೋಷಣೆ ಮಾಡಿದ್ದಾರೆ. ಅಲ್ಲಿನ ಕನ್ನಡ ಕುಲ ಬಾಂಧವರ ಹಲವಾರು ವರ್ಷಗಳ ಕಷ್ಟ ಈಗಲಾದರೂ ನೀಗಲಿ' ಎಂದು ಮುಖ್ಯಮಂತ್ರಿ ಪ್ರತಿಕ್ರಿಯಿಸಿದರು.

> **ಮಹಾರಾಷ್ಟ್ರದ ಸಚಿವರು ಬೆಳಗಾವಿಗೆ ಬರಲು ನಾವು ಬಿಡುವುದಿಲ್ಲ. ಅವರೇಕೆ ಇಲ್ಲಿಗೆ ಬರುತ್ತಾರೆ? ಬೇಕಾದಾಗ ಬಂದು ಹೋಗಲು ಇದೇನು ಅವರ ಮಾವನ ಮನೆಯೇ?**
> **ಲಕ್ಷ್ಮಣ ಸವದಿ,** ಶಾಸಕ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬೆಳಗಾವಿಗೆ ಹೋಗಿಯೇ ತೀರುತ್ತೇವೆ: ಸಿ.ಎಂ.ಗೆ 'ಮಹಾ'ಸಚಿವರ ಸವಾಲು

ಬೆಳಗಾವಿ: 'ಡಿಸೆಂಬರ್ 6ಕ್ಕೆ ಬೆಳಗಾವಿಗೆ ಹೋಗಿಯೇ ತೀರುತ್ತೇವೆ. ಕರ್ನಾಟಕದ ಮುಖ್ಯಮಂತ್ರಿ ಹೇಳಿಕೆಗೆ ಪ್ರತ್ಯುತ್ತರ ನೀಡಲೆಂದೇ ಹೋಗುತ್ತೇವೆ. ನಮ್ಮನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ' ಎಂದು ಮಹಾರಾಷ್ಟ್ರದ ಗಡಿ ಉಸ್ತುವಾರಿ ಸಚಿವರಾದ ಚಂದ್ರಕಾಂತ ಪಾಟೀಲ ಹಾಗೂ ಶಂಭುರಾಜ್ ದೇಸಾಯಿ ಸವಾಲು ಹಾಕಿದ್ದಾರೆ.

ಮುಂಬೈನಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಚಂದ್ರಕಾಂತ ಪಾಟೀಲ, 'ಗಡಿ ವಿವಾದದ ಕಾರಣ ತ್ವೇಷಮಯ ವಾತಾವರಣವಿದೆ. ಈಗ ಬರಬೇಡಿ ಎಂದು ಕರ್ನಾಟಕದ ಮುಖ್ಯ ಕಾರ್ಯದರ್ಶಿ ಮಹಾರಾಷ್ಟ್ರ ಸರ್ಕಾರಕ್ಕೆ ಪತ್ರ ರವಾನಿಸಿದ್ದಾರೆ. ನಾನು ಯಾರಿಗೂ ಹೆದರುವವನಲ್ಲ. ಅಲ್ಲಿಗೆ ಹೋಗಿಯೇ ಉತ್ತರ ಕೊಡುತ್ತೇನೆ. ಛತ್ರಪತಿ ಶಿವಾಜಿ ಹಾಗೂ ಡಾ.ಅಂಬೇಡ್ಕರ್ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಿಯೇ ತೀರುತ್ತೇನೆ' ಎಂದು ಘೋಷಿಸಿದ್ದಾರೆ.

ಚಂದ್ರಕಾಂತ ಪಾಟೀಲ



ಶಂಭುರಾಜ್ ದೇಸಾಯಿ

ಸ್ಥಳದಲ್ಲಿದ್ದ ರಾಜ್ಯಸಭೆ ಸದಸ್ಯ ಸಂಜಯ್ ರಾವುತ್ ಅವರೂ, 'ಗಡಿ ಉಸ್ತುವಾರಿ ಸಚಿವರು ಬೆಳಗಾವಿಗೆ ಹೋಗಲೇಬೇಕು. ಅವರಿಗೆ ಆಗದಿದ್ದರೆ ನಾನೇ ಹೋಗಿ ತೋರಿಸುತ್ತೇನೆ' ಎಂದಿದ್ದಾರೆ.

'ಗಡಿ ವಿಚಾರ ಮುಂದಿಟ್ಟುಕೊಂಡು ಕರ್ನಾಟಕದಲ್ಲಿ ದೊಂಬಿ ಸೃಷ್ಟಿಸುವ ಉದ್ದೇಶದಿಂದಲೇ ಮಹಾರಾಷ್ಟ್ರದ ಮಂತ್ರಿಗಳು ಬೆಳಗಾವಿಗೆ ಬರುತ್ತಿದ್ದಾರೆ. ಇವರ ಧೋರಣೆಯನ್ನು ಈಗಲಾದರೂ ಸರ್ಕಾರ ಅರ್ಥ ಮಾಡಿಕೊಳ್ಳಬೇಕು' ಎಂದು ಬೆಳಗಾವಿ ಜಿಲ್ಲಾ ಕನ್ನಡ ಸಂಘಟನೆಗಳ ಕ್ರಿಯಾ ಸಮತಿ ಅಧ್ಯಕ್ಷ ಅಶೋಕ ಚಂದರಗಿ ರಾಜ್ಯ ಸರ್ಕಾರಕ್ಕೆ ಪತ್ರದ ಮೂಲಕ ಮನವಿ ಮಾಡಿದ್ದಾರೆ.

'ಗಡಿ ಗ್ರಾಮಗಳ ಸ್ಥಿತಿಗತಿಯ ಸಮೀಕ್ಷೆ'

ಬೆಂಗಳೂರು: 'ರಾಜ್ಯದ ಆಯ್ದ 8 ವಿಶ್ವವಿದ್ಯಾಲಯಗಳ ಮೂಲಕ ಗಡಿ ಗ್ರಾಮಗಳ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗಳ ಬಗ್ಗೆ ಸಮೀಕ್ಷೆ ನಡೆಸಲಾಗುತ್ತಿದೆ. 6 ತಿಂಗಳಲ್ಲಿ ಸಮಗ್ರ ಅಧ್ಯಯನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ತಿಳಿಸಿದರು. 5

ಅನುಭವ ಮಂಟಪದಲ್ಲಿ
ನ್ಯಾಯಮೂರ್ತಿ ಕೆ.ಚಂದ್ರು
ಲೇಖನ
ಮೀಸಲಾತಿ ಚರ್ಚೆ ಭಾಗ 5
ಮೀಸಲಾತಿ: ಮಿತಿ ಮತ್ತು ರದ್ದತಿಯ ಭೀತಿ

ವಿದ್ಯುತ್ ದರ ಇಳಿಕೆಗೆ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹ ಬಳಕೆಯೂ ಸೇರಿದಂತೆ ಎಲ್ಲ ಬಗೆಯ ಗ್ರಾಹಕರಿಗೆ ಅನುಕೂಲ ಕಲ್ಪಿಸಲು ವಿದ್ಯುತ್ ದರ ಕಡಿತಗೊಳಿಸಲು ಚಿಂತನೆ ನಡೆದಿದೆ.

ಇದಕ್ಕಾಗಿ ಬಳಕೆದಾರರ ಶುಲ್ಕ ಕಡಿಮೆ ಮಾಡುವ ಉದ್ದೇಶವಿದ್ದು, ಪ್ರತಿ ಯುನಿಟ್‌ಗೆ 70 ಪೈಸೆಯಿಂದ ₹2 ರವರೆಗೂ ಇಳಿಕೆಯಾಗುವ ನಿರೀಕ್ಷೆ ಇದೆ. ಹೊಸ ವರ್ಷಕ್ಕೆ ಮುನ್ನವೇ ದರ ಇಳಿಕೆಯಾಗಲಿದೆ. ಸಚಿವ ವಿ. ಸುನಿಲ್ ಕುಮಾರ್ ಅವರ ಸೂಚನೆಯ ಮೇರೆಗೆ ಇಂಧನ ಇಲಾಖೆ ಈ ಬಗ್ಗೆ ಪ್ರಸ್ತಾವ ಸಿದ್ಧಪಡಿಸಿದೆ.

ವಾರ್ಷಿಕ ದರ ಪರಿಷ್ಕರಣೆಯ ಸಂದರ್ಭದಲ್ಲಿ ವಿದ್ಯುತ್ ಶುಲ್ಕ ಹೆಚ್ಚಳದಿಂದ ಗ್ರಾಹಕರಿಗೆ ಹೊರೆಯಾಗುತ್ತಿದೆ. ಹೀಗಾಗಿ, ಎಲ್ಲ ವಿದ್ಯುತ್ ಸರಬರಾಜು ಕಂಪನಿಗಳಿಂದ ಕೆಇಆರ್‌ಸಿಗೆ ಸಲ್ಲಿಸುವ ಪ್ರಸ್ತಾವದಲ್ಲಿಯೇ ಬಳಕೆದಾರರ ಶುಲ್ಕ ಕಡಿಮೆ ಮಾಡಿ ದರ ಪಟ್ಟಿ ಸಲ್ಲಿಸುವಂತೆ ಸೂಚಿಸಲಾಗಿದೆ.

ಈ ಪ್ರಸ್ತಾವ ಗೃಹ ಬಳಕೆ ಗ್ರಾಹಕರ ಜತೆಗೆ ಎಚ್‌ಟಿ, ಕೈಗಾರಿಕೆ, ವಾಣಿಜ್ಯ ಮತ್ತು ಎಲ್‌ಟಿ ಗ್ರಾಹಕರಿಗೂ ಅನ್ವಯವಾಗಲಿದೆ. ವಾಣಿಜ್ಯ ಬಳಕೆದಾರರಿಗೆ ವಿಧಿಸಿದ್ದ 'ಕ್ರಾಸ್ ಸಬ್ಸಿಡಿ' ಸಡಿಲಿಸಲು ಬೆಸ್ಕಾಂ ವ್ಯಾಪ್ತಿಯಲ್ಲಿ ಹೊಸ ಪ್ರಸ್ತಾವ ಸಲ್ಲಿಕೆಯಾಗಿದ್ದು, ಪ್ರತ್ಯೇಕ ಶುಲ್ಕ ಪದ್ಧತಿ ಪ್ರಸ್ತಾಪಿಸಲಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಹಕರಿಗೆ ಬಳಕೆದಾರರ ಶುಲ್ಕದಲ್ಲಿ 25 ಪೈಸೆಯಷ್ಟು ರಿಯಾಯಿತಿ ನೀಡುವ ಬಗ್ಗೆ ಚಿಂತನೆ ನಡೆಸಲಾಗಿದೆ.

ಎಚ್‌ಟಿ ಗ್ರಾಹಕರಿಗೆ ಸಮಯಾಧಾರಿತ ಶುಲ್ಕ ವ್ಯವಸ್ಥೆ ಜಾರಿಗೊಳಿಸಲು ಉದ್ದೇಶಿಸಲಾಗಿದೆ. ದಿನದಲ್ಲಿ 11 ಗಂಟೆ ವಿದ್ಯುತ್ ಬಳಕೆದಾರರ ಶುಲ್ಕದಲ್ಲಿ ಕಡಿತ ಮಾಡಿ ಹೆಚ್ಚಿನ ರಿಯಾಯಿತಿ ಕಲ್ಪಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಪ್ರತಿ ಯುನಿಟ್‌ಗೆ ಈ ಮೊದಲು ವಿಧಿಸುತ್ತಿದ್ದ ₹6.60 ಬಳಕೆದಾರರ ಶುಲ್ಕ ಹೊಸ ಪ್ರಸ್ತಾವದಿಂದ ಇಳಿಕೆಯಾಗುವ ಸಾಧ್ಯತೆ ಇದೆ. 75 ಪೈಸೆವರೆಗೆ ರಿಯಾಯಿತಿ ದೊರೆಯುವ ಸಂಭವ ಇದೆ.

> **ಈ ಬಾರಿ ವಿದ್ಯುತ್ ಶುಲ್ಕ ಪರಿಷ್ಕರಣೆ ಸಂದರ್ಭದಲ್ಲಿ ಜನಪರ ನಿಲುವು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ**
> **ವಿ. ಸುನಿಲ್ ಕುಮಾರ್,** ಇಂಧನ ಸಚಿವ

ಐಎಎಸ್ ಅಧಿಕಾರಿಗಳಿಗೆ ನೋಟಿಸ್: ವಿಚಾರಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ವೈಯಕ್ತಿಕ ಮಾಹಿತಿ ಕಳವು ಹಾಗೂ ದುರ್ಬಳಕೆ ಆರೋಪದಡಿ ಚಿಲುಮೆ ಸಂಸ್ಥೆ ವಿರುದ್ಧ ದಾಖಲಾಗಿರುವ ಪ್ರಕರಣ ಸಂಬಂಧ ಐಎಎಸ್ ಅಧಿಕಾರಿಗಳಾದ ಕೆ. ಶ್ರೀನಿವಾಸ್ ಹಾಗೂ ಎಸ್. ರಂಗಪ್ಪ ಅವರಿಗೆ ಹಲಸೂರು ಗೇಟ್ ಪೊಲೀಸರು ನೋಟಿಸ್ ನೀಡಿದ್ದಾರೆ.

ಹಲಸೂರು ಗೇಟ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಚಿಲುಮೆ ಸಂಸ್ಥೆಯ ಸಂಸ್ಥಾಪಕ ರವಿಕುಮಾರ್, ಬಿಬಿಎಂಪಿಯ ನಾಲ್ವರು ಅಧಿಕಾರಿಗಳು ಸೇರಿ 15 ಮಂದಿಯನ್ನು ಈಗಾಗಲೇ ಬಂಧಿಸಲಾಗಿದೆ. ಇದೀಗ ಪ್ರಕರಣದಲ್ಲಿ ಶ್ರೀನಿವಾಸ್ ಹಾಗೂ ರಂಗಪ್ಪ ಅವರ ಪಾತ್ರದ ಬಗ್ಗೆಯೂ ಪೊಲೀಸರಿಗೆ ಅನುಮಾನ ಬಂದಿತ್ತು. ಹೀಗಾಗಿ, ವಿಚಾರಣೆ ನಡೆಸಲೆಂದು ನೋಟಿಸ್ ಜಾರಿ ಮಾಡಿದ್ದಾರೆ.

'ಬೆಂಗಳೂರು ನಗರ ಜಿಲ್ಲಾಧಿಕಾರಿಯಾಗಿದ್ದ ಕೆ. ಶ್ರೀನಿವಾಸ್, ಬಿಬಿಎಂಪಿ ವಿಶೇಷ ಆಯುಕ್ತರಾಗಿದ್ದ ಎಸ್. ರಂಗಪ್ಪ ಅವರ ವಿಚಾರಣೆ ಅಗತ್ಯವಿದೆ. ಹೀಗಾಗಿ, ಇಬ್ಬರಿಗೂ ನೋಟಿಸ್ ನೀಡಲಾಗಿದೆ. ಶನಿವಾರ ಬೆಳಿಗ್ಗೆ ಹಲಸೂರು ಗೇಟ್ ಠಾಣೆಗೆ ಬಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

3B ನೇ ಪುಟ ನೋಡಿ

ಚಿಲುಮೆ ಸಂಸ್ಥೆ ಸಂಸ್ಥಾಪಕ ಜೈಲಿಗೆ

ಚಿಲುಮೆ ಸಂಸ್ಥೆಯ ಸಂಸ್ಥಾಪಕ ರವಿಕುಮಾರ್ ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದ ಪೊಲೀಸರು, ಕಸ್ಟಡಿ ಅವಧಿ ಮುಗಿದಿದ್ದರಿಂದ ಶುಕ್ರವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

'ವಿಚಾರಣೆ ನಡೆಸಿದ ನ್ಯಾಯಾಲಯ ಆರೋಪಿ ರವಿಕುಮಾರ್‌ನನ್ನು ನ್ಯಾಯಾಂಗ ಬಂಧನಕ್ಕೆ ನೀಡಿದೆ. ಸದ್ಯ ಆತ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹ ಸೇರಿದ್ದಾನೆ' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಆನೇಕಲ್ ಪುರಸಭೆ: ರೌಡಿಶೀಟರ್ ನಾಮನಿರ್ದೇಶನ

ಪ್ರಜಾವಾಣಿ ವಾರ್ತೆ

ಮಂಜುನಾಥ ಎಸ್.

ಬೆಂಗಳೂರು: ಆನೇಕಲ್ ಪುರಸಭೆಗೆ ಐವರನ್ನು ನಾಮನಿ ರ್ದೇಶನ ಮಾಡಿದ್ದು ಅವರಲ್ಲಿ ರೌಡಿ ಪಟ್ಟಿ ಯಲ್ಲಿರುವ ಮಂಜುನಾಥ್ ಎಸ್. ಅಲಿಯಾಸ್ ಕುಟ್ಟಿ ಹೆಸರೂ ಇದೆ.

ಮಂಜುನಾಥ್ ಸದ್ಯವೇ ಬಿಜೆಪಿ ಸೇರಲಿದ್ದಾನೆ ಎಂದು ಹೇಳಲಾಗಿದ್ದು, ಅಪರಾಧ ಹಿನ್ನೆಲೆಯುಳ್ಳ ಈತನನ್ನು ನಾಮನಿರ್ದೇಶನ ಮಾಡಿರುವುದು ಟೀಕೆಗೆ ಕಾರಣವಾಗಿದೆ.

ಕೆ.ಮಂಜುನಾಥ ರೆಡ್ಡಿ, ರಂಗಸ್ವಾಮಿ, ಮುರಳಿ ಡಿ.ವಿ, ಮಂಜುನಾಥ್ ಎಸ್ ಮತ್ತು ರೂಪಾ ನಾಮನಿರ್ದೇಶನಗೊಂಡವರು. ರೌಡಿ ಮಂಜುನಾಥ್ ಅಲಿಯಾಸ್ ಕುಟ್ಟಿ ಹೆಸರು ನಗರದ ಮಡಿವಾಳ ಠಾಣೆಯ ರೌಡಿಪಟ್ಟಿಯಲ್ಲಿದೆ.

5 ನೇ ಪುಟ ನೋಡಿ

ಬಿಡಿಎ ವಿಚಕ್ಷಣ ದಳದಿಂದ ಆಂತರಿಕ ತನಿಖೆ • ಇಬ್ಬರು ಫಲಾನುಭವಿಗಳ ವಿರುದ್ಧ ಎಫ್‌ಐಆರ್

₹ 30 ಕೋಟಿ ಮೌಲ್ಯದ 13 ನಿವೇಶನ ಹಂಚಿಕೆ ಅಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ (ಬಿಡಿಎ) ಅಭಿವೃದ್ಧಿಪಡಿಸಿರುವ ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯಲ್ಲಿನ 13 ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಲಾಗಿದ್ದು, ಈ ಸಂಬಂಧ ಜ್ಞಾನಭಾರತಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಿವೇಶನ ಹಂಚಿಕೆಯಲ್ಲಾದ ಅಕ್ರಮವನ್ನು ಬಿಡಿಎ ವಿಚಕ್ಷಣ ದಳ-ವಿಶೇಷ ಕಾರ್ಯಪಡೆ ಅಧಿಕಾರಿಗಳು ಪತ್ತೆ ಮಾಡಿದ್ದಾರೆ. ಅವರು ನೀಡಿರುವ ದೂರು ಆಧರಿಸಿ, ಆರೋಪಿ ಕಮಲಾಬಾಯಿ ಹಾಗೂ ಅವರ ಮಗ ಕೃಷ್ಣರಾವ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ದಾಖಲೆಗಳ ಪರಿಶೀಲನೆ ನಡೆಸಿ ಆರೋಪಿಗಳಿಗೆ ನೋಟಿಸ್ ನೀಡಿ, ತನಿಖೆ ಮುಂದುವರಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಬಿಡಿಎ ಸುದ್ದಿ

'ಬಿಡಿಎ ಅಧಿಕಾರಿಗಳಿಗೆ ಸುಳ್ಳು ಮಾಹಿತಿ ನೀಡಿದ್ದ ಆರೋಪಿಗಳು, ಸುಮಾರು ₹ 30 ಕೋಟಿ ಮೌಲ್ಯದ 13 ಪರ್ಯಾಯ ನಿವೇಶನಗಳನ್ನು ತಮ್ಮ ಹೆಸರಿಗೆ ಹಂಚಿಕೆ ಮಾಡಿಸಿಕೊಂಡಿದ್ದರು. ಆರೋಪಿಗಳ ಕೃತ್ಯದ ಬಗ್ಗೆ ಬಿಡಿಎ ವಿಚಕ್ಷಣ ದಳ-ವಿಶೇಷ ಕಾರ್ಯಪಡೆಗೆ ಇತ್ತೀಚೆಗೆ ಮಾಹಿತಿ ಲಭ್ಯವಾಗಿತ್ತು. ದಾಖಲೆಗಳ ಪರಿಶೀಲನೆ ನಡೆಸಿದಾಗಲೇ ಆರೋಪಿಗಳು ಸಿಕ್ಕಿಬಿದ್ದರು' ಎಂದು ಮೂಲಗಳು ತಿಳಿಸಿವೆ.

ಅಕ್ರಮ ಹೇಗೆ?: 'ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಗ್ರಾಮದ ಸರ್ವೆ ನಂಬರ್ 146ರಲ್ಲಿ 6 ಎಕರೆ 32 ಗುಂಟೆ ಜಮೀನನ್ನು ರಾಜಾಜಿನಗರ ಕೈಗಾರಿಕಾ ಉಪನಗರ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಜೋಡಿದಾರ್ ನಂಜಪ್ಪ ಎಂಬುವವರು ಅಧಿಕೃತ ಖಾತೆದಾರರಾಗಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'1962ರ ನವೆಂಬರ್ 5ರಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಜಮೀನು ಹಂಚಿಕೆ ಮಾಡಲಾಗಿತ್ತು. ಜಮೀನು ಖರೀದಿ ಪ್ರಕ್ರಿಯೆ ಮುಗಿಸಿದ್ದ ಸಮಿತಿ, ಹಣವನ್ನೂ ಪಾವತಿಸಿತ್ತು.

'6 ಎಕರೆ 32 ಗುಂಟೆ ಪೈಕಿ, 32 ಗುಂಟೆಯನ್ನು ಎಂ.ಎಸ್ ರಾಮರಾವ್ ಎಂಬುವರು 1963 ಫೆಬ್ರುವರಿ 21ರಂದು ಹಿಂದಿನ ಭೂ ಮಾಲೀಕರಾದ ಜೋಡಿದಾರ್ ನಂಜಪ್ಪ ಅವರಿಂದ ಅಕ್ರಮವಾಗಿ ಖರೀದಿ ಮಾಡಿದ್ದರು. ಇದು ಕಾನೂನುಬಾಹಿರ ಖರೀದಿಯಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'1996ರ ಡಿಸೆಂಬರ್ 5ರಂದು ರಾಮರಾವ್ ತೀರಿಕೊಂಡಿದ್ದರು. ಇದಾದ ನಂತರ ಪತ್ನಿ ಕಮಲಾಬಾಯಿ ಹಾಗೂ ಮಗ ಕೃಷ್ಣರಾವ್, ಅಕ್ರಮ ಹಣ ಸಂಪಾದಿಸುವ ಉದ್ದೇಶದಿಂದ ತಮ್ಮದೇ ಜಮೀನು ಸ್ವಾಧೀನವಾಗಿರುವುದಾಗಿ ಬಿಡಿಎಗೆ ಸುಳ್ಳು ಮಾಹಿತಿ ನೀಡಿದ್ದರು. ಸರ್ ಎಂ. ವಿಶ್ವೇಶ್ವರಯ್ಯ ಬಡಾವಣೆಯ 13 ಪರ್ಯಾಯ ನಿವೇಶನಗಳನ್ನು ಹಂಚಿಕೆ ಮಾಡಿಸಿಕೊಂಡಿದ್ದರು. ಈ ಮೂಲಕ ಇವರಿಬ್ಬರು ಅಕ್ರಮ ಫಲಾನುಭವಿಗಳಾಗಿರುವುದು ಆಂತರಿಕ ತನಿಖೆಯಿಂದ ಗೊತ್ತಾಗಿರುವುದಾಗಿ ಬಿಡಿಎ ವಿಚಕ್ಷಣ ದಳ-ವಿಶೇಷ ಕಾರ್ಯಪಡೆ ಅಧಿಕಾರಿಗಳು ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ವಿವರಿಸಿವೆ.

ಮೇಲ್ಮನವಿ ಸಲ್ಲಿಕೆಗೆ 10 ವರ್ಷ ವಿಳಂಬ: ಹೈಕೋರ್ಟ್ ತರಾಟೆ

ಬೆಂಗಳೂರು: ಬೆಂಗಳೂರು ಉತ್ತರ ವ್ಯಾಪ್ತಿಯಲ್ಲಿನ ಎಚ್‌ಎಂಟಿ ಲೇಔಟ್ (ಹೆಣ್ಣೂರು ರೋಡ್ ಬಾಣಸವಾಡಿ ರೋಡ್) ಲೇಔಟ್ ನಿರ್ಮಾಣಕ್ಕೆ ಮೀಸಲಿರಿಸಿದ್ದ ಜಾಗವೊಂದರ ಭೂ ಸ್ವಾಧೀನ ಅಧಿಸೂಚನೆ ರದ್ದುಪಡಿಸಿ ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಹೊರಡಿಸಿದ್ದ ತೀರ್ಪನ್ನು 10 ವರ್ಷಗಳ ನಂತರ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು (ಬಿಡಿಎ) ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ.

ಎಚ್‌ಎಂಟಿ ಲೇಔಟ್ 3ನೇ ಹಂತದ ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿದ್ದ ಚೋಳನಾಯಕನಹಳ್ಳಿಯ ಸರ್ವೆ ನಂಬರ್ 47ರಲ್ಲಿನ 17.5 ಗುಂಟೆ ಜಾಗಕ್ಕೆ ಸಂಬಂಧಿಸಿದ ಭೂ ಸ್ವಾಧೀನದ ಅಂತಿಮ ಅಧಿಸೂಚನೆ ರದ್ದುಪಡಿಸಿ 2012ರ ಫೆಬ್ರುವರಿ 22ರಂದು ಹೈಕೋರ್ಟ್ ಏಕಸದಸ್ಯ ನ್ಯಾಯಪೀಠ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಬಿಡಿಎ ಆಯುಕ್ತರು 2022ರ ಫೆಬ್ರುವರಿ 25ರಂದು ಮೇಲ್ಮನವಿ ಸಲ್ಲಿಸಿದ್ದರು.

ಈ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ಹತ್ತು ವರ್ಷಗಳಷ್ಟು ತಡವಾಗಿ ಮೇಲ್ಮನವಿ ಸಲ್ಲಿಸಿದ ಆಯುಕ್ತರ ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಪೀಠ, 'ವಿಳಂಬಕ್ಕೆ ಬಿಡಿಎ ಸೂಕ್ತ ಕಾರಣ ನೀಡಿಲ್ಲ' ಎಂದು ಮೇಲ್ಮನವಿ ವಜಾಗೊಳಿಸಿತು.

ಸುದ್ದಿ 2 ನಿಮಿಷ

ಇಂದಿನಿಂದ 'ಬೆಂಗಳೂರು ಸಾಹಿತ್ಯ ಉತ್ಸವ'

ಬೆಂಗಳೂರು: ಬೆಂಗಳೂರು ಸಾಹಿತ್ಯ ಉತ್ಸವದ 11ನೇ ಆವೃತ್ತಿ ಡಿ.3 ಮತ್ತು 4ರಂದು ಕುಮಾರಕೃಪಾ ರಸ್ತೆಯಲ್ಲಿರುವ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ನಡೆಯಲಿದೆ.

ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ, ಸಂಗೀತ, ಸಿನಿಮಾ, ಕ್ರೀಡೆ ಹಾಗೂ ಕೋವಿಡ್ ಸಾಂಕ್ರಾಮಿಕದಲ್ಲಿ ಎದುರಿಸಿದ ಸಂಕಷ್ಟಗಳು ಸೇರಿದಂತೆ ವೈವಿಧ್ಯಮಯ ವಿಷಯಗಳ ಬಗ್ಗೆ ಎರಡು ದಿನಗಳ ಉತ್ಸವದಲ್ಲಿ ಗೋಷ್ಠಿಗಳು ನಡೆಯಲಿವೆ.

ಐದು ವೇದಿಕೆಗಳಲ್ಲಿ ಬೆಳಿಗ್ಗೆ 10ರಿಂದ ನಡೆಯುವ ಗೋಷ್ಠಿಯಲ್ಲಿ ವಿವಿಧ ಕ್ಷೇತ್ರಗಳ ದೇಶ–ವಿದೇಶಗಳ ಚಿಂತಕರು, ಸಾಹಿತಿಗಳು ಪಾಲ್ಗೊಳ್ಳಲಿದ್ದಾರೆ. 'ಬಹುಭಾಷಿಕ ಜಗತ್ತು' ಉತ್ಸವದಲ್ಲಿ ಗಮನಸೆಳೆಯಲಿದೆ.

ಮಕ್ಕಳಿಗೂ ಪ್ರತ್ಯೇಕ ವೇದಿಕೆ ರೂಪಿಸಲಾಗಿದೆ. ಅಮರ ಚಿತ್ರಕಥಾ ರಸಪ್ರಶ್ನೆ, ಮನರಂಜನೀಯ ಕಾರ್ಯಕ್ರಮಗಳನ್ನು ಮಕ್ಕಳಿಗಾಗಿ ರೂಪಿಸಲಾಗಿದೆ. ವಿವಿಧ ಭಾಷೆಯ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟವನ್ನೂ ಆಯೋಜಿಸಲಾಗಿದೆ.

ಉತ್ಸವದಲ್ಲಿ ಅರ್ಥಪೂರ್ಣ ಸಂವಾದ, ಆರೋಗ್ಯಕರ ಚರ್ಚೆಗಳು ನಡೆಯಲಿವೆ. ಉತ್ಸವಕ್ಕೆ ಪ್ರವೇಶ ಉಚಿತವಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಹೆಚ್ಚಿನ ವಿವರಗಳಿಗೆ http://bangalore literaturefestival.org ವೆಬ್‌ಸೈಟ್ ವೀಕ್ಷಿಸಬಹುದು.

ಯುಪಿಎಸ್‌ಸಿ: ಭಾರತೀಯ ರೈಲ್ವೆಗೂ ನೇಮಕಾತಿ ಪ್ರಕ್ರಿಯೆ

ನವದೆಹಲಿ: ಭಾರತೀಯ ರೈಲ್ವೆ ನಿರ್ವಹಣಾ ಸೇವೆ (ಐಆರ್‌ಎಂಎಸ್) ನೇಮಕಾತಿ ಪರೀಕ್ಷೆಯನ್ನು 2023ನೇ ಸಾಲಿನಿಂದ ಕೇಂದ್ರ ಲೋಕಸೇವಾ ಆಯೋಗವೇ (ಯುಪಿಎಸ್‌ಸಿ) ನಡೆಸಲಿದೆ ಎಂದು ಭಾರತೀಯ ರೈಲ್ವೆ ತಿಳಿಸಿದೆ.

ಐಆರ್‌ಎಂಎಸ್ ಪರೀಕ್ಷೆಯು ಎರಡು ಹಂತದಲ್ಲಿ ನಡೆಯಲಿದೆ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಬಳಿಕ ಸಂದರ್ಶನ ನಡೆಯಲಿದೆ ಎಂದು ಭಾರತೀಯ ರೈಲ್ವೆ ಹೇಳಿಕೆಯಲ್ಲಿ ತಿಳಿಸಿದೆ.

2023ನೇ ಸಾಲಿನಲ್ಲಿ ಸಿವಿಲ್ (30), ಮೆಕಾನಿಕಲ್ (30), ಎಲೆಕ್ಟ್ರಿಕಲ್ (60) ಮತ್ತು ವಾಣಿಜ್ಯ ಮತ್ತು ಲೆಕ್ಕಶಾಸ್ತ್ರ (30) ವಿಭಾಗಗಳಲ್ಲಿ ಒಟ್ಟು 150 ಜನರ ನೇಮಕಾತಿಗೆ ಪರೀಕ್ಷೆ ನಡೆಯಲಿದೆ.

ಐಆರ್‌ಎಂಎಸ್ ಮುಖ್ಯ ಪರೀಕ್ಷೆಯು ನಾಲ್ಕು ಪ್ರಶ್ನೆಪತ್ರಿಕೆ ಒಳಗೊಂಡಿದ್ದು, ಸಾಂಪ್ರದಾಯಿಕ ಪ್ರಬಂಧ ಮಾದರಿಯ ಪ್ರಶ್ನೆಗಳಿರುತ್ತವೆ. ಕೇಂದ್ರ ನಾಗರಿಕ ಸ್ಪರ್ಧಾತ್ಮಕ ಪರೀಕ್ಷೆಗೆ ಇರುವಂತೆಯೇ ಪಠ್ಯಕ್ರಮಗಳು ಇರಲಿವೆ ಎಂದು ಹೇಳಿಕೆ ತಿಳಿಸಿದೆ.

ಎಸ್‌ಸಿ ಯುವಕನ ಆತ್ಮಹತ್ಯೆ: ಒಬ್ಬನ ಸೆರೆ

ನಂಗಲಿ (ಕೋಲಾರ ಜಿಲ್ಲೆ): ಬೇವಹಳ್ಳಿಯ ಪರಿಶಿಷ್ಟ ಜಾತಿಯ ಯುವಕ ಉದಯ್ ಕಿರಣ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮುನಿ ವೆಂಕಟಪ್ಪ ಎಂಬಾತನನ್ನು ನಂಗಲಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತಲೆಮರೆಸಿಕೊಂಡಿರುವ ಉಳಿದ ಆರೋಪಿಗಳಾದ ರಾಜು, ಶಿವರಾಜ್ ಹಾಗೂ ಗೋಪಾಲ ಕೃಷ್ಣಪ್ಪ ಅವರ ಪತ್ತೆಗೆ ಶೋಧ ಮುಂದುವರಿಸಿದ್ದೇವೆ. ತನಿಖೆ ತೀವ್ರಗೊಳಿಸಿದ್ದೇವೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಿ. ದೇವರಾಜ್ 'ಪ್ರಜಾವಾಣಿ'ಗೆ ತಿಳಿಸಿದರು.

ಖಂಡನೆ: ಎಸ್‌ಎಫ್‌ಐ, ದಲಿತ ಸಂಘರ್ಷ ಸಂಯೋಜಕ ಸಮಿತಿ, ಸಿಪಿಎಂ, ಬಹುಜನ ಚಳವಳಿ, ಡಿವೈಎಫ್‌ಐ ಸಂಘಟನೆಗಳು ಶುಕ್ರವಾರ ಬೇವಹಳ್ಳಿಗೆ ಭೇಟಿ ನೀಡಿ, ಘಟನೆಯನ್ನು ಖಂಡಿಸಿವೆ.

ಪೊಲೀಸ್ ಅಧಿಕಾರಿಗಳಿಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಎಚ್ಚರಿಕೆ

ಅಪ್ರಾಮಾಣಿಕತೆ ಕಂಡರೆ ಸಂಸ್ಥೆಯಿಂದ ಹೊರಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಾಯುಕ್ತದಲ್ಲಿ ಪ್ರಾಮಾಣಿಕತೆ ಮತ್ತು ಬದ್ಧತೆಯಿಂದ ಕೆಲಸ ಮಾಡುವ ಅಧಿಕಾರಿಗಳಿಗೆ ಸಂಪೂರ್ಣ ರಕ್ಷಣೆ ಒದಗಿಸುತ್ತೇನೆ. ಸಂಸ್ಥೆಯ ಆಶಯಗಳಿಗೆ ವಿರುದ್ಧವಾಗಿ ಅಪ್ರಾಮಾಣಿಕತೆ ಹೊಂದಿರುವುದು ಕಂಡುಬಂದರೆ ತಕ್ಷಣವೇ ಇಲ್ಲಿಂದ ಹೊರಕ್ಕೆ ಕಳುಹಿಸುತ್ತೇನೆ' ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಹೇಳಿದರು.

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಹಾಗೂ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕುರಿತು ಲೋಕಾಯುಕ್ತದ ಪೊಲೀಸ್ ಅಧಿಕಾರಿಗಳಿಗಾಗಿ ಹಮ್ಮಿಕೊಂಡಿರುವ ಎರಡು ದಿನಗಳ ಕಾರ್ಯಾಗಾರವನ್ನು ಶುಕ್ರವಾರ ಉದ್ಘಾಟಿಸಿ ಮಾತನಾಡಿದ ಅವರು, 'ವರ್ಗಾವಣೆ, ಹೊರಗಿನವರ ಒತ್ತಡ, ಅಮಾನತಿನ ಭಯವಿಲ್ಲದೆ ಕೆಲಸ ಮಾಡಲು ಲೋಕಾಯುಕ್ತದಲ್ಲಿ ಅವಕಾಶವಿದೆ. ಇಲ್ಲಿಗೆ ಬಂದಿರುವ ಅಧಿಕಾರಿಗಳು ಭ್ರಷ್ಟಾಚಾರದ ವಿರುದ್ಧ ಸೈನಿಕರಂತೆ ಕೆಲಸ ಮಾಡಬೇಕು' ಎಂದರು.

ಸರ್ಕಾರಿ ಶಾಲೆಯೊಂದರಲ್ಲಿ ಕಂಡುಬಂದ ಸುಧಾರಣೆ ಕುರಿತು ಲೋಕಾಯುಕ್ತ ಬಿ.ಎಸ್. ಪಾಟೀಲ ಅವರು ಶುಕ್ರವಾರ ಸಂಸ್ಥೆಯಲ್ಲಿ ನಡೆದ ಕಾರ್ಯಾಗಾರದಲ್ಲಿ ಫೋಟೊಗಳನ್ನು ಪ್ರದರ್ಶಿಸಿದರು– ಪ್ರಜಾವಾಣಿ ಚಿತ್ರ

'ತನಿಖೆಯ ಗುಣಮಟ್ಟ ಹೆಚ್ಚಬೇಕು'

'ಸಿಬಿಐ ತನಿಖೆ ನಡೆಸುವ ಪ್ರಕರಣಗಳ ಪೈಕಿ ಶೇಕಡ 68ರಲ್ಲಿ ಅಪರಾಧ ಸಾಬೀತಾಗಿ ಶಿಕ್ಷೆಯಾಗುತ್ತಿದೆ. ಲೋಕಾಯುಕ್ತದಲ್ಲಿ ಈ ಪ್ರಮಾಣ ಶೇ 25ರಷ್ಟಿದೆ. ನಮ್ಮ ಸಂಸ್ಥೆಯ ಪೊಲೀಸರು ದಾಖಲಿಸಿ, ತನಿಖೆ ನಡೆಸುವ ಶೇ 85ಕ್ಕಿಂತ ಹೆಚ್ಚಿನ ಪ್ರಕರಣಗಳಲ್ಲಿ ಶಿಕ್ಷೆಯಾಗಬೇಕು. ಅದಕ್ಕೆ ಪೂರಕವಾಗಿ ತನಿಖೆಯ ಗುಣಮಟ್ಟ ಹೆಚ್ಚಳವಾಗಬೇಕು' ಎಂದು ಲೋಕಾಯುಕ್ತರು ಹೇಳಿದರು.

ಪ್ರತಿ ಜಿಲ್ಲೆಯಲ್ಲೂ ಅತ್ಯಂತ ಭ್ರಷ್ಟರಾಗಿರುವ ಅಧಿಕಾರಿಗಳ ಕುರಿತು ಮಾಹಿತಿ ಸಂಗ್ರಹಿಸಿ, ಸರಿಯಾದ ರೀತಿ ತನಿಖೆ ನಡೆಸಬೇಕು. ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಪ್ರಕರಣಗಳನ್ನು ದಾಖಲು ಮಾಡುವಾಗ ಮತ್ತು ತನಿಖೆಯ ಹಂತದಲ್ಲಿ ಆರೋಪಿಗಳಿಗೆ ಮಾಹಿತಿ ಸೋರಿಕೆ ಆಗದಂತೆ ಎಚ್ಚರಿಕೆ ವಹಿಸಬೇಕು. ಆ ರೀತಿ ಕೃತ್ಯದಲ್ಲಿ ಯಾರಾದರೂ ಭಾಗಿಯಾದರೆ ಕಠಿಣ ಕ್ರಮ ಜರುಗಿಸಲಾಗವುದು ಎಂದು ಹೇಳಿದರು.

ಹೆಚ್ಚುತ್ತಿದೆ ವಿಶ್ವಾಸ: ಲೋಕಾಯುಕ್ತ ಸಂಸ್ಥೆಯ ಮೇಲೆ ಜನರ ವಿಶ್ವಾಸ ಮತ್ತೆ ಹೆಚ್ಚುತ್ತಿದೆ. ಈ ಹಿಂದೆ ಪ್ರತಿ ತಿಂಗಳಿಗೆ 300ರಿಂದ 400 ದೂರುಗಳು ಸಲ್ಲಿಕೆಯಾಗುತ್ತಿದ್ದವು. ನವೆಂಬರ್ ತಿಂಗಳಿನಲ್ಲಿ 844 ದೂರುಗಳು ದಾಖಲಾಗಿವೆ. ಇದು ಈ ಸಂಸ್ಥೆಯ ಮೇಲೆ ಜನರ ನಂಬಿಕೆ ಹೆಚ್ಚುತ್ತಿರುವುದರ ಸೂಚನೆ. ಸಮಯದ ಮಿತಿ ಇಲ್ಲದೆಯೇ ಕೆಲಸ ಮಾಡಿ ಜನರಿಗೆ ನ್ಯಾಯ ಒದಗಿಸುವುದಕ್ಕೆ ಎಲ್ಲ ಅಧಿಕಾರಿಗಳು ಮತ್ತು ಸಿಬ್ಬಂದಿ ಸಿದ್ಧರಾಗಿರಬೇಕು. ರಾತ್ರಿ 9 ಗಂಟೆಯವರೆಗೆ ಕೆಲಸ ಮಾಡುವುದಕ್ಕೆ ತಾವೂ ಸಿದ್ಧ ಎಂದು ಲೋಕಾಯುಕ್ತರು ತಿಳಿಸಿದರು.

ಗದಗ ಜಿಲ್ಲೆಯ ರೈತರೊಬ್ಬರು 415 ಕಿ.ಮೀ. ಪ್ರಯಾಣಿಸಿ ಬೆಂಗಳೂರಿಗೆ ಬಂದು 205 ಕೆ.ಜಿ. ಈರುಳ್ಳಿ ಮಾರಿದರೆ ಕೇವಲ ₹ 8.36 ಕೈಗೆ ಸಿಕ್ಕಿರುವ ಸುದ್ದಿ ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಇದು ಎಪಿಎಂಸಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಸಾಕ್ಷಿ. ಇಂತಹ ಪ್ರಕರಣಗಳ ಕುರಿತು ಆಳವಾದ ತನಿಖೆ ನಡೆಸಲಾಗುವುದು ಎಂದು ಹೇಳಿದರು.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ, ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್, ರಿಜಿಸ್ಟ್ರಾರ್ ಉಷಾರಾಣಿ ಉಪಸ್ಥಿತರಿದ್ದರು.

ಸಹಜೀವನದ ಗೆಳೆಯನಿಂದ ಇರಿದು ಮಹಿಳೆ ಕೊಲೆ

ನವದೆಹಲಿ (ಪಿಟಿಐ): 35 ವರ್ಷದ ಮಹಿಳೆಯನ್ನು ಆಕೆಯ ಸಹ ಜೀವನ ಗೆಳೆಯ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ ಎಂದು ಆರೋಪಿಸಲಾದ ಘಟನೆ ಶುಕ್ರವಾರ ಪಶ್ಚಿಮ ದೆಹಲಿಯ ತಿಲಕ್‌ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ರೇಖಾರಾಣಿ ಮೃತಳು. ಇರಿತದ ಗಾಯಗಳೊಂದಿಗೆ ಆಕೆಯ ಶವ ಗಣೇಶನಗರದ ಬಾಡಿಗೆ ಮನೆಯಲ್ಲಿ ಪತ್ತೆಯಾಗಿದೆ.

ಕೊಲೆ ಆರೋಪದ ಮೇಲೆ ಆಕೆಯ ಗೆಳೆಯ ಮನ್‌ಪ್ರೀತ್ ಸಿಂಗ್ (45) ಎಂಬವನನ್ನು ಪೊಲೀಸರು ಪಂಜಾಬ್‌ನಲ್ಲಿ ಬಂಧಿಸಿದ್ದಾರೆ.

ರೇಖಾರಾಣಿ ಮಗಳೊಂದಿಗೆ ವಾಸವಿದ್ದರು. 2015ರಲ್ಲಿ ಸಿಂಗ್ ಪರಿಚಿತನಾಗಿದ್ದ. ಒಟ್ಟಿಗೆ ವಾಸವಿದ್ದರು. ಈಚೆಗೆ ಸಂಬಂಧ ಹಳಸಿದ್ದು ಜಗಳವಾಗುತ್ತಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಮೃತಳ ಪುತ್ರಿ ಈ ಸಂಬಂಧ ಪೊಲೀಸರಿಗೆ ದೂರು ನೀಡಿದ್ದಾರೆ.

Government of India
Ministry of Fisheries, Animal Husbandry and Dairying
Department of Animal Husbandry, Dairying & Fisheries
Central Cattle Breeding Farm, Hesaraghatta, Bangalore North-560088 (Karnataka) 080-28466295

No. HF/LVS/MILK/TNDR/22-23/ Dated 30th November, 2022

E-TENDER NOTICE

Online bids are hereby invited under Double Cover System from Firms/ Bidders/ Contractors for **Sale of Surplus Holstein Friesien Cow Milk** produced by Central Cattle Breeding Farm, Hesaraghatta (Karnataka) during the financial year 2022-23. The bid will be accepted throught e-tender only and intending bidders must be registered with the Central Public Procurement (CPP) Portal, i.e, http://eprocure.gov.in and should submit the same online. (Tender Reference No. **2022_DADF_725757_1 Dated: 25-11-2022)**

The last date for submission of Bids Online is **15th December, 2022 at 3.30 pm**

Sd/- (Dr. B. Arun Prasa)
Joint Commissioner

Azadi Ka Amrit Mahotsav

पावरग्रिड POWERGRID

ಪ್ರಕಟಣೆ

1. **"ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯಲ್ಲಿ ಅಲ್ಟ್ರಾ ಮೆಗಾ ಸೋಲಾರ್ ಪಾರ್ಕ್‌ಗೆ ಟ್ರಾನ್ಸ್‌ಮಿಷನ್ ಸಿಸ್ಟಮ್–ಪಾರ್ಟ್‌ಬಿ (ಫೇಸ್–2)"** ಅಡಿಯಲ್ಲಿ ಟ್ರಾನ್ಸ್‌ಮಿಷನ್ ಅಸೆಟ್‌ಗಳಿಗಾಗಿ: ಸಿಇಆರ್‌ಸಿ (ಕಂಡಕ್ಟ್ ಆಫ್ ಬಿಜಿನೆಸ್) ರೆಗ್ಯುಲೇಶನ್ಸ್? 1999ರ ರೆಗ್ಯುಲೇಶನ್–86ರ 1) 2014–19ರ ಟ್ಯಾರಿಫ್ ಬ್ಲಾಕ್‌ನ ಟ್ರಾನ್ಸ್‌ಮಿಷನ್ ಟ್ಯಾರಿಫ್ ಟ್ರ್ಯುಯಿಂಗ್ ಅಪ್ ಮತ್ತು 2) 2019–24ನೇ ಸಾಲಿಗೆ ಟ್ಯಾರಿಫ್ ಬ್ಲಾಕ್ ಪಿಟಿಷನ್–1ರ ಟ್ರಾನ್ಸ್‌ಮಿಷನ್ ಟ್ಯಾರಿಫ್ ಡಿಟರ್ಮಿನೇಶನ್‌ಗೆ ಅನುಮೋದನೆ.
2. ಮೇಲೆ ತಿಳಿಸಲಾಗಿರುವ ಟ್ರಾನ್ಸ್‌ಮಿಷನ್ ಸಿಸ್ಟಮ್‌ನ ಫಲಾನುಭವಿಗಳು: (ಎ) ಟ್ಯಾಂಜೆಡ್ಕೊ (ಬಿ) ಅಪ್ಟ್ರಾನ್ಸ್ಕೊ (ಸಿ) ಕೆಎಸ್‌ಇಬಿಎಲ್ (ಡಿ) ಗೋವಾ ವಿದ್ಯುತ್ ಇಲಾಖೆ (ಇ) ಪುದುಚೆರಿ ವಿದ್ಯುತ್ ಇಲಾಖೆ (ಎಫ್) ಎಪಿಇಪಿಡಿಸಿಎಲ್ (ಜಿ) ಎಪಿಎಸ್‌ಪಿಡಿಸಿಎಲ್ (ಹೆಚ್) ಟಿಎಸ್‌ಎನ್‌ಪಿಡಿಸಿಎಲ್ (ಐ) ಟಿಎಸ್‌ಎಸ್‌ಪಿಡಿಸಿಎಲ್ (ಜೆ) ಬೆಸ್ಕಾಂ (ಕೆ) ಜೆಸ್ಕಾಂ (ಎಲ್) ಹೆಸ್ಕಾಂ (ಎಂ) ಮೆಸ್ಕಾಂ (ಎನ್) ಚಾಮುಂಡೇಶ್ವರಿ ವಿದ್ಯುತ್ ಪೂರೈಕೆ ನಿಗಮ ನಿಯಮಿತ (ಒ) ಆಂಧ್ರಪ್ರದೇಶ ಸೋಲಾರ್ ಪವರ್ ಕಾರ್ಪೊರೇಶನ್ ಪ್ರೈವೇಟ್ ಲಿಮಿಟೆಡ್ (ಎಪಿಎಸ್‌ಪಿಸಿಪಿಎಲ್).

3. ಟ್ಯಾರಿಫ್ ವಿವರ: ಎ) 2014–19 ಬ್ಲಾಕ್ ಲಕ್ಷ ರೂ.ಗಳಲ್ಲಿ

ಪ್ರಾಜೆಕ್ಟ್		2014-15	2015-16	2016-17	2017-18	2018-19
ಅಸೆಟ್–1	ಟ್ರ್ಯುಯಿಂಗ್ ಅಪ್ ಆಧಾರದಲ್ಲಿ ಪರಿಷ್ಕೃತ ಎಎಫ್‌ಸಿ	0.00	0.00	0.00	0.00	306.01
ಅಸೆಟ್–2	ಟ್ರ್ಯುಯಿಂಗ್ ಅಪ್ ಆಧಾರದಲ್ಲಿ ಪರಿಷ್ಕೃತ ಎಎಫ್‌ಸಿ	0.00	0.00	0.00	0.00	243.36
ಅಸೆಟ್–3	ಟ್ರ್ಯುಯಿಂಗ್ ಅಪ್ ಆಧಾರದಲ್ಲಿ ಪರಿಷ್ಕೃತ ಎಎಫ್‌ಸಿ	0.00	0.00	0.00	101.96	127.25
ಅಸೆಟ್–4	ಟ್ರ್ಯುಯಿಂಗ್ ಅಪ್ ಆಧಾರದಲ್ಲಿ ಪರಿಷ್ಕೃತ ಎಎಫ್‌ಸಿ	0.00	0.00	0.00	0.00	135.87

ಬಿ) 2019–24 ಬ್ಲಾಕ್ ಲಕ್ಷ ರೂ.ಗಳಲ್ಲಿ

ಪ್ರಾಜೆಕ್ಟ್		2019-20	2020-21	2021-22	2022-23	2023-24
ಅಸೆಟ್–1	ಎಎಫ್‌ಸಿ	421.16	446.69	451.99	451.50	444.10
ಅಸೆಟ್–2	ಎಎಫ್‌ಸಿ	476.87	512.75	505.32	497.98	489.62
ಅಸೆಟ್–3	ಎಎಫ್‌ಸಿ	74.99	75.92	76.91	77.95	79.05
ಅಸೆಟ್–4	ಎಎಫ್‌ಸಿ	101.30	104.40	107.63	110.94	114.41

4. ಟ್ಯಾರಿಫ್ ಡಿಟರ್ಮಿನೇಶನ್‌ಗಾಗಿ ಸಲ್ಲಿಸಲಾದ ಅರ್ಜಿಯ ಒಂದು ಪ್ರತಿಯನ್ನು ಅರ್ಜಿದಾರರ www.pwergrid.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.
5. ಅರ್ಜಿಯಲ್ಲಿ ಉಲ್ಲೇಖಿಸಲಾಗಿರುವ ಟ್ಯಾರಿಫ್ ಡಿಟರ್ಮಿನೇಶನ್ ಪ್ರಸ್ತಾವಣೆಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಾಗಲಿ ಮತ್ತು ಫಲಾನುಭವಿಗಾಗಲಿ ಯಾವುದೇ ರೀತಿಯ ಸಲಹೆಗಳು ಮತ್ತು ಆಕ್ಷೇಪಣೆಗಳು ಇದ್ದಲ್ಲಿ, ಅಂತಹವರು ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ 30 ದಿನಗಳೊಳಗೆ ಸೆಕ್ರೆಟರಿ, ಸೆಂಟ್ರಲ್ ಇಲೆಕ್ಟ್ರಿಸಿಟಿ ರೆಗ್ಯುಲೇಟರಿ ಕಮಿಷನ್, 3 ಮತ್ತು 4ನೇ ಮಹಡಿ, ಚಂದ್ರಲೋಕ ಬಿಲ್ಡಿಂಗ್, ಜನಪಥ, ನವದೆಹಲಿ–110001 ವಿಳಾಸಕ್ಕೆ (ಅಥವಾ ಆಯೋಗದ ಕಚೇರಿಯ ಇನ್ನೊಂದು ವಿಳಾಸಕ್ಕೆ) ತಮ್ಮ ಸಲಹೆ ಅಥವಾ ಆಕ್ಷೇಪಣೆಗಳನ್ನು ಸಲ್ಲಿಸುವುದು, ಜೊತೆಗೆ ಒಂದು ಪ್ರತಿಯನ್ನು ಅರ್ಜಿದಾರರ ಕಾರ್ಪೊರೇಟ್ ಕಚೇರಿಯ ವಿಳಾಸಕ್ಕೆ ಕೂಡ ಸಲ್ಲಿಸುವುದು.

ಸ್ಥಳ: ಗುರುಗಾಂವ್
ದಿನಾಂಕ: 25.11.2022

ಸಹಿ/–
ಚೀಫ್ ಜನರಲ್ ಮ್ಯಾನೇಜರ್ (ಕಮರ್ಷಿಯಲ್)

ಪವರ್ ಗ್ರಿಡ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್
(ಭಾರತ ಸರ್ಕಾರದ ಉದ್ದಿಮೆ)
ನೋಂದಾಯಿತ ಕಚೇರಿ: ಬಿ–9, ಕುತುಬ್ ಇನ್‌ಸ್ಟಿಟ್ಯೂಷನಲ್ ಏರಿಯಾ, ಕತ್ವಾರಿಯಾ ಸರಾಯ್, ನವದೆಹಲಿ–110016.
ಕಾರ್ಪೊರೇಟ್ ಕಚೇರಿ: "ಸೌದಾಮಿನಿ", ಪ್ಲಾಟ್ ನಂ. 2, ಸೆಕ್ಟರ್–29, ಗುರುಗ್ರಾಮ–122001, (ಹರಿಯಾಣ) ಫೋನ್:0124–24571700–719
www.powergrid.in, CIN : L40101DL1989GOI038121
ಮಹಾರತ್ನ ಸಾರ್ವಜನಿಕ ಕ್ಷೇತ್ರ ಘಟಕ

PG/CC/Notice-36/Advt.-61/2022-23 Pamm

ಡಿಕೆಶಿ ಯಾರ ಶಿಷ್ಯ: ಕಟೀಲ್ ಪ್ರಶ್ನೆ

ಬೆಂಗಳೂರು: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಯಾರ ಶಿಷ್ಯ? ಎಲ್ಲಿಂದ ರಾಜಕಾರಣಕ್ಕೆ ಬಂದರು ಎಂದು ನಾನೇನೂ ಬಹಿರಂಗಪಡಿಸಬೇಕಿಲ್ಲ. ಅವರ ಇತಿಹಾಸ, ವ್ಯವಸ್ಥೆಗಳು, ರಕ್ತಸಿಕ್ತ ಕಾಂಗ್ರೆಸ್ ಚಟುವಟಿಕೆಗಳು ನನಗಿಂತ ಹೆಚ್ಚಾಗಿ ಬೆಂಗಳೂರಿನ ಜನರಿಗೆ ತಿಳಿದಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಭಯೋತ್ಪಾದನೆ, ಕ್ರಿಮಿನಲ್ ಮತ್ತು ಗೂಂಡಾ ರಾಜಕೀಯದಂತಹ ಚಟುವಟಿಕೆಗಳನ್ನು ನಮ್ಮ ಪಕ್ಷ ಸಹಿಸುವುದಿಲ್ಲ ಮತ್ತು ಒಪ್ಪಿಕೊಳ್ಳುವುದಿಲ್ಲ 'ಎಂದರು.

ಕಾಂಗ್ರೆಸ್ ರೌಡಿ ಫ್ಯಾಕ್ಟರಿ: ಅಶೋಕ

'ಕಾಂಗ್ರೆಸ್ ಪಕ್ಷ ರೌಡಿಗಳನ್ನು ತಯಾರಿಸುವ ಫ್ಯಾಕ್ಟರಿ ಇದ್ದಂತೆ. ಗೂಂಡಾ ರಾಜಕಾರಣ ಮಾಡುವವರು ಕಾಂಗ್ರೆಸ್‌ನವರೇ ಹೊರತು ನಾವಲ್ಲ. ಕೇಸರಿ ಬಟ್ಟೆ ಹಾಕಿದ ತಕ್ಷಣ ಬಿಜೆಪಿ ಸೇರಿದರು ಎಂದು ಹೇಳಲು ಆಗುವುದಿಲ್ಲ' ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

'ರಾಜಕೀಯ ವ್ಯವಸ್ಥೆಯಲ್ಲಿ ಸಹಜವಾಗಿ ಕೆಲವೊಂದು ಅಚಾತುರ್ಯಗಳಾಗುತ್ತವೆ. ಇಂತಹ ಘಟನೆಗಳು ಮತ್ತು ಕ್ರಿಮಿನಲ್ ಕೇಸುಗಳ ಕಾರಣವನ್ನೂ ಗಮನಿಸುತ್ತೇವೆ. ಎಲ್ಲ ಪ್ರಕರಣಗಳನ್ನೂ ಒಂದೇ ರೀತಿ ನೋಡಲು ಸಾಧ್ಯವಿಲ್ಲ. ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗ ನಮ್ಮ ಸಂಘಟನೆಗಳ ಎಲ್ಲರ ಮೇಲೂ ಪ್ರಕರಣಗಳನ್ನು ದಾಖಲಿಸಿದ್ದಾರೆ. ಹಿಂದುತ್ವದ ಪರ ಹೋರಾಟ ಮಾಡಿದ್ದರ ವಿರುದ್ಧವೂ ಕೇಸುಗಳಿವೆ. ಹಿಂದುತ್ವದ ಹೋರಾಟಗಾರರನ್ನು ರೌಡಿ ಪಟ್ಟಿಗೂ ಸೇರಿಸಿದ್ದಾರೆ. ದೇಶದಲ್ಲಿ ಸಿಖ್ಖರ ನರಮೇಧ ಯಾರು ಮಾಡಿದ್ದಾರೆ ಎಂಬುದಕ್ಕೆ ನಾವೇನೂ ಉತ್ತರ ಕೊಡುವ ಅಗತ್ಯವಿಲ್ಲ. ಹಿಂದೆ ತಂದೂರ್‌ನಲ್ಲಿ ಬೆಂಕಿ ಹಾಕಿ ಯಾರನ್ನೋ ಸುಟ್ಟ ಉದಾಹರಣೆಗಳೂ ಇವೆ' ಎಂದರು.

5ರಿಂದ ವಿದ್ಯುತ್ ಗುತ್ತಿಗೆದಾರರ ಪ್ರತಿಭಟನೆ

ಬೆಂಗಳೂರು: ಸಣ್ಣ ಸಣ್ಣ ಕಾಮಗಾರಿಗಳನ್ನು ಒಟ್ಟುಗೂಡಿಸಿ ಬೃಹತ್ ಟೆಂಡರ್ ಕರೆಯುವ ಆದೇಶವನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿ ಡಿ. 5ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಲಾಗುವುದು ಎಂದು ಕರ್ನಾಟಕ ರಾಜ್ಯ ಅನುಮತಿ ಪಡೆದ ಗುತ್ತಿಗೆದಾರರ ಸಂಘ ತಿಳಿಸಿದೆ.

₹1 ಲಕ್ಷದಿಂದ ₹5 ಲಕ್ಷದೊಳಗಿನ ಮೊತ್ತದ ಕಾಮಗಾರಿಗಳನ್ನು ಸ್ಥಳೀಯ ಗುತ್ತಿಗೆದಾರರಿಗೆ ನೀಡಬೇಕು. ಬೆಳಕು ಯೋಜನೆಗೆ ಬೆಸ್ಕಾಂ ನೀಡುತ್ತಿರುವ ದರವನ್ನು ಎಲ್ಲಾ ಎಸ್ಕಾಂಗಳಲ್ಲಿ ಜಾರಿಗೊಳಿಸಿ, ಈ ಯೋಜನೆಯ ಕಾಮಗಾರಿ ನಿರ್ವಹಿಸಿರುವ ಬಿಲ್‌ಗಳಿಗೆ ಹಣ ಬಿಡುಗಡೆಗೊಳಿಸಬೇಕು ಎಂದು ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ. ರಮೇಶ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ರೈತರ ಕೃಷಿ ಪಂಪ್‌ಸೆಟ್‌ಗಳಿಗೆ ತತ್ಕಾಲ್ ಯೋಜನೆ ಅಡಿಯಲ್ಲಿ ನೀಡುತ್ತಿದ್ದ ಅನುದಾನ ಸ್ಥಗಿತಗೊಳಿಸಲಾಗಿದ್ದು, ಇದರಿಂದ ಲಕ್ಷಾಂತರ ರೈತರಿಗೆ ಅನನುಕೂಲವಾಗಿದೆ. ಎಲ್ಲಾ ಎಸ್ಕಾಂಗಳಿಗೂ ಏಕರೂಪದ ಕೆಇಆರ್‌ಸಿ ನಿಯಮ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು.

ಲೋಕೋಪಯೋಗಿ ಇಲಾಖೆ, ನೀರಾವರಿ ನಿಗಮ, ಮಹಾನಗರ ಪಾಲಿಕೆ, ಪಂಚಾಯತ್ ರಾಜ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಿವಿಲ್ ಕಾಮಗಾರಿಗಳ ಜೊತೆಗೆ ವಿದ್ಯುತ್ ಕಾಮಗಾರಿಗಳನ್ನು ಸೇರಿಸಿ ಟೆಂಡರ್ ಕರೆಯುತ್ತಿರುವುದನ್ನು ರದ್ದುಗೊಳಿಸಿ, ಪ್ರತ್ಯೇಕ ಟೆಂಡರ್ ಕರೆಯಬೇಕು. ಸರ್ವರ್ ಮತ್ತು ಮಾಪಕಗಳ (ಮೀಟರ್) ಸಮಸ್ಯೆಯನ್ನು ಕೂಡಲೇ ಬಗೆಹರಿಸಬೇಕು ಎಂದು ಹೇಳಿದರು.

ಸಂಘದ ಉಪಾಧ್ಯಕ್ಷ ಎಂ. ಎನ್. ಉಮೇಶ್, ಎಚ್. ಎ. ಚಂದ್ರಬಾಬು, ಅನ್ವರ್ ಮಿಯಾ, ಶಿವಾನಂದ ಬಿ. ಹಾಲಪ್ಪನವರ್, ಕೆ ಚಂದ್ರಬಾಬು ಮತ್ತು ಶಿವರಾಜು ಐ. ಬಿ. ಇದ್ದರು.

ಪ್ರತ್ಯೇಕ ಪ್ರಕರಣ: ಮೂವರು ಶಿಕ್ಷಕರು ಅಮಾನತು

ಕಲಬುರಗಿ: ಲೈಂಗಿಕ ಕಿರುಕುಳ ಸೇರಿ ಒಟ್ಟು ಮೂರು ಪ್ರತ್ಯೇಕ ಪ್ರಕರಣಗಳಲ್ಲಿ ಬೀದರ್ ಜಿಲ್ಲೆಯ ಕಮಲನಗರದಲ್ಲಿ ಒಬ್ಬರು ಮತ್ತು ಯಾದಗಿರಿ ಜಿಲ್ಲೆಯಲ್ಲಿ ಇಬ್ಬರು ಶಿಕ್ಷಕರು ಅಮಾನತುಗೊಂಡಿದ್ದಾರೆ.

ಬಿಸಿಯೂಟದ ಸಿಬ್ಬಂದಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದಾರೆ ಎಂಬ ಆರೋಪದ ಮೇಲೆ ಕಮಲನಗರ ತಾಲ್ಲೂಕಿನ ಖತಗಂವಾ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕ ಶಿವಕುಮಾರ ಡೊಂಗರೆ ಎಂಬುವರನ್ನು ಅಮಾನತುಗೊಳಿಸಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪನಿರ್ದೇಶಕ ಗಣಪತಿ ಬಾರಾಟಕ್ಕೆ ಆದೇಶ ಹೊರಡಿಸಿದ್ದಾರೆ. ಮದ್ಯಪಾನ ಮಾಡಿ ಬರುತ್ತಿದ್ದ ಆರೋಪದ ಮೇಲೆ ಶಹಾಪುರ ತಾಲ್ಲೂಕಿನ ಮುಡಬೂಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಸಹಶಿಕ್ಷಕ ಖಾಜಪ್ಪ, ಅದೇ ಶಾಲೆ ಯಲ್ಲಿ ವಿದ್ಯಾರ್ಥಿಗಳಿಗೆ ಸಕಾಲಕ್ಕೆ ಸಮವಸ್ತ್ರ, ಶೂ ವಿತರಿಸಿಲ್ಲ ಎಂಬ ಆರೋಪದ ಮೇಲೆ ಮುಖ್ಯಶಿಕ್ಷಕ ಚಂದಪ್ಪ ಎಂಬುವರನ್ನು ಅಮಾನತು ಮಾಡಲಾಗಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಶೀಬಾ ಜಲಿಯನ್ ತಿಳಿಸಿದ್ದಾರೆ.

ಕೆನರಾ ಬ್ಯಾಂಕ್‌ನ ಎಂ.ಡಿ. ಹಾಗೂ ಸಿಇಒ ಎಲ್‌.ವಿ. ಪ್ರಭಾಕರ್ (ಮಧ್ಯದಲ್ಲಿ ಇರುವವರು) ಬ್ಯಾಂಕ್ ಪರವಾಗಿ ಪ್ರಶಸ್ತಿ ಸ್ವೀಕರಿಸಿದರು.

ಕೆನರಾ ಬ್ಯಾಂಕ್‌ಗೆ ಪ್ರಶಸ್ತಿ

ಬೆಂಗಳೂರು: ಲಂಡನ್ನಿನಲ್ಲಿ ಈಚೆಗೆ ನಡೆದ ಜಾಗತಿಕ ಬ್ಯಾಂಕಿಂಗ್ ಶೃಂಗಸಭೆಯಲ್ಲಿ ಕೆನರಾ ಬ್ಯಾಂಕ್‌ಗೆ ಭಾರತ ವಿಭಾಗದಲ್ಲಿ 2022ನೆಯ ಸಾಲಿನ 'ಬ್ಯಾಂಕರ್ಸ್ ಬ್ಯಾಂಕ್ ಆಫ್ ದಿ ಇಯರ್' ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಎಲ್.ವಿ. ಪ್ರಭಾಕರ್ ಅವರು ಲಂಡನ್ನಿನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಸ್ವೀಕರಿಸಿದರು ಎಂದು ಪ್ರಕಟಣೆ ತಿಳಿಸಿದೆ.

ಈ ಪ್ರಶಸ್ತಿಯು ಬ್ಯಾಂಕಿಂಗ್ ಉದ್ಯಮದ ಪಾಲಿಗೆ ಆಸ್ಕರ್ ಪ್ರಶಸ್ತಿ ಇದ್ದಂತೆ. ಪ್ರಶಸ್ತಿಯ ಮೂಲಕ ಕೆನರಾ ಬ್ಯಾಂಕ್‌ಅನ್ನು 2022ನೆಯ ಸಾಲಿನಲ್ಲಿ ಭಾರತದ ಅತ್ಯುತ್ತಮ ಬ್ಯಾಂಕ್ ಎಂದು ಪರಿಗಣಿಸಿದಂತಾಗಿದೆ ಎಂದು ಕೂಡ ಪ್ರಕಟಣೆ ತಿಳಿಸಿದೆ.

ಅಂಗವಿಕಲರ ಇಲಾಖೆಯಿಂದ ವಾರ್ಷಿಕ ಪ್ರಶಸ್ತಿ ಘೋಷಣೆ

15 ಅಂಗವಿಕಲ ಸಾಧಕರಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು 2022ನೇ ಸಾಲಿನ ವಾರ್ಷಿಕ ಪ್ರಶಸ್ತಿಯನ್ನು ಘೋಷಿಸಿದ್ದು, ಅಂಗವೈಕಲ್ಯವನ್ನು ಮೆಟ್ಟಿ ನಿಂತು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 15 ಮಂದಿಯನ್ನು ಪ್ರಶಸ್ತಿಗೆ ಆಯ್ಕೆ ಮಡಲಾಗಿದೆ.

ಅಂಗವಿಕಲರ ಕಲ್ಯಾಣಕ್ಕಾಗಿ ಶ್ರಮಿಸುತ್ತಿರುವ 10 ಸಂಘ–ಸಂಸ್ಥೆಗಳು, ವಿಶೇಷ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಐವರು ಶಿಕ್ಷಕರನ್ನೂ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಇಲಾಖೆಯು ಇಲ್ಲಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿವಿಶ್ವ ಅಂಗವಿಕಲರ ದಿನಾಚರಣೆ ಕಾರ್ಯಕ್ರಮವನ್ನು ಶನಿವಾರ ಬೆಳಿಗ್ಗೆ 11 ಗಂಟೆಗೆ ಹಮ್ಮಿಕೊಂಡಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಸಂಸ್ಥೆಗಳ ವಿಭಾಗದಲ್ಲಿ ಬೆಂಗಳೂರಿನ ಬಸವನಗುಡಿಯ ಸಕ್ಷಮ ಕರ್ನಾಟಕ, ಹೆಬ್ಬಾಳದ ಬೆಂಗಳೂರು ಬ್ಯಾಪ್ಟಿಸ್ಟ್ ಆಸ್ಪತ್ರೆ, ಉಡುಪಿಯ ಗುರು ರಾಘವೇಂದ್ರ ಸೇವಾ ಟ್ರಸ್ಟ್, ಶಿವಮೊಗ್ಗದ ಚೈತನ್ಯ ವಿಶೇಷ ಶಿಕ್ಷಣ ಟ್ರಸ್ಟ್, ಮೈಸೂರಿನ ಮಾತೃಮಂಡಳಿ ಶಿಶು ವಿಕಾಸ ಕೇಂದ್ರ, ರಾಮನಗರದ ನವಚೇತನ ಚಾರಿಟಬಲ್ ಟ್ರಸ್ಟ್, ರಾಯಚೂರಿನ ಮಾತ್ರ ಆಸರೆ ಶಿಕ್ಷಣ ಸಮಾಜ ಸೇವಾ ಪ್ರತಿಷ್ಠಾನ, ದಕ್ಷಿಣ ಕನ್ನಡದ ಸೇವಾಭಾರತಿ ಸೇವಾನಿಕೇತನ, ಕೊಪ್ಪಳದ ಸರ್ವೋದಯ ಇಂಟಿಗ್ರೇಟೆಡ್ ರೂರಲ್ ಸೊಸೈಟಿ ಹಾಗೂ ಬಾಗಲಕೋಟೆಯ ಸಮಗ್ರ ಜೀವನ ವಿಕಾಸ ಸಂಸ್ಥೆ ಪ್ರಶಸ್ತಿಗೆ ಭಾಜನವಾಗಿವೆ.

ಶಿಕ್ಷಕರ ವಿಭಾಗದಲ್ಲಿ ನೀಡುವ ಪ್ರಶಸ್ತಿಗೆ ಚಾಮರಾಜನಗರದ ಎಂ.ಶಾಂತಿ, ಹಾವೇರಿಯ ನಾಗಪ್ಪ ಬ. ಬೆಂತೂರು, ದೊಡ್ಡಬಳ್ಳಾಪುರದ ರವಿ ಆರ್., ಮೈಸೂರಿನ ರಘುನಾಥಗೌಡ ವೈ.ವಿ. ಹಾಗೂ ತುಮಕೂರಿನ ಎಚ್. ಸುಮತಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಗೆ ಆಯ್ಕೆಯಾದ ಸಾಧಕರು

ಹೆಸರು	ಜಿಲ್ಲೆ
ವೆಂಕಟೇಶ್ ಬಾಬು	ಚಿಕ್ಕಬಳ್ಳಾಪುರ
ರಾಧಾ	ಚಿತ್ರದುರ್ಗ
ಗೋಪಿನಾಥ್ ಕೆ.	ಬೆಂಗಳೂರು
ಜ್ಯೋತಿ ಎಸ್.	ಶಿವಮೊಗ್ಗ
ಅನಿತಾ ಎಚ್. ಪಾಟೀಲ	ದಾವಣಗೆರೆ
ಸಿ.ಆರ್. ಶಿವಕುಮಾರ್	ಶಿವಮೊಗ್ಗ
ರಾಜಶೇಖರ ಪಿ. ಶಾಮರಾವ	ಉಡುಪಿ
ಬಸವರಾಜ ತಮ್ಮಣ್ಣಪ್ಪ ಹೊರಡ್ಡಿ	ಬಾಗಲಕೋಟೆ
ನಿಧಿ ಶಿವರಾಮ ಸುಲ್ಲಾಖೆ	ಧಾರವಾಡ
ಸುರಜ್ ಪರಶುರಾಮ್ ಧಾಮಣೇಕರ	ಬೆಳಗಾವಿ
ತುಳಸಮ್ಮ ಕೆಲೂರ	ಗದಗ
ಶಿವನಗೌಡ	ಕೊಪ್ಪಳ
ಸಿದ್ಧರಾಮ	ಕಲಬುರಗಿ
ಶಿದ್ಧಲಿಂಗಮ್ಮ	ಕೊಪ್ಪಳ
ಬಾಬುರಾವ್	ಬೀದರ್

₹ 64 ಲಕ್ಷದ ವಸ್ತು ಜಪ್ತಿ: 16 ಜನರ ಬಂಧನ

ಬೆಂಗಳೂರು: ಪಶ್ಚಿಮ ವಿಭಾಗದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದಿದ್ದ ಕಾರ್ಯಾಚರಣೆಯಲ್ಲಿ 16 ಆರೋಪಿಗಳನ್ನು ಬಂಧಿಸಿ, ₹ 64.21 ಲಕ್ಷ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಲಾಗಿದೆ.

619 ಗ್ರಾಂ ಚಿನ್ನಾಭರಣ, 30 ಗ್ರಾಂ ಬೆಳ್ಳಿಯ ಆಭರಣ, ವಿವಿಧ ಕಂಪನಿಗಳ 210 ಮೊಬೈಲ್, 9 ದ್ವಿಚಕ್ರ ವಾಹನಗಳು, 3 ಸೈಕಲ್, 1 ಆಟೊ ಹಾಗೂ ಎರಡು ವಾಚ್ ವಶಪಡಿಸಿಕೊಳ್ಳಲಾಗಿದೆ.

'ಮನೆ ಬೀಗ ಒಡೆದು ಚಿನ್ನಾ ಭರಣ ಕಳವು, ದೇವರ ವಿಗ್ರಹದ ಚಿನ್ನದ ಸರ ಕಳವು, ಅಂಗಡಿಯ ಬೀಗ ಒಡೆದು ನಗದು, ಸಾಮಗ್ರಿ ಕಳವು ಮಾಡಿದ್ದ ಆರೋಪಿಗಳನ್ನು ಬಂಧಿಸಿದ್ದೇವೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆ ವ್ಯಾಪ್ತಿಯ ಮಾಗಡಿ ರಸ್ತೆ ಸುಮ್ಮನಹಳ್ಳಿ ಜಂಕ್ಷನ್ ರಿಂಗ್ ರಸ್ತೆಯಲ್ಲಿ ಲಾರಿ ಹಾಗೂ ಬಸ್‌ಗಳನ್ನು ನಿಲ್ಲಿಸಿಕೊಂಡು ಚಾಲಕರು ಹಾಗೂ ಕ್ಲೀನರ್ ವಿಶ್ರಾಂತಿ ಪಡೆಯುತ್ತಿದ್ದರು. ಅಲ್ಲಿಗೆ ನಾಲ್ವರು ಆರೋಪಿಗಳು ಬಂದು ಲಾಂಗ್ ತೋರಿಸಿ ಬೆದರಿಸಿ ನಗದು,ಮೊಬೈಲ್ ಕಸಿದು ಪರಾರಿಯಾಗಿದ್ದರು. ಆ ನಾಲ್ವರು ಆರೋಪಿಗಳನ್ನೂ ಪತ್ತೆ ಮಾಡಿ ಬಂಧಿಸಲಾಗಿದೆ. ಬಂಧಿತರಿಂದ ₹ 2.50 ಲಕ್ಷದ ಮೊಬೈಲ್ ಹಾಗೂ ಮೂರು ಬೈಕ್ ವಶಕ್ಕೆ ಪಡೆಯಲಾಗಿದೆ. ಬಿಲ್ ಕಲೆಕ್ಷನ್ ವ್ಯಕ್ತಿಗೆ ಚಾಕುವಿನಿಂದ ಇರಿದು ಹಣವಿದ್ದ ಬ್ಯಾಗ್ ಅಪಹರಿಸಿ ಪರಾರಿ ಆಗಿದ್ದನನ್ನು ಬಂಧಿಸಲಾಗಿದೆ' ಎಂದು ಡಿಸಿಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

ನಮ್ಮ ಬೆಂಗಳೂರು ಪ್ರತಿಷ್ಠಾನದ ವತಿಯಿಂದ ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಅವರಿಗೆ ಮನವಿ ಸಲ್ಲಿಸಲಾಯಿತು. ಪ್ರತಿಷ್ಠಾನದ ಪ್ರಧಾನ ವ್ಯವಸ್ಥಾಪಕ ವಿನೋದ್ ಜೇಕಬ್, ವ್ಯವಸ್ಥಾಪಕಿ ಉಷಾ ಧನ್‌ರಾಜ್ ಹಾಜರಿದ್ದರು

ಪೆರಿಫೆರಲ್ ವರ್ತುಲ ರಸ್ತೆ: ಮರ ಸ್ಥಳಾಂತರದ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆರಿಫೆರಲ್ ವರ್ತುಲ ರಸ್ತೆ (ಪಿಪಿಆರ್) ನಿರ್ಮಾಣದ ಸಂದರ್ಭದಲ್ಲಿ ಸಾಧ್ಯವಾದಷ್ಟು ಮರಗಳನ್ನು ಉಳಿಸಲಾಗುತ್ತದೆ. ವಿವಿಧ ಮರಗಳನ್ನು ಸ್ಥಳಾಂತರಿಸಲಾಗುವುದು ಎಂದು ಬಿಡಿಎ ಅಧ್ಯಕ್ಷ ಎಸ್.ಆರ್. ವಿಶ್ವನಾಥ್ ಭರವಸೆ ನೀಡಿದರು.

ನಮ್ಮ ಬೆಂಗಳೂರು ಪ್ರತಿಷ್ಠಾನದ ವತಿಯಿಂದ ಶುಕ್ರವಾರ ಮನವಿ ಸ್ವೀಕರಿಸಿ ಮಾತನಾಡಿದ ಅವರು, ಪಿಪಿಆರ್ ಯೋಜನೆ ಅನುಷ್ಠಾನದಲ್ಲಿ ಪರಿಸರ ರಕ್ಷಣೆಗೆ ಗರಿಷ್ಠ ಪ್ರಯತ್ನ ಮಾಡಲಾಗುವುದು ಎಂದರು.

'73.5 ಕಿ.ಮೀ ಪಿಪಿಆರ್ ಅಭಿವೃದ್ಧಿಗಾಗಿ ಸುಮಾರು 33 ಸಾವಿರ ಮರಗಳನ್ನು ಕಡಿಯುವ ಬಗ್ಗೆ ಪರಿಸರವಾದಿಗಳು ಮತ್ತು ಬೆಂಗಳೂರಿನ ನಾಗರಿಕರಿಗೆ ಕಳವಳ ಉಂಟುಮಾಡಿದೆ. ಈ ಯೋಜನೆಯು ಜಾರಕಬಂಡೆಕಾವಲ್‌ನಲ್ಲಿರುವ ಅರಣ್ಯ ಭೂಮಿ ಮತ್ತು ಆರು ಜಲಮೂಲಗಳ ಮೇಲೂ ಪರಿಣಾಮ ಬೀರಲಿದೆ' ಎಂದು ನಮ್ಮ ಬೆಂಗಳೂರು ಪ್ರತಿಷ್ಠಾನದ ಪ್ರಧಾನ ವ್ಯವಸ್ಥಾಪಕ ವಿನೋದ್ ಜೇಕಬ್ ಹೇಳಿದರು.

'ಯೋಜನೆಗೆ ಮೊದಲು ಸಂಪೂರ್ಣ ಅಧ್ಯಯನ ನಡೆಸಬೇಕು. ಡಿಪಿಆರ್ ಅನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಮರಗಳನ್ನು ಉಳಿಸಲು ತಜ್ಞರಿಂದ ಸಲಹೆ ಪಡೆಯಬೇಕು. ಪರಿಸರದ ಮೇಲಾಗುವ ಮೌಲ್ಯಮಾಪನ ವರದಿಯನ್ನು ಪ್ರಕಟಿಸಬೇಕು' ಎಂದು ಮನವಿ ಸಲ್ಲಿಸಿದರು.

ಪೀಣ್ಯದಿಂದ ನಾಗಸಂದ್ರದ ತನಕ 'ಅವ್ಯವಸ್ಥೆ': ರಾತ್ರಿಯಲ್ಲಿ ಭಯದ ವಾತಾವರಣ

'ಕತ್ತಲು': ಅಪಘಾತಕ್ಕೆ ದಾರಿ

● ಆದಿತ್ಯ ಕೆ.ಎ.

ಬೆಂಗಳೂರು: ರಾಜಧಾನಿಯ ಸಂಪರ್ಕಕೊಂಡಿ ರಾಷ್ಟ್ರೀಯ ಹೆದ್ದಾರಿ-4 ಅವ್ಯವಸ್ಥೆಯ ಆಗರವಾಗಿದೆ. ವಾಹನ ದಟ್ಟಣೆ ಅಲ್ಲದೇ ರಾತ್ರಿ ವೇಳೆ ಈ ಹೆದ್ದಾರಿಯಲ್ಲಿ ಅವಘಡಗಳು ಸಂಭವಿಸುತ್ತಿವೆ. ಪೀಣ್ಯ ಪೊಲೀಸ್ ಠಾಣೆಯಿಂದ ನಾಗಸಂದ್ರದವರೆಗೆ ಸರಿಯಾದ ಬೆಳಕಿನ ವ್ಯವಸ್ಥೆಯಿಲ್ಲದೇ ರಾತ್ರಿ ವೇಳೆ ಭಯದ ವಾತಾವರಣ ನಿರ್ಮಾಣವಾಗಿದೆ ಎಂದು ವಾಹನ ಸವಾರರು ಹಾಗೂ ಸ್ಥಳೀಯರು ಅಳಲು ತೋಡಿಕೊಂಡಿದ್ದಾರೆ.

ಬೆಳಕಿನ ಅವ್ಯವಸ್ಥೆಯಿಂದ ಪೀಣ್ಯದಿಂದ ನಾಗಸಂದ್ರದ ನಡುವೆ ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಿದ್ದು, ಸಂಚಾರ ಪೊಲೀಸರಿಗೆ ತಲೆನೋವಾಗಿ ಪರಿಣಮಿಸಿದೆ. ಹೆದ್ದಾರಿ ಪ್ರಾಧಿಕಾರವು, ರಸ್ತೆ ಹಾಗೂ ಬೀದಿ ದೀಪಗಳ ನಿರ್ವಹಣೆ ಮಾಡುತ್ತಿಲ್ಲ. ಇದೇ ಕಾರಣಕ್ಕೆ ಈ ಹೆದ್ದಾರಿಯಲ್ಲಿ ಅಪಘಾತ ಪ್ರಕರಣಗಳು ಹೆಚ್ಚುತ್ತಿವೆ ಎಂದು ಪೊಲೀಸರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಮಾರ್ಗದಲ್ಲಿ ಹೆಚ್ಚಿನ ಬೀದಿ ದೀಪಗಳ ಅಳವಡಿಕೆ ಹಾಗೂ ಕೆಟ್ಟಿರುವ ಬೀದಿ ದೀಪಗಳನ್ನು ದುರಸ್ತಿ ಪಡಿಸುವಂತೆಯೂ ಸೂಚಿಸಿದ್ದಾರೆ.

ನಾಲ್ಕೂವರೆ ಕಿ.ಮೀ ಅಂತರದ ಮೇಲ್ಸೇತುವೆ, ಸೇವಾ ರಸ್ತೆ ಹಾಗೂ ಮೇಲ್ಸೇತುವೆ ಕೆಳಭಾಗದ ರಸ್ತೆಯ ಹಲವು ಕಡೆಗಳಲ್ಲಿ ರಾತ್ರಿ ವೇಳೆ ಬೆಳಕಿನ ವ್ಯವಸ್ಥೆ ಇಲ್ಲ. ಕೆಲವು ಕಡೆ ಬಲ್ಬ್‌ಗಳು ಒಡೆದಿವೆ. ಹಲವು ದಿನಗಳಿಂದ ಈ ಅವ್ಯವಸ್ಥೆಯಿದ್ದರೂ ದುರಸ್ತಿ ನಡೆದಿಲ್ಲ.

ಅತ್ಯಂತ ಜನದಟ್ಟಣೆ ಪ್ರದೇಶವಾದ ಜಾಲಹಳ್ಳಿ ಕ್ರಾಸ್‌ನಲ್ಲಿ ಒಂದೇ ಬಲ್ಬ್‌ಗಳು ಬೆಳಗುತ್ತಿಲ್ಲ. ಸಂಜೆಯಾದರೆ ಈ ಜಂಕ್ಷನ್‌ನಲ್ಲಿ ಕತ್ತಲು ಆವರಿಸುತ್ತಿದೆ. ಮೆಟ್ರೊ, ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಬಸ್‌ಗಳಲ್ಲಿ ಬಂದವರು ಜಾಲಹಳ್ಳಿಯಲ್ಲಿ ಇಳಿದರೆ ರಸ್ತೆ ದಾಟಲು ಭಯ ಪಡುತ್ತಿದ್ದಾರೆ. ಬರೀ ವಾಹನಗಳ ಬೆಳಕು ಬಿಟ್ಟರೆ ಬೇರೆ ಯಾವುದೇ ಬೆಳಕಿನ ವ್ಯವಸ್ಥೆಯಿಲ್ಲ. ಹೆದ್ದಾರಿಯ ಬಹುತೇಕ ಕಡೆಗಳಲ್ಲಿ ವಿಭಜಕ ನಿರ್ಮಿಸಲಾಗಿದೆ. ಅಲ್ಲಲ್ಲಿ ಗುಂಡಿಗಳು ಬಿದ್ದಿವೆ. ಇದರಿಂದ ಅಪಘಾತಗಳ ಸರಣಿಯೇ ನಡೆಯುತ್ತಿದೆ. ಜಾಲಹಳ್ಳಿ ವೃತ್ತದಲ್ಲಿ ಅಂಡರ್‌ಪಾಸ್ ಕಾಮಗಾರಿ ಆರಂಭಕ್ಕೆ ಕಟ್ಟಡ ತೆರವು ಕೆಲಸ ಪ್ರಗತಿಯಲ್ಲಿದ್ದರೂ ವೇಗ ಪಡೆದುಕೊಂಡಿಲ್ಲ. ಇದರಿಂದ ಮತ್ತಷ್ಟು ಸಮಸ್ಯೆ ಹೆಚ್ಚಾಗಿದೆ.

ಪ್ರಜಾವಾಣಿ ವಿಶೇಷ

'ಕೆಲಸ ಮುಗಿಸಿ ರಾತ್ರಿ ಬಂದು ಪೀಣ್ಯ, ಜಾಲಹಳ್ಳಿ, ದಾಸರಹಳ್ಳಿ ಹಾಗೂ 8ನೇ ಮೈಲಿನಲ್ಲಿ ಇಳಿದರೆ ರಸ್ತೆ ದಾಟಲು ಪರದಾಡುವ ಸ್ಥಿತಿಯಿದೆ. ಎಷ್ಟೋ ಬಾರಿ ವಯಸ್ಕರನ್ನು ನಾವೇ ರಸ್ತೆ ದಾಟಿಸಿದ್ದೇವೆ. ವಾಹನ ದಟ್ಟಣೆ ಪೊಲೀಸರು ನಿಯಂತ್ರಿಸಬಹುದು. ಆದರೆ, ಬೆಳಕಿನ ವ್ಯವಸ್ಥೆ ಮಾಡುವುದು ಹೆದ್ದಾರಿ ಪ್ರಾಧಿಕಾರ ಹಾಗೂ ಬಿಬಿಎಂಪಿ ಜವಾಬ್ದಾರಿ' ಎಂದು ಸಂಚಾರ ಪೊಲೀಸ್ ಸಿಬ್ಬಂದಿಯೊಬ್ಬರು ಹೇಳಿದರು.

ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆ ಹಾಗೂ ಹೊರರಾಜ್ಯದಿಂದ ಈ ಮಾರ್ಗದಲ್ಲಿ ನಿತ್ಯ 1.10 ಲಕ್ಷ ವಾಹನಗಳು ಸಾಗುತ್ತವೆ. ರಾತ್ರಿ ವೇಳೆಯಲ್ಲಿ 40 ಸಾವಿರಕ್ಕೂ ಹೆಚ್ಚು ವಾಹನಗಳು ಸಂಚರಿಸುತ್ತವೆ. ಆದರೆ, ಸರಿಯಾದ ಬೆಳಕಿನ ವ್ಯವಸ್ಥೆಯಿಲ್ಲದೆ ಸಮಸ್ಯೆಯಾಗಿದೆ. ಕಳೆದ ವರ್ಷದ ಡಿಸೆಂಬರ್‌ನಲ್ಲಿ ಮೇಲ್ಸೇತುವೆಯಲ್ಲಿ ಬಿರುಕು ಕಾಣಿಸಿಕೊಂಡಿದ್ದರಿಂದ ಭಾರಿ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಲಾಗಿದೆ. ಬಸ್, ಸರಕು ಸಾಗಿಸುವ ಲಾರಿಗಳು ಕೆಳರಸ್ತೆಯಲ್ಲೇ ಸಾಗುತ್ತಿವೆ. ಇದರಿಂದಲೂ ಪಾದಚಾರಿಗಳು ಹಾಗೂ ಬೈಕ್ ಸವಾರರಿಗೆ ತೊಂದರೆ ಆಗುತ್ತಿದೆ ಎಂದು ಸ್ಥಳೀಯರು ಹೇಳಿದರು.

ಹೆದ್ದಾರಿ ಪ್ರಾಧಿಕಾರಕ್ಕೆ ನೋಟಿಸ್

'ಬೆಳಕಿನ ವ್ಯವಸ್ಥೆಯಿಲ್ಲದೇ ಅಪಘಾತ ಪ್ರಕರಣಗಳು ಹೆಚ್ಚುತ್ತಿವೆ. ಈ ಮಾರ್ಗದಲ್ಲಿ ಎಲ್ಲಿ ಸಮಸ್ಯೆಯಾಗಿದೆ ಎಂಬುದನ್ನು ಗುರುತಿಸಿ ಹೆದ್ದಾರಿ ಪ್ರಾಧಿಕಾರಕ್ಕೆ ನೋಟಿಸ್ ನೀಡಲಾಗಿದೆ. ನೋಟಿಸ್ ನೀಡಿದರೂ ಬೀದಿ ದೀಪಗಳನ್ನು ದುರಸ್ತಿ ಮಾಡದೆ ಅಪಘಾತ ಸಂಭವಿಸಿದರೆ ಎಫ್‌ಐಆರ್‌ನಲ್ಲಿ ಪ್ರಾಧಿಕಾರದವರ ನಿರ್ಲಕ್ಷ್ಯ ಎಂಬ ಕಾರಣ ದಾಖಲಿಸುತ್ತೇವೆ' ಎಂದು ಸಂಚಾರ ವಿಭಾಗದ ವಿಶೇಷ ಆಯುಕ್ತ ಎಂ. ಅಬ್ದುಲ್ ಸಲೀಂ ಅವರು 'ಪ್ರಜಾವಾಣಿ'ಗೆ ತಿಳಿಸಿದರು.



ಬೆಂಗಳೂರು– ತುಮಕೂರು ಹೆದ್ದಾರಿಯ ಜಾಲಹಳ್ಳಿ ಜಂಕ್ಷನ್‌ನಲ್ಲಿ ಸರಿಯಾದ ಬೆಳಕಿನ ವ್ಯವಸ್ಥೆ ಇಲ್ಲ

'ದುರಸ್ತಿ: ಭರವಸೆ ಹುಸಿ'

'ಡಿಸೆಂಬರ್ ವೇಳೆಗೆ ಮೇಲ್ಸೇತುವೆ ದುರಸ್ತಿಗೊಳಿಸಿ ಫ್ಲೈಓವರ್‌ನಲ್ಲಿ ಎಲ್ಲ ರೀತಿಯ ವಾಹನಗಳ ಓಡಾಟಕ್ಕೆ ಅವಕಾಶ ಕಲ್ಪಿಸುತ್ತೇವೆ' ಎಂದು ಸರ್ಕಾರ ಕಳೆದ ಸದನದಲ್ಲಿ ಭರವಸೆ ನೀಡಿತ್ತು. ಆದರೆ, ಮೇಲ್ಸೇತುವೆ ದುರಸ್ತಿ ಇನ್ನೂ ಪೂರ್ಣಗೊಂಡಿಲ್ಲ. ಇನ್ನೂ ಲಘು ವಾಹನಗಳು ಮಾತ್ರ ಸಂಚರಿಸುತ್ತಿವೆ' ಎಂದು ಸ್ಥಳೀಯರು ದೂರುತ್ತಾರೆ.

ಅಧಿಕೃತ ಜಾಲತಾಣದಲ್ಲಿ ಎಲ್ಲ ಮಾಹಿತಿ ಪ್ರಕಟಿಸಲು ಆದೇಶ

ವಿ.ವಿ ಆಡಳಿತ ಸಂಪೂರ್ಣ ಪಾರದರ್ಶಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಸಂಪೂರ್ಣ ಪಾರದರ್ಶಕತೆ ತರಲು ಮುಂದಾಗಿರುವ ಸರ್ಕಾರ, ಆಯವ್ಯಯ, ವಾರ್ಷಿಕ ವರದಿ, ಆದೇಶಗಳು ಸೇರಿದಂತೆ ಎಲ್ಲ ಮಾಹಿತಿಗಳನ್ನೂ ಅಧಿಕೃತ ಜಾಲತಾಣದಲ್ಲಿ ಪ್ರಕಟಿಸುವಂತೆ ಆದೇಶ ಹೊರಡಿಸಿದೆ.

ಯುಜಿಸಿ ಮಾರ್ಗಸೂಚಿಗಳು, ರಾಜ್ಯಪಾಲರಿಂದ ಅನುಮೋದನೆಗೊಂಡ ಆದೇಶ, ಅಧಿನಿಯಮಗಳು, ಲೆಕ್ಕಪರಿಶೋಧನಾ ವರದಿ, ಸಿಂಡಿಕೇಟ್, ಶೈಕ್ಷಣಿಕ ಪರಿಷತ್ತು, ಹಣಕಾಸು ಸಮಿತಿಗಳ ವಿವರ, ಸಭೆಗಳ ಕಾರ್ಯಸೂಚಿಗಳನ್ನು ಸಮಕ್ಷಮ ಪ್ರಾಧಿಕಾರ ಅನುಮೋದಿಸಿದ ದಿನವೇ ಜಾಲತಾಣಗಳಿಗೆ ಅಪ್‌ಲೋಡ್ ಮಾಡಬೇಕು ಎಂದು ಸೂಚಿಸಲಾಗಿದೆ.

ವಿಶ್ವವಿದ್ಯಾಲಯಗಳ ಎಲ್ಲ ಆಸ್ತಿಗಳು, ಬ್ಯಾಂಕ್ ಖಾತೆಗಳ ವಿವರ, ಹಣಕಾಸಿನ ವಿವರ, ಠೇವಣಿಗಳು, ಮಂಜೂರಾದ ಅನುದಾನ, ಕ್ರಿಯಾಯೋಜನೆಗಳು, ಖರ್ಚು ವೆಚ್ಚಗಳನ್ನು ಪ್ರತಿ ತಿಂಗಳೂ ನವೀಕರಿಸಬೇಕು. ಕೈಗೆತ್ತಿಕೊಂಡ ಕಾಮಗಾರಿಗಳು, ಅವುಗಳ ಸ್ಥಿತಿಗತಿ. ಬೋಧಕ, ಬೋಧಕೇತರ ಸಿಬ್ಬಂದಿಯ ಹೊಣೆಗಾರಿಕೆ, ವಿದ್ಯಾರ್ಥಿಗಳ ವಿವರ, ವಿದ್ಯಾರ್ಥಿ ವೇತನ, ರಜಾ ದಿನಗಳು ಎಲ್ಲ ವಿವರಗಳ ಮಾಹಿತಿ ಕಾಲಕಾಲಕ್ಕೆ ಸಾರ್ವಜನಿಕರಿಗೆ ಲಭ್ಯವಾಗಬೇಕು ಎಂದು ತಿಳಿಸಲಾಗಿದೆ.

ಎಲ್ಲ ವಿಶ್ವವಿದ್ಯಾಲಯಗಳು ಡಿಸೆಂಬರ್ ಅಂತ್ಯದ ಒಳಗೆ ಅಕಾಡೆಮಿಕ್ ಬ್ಯಾಂಕ್ ಆಫ್ ಕ್ರೆಡಿಟ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಅಧ್ಯಾಪಕರ ಕಾರ್ಯಕ್ಷಮತೆ ಕುರಿತು ಮೌಲ್ಯಮಾಪನ ವರದಿ ಸಲ್ಲಿಸಬೇಕು. ಅವರಿಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮಾರ್ಗದರ್ಶನ ಮಾಡಲಿದೆ ಎಂದು ವಿವರಿಸಲಾಗಿದೆ.

ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ 25 ಸಾರ್ವಜನಿಕ ವಿಶ್ವವಿದ್ಯಾಲಯಗಳು, 3,417 ಸಂಯೋಜಿತ ಕಾಲೇಜುಗಳು, 3.50 ಲಕ್ಷ ವಿದ್ಯಾರ್ಥಿಗಳು ಇದ್ದು, ರಾಜ್ಯದ ದಾಖಲಾತಿ ಅನುಪಾತ ದ್ವಿಗುಣಗೊಳಿಸಲು ಎಲ್ಲ ರೀತಿಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಸಿದ್ದರಾಮಯ್ಯಗೆ ಲಘು ಶಸ್ತ್ರಚಿಕಿತ್ಸೆ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಶುಕ್ರವಾರ ಸಣ್ಣ ಪ್ರಮಾಣದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದು, ಸಂಜೆಯೇ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

'ಕೆಲವು ವರ್ಷಗಳ ಹಿಂದೆ ಮೂಲವ್ಯಾಧಿ ಸಮಸ್ಯೆಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡಿದ್ದರು. ಅದೇ ಜಾಗದಲ್ಲಿ ಪುನಃ ಸಣ್ಣ ಗುಳ್ಳೆಯೊಂದು ಉಂಟಾಗಿತ್ತು. ಸಣ್ಣ ಪ್ರಮಾಣದ ಶಸ್ತ್ರಚಿಕಿತ್ಸೆ ಮೂಲಕ ಅದನ್ನು ತೆಗೆದುಹಾಕಲಾಗಿದೆ' ಎಂದು ಸಿದ್ದರಾಮಯ್ಯ ಅವರ ಆಪ್ತ ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಶುಕ್ರವಾರ ಬೆಳಿಗ್ಗೆ ನಗರದ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು. ಶಸ್ತ್ರಚಿಕಿತ್ಸೆ ಬಳಿಕ ಸಂಜೆ ಆಸ್ಪತ್ರೆಯಿಂದ ಮನೆಗೆ ವಾಪಸಾಗಿದ್ದು, ವಿಶ್ರಾಂತಿ ಪಡೆಯುತ್ತಿದ್ದಾರೆ.

ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರ)
5ನೇ ಮಹಡಿ, ವಿಶ್ವೇಶ್ವರಯ್ಯ, ಚಿಕ್ಕ ಗೋಪುರ, ಡಾ॥ ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001.
ಫೋನ್ : 080–22865522, ಇ–ಮೇಲ್ : E-mail: mdkvldcl@karnataka.gov.in

ಪ್ರಕಟಣೆ

ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ (ನಿ)ದ "ಬಸವ ಬೆಳಗು", "ವಿದೇಶ ವಿದ್ಯಾವಿಕಾಸ", "ಜೀವಜಲ", "ಸ್ವಸಹಾಯ ಸಂಘಗಳಿಗೆ ಉತ್ತೇಜನ" ಮತ್ತು "ಕಾಯಕಕಿರಣ" ಯೋಜನೆಗಳಿಗೆ ಸಾಲ ಹಾಗೂ ಸಹಾಯಧನ ಸೌಲಭ್ಯ ಪಡೆಯಲು ಇಚ್ಛಿಸುವ ವೀರಶೈವ ಲಿಂಗಾಯತ ಸಮುದಾಯದ ಅರ್ಹ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ದಿನಾಂಕ: 15–10–2022ರಲ್ಲಿ ಆಹ್ವಾನಿಸಲಾಗಿದ್ದು, 30–11–2022ಕ್ಕೆ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗಿರುತ್ತದೆ.

ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸುವಂತೆ ಸಾರ್ವಜನಿಕರಿಂದ ಹೆಚ್ಚಿನ ಕೋರಿಕೆ ಬಂದಿರುವ ಕಾರಣ ಅರ್ಜಿ ಸಲ್ಲಿಸುವ ಅವಧಿಯನ್ನು ದಿನಾಂಕ: 15–12–2022ರವರೆಗೆ ವಿಸ್ತರಿಸಿದೆ.

- ಅರ್ಹ ಫಲಾಪೇಕ್ಷಿಗಳು ಹತ್ತಿರದ ಗ್ರಾಮ ಒನ್ / ಬೆಂಗಳೂರು ಒನ್ / ಕರ್ನಾಟಕ ಒನ್ ನಾಗರೀಕ ಸೇವಾ ಕೇಂದ್ರಗಳಲ್ಲಿ ದಾಖಲೆಗಳೊಂದಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ.
- ಈ ಮೇಲ್ಕಂಡ 5 ಯೋಜನೆಗಳಿಗೆ ಸಂಬಂಧಿಸಿದಂತೆ ನಿಗಮದ ಅಧಿಕೃತ ವೆಬ್‌ಸೈಟ್ https://kvldcl.karnataka.gov.in ನಲ್ಲಿ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ (ನಿ)ದ ಕೇಂದ್ರ ಕಛೇರಿಯ ದೂರವಾಣಿ ಸಂಖ್ಯೆ: 080–22865522 ಅಥವಾ ಆಯಾ ಜಿಲ್ಲಾ ವ್ಯವಸ್ಥಾಪಕರ ಕಛೇರಿ, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮ (ನಿ)ದ ದೂರವಾಣಿ ಸಂಖ್ಯೆಗಳನ್ನು ನಿಗಮದ ವೆಬ್‌ಸೈಟ್ https://kvldcl.karnataka.gov.in ನಲ್ಲಿ ನೀಡಲಾಗಿರುತ್ತದೆ, ಅದರಂತೆ ಸಂಪರ್ಕಿಸಬಹುದು.

ಶ್ರೀ ಬಿ.ಎಸ್. ಪರಮಶಿವಯ್ಯ
ಅಧ್ಯಕ್ಷರು

ವಾಸಾಸಂಇ/ವಾಪ್ರ/ಅವಂತಿ/3340/2022–23

ಸಹಿ/–
ಅಮರೇಗೌಡ ಹೆಚ್. ಮಾಲಿಪಾಟೀಲ, ಕ.ಆ.ಸೇ.
ವ್ಯವಸ್ಥಾಪಕ ನಿರ್ದೇಶಕರು

5ರಂದು ಬಲಿಜ ವೇದಿಕೆಯಿಂದ ಸತ್ಯಾಗ್ರಹ

ಬೆಂಗಳೂರು: ಬಲಿಜ ಸಮುದಾಯಕ್ಕೆ 2'ಎ' ಮೀಸಲಾತಿ ಆಗ್ರಹಿಸಿ, ಡಿ.5ರಂದು ರಾಜ್ಯ ಸಮಗ್ರ ಬಲಿಜ ವೇದಿಕೆಯಿಂದ ಫ್ರೀಡಂ ಪಾರ್ಕ್ ನಲ್ಲಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9ರಿಂದ ಸಂಜೆ 5.30ರ ತನಕ ಉಪವಾಸ ಸತ್ಯಾಗ್ರಹ ನಡೆಸಲಾಗುವುದು ಎಂದು ವೇದಿಕೆ ಅಧ್ಯಕ್ಷ ಎನ್.ಪಿ.ಮುನಿಕೃಷ್ಣ, ಪ್ರಧಾನ ಕಾರ್ಯದರ್ಶಿ ಎಸ್.ರಮೇಶ್ ತಿಳಿಸಿದ್ದಾರೆ.

ವೆಂಕಟಸ್ವಾಮಿ, ಚಿನ್ನಪ್ಪರೆಡ್ಡಿ ಹಾಗೂ ಹಾವನೂರು ಆಯೋಗದ ಶಿಫಾರಸ್ಸಿನಂತೆ ರಾಜ್ಯ ಸರ್ಕಾರ ಬಲಿಜ ಸಮುದಾಯಕ್ಕೆ 2'ಎ' ಮೀಸಲು ಸೌಲಭ್ಯ ಕಲ್ಪಿಸಬೇಕು. ಹಿಂದುಳಿದ ವರ್ಗಗಳ ಆಯೋಗವು ಅಧ್ಯಯನ ನಡೆಸಿ ಅಗತ್ಯ ಮಾಹಿತಿ ಪಡೆದುಕೊಂಡಿದೆ. ಆದರೆ, ಸರ್ಕಾರಕ್ಕೆ ವರದಿ ಸಲ್ಲಿಕೆಯಾಗಿಲ್ಲ. ಇದರಿಂದ ಸಾಮಾಜಿಕ ನ್ಯಾಯ ಸಿಗುವಲ್ಲಿ ಹಿನ್ನಡೆಯಾಗಿದೆ ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿಚಾರಸಂಕಿರಣ

ಬೆಂಗಳೂರು: ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣ ದಿನದ ಅಂಗವಾಗಿ ದಲಿತ ಸಂಘಟನೆಗಳ ಸ್ವಾಭಿಮಾನಿ ಒಕ್ಕೂಟದಿಂದ ಡಿ.6ರಂದು 'ಸಂವಿಧಾನ ರಕ್ಷಿಸಿ, ಪ್ರಜಾಪ್ರಭುತ್ವ ಉಳಿಸಿ' ಎಂಬ ವಿಚಾರಸಂಕಿರಣವನ್ನು ಆಯೋಜಿಸಲಾಗಿದೆ.

ನಗರದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನಲ್ಲಿರುವ ಅಲುಮ್ನಿ ಸಭಾಂಗಣದಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದು ಒಕ್ಕೂಟದ ಮುಖಂಡ ಎಂ. ಗೋವಿಂದರಾಜು ತಿಳಿಸಿದ್ದಾರೆ.

ಸ್ವಾಭಿಮಾನಿ ಸಂಕಲ್ಪ ದಿನ

ಬೆಂಗಳೂರು: ದಲಿತ ಸಂಘರ್ಷ ಸಮಿತಿ (ಸಮತವಾದ) ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿನಿರ್ವಾಣದ ಪ್ರಯುಕ್ತ ಡಿ. 6ರಂದು 'ಸ್ವಾಭಿಮಾನಿ ಸಂಕಲ್ಪ' ದಿನವನ್ನಾಗಿ ಆಚರಿಸಲಾಗುತ್ತಿದೆ.

ಬನ್ನಪ್ಪ ಪಾರ್ಕ್‌ದಿಂದ (ಹಡ್ಸನ್ ವೃತ್ತ) ವಿಧಾನಸೌಧದ ಮುಂಭಾಗದ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಯವರೆಗೂ ಬೃಹತ್ ಕಾಲ್ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಸಂಸ್ಥಾಪಕ ಅಧ್ಯಕ್ಷ ಎಚ್. ಮಾರಪ್ಪ ತಿಳಿಸಿದರು.

ಹನುಮ ಜಯಂತಿ

ಬೆಂಗಳೂರು: ಹನುಮ ಜಯಂತಿಯ ಅಂಗವಾಗಿ ಕೃಷ್ಣರಾಜೇಂದ್ರ ರಸ್ತೆಯಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಡಿ. 5ರಿಂದ 13ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ.

ಪ್ರತಿದಿನ ಪಂಚಾಮೃತ ಅಭಿಷೇಕ ಅಲಂಕಾರ, ನಿವೇದನಾದಿ ವಿಶೇಷ ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ.

PUBLIC NOTICE

NOTICE is hereby given to the public at large that we are investigating the clear & marketable title of Sri. Nandakumar, S/o Sri. Shivanna, Tavarakere, Bengaluru, in respect of the all that piece and parcel of converted land bearing Sy.No. 178/3 measuring 3 Acre 36 ½ Guntas situated at Chakarasanahalli Village, Narasapura, Kolar Taluk and the land is bounded as under:

On or towards the East : Land bearing Sy.No. 189.
On or towards the West : Remaining land in Sy.No. 178 owned by Sri. Kiran S.
On or towards the North : Land bearing Sy.No. 158.
On or towards the South : Road.

ALL PERSONS including individuals, Hindu undivided family, companies, banks, financial institution(s), non-banking financial institution(s), firms, association of persons or a body of individuals, whether incorporated or not, lenders and/or creditors having any benefits, objection, demand, claim, right, title and/or interest in respect of Land or any part or portion thereof, by way of sale, exchange, mortgage, pledge, charge, gift, trust, inheritance, succession, family arrangement/ settlement, bequest, possession, lease, tenancy, maintenance, easement, memorandum of understanding, license, share, assignment, lien, attachment, development rights, partnership, right of way, lis pendens, decree or order of any judicial/quasi-judicial authority, reservation, contracts/ agreement, power of attorney, option, FSI consumption, right of first refusal, pre-emption or any liability or commitment or otherwise of any nature whatsoever are hereby requested to inform the same in writing, supported with the original documents, to the undersigned at the address mentioned below within a period of 10 (ten) days from the date of the publication of this notice, failing which, the claim or right, if any, of such person or persons shall be considered to have been waived and/or abandoned.

Dated this the 3rd day of December, 2022

B.N.Prakash
Partner
Lawyers Inc,
No.15/2, V.S.Raju Road,
12th Block,
Kumarapark west,
Bengaluru-560 020.



ಹಕ್ಕು ಸ್ವಾಮ್ಯ ಉಲ್ಲಂಘನೆ ಆರೋಪ: ರಾಹುಲ್‌ಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆಜಿಎಫ್ ಚಾಪ್ಟರ್-2 ಚಿತ್ರದ ಹಾಡಿನ ಸಂಗೀತವನ್ನು ಸಾಮಾಜಿಕ ಜಾಲತಾಣಗಳಿಂದ ತೆಗೆದು ಹಾಕುವಂತೆ ನ್ಯಾಯಾಲಯ ನೀಡಿದ್ದ ಆದೇಶ ಪಾಲಿಸಿಲ್ಲ' ಎಂಬ ಆರೋಪದಡಿ ಸಲ್ಲಿಸಲಾಗಿರುವ ನ್ಯಾಯಾಂಗ ನಿಂದನೆ ಅರ್ಜಿಗೆ ಸಂಬಂಧಿಸಿದಂತೆ ಸಂಸದ ರಾಹುಲ್ ಗಾಂಧಿಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಹಾಡುಗಳ ಹಕ್ಕು ಸ್ವಾಮ್ಯ ಹೊಂದಿರುವ ಎಂಆರ್‌ಟಿ ಮ್ಯೂಸಿಕ್ ಕಂಪನಿ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಆರೋಪಿಗಳಾದ ರಾಹುಲ್ ಗಾಂಧಿ, ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಜೈರಾಂ ರಮೇಶ್ ಹಾಗೂ ಸಾಮಾಜಿಕ ಮತ್ತು ಡಿಜಿಟಲ್ ಮಾಧ್ಯಮದ ಮುಖ್ಯಸ್ಥೆ ಸುಪ್ರಿಯಾ ಶ್ರೀನಾಥೆ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು 2023ರ ಜನವರಿ12ಕ್ಕೆ ಮುಂದೂಡಿದೆ.

ಪ್ರಕರಣವೇನು?: ಹಕ್ಕುಸ್ವಾಮ್ಯ ಉಲ್ಲಂಘಿಸಿ ಕೆಜಿಎಫ್ ಚಿತ್ರದ ಹಾಡು ಬಳಸಿಕೊಂಡ ಹಿನ್ನೆಲೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ (ಐಎನ್‌ಸಿ) ಮತ್ತು ಭಾರತ್ ಜೋಡೊ ಯಾತ್ರೆಯ ಅಧಿಕೃತ ಖಾತೆಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವಂತೆ ನವೆಂಬರ್ 7ರಂದು ಟ್ವಿಟರ್ ಕಂಪನಿಗೆ ನಗರದ ವಾಣಿಜ್ಯ ನ್ಯಾಯಾಲಯ ಆದೇಶಿಸಿತ್ತು.

ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದ ಕಾಂಗ್ರೆಸ್, 'ವಿವಾದಿತ ಹಾಡನ್ನು ಪಕ್ಷದ ಎಲ್ಲ ಸಾಮಾಜಿಕ ಜಾಲತಾಣಗಳಿಂದ ತೆಗೆದು ಹಾಕಲಾಗುವುದು, ಅದರ ಸ್ಕ್ರೀನ್ ಶಾಟ್‌ಗಳನ್ನು ಎಂಆರ್‌ಟಿ ಮ್ಯೂಸಿಕ್ ಸಂಸ್ಥೆಗೆ ಒದಗಿಸಲಾಗುವುದು' ಎಂದು ನ್ಯಾಯಾಲಯಕ್ಕೆ ಭರವಸೆ ನೀಡಿತ್ತು.

ಇದನ್ನು ಪರಿಗಣಿಸಿದ್ದ ಹೈಕೋರ್ಟ್ ವಿವಾದಿತ ಹಾಡನ್ನು ತೆಗೆದು ಹಾಕಬೇಕೆಂಬ ಷರತ್ತಿಗೆ ಒಳಪಟ್ಟಂತೆ ವಾಣಿಜ್ಯ ಕೋರ್ಟ್ ಆದೇಶವನ್ನು ರದ್ದುಪಡಿಸಿ ನವೆಂಬರ್ 8ರಂದು ಆದೇಶಿಸಿತ್ತು. ಆದರೆ, ಈವರೆಗೂ ಹಾಡುಗಳನ್ನು ತೆಗೆಯದೇ ಹೈಕೋರ್ಟ್ ಆದೇಶ ಉಲ್ಲಂಘಿಸಲಾಗಿದೆ ಎಂದು ಎಂಆರ್‌ಟಿ ಮ್ಯೂಸಿಕ್ ಕಂಪನಿ ಆರೋಪಿಸಿದೆ.

ಕುಸಿದು ಬಿದ್ದು ಇನ್‌ಸ್ಪೆಕ್ಟರ್ ಸಾವು

ಬಿ. ಧನಂಜಯ್

ಬೆಂಗಳೂರು: ವಿಧಾನಸೌಧ ಭದ್ರತೆ ಕರ್ತವ್ಯದಲ್ಲಿದ್ದ ವೇಳೆ ಕುಸಿದು ಬಿದ್ದು ಪ್ರಜ್ಞೆ ಕಳೆದುಕೊಂಡಿದ್ದ ಇನ್‌ಸ್ಪೆಕ್ಟರ್ ಬಿ.ಧನಂಜಯ್ (37) ಅವರು ಚಿಕಿತ್ಸೆಗೆ ಸ್ಪಂದಿಸದೇ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

2010ನೇ ಪಿಎಸ್‌ಐ ಬ್ಯಾಚ್‌ನ ಧನಂಜಯ್, ಹೆಣ್ಣೂರಿನಲ್ಲಿ ನೆಲೆಸಿದ್ದರು. ಇವರಿಗೆ ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ.

'ಹಲಸೂರು, ಬಾಣಸವಾಡಿ ಠಾಣೆಯಲ್ಲಿ ಪಿಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿದ್ದ ಅವರಿಗೆ ಇತ್ತೀಚೆಗೆ ಇನ್‌ಸ್ಪೆಕ್ಟರ್ ಆಗಿ ಬಡ್ತಿ ಸಿಕ್ಕಿತ್ತು. ವಿಧಾನಸೌಧ ಭದ್ರತೆ ಕೆಲಸಕ್ಕೆ ಅವರನ್ನು ನಿಯೋಜಿಸಲಾಗಿತ್ತು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮೂಳೆ ಸಮಸ್ಯೆಯಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಪಡೆಯುತ್ತಿದ್ದರು. ಇದಕ್ಕಾಗಿ ರಜೆ ಪಡೆದಿದ್ದರು. 10 ದಿನದ ಹಿಂದೆಯಷ್ಟೇ ಪುನಃ ಕೆಲಸಕ್ಕೆ ಬರಲಾರಂಭಿಸಿದ್ದರು. ಶುಕ್ರವಾರ ಕೆಲಸದ ಸ್ಥಳದಲ್ಲಿ ಏಕಾಏಕಿ ಕುಸಿದು ಬಿದ್ದಿದ್ದರು. ಆಸ್ಪತ್ರೆಗೆ ಕರೆದೊಯ್ದರೂ ಚಿಕಿತ್ಸೆಗೆ ಸ್ಪಂದಿಸದೇ ಅವರು ಅಸುನೀಗಿದರು' ಎಂದು ತಿಳಿಸಿದರು.

ಯಶವಂತಪುರ ರೈಲು ನಿಲ್ದಾಣ ನವೀಕರಣ; ಪ್ಲಾಟ್‌ಫಾರ್ಮ್ ಸಂಖ್ಯೆ ಹೆಚ್ಚಳವಿಲ್ಲ

ಪ್ಲಾಟ್‌ಫಾರ್ಮ್ ಪಡಿಪಾಟಲು, ಪ್ರವೇಶಕ್ಕೆ ಕಾಯಬೇಕು ರೈಲು

● ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ರೈಲುಗಳ ವೇಗ ಹೆಚ್ಚಿಸಲು ವಂದೇ ಭಾರತ್ ರೀತಿಯ ರೈಲುಗಳನ್ನು ಪರಿಚಯಿಸುತ್ತಿರುವುದು ಒಂದೆಡೆಯಾದರೆ, ಇನ್ನೊಂದೆಡೆ ನಿಲ್ದಾಣಗಳನ್ನು ಹೈಟೆಕ್ ಮಾಡುವ ಯೋಜನೆಗಳೂ ಆರಂಭವಾಗಿವೆ. ಆದರೆ, ನಿಲ್ದಾಣಗಳನ್ನು ಪ್ರವೇಶಿಸಲು ರೈಲುಗಳ ಕಾದು ನಿಲ್ಲುವ ಸಮಸ್ಯೆಗೆ ಪರಿಹಾರ ಇಲ್ಲವಾಗಿದೆ.

ಪ್ರಯಾಣದ ಅವಧಿ ಕಡಿಮೆ ಮಾಡುವ ಯೋಜನೆ ಭಾಗವಾಗಿ ಚೆನ್ನೈ ಮತ್ತು ಮೈಸೂರು ನಡುವೆ ವಂದೇ ಭಾರತ್ ರೈಲು ಸಂಚಾರ ಆರಂಭಿಸಲಾಗಿದೆ. ನಿಲ್ದಾಣಗಳ ಅಂದ ಹೆಚ್ಚಿಸುವ ಯೋಜನೆಗಳಿಗೂ ಚಾಲನೆ ಸಿಕ್ಕಿದೆ. ಅದರ ಭಾಗವಾಗಿ ಯಶವಂತಪುರ ರೈಲು ನಿಲ್ದಾಣವನ್ನು 'ಸಿಟಿ ಸೆಂಟರ್' ಆಗಿ ನವೀಕರಿಸಲಾಗುತ್ತಿದೆ. ₹380 ಕೋಟಿ ಮೊತ್ತದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಪ್ರವೇಶ ಮತ್ತು ನಿರ್ಗಮನಕ್ಕೆ ಪ್ರತ್ಯೇಕ ಮತ್ತು ವಿಶಾಲ ದ್ವಾರಗಳು, ಮನರಂಜನಾ ತಾಣಗಳನ್ನು ನಿರ್ಮಿಸಲಾಗುತ್ತಿದೆ.

'ಈಗ ಪ್ರತಿನಿತ್ಯ 50 ಸಾವಿರ ಪ್ರಯಾಣಿಕರು ಸಂಚರಿಸುತ್ತಿದ್ದು, ನವೀಕರಣಗೊಂಡ ಮೇಲೆ ಒಂದು ಲಕ್ಷಕ್ಕೂ ಹೆಚ್ಚು ಜನರು ಸಂಚರಿಸಲು ಅನುಕೂಲವಾಗಲಿದೆ ಎನ್ನುವುದು ರೈಲ್ವೆ ಅಧಿಕಾರಿಗಳೇ ನೀಡುವ ಮಾಹಿತಿ. ಆದರೆ, ಇಡೀ ಯೋಜನೆಯಲ್ಲಿ ಪ್ಲಾಟ್‌ಫಾರ್ಮ್‌ಗಳ ಸಂಖ್ಯೆ ಹೆಚ್ಚಿಸುವ ಪ್ರಸ್ತಾಪ ಇಲ್ಲ. ಇನ್ನು ಪ್ರಯಾಣಿಕರ ಸಂಖ್ಯೆ ಹೆಚ್ಚಳ ಆಗುವುದು ಹೇಗೆ' ಎನ್ನುವುದು ರೈಲ್ವೆ ಹೋರಾಟಗಾರರ ಪ್ರಶ್ನೆ.

ಯಶವಂತಪುರಕ್ಕೆ ಬರುವ ರೈಲುಗಳು ಸರಾಸರಿ 30 ನಿಮಿಷ ತಡವಾಗುತ್ತಿವೆ. ಮಂಗಳೂರು, ತುಮಕೂರು, ಯಲಹಂಕ ಕಡೆಯಿಂದ ಬರುವ ರೈಲುಗಳೆಲ್ಲವೂ ಯಶವಂತಪುರ ರೈಲು ನಿಲ್ದಾಣಕ್ಕೆ ಬಂದೇ ಮುಂದೆ ಸಾಗಬೇಕು. ಚಿಕ್ಕಬಾಣಾವರದ ತನಕ ಸಮಯಕ್ಕೆ ಸರಿಯಾಗಿ ಬರುವ ರೈಲುಗಳು, ಯಶವಂತಪುರಕ್ಕೆ ತಡವಾಗಿ ಸಾಗುತ್ತಿವೆ. ಚಿಕ್ಕಬಾಣಾವರ ನಿಲ್ದಾಣ ಅಥವಾ ಯಶವಂತಪುರ ಮತ್ತು ಚಿಕ್ಕಬಾಣಾವರ ನಿಲ್ದಾಣದ ನಡುವೆ ಸಿಗ್ನಲ್‌ಗಳ ಬಳಿ ರೈಲುಗಳನ್ನು ನಿಲ್ಲಿಸಲಾಗುತ್ತದೆ.

ಸಮಯಕ್ಕೆ ಸರಿಯಾಗಿ ತಲುಪುವ ಲೆಕ್ಕಾಚಾರದಲ್ಲಿ ರೈಲು ಹತ್ತಿದವರು ಅಲ್ಲೇ ಚಡಪಡಿಸಬೇಕಾಗುತ್ತದೆ. ಇದೇ ಕಾರಣಕ್ಕೆ ಹಲವರು ಚಿಕ್ಕಬಾಣಾವರದಲ್ಲೇ ಇಳಿದು ಬೇರೆ ವ್ಯವಸ್ಥೆ ಮಾಡಿಕೊಂಡು ಸಂಚರಿಸುತ್ತಾರೆ. ಇನ್ನು ಕೆಲವರು ರೈಲು ಪ್ರಯಾಣದಿಂದಲೇ ದೂರ ಉಳಿಯುತ್ತಾರೆ.

'ಕೆಆರ್‌ಎಸ್ ರೈಲು ನಿಲ್ದಾಣದ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ. ಕೆಂಗೇರಿ ದಾಟಿದ ಬಳಿಕ ಅಲ್ಲಲ್ಲೇ ನಿಲುಗಡೆ ಮಾಡಲಾಗುತ್ತದೆ. ಪ್ಲಾಟ್‌ಫಾರ್ಮ್‌ಗಳಲ್ಲಿ ಜಾಗ ಸಿಕ್ಕ ಬಳಿಕ ಗ್ರೀನ್ ಸಿಗ್ನಲ್ ದೊರಕುತ್ತದೆ. ಮೈಸೂರು, ಮಂಡ್ಯ, ರಾಮನಗರದಿಂದ ಬೆಂಗಳೂರಿಗೆ ಪ್ರತಿನಿತ್ಯ ಉದ್ಯೋಗಿಗಳು ಸಂಚರಿಸುತ್ತಾರೆ. ರೈಲುಗಳು ಕೆಎಸ್‌ಆರ್ ರೈಲು ನಿಲ್ದಾಣ ತಲುಪದೆ ಮಧ್ಯದಲ್ಲೇ ನಿಂತರೆ ಕಚೇರಿ ತಲುಪಲಾಗದೆ ಪರದಾಡಬೇಕಾಗುತ್ತದೆ. ಇದು ಪ್ರತಿನಿತ್ಯದ ಗೋಳು' ಎಂದು ಪ್ರಯಾಣಿಕರು ಬೇಸರ ವ್ಯಕ್ತಪಡಿಸುತ್ತಾರೆ.

'ರೈಲು ನಿಲ್ದಾಣಗಳ ಕಟ್ಟಡಗಳನ್ನಷ್ಟೇ ಮರು ವಿನ್ಯಾಸಗೊಳಿಸಿದರೆ ಸಾಲದು. ರೈಲುಗಳಲ್ಲೇ ಪ್ರಯಾಣಿಕರು ಕಾಯುವ ಸ್ಥಿತಿಯನ್ನೂ ತಪ್ಪಿಸಬೇಕು' ಎನ್ನುವುದು ಪ್ರಯಾಣಿಕರ ಒತ್ತಾಯ.

'ಇದು ನಿಲ್ದಾಣ ನವೀಕರಣಕ್ಕೆ ಸಂಬಂಧಿಸಿದ ಯೋಜನೆಯಾಗಿದ್ದು, ಪ್ಲಾಟ್‌ಫಾರ್ಮ್ ಸಂಖ್ಯೆ ಹೆಚ್ಚಳ ಈ ಯೋಜನೆಯಲ್ಲಿ ಇಲ್ಲ. ಯಾರ್ಡ್ ಮರು ರೂಪಿಸುವ ಸಂದರ್ಭದಲ್ಲಿ ಇದನ್ನು ಪರಿಗಣಿಸಲಾಗುತ್ತದೆ. ಈಗಿರುವ ರೈಲುಗಳ ಸಂಚಾರಕ್ಕೆ ಪ್ಲಾಟ್‌ಫಾರ್ಮ್ ಸಂಖ್ಯೆ ಸೂಕ್ತವಾಗಿದೆ' ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಸ್ಪಷ್ಟಪಡಿಸಿದರು.

'ಪ್ರಯಾಣಿಕರ ಅನನುಕೂಲ ತಪ್ಪಬೇಕು'

'ಎರಡು ವರ್ಷಗಳ ಹಿಂದೆಯಷ್ಟೆ ಯಶವಂತಪುರ ನಿಲ್ದಾಣ ನವೀಕರಿಸಿದ್ದು, ಈಗ ಮತ್ತೊಮ್ಮೆ ಅಭಿವೃದ್ಧಿಗೆ ಚಾಲನೆ ನೀಡಲಾಗಿದೆ. ಇದರಿಂದ ರೈಲು ಪ್ರಯಾಣಿಕರಿಗೆ ಯಾವುದೇ ಪ್ರಯೋಜನ ಇಲ್ಲ' ಎಂದು ರೈಲ್ವೆ ಹೋರಾಟಗಾರ ಕೃಷ್ಣಪ್ರಸಾದ್ ಹೇಳಿದರು.

'ಆರು ಪ್ಲಾಟ್‌ಫಾರ್ಮ್‌ಗಳಿದ್ದು, ಮರು ಅಭಿವೃದ್ಧಿ ಯೋಜನೆಯಲ್ಲಿ ಇವುಗಳ ಸಂಖ್ಯೆ ಹೆಚ್ಚಿಸಿದ್ದರೆ ಅನುಕೂಲ ಆಗುತ್ತಿತ್ತು. ₹380 ಕೋಟಿ ಮೊತ್ತದ ಯೋಜನೆಯಲ್ಲೂ ಈ ಅನನುಕೂಲ ತಪ್ಪದಿರುವುದು ವಿಪರ್ಯಾಸ' ಎಂದರು.

ನಿಲ್ದಾಣಗಳನ್ನು ಪ್ರವೇಶಿಸಲು ರೈಲುಗಳು ಕಾಯುವ ಸ್ಥಿತಿ ಯಶವಂತಪುರ ಮತ್ತು ಕೆಎಸ್‌ಆರ್ ರೈಲು ನಿಲ್ದಾಣಗಳಲ್ಲಿ ಇದೆ. ಇದನ್ನು ತಪ್ಪಿಸದ ಹೊರತು ನಿಲ್ದಾಣಗಳನ್ನು ಅಭಿವೃದ್ಧಿಪಡಿಸಿದರೆ ಪ್ರಯೋಜನವಾಗದು' ಎಂದು ಬೇಸರ ವ್ಯಕ್ತಪಡಿಸಿದರು.

ನನೆಗುದಿಗೆ ಬಿದ್ದ ಯಶವಂತಪುರ ಟರ್ಮಿನಲ್–2 ನಿರ್ಮಾಣ

'ಯಶವಂತಪುರದಲ್ಲಿ ಟರ್ಮಿನಲ್–2 ನಿರ್ಮಿಸುವ ಪ್ರಸ್ತಾವ ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದೆ. ಈ ಯೋಜನೆಗೆ ಮರು ಚಾಲನೆ ನೀಡಬೇಕು' ಎಂದು ರೈಲ್ವೆ ಹೋರಾಟಗಾರ ಸಂಜೀವ್ ದ್ಯಾಮಣ್ಣನವರ ಸಲಹೆ ನೀಡಿದರು.

'ಟರ್ಮಿನಲ್–2 ನಿರ್ಮಾಣಕ್ಕೆ ಜಾಗವೂ ಇದೆ. ಈಗಿರುವ ಅಧಿಕಾರಿಗಳಿಗೆ ಇದರ ಮಾಹಿತಿಯೂ ಇಲ್ಲ. ಟರ್ಮಿನಲ್ –2 ನಿರ್ಮಿಸಿದರೆ ಪ್ರಯಾಣಿಕರು ಅನುಭವಿಸುತ್ತಿರುವ ಕಿರಿಕಿರಿ ತಪ್ಪಲಿದೆ. ಈ ಕೆಲಸಕ್ಕೆ ರೈಲ್ವೆ ಅಧಿಕಾರಿಗಳು ಆದ್ಯತೆ ನೀಡಬೇಕು' ಎಂದರು.

ಸುದ್ದಿ 2 ನಿಮಿಷ

ಅಧ್ಯಯನ ಮಂಡಳಿ ಸಭೆ ನಡೆಸಲು ಸೂಚನೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಪದವಿ ಹಾಗೂ ಸ್ನಾತಕೋತ್ತರ ಅಧ್ಯಯನ ಮಂಡಳಿಗಳ ಸಭೆಗಳನ್ನು ವರ್ಷದಲ್ಲಿ ಎರಡು ಬಾರಿ ಸಕಾಲಕ್ಕೆ ನಡೆಸುವಂತೆ ಸೂಚಿಸಲಾಗಿದೆ.

ಪ್ರತಿ ಶೈಕ್ಷಣಿಕ ವರ್ಷ ಆರಂಭವಾಗುವ ಮೊದಲು ಅಂದರೆ ಜೂನ್ ಅಥವಾ ಜುಲೈ ತಿಂಗಳಲ್ಲಿ ಒಂದು ಬಾರಿ ಮತ್ತು ಶೈಕ್ಷಣಿಕ ವರ್ಷದ ಮಧ್ಯಭಾಗದಲ್ಲಿ ಅಂದರೆ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ಮತ್ತೊಂದು ಬಾರಿ ಅಧ್ಯಯನ ಮಂಡಳಿ ಸಭೆಗಳನ್ನು ನಡೆಸುವಂತೆ ಕುಲಸಚಿವರು ತಿಳಿಸಿದ್ದಾರೆ.

ಈ ಸಭೆಗಳ ನಡಾವಳಿಗಳನ್ನು ಸಕಾಲಕ್ಕೆ ವಿಶ್ವವಿದ್ಯಾಲಯಕ್ಕೆ ಕಳುಹಿಸಬೇಕು. ಪ್ರತಿ ವಿಭಾಗಗಳು ಪ್ರತ್ಯೇಕವಾಗಿ ಅಧ್ಯಯನ ಮಂಡಳಿಗಳ ಸಭೆ ನಡೆಸಲು ವಿಶ್ವವಿದ್ಯಾಲಯದ ಅನುಮತಿ ಪಡೆಯುವುದು ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

ಸರ್ಕಾರಿ ಶಾಲೆ ನವೀಕರಣ

ನೆಲಮಂಗಲ: ಸರ್ಕಾರಿ ಶಾಲೆಗಳಲ್ಲಿ ಸೌಲಭ್ಯಗಳ ಕೊರತೆಯಿದೆ ಎಂದು ಖಾಸಗಿ ಶಾಲೆಗಳ ಮೊರೆ ಹೋಗುತ್ತಿರುವ ಇಂದಿನ ಕಾಲಘಟ್ಟದಲ್ಲಿ, ಹುಲ್ಲೆಗೌಡನಹಳ್ಳಿ ಶಾಲೆಯು ಬಿಯೆಸ್ಸೆ ಸಂಸ್ಥೆಯ ಸಹಕಾರದಿಂದ ನವೀಕರಣಗೊಂಡು ಉತ್ತಮ ಸೌಲಭ್ಯಗಳನ್ನು ಪಡೆದುಕೊಂಡಿದೆ ಎಂದು ಡಿವೈಎಸ್ಪಿ ಗೌತಮ್ ತಿಳಿಸಿದರು.

ಸಮೀಪದ ಹುಲ್ಲೇಗೌಡನಹಳ್ಳಿಯಲ್ಲಿ ಬಿಯೆಸ್ಸೆ ಇಂಡಿಯಾ ಸಹಕಾರದಿಂದ ನವೀಕರಣಗೊಂಡ ಸರ್ಕಾರಿ ಶಾಲೆಯ ಉದ್ಘಾಟನೆ ಮಾಡಿ ಮಾತನಾಡಿದ ಅವರು, ಕಂಪನಿಯವರು ಸಮಾಜ ಸೇವಾ ಕಾರ್ಯಗಳನ್ನು ಮುಂದುವರಿಸಲು ಹಾಗೂ ದೇಶದ ಆಸ್ತಿಯಾಗಿರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಕಾರ್ಯಗಳನ್ನು ಮಾಡಲು ಸೂಚಿಸಿದರು.

ಸಿಇಒ ಸೈಯದ್ ಆಹಮದ್ ಮಾತನಾಡಿ ಶಾಲೆಯ ಕಟ್ಟಡ ನವೀಕರಣ, ಬಣ್ಣ, ಬೆಂಚುಗಳು, ಟೇಬಲ್‌ಗಳು, ಶುದ್ಧ ಕುಡಿಯುವ ನೀರಿನ ಘಟಕ, ಸಭಾಂಗಣ ಸೇರಿದಂತೆ ₹ 18 ಲಕ್ಷ ವೆಚ್ಚ ಮಾಡಲಾಗಿದೆ. ಈ ಶಾಲೆಯಿಂದ ಪ್ರತಿಭಾನ್ವಿತರು ವಿದ್ಯಾರ್ಥಿಗಳು ಹೊರ ಬಂದರೆ ನಮ್ಮ ಸೇವೆಗೆ ಸಾರ್ಥಕತೆ ದೊರೆಯುತ್ತದೆ ಎಂದರು.

ಸಂಸ್ಥೆಯ ನಿರ್ದೇಶಕ ಎನ್.ಜ್ಞಾನೇಶ್, ಮುಖ್ಯ ಹಣಕಾಸು ಅಧಿಕಾರಿ ವಿ.ಪ್ರಶಾಂತ್, ಮಾನವ ಸಂಪನ್ಮೂಲ ಅಧಿಕಾರಿಗಳಾದ ಜಿ.ಎನ್.ಶೇಖರ್, ಡಿ.ಎ.ರಘುವೀರ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ದಾಕ್ಷಾಯಿಣಿ, ಸದಸ್ಯ ದೊಡ್ಡನೆ ವೆಂಕಟೇಶ್ ಹಾಜರಿದ್ದರು.

ಡ್ರಗ್ಸ್ ಜಾಲ: 9 ಪ್ರಕರಣ, 27 ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಎರಡು ತಿಂಗಳು ವಿಶೇಷ ಕಾರ್ಯಾಚರಣೆ ನಡೆಸಿರುವ ಎನ್‌ಸಿಬಿ (ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕ) ಅಧಿಕಾರಿಗಳು, 9 ಪ್ರಕರಣಗಳಲ್ಲಿ 27 ಮಂದಿಯನ್ನು ಬಂಧಿಸಿದ್ದಾರೆ.

'ಡಾರ್ಕ್‌ನೆಟ್, ವಾಟ್ಸ್‌ಆ್ಯಪ್, ಟೆಲಿಗ್ರಾಂ ಹಾಗೂ ಇತರೆ ಸಾಮಾಜಿಕ ಮಾಧ್ಯಮಗಳ ಮೂಲಕ ಸಂಪರ್ಕ ಸಾಧಿಸುತ್ತಿದ್ದ ಪೆಡ್ಲರ್‌ಗಳು ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಕಲೆ ಹಾಕಿ ವಿಶೇಷ ಕಾರ್ಯಾಚರಣೆ ನಡೆಸಲಾಯಿತು' ಎಂದು ಎನ್‌ಸಿಬಿ ಬೆಂಗಳೂರು ವಲಯ ನಿರ್ದೇಶಕ ಪಿ. ಅರವಿಂದನ್ ಹೇಳಿದರು.

'ಎಲ್‌ಎಸ್‌ಡಿ ಕಾಗದ, ಕೊಕೇನ್, ಹಶೀಷ್, ಗಾಂಜಾ ಸೇರಿದಂತೆ ವಿವಿಧ ಪ್ರಕಾರದ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಬೆಂಗಳೂರು, ಇರಾನ್, ಮುಂಬೈ, ತಮಿಳುನಾಡು, ಹೈದರಾಬಾದ್, ಮಿಜೋರಾಂ, ಹರಿಯಾಣ, ದೆಹಲಿ, ರಾಜಸ್ಥಾನ, ಕೋಲ್ಕತ್ತ ಹಾಗೂ ಉತ್ತರ ಪ್ರದೇಶದ 27 ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಅವರು ತಿಳಿಸಿದರು.

'ಡ್ರಗ್ಸ್ ಮಾರುವವರು, ಸಾಗಿಸುವವರು, ಖರೀದಿಸುವವರು ಹಾಗೂ ಸಹಾಯ ಮಾಡಿದವರನ್ನೂ ಆರೋಪಿಗಳನ್ನಾಗಿ ಬಂಧಿಸಲಾಗಿದೆ. ಖಾಸಗಿ ಕಂಪನಿ ಉದ್ಯೋಗಿಗಳು, ವಿದ್ಯಾರ್ಥಿಗಳೂ ಬಂಧಿತರ ಪಟ್ಟಿಯಲ್ಲಿದ್ದಾರೆ' ಎಂದರು.

'ಆನ್‌ಲೈನ್ ಮೂಲಕವೇ ಡ್ರಗ್ಸ್ ಖರೀದಿ ನಡೆಯುತ್ತಿತ್ತು. ಕ್ರಿಪ್ಟೊ ಕರೆನ್ಸಿ ಮೂಲಕ ಹಣ ಪಾವತಿ ಮಾಡಲಾಗುತ್ತಿತ್ತು. ಜಾಲದಲ್ಲಿರುವ ಮತ್ತಷ್ಟು ಮಂದಿಯ ಬಂಧನಕ್ಕೆ ತನಿಖೆ ಮುಂದುವರಿಸಲಾಗಿದೆ' ಎಂದು ಅರವಿಂದನ್ ವಿವರಿಸಿದರು.

ಸಿ.ಎಂ ಮನೆಯತ್ತ ರೈತರು: ವಶಕ್ಕೆ

ಡಿ.5ರಂದು ಬಿಜೆಪಿ ಸಂಸದರು, ಶಾಸಕರಿಗೆ ಘೇರಾವ್ ಹಾಕಲು ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬಿಗೆ ನ್ಯಾಯಸಮ್ಮತ ಹಾಗೂ ಪ್ರೋತ್ಸಾಹದಾಯಕ ದರ (ಎಫ್‌ಆರ್‌ಪಿ) ಏರಿಕೆಯೂ ಸೇರಿ ಹಲವು ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ನಿವಾಸಕ್ಕೆ ಮುತ್ತಿಗೆ ಹಾಕಲು ಹೊರಟಿದ್ದರು. ಪ್ರತಿಭಟನಾ ನಿರತರನ್ನು ವಶಕ್ಕೆ ಪಡೆದ ಪೊಲೀಸರು ಬಳಿಕ ಬಿಡುಗಡೆ ಮಾಡಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘದ ನೇತೃತ್ವದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಯುತ್ತಿದ್ದು, ಶುಕ್ರವಾರ ಬೆಳಿಗ್ಗೆ 'ನಮ್ಮನ್ನು ಬಂಧಿಸಿ ನ್ಯಾಯಾಧೀಶರ ಎದುರು ನಿಲ್ಲಿಸಿ..' ಎಂದು ಚಳವಳಿ ನಡೆಸಿದರು.

ಮುತ್ತಿಗೆ ಚಳವಳಿಗೆ ಬೇರೆ ಜಿಲ್ಲೆಗಳಿಂದ ಬಂದಿದ್ದ ರೈತರನ್ನು ರೈಲು ನಿಲ್ದಾಣದಲ್ಲಿಯೇ ವಶಕ್ಕೆ ಪಡೆದು ಸಿಎಆರ್ ಮೈದಾನಕ್ಕೆ ಪೊಲೀಸರು ಕರೆದೊಯ್ದರು.

'ಮುಂಜಾಗ್ರತಾ ಕ್ರಮದ ಬಂಧನ ಬೇಡ. ನ್ಯಾಯ ಕಲ್ಪಿಸಿ; ಇಲ್ಲದಿದ್ದರೆ ನ್ಯಾಯಾಧೀಶರ ಎದುರು ಹಾಜರುಪಡಿಸಿ' ಎಂದು ಮನವಿ ಮಾಡಿದರು.

'ರಾಜ್ಯ ಸಲಹಾ ಬೆಲೆ ನಿಗದಿಪಡಿಸಿ ಕಬ್ಬಿನ ಇತರೆ ಉತ್ಪನ್ನಗಳ ಲಾಭ ಹಂಚಿಕೆ ಮಾಡುವಂತೆ ಮನವಿ ಸಲ್ಲಿಸಲಾಗಿತ್ತು. ಆದರೆ, ಸರ್ಕಾರ ಬರೀ ಭರವಸೆ ನೀಡುತ್ತಿದೆ' ಎಂದು ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಕ್ರೋಶ ಹೊರಹಾಕಿದರು.

'ಮಂಡ್ಯ, ವಿಜಯಪುರ, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ನಿರಂತರ ಚಳವಳಿ ನಡೆಸಲಾಗಿದೆ. ಮುಖ್ಯಮಂತ್ರಿ ಹಾಗೂ ಸಕ್ಕರೆ ಖಾತೆ ಸಚಿವರು ಸುಳ್ಳು ಆಶ್ವಾಸನೆ ನೀಡುತ್ತಿದ್ದಾರೆ' ಎಂದು ಶಾಂತಕುಮಾರ್ ದೂರಿದರು.

'ಡಿ.5ರಂದು ಬಿಜೆಪಿ ಶಾಸಕರು, ಸಂಸದರ ಮನೆಯ ಎದುರು ಪ್ರತಿಭಟನೆ ನಡೆಸಿ ಘೇರಾವ್ ಹಾಕಲು ನಿರ್ಧರಿಸಲಾಗಿದೆ' ಎಂದು ಎಚ್ಚರಿಸಿದರು.

'ಕಬ್ಬು ಬೆಳೆಯ ಉತ್ಪಾದನೆ ವೆಚ್ಚ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಆದರೆ, ಕಬ್ಬು ಖರೀದಿ ಬೆಲೆ ಮಾತ್ರ ಏರಿಕೆಯಾಗುತ್ತಿಲ್ಲ. ಕಬ್ಬಿನ ಎಫ್‌ಆರ್‌ಪಿ ದರ ಹೆಚ್ಚಿಸಲು ವಿಳಂಬ ನೀತಿ ಅನುಸರಿಸುತ್ತಿರುವ ಸರ್ಕಾರ, ರೈತರಿಗೆ ಅನ್ಯಾಯ ಮಾಡುತ್ತಿದೆ' ಎಂದು ಆಪಾದಿಸಿದರು.

ನಗರದ ಫ್ರೀಡಂ ಪಾರ್ಕ್‌ನಿಂದ ಮುಖ್ಯಮಂತ್ರಿ ಮನೆಯತ್ತ ಶುಕ್ರವಾರ ಬೆಳಿಗ್ಗೆ ಹೊರಟಿದ್ದ ರೈತರನ್ನು ಪೊಲೀಸರು ವಶಕ್ಕೆ ಪಡೆದರು – ಪ್ರಜಾವಾಣಿ ಚಿತ್ರ

ರೆಸ್ಟೋರೆಂಟ್‌ನಲ್ಲಿ ಗಲಾಟೆ: ಏಳು ಮಂದಿ ಬಂಧನ

ಬೆಂಗಳೂರು: ರೆಸ್ಟೋರೆಂಟ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ ಪೀಠೋಪಕರಣ ಧ್ವಂಸಗೊಳಿಸಿದ್ದ ಏಳು ಮಂದಿ ಆರೋಪಿಗಳನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ನೀಲಾದ್ರಿ ನಗರದ ವಿಲೇಜ್ ರೆಸ್ಟೋರೆಂಟ್‌ನಲ್ಲಿ ನ.20ರಂದು ಈ ಗಲಾಟೆ ನಡೆದಿತ್ತು.

ರೂಪೇನ ಅಗ್ರಹಾರದ ಶಂಕರ್, ಗಟ್ಟಹಳ್ಳಿ ಕೀರ್ತಿ, ಗಾರ್ವೆಪಾಳ್ಯದ ಅಭಿಷೇಕ್, ಬಂಡೆಪಾಳ್ಯದ ಅಭಿಷೇಕ್, ಸೋಮಸುಂದರ ಪಾಳ್ಯದ ಪ್ರವೀಣ್, ಲಕ್ಕಸಂದ್ರದ ಹೇಮಂತ್ ಕುಮಾರ್, ಕೂಡ್ಲಿಯ ಅಭಿಲಾಷ್ ಬಂಧಿತರು. ತಲೆಮರೆಸಿಕೊಂಡಿರುವ ರಾಷ್ಟ್ರೀಯ ಪಕ್ಷದ ಮುಖಂಡರೊಬ್ಬರ ಪುತ್ರ ಧನುಷ್ ಎಂಬಾತನಿಗಾಗಿ ಶೋಧ ಕಾರ್ಯ ನಡೆಯುತ್ತಿದೆ.

ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿ ಆಧರಿಸಿ ಏಳು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಡಿಸಿಪಿ ಸಿ.ಕೆ.ಬಾಬಾ ತಿಳಿಸಿದರು.

ಬೆಂಗಳೂರು ರೇಸ್

ಸ್ಟಾರ್ ಗ್ಲೋರಿ ಗೆಲ್ಲುವ ನಿರೀಕ್ಷೆ

ಮದ್ರಾಸ್ ರೇಸ್ ಕ್ಲಬ್ ಕಪ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಸ್ಟಾರ್ ಗ್ಲೋರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮೆಮೋರಬಲ್ ಟೈಮ್ 5, ಮೇಗಾ ಸಕ್ಸಸ್ 8, ರೀಗಲ್ ಫೋಸ್ 12
2ನೇ ರೇಸ್: ಫ್ಲೈಯಿಂಗ್ ಕ್ವೆಸ್ಟ್ 2, ಮಿ.ಹಂಬಲ್ 7, ಡೊಮಿನಾ 3
3ನೇ ರೇಸ್: ಸೈಗಾನ್ 5, ಅಂಜ್ಯಾಕ್ ಪಿಂಪರ್ನಲ್ 7, ಡಬಲ್ ಸ್ಕಾಚ್ 2
4ನೇ ರೇಸ್: ನಿಕೊಲಿನಾ 1, ಬ್ಯಾಲರ್ 6, ಲಿಸನ್ ಟು ಮೀ 7
5ನೇ ರೇಸ್: ಮೂನ್ಸ್ ಬ್ಲೆಸ್ಸಿಂಗ್ಸ್ 1, ಎಟೋಶ 3, ಓನ್ಲಿ ಯು 4
6ನೇ ರೇಸ್: ಸ್ಟಾರ್ ಗ್ಲೋರಿ 8, ವಾಚ್‌ಮೈಸ್ಟಾರ್ನ್ 7, ಕೆನ್ಸಿಂಗ್ಟನ್ ಕೋರ್ಟ್ 6
7ನೇ ರೇಸ್: ಕೊನಬಾಸ್ 5, ಪಿನ್ನಕ್ಕಲ್ ಪಾಯಿಂಟ್ 6, ಆಂಗ್ವಿಲಾ 2
8ನೇ ರೇಸ್: ಕೂಲ್ ರೈಡರ್ 1, ಕ್ಲೆವರ್ ಹಾನ್ಸ್ 6, ತ್ರೀ ಏಸಸ್ 4

ಉತ್ತಮ ಬೆಟ್: ಮೂನ್ಸ್ ಬ್ಲೆಸ್ಸಿಂಗ್ಸ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8

ಸನ್ಮಾನ

'ಮೇಜರ್ ಧ್ಯಾನ್ ಚಂದ್ ಖೇಲ್ ರತ್ನ ಪ್ರಶಸ್ತಿ' ಪುರಸ್ಕೃತ ಕಬಡ್ಡಿ ತರಬೇತುದಾರ ಹಾಗೂ ಕರ್ನಾಟಕ ರಾಜ್ಯ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಸಂಘಟನಾ ಕಾರ್ಯದರ್ಶಿ ಬಿ.ಸಿ. ಸುರೇಶ್ ಅವರನ್ನು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಸೋಸಿಯೇಷನ್ ಅಧ್ಯಕ್ಷ ಎಂ. ಹನುಮಂತೇಗೌಡ, ಪ್ರಧಾನ ಕಾರ್ಯದರ್ಶಿ ಎ. ಮುನಿರಾಜು, ಸಹ ಕಾರ್ಯದರ್ಶಿ ಕೆ. ಗೌರೀಶ್, ಬೆಂಗಳೂರು ನಗರ ಅಧ್ಯಕ್ಷ ಬಿ.ಎನ್. ಮಹೇಶ್, ರಾಜ್ಯ ಕಬಡ್ಡಿ ತೀರ್ಪುಗಾರರ ಮಂಡಳಿ ಮಾಜಿ ಅಧ್ಯಕ್ಷ ಷಣ್ಮುಖಂ ಸ್ವಾಗತಿಸಿದರು.

'ಗೂಂಡಾಗಳು ಮುಂಚೂಣಿಗೆ: ಭಯದ ವಾತಾವರಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ ರೌಡಿಶೀಟರ್‌ಗಳಿಗೆ ಕೆಂಪು ಹಾಸು ಹಾಕಿ ಪಕ್ಷಕ್ಕೆ ಸ್ವಾಗತಿಸುವ ಜೊತೆಗೆ ಸಚಿವರು, ಸಂಸದರು ಹಾಗೂ ಶಾಸಕರು ರೌಡಿಗಳ ಜೊತೆಗೆ ವೇದಿಕೆ ಹಂಚಿಕೊಳ್ಳುತ್ತಿದ್ದಾರೆ. ಬಿಜೆಪಿಯು ಅನೈತಿಕತೆ ಹಾಗೂ ಗೂಂಡಾ ವರ್ತನೆಯ ಪಕ್ಷವಾಗಿದೆ' ಎಂದು ಆಪಾದಿಸಿದ ನಗರ ಕಾಂಗ್ರೆಸ್ ಪ್ರಚಾರ ಸಮಿತಿ ಮುಖಂಡರು ಶುಕ್ರವಾರ ನಗರದಲ್ಲಿ ಪ್ರತಿಭಟಿಸಿದರು.

'ಗೂಂಡಾಗಳನ್ನು ಬಿಜೆಪಿ ಮುಖಂಡರು ಮುಂಚೂಣಿಗೆ ತರುತ್ತಿರುವುದು ರಾಜ್ಯದ ಸಂಸ್ಕೃತಿಗೆ ಮಾರಕವಾಗಿದೆ. ಜನರಿಗೆ ಭಯದ ವಾತಾವರಣ ಸೃಷ್ಟಿ ಆಗುತ್ತಿದೆ' ಎಂದು ಮುಖಂಡರು ದೂರಿದರು.

'ಕಾಂಗ್ರೆಸ್ ವಿರುದ್ಧ ಸಚಿವ ಅಶ್ವತ್ಥ ನಾರಾಯಣ ಆಧಾರರಹಿತ ಹೇಳಿಕೆ ನೀಡುತ್ತಿದ್ದಾರೆ. ಇದು ಖಂಡನೀಯ. ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಸವಾಲು ಹಾಕಿದರು.

'ಬಿಜೆಪಿಗೆ ಗೂಂಡಾಗಳೇ ಮುಖ್ಯ ಆಗಿರುವುದರಿಂದ ಅವರನ್ನು ಕರೆದು ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡು, ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಅವಕಾಶ ಕಲ್ಪಿಸಲಿ. ರಾಜ್ಯದ ಜನರೇ ಬಿಜೆಪಿಗೆ ಬುದ್ಧಿ ಕಲಿಸಲಿದ್ದಾರೆ' ಎಂದು ಅವರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಜಿ.ಜನಾರ್ದನ್, ಎ.ಆನಂದ, ಪಿಳ್ಳರಾಜು, ಭೈರಪ್ಪ, ಪ್ರೇಮಲತಾ, ಪ್ರಕಾಶ್, ಚಿಕ್ಕಣ್ಣ, ರಾಮಕೃಷ್ಣ, ನವೀನ್, ಪ್ರಶಾಂತ್, ಸುಪ್ರಜ್, ಯೋಗೇಶ್, ಮಂಜುನಾಥ್ ಸೇರಿದಂತೆ ಹಲವರು ಹಾಜರಿದ್ದರು.

ಬಿಜೆಪಿ ವಿರುದ್ಧ ನಗರದಲ್ಲಿ ಶುಕ್ರವಾರ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸಿದರು

ಯಾರದ್ದೋ ಹೆಸರಿನಲ್ಲಿ ಜಾಮೀನು: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಪ್ರಕರಣವೊಂದರ ಆರೋಪಿಗೆ ಯಾರದ್ದೂ ಹೆಸರಿನಲ್ಲಿ ಜಾಮೀನು ನೀಡಿ ವಂಚಿಸಲಾಗಿದ್ದು, ಈ ಸಂಬಂಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

'ಆರೋಪಿ ಸಿಲಿಂಬರಸ್ ಎಂಬಾತನಿಗೆ ಎಸ್. ಬಸವಕುಮಾರ್ ಹೆಸರಿನ ದಾಖಲೆಗಳನ್ನು ನೀಡಿ ಜಾಮೀನು ಕೊಡಿಸಿ ವಂಚಿಸಿರುವ ಬಗ್ಗೆ ನ್ಯಾಯಾಲಯದ ಮುಖ್ಯ ಆಡಳಿತಾಧಿಕಾರಿ ಎಂ. ರಾಮಚಂದ್ರ ದೂರು ನೀಡಿದ್ದಾರೆ. ನಕಲಿ ಜಾಮೀನುದಾರನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದ್ದು, ಆತನ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ತಾವರೆಕೆರೆ ಹೋಬಳಿಯ ಗಂಗೇನಹಳ್ಳಿಯ ಎಸ್.ಬಸವಕುಮಾರ್ ಅವರ ಹೆಸರಿನಲ್ಲಿ ಆಧಾರ್, ಪಹಣಿ ಹಾಗೂ ಮ್ಯುಟೇಷನ್ ನೋಂದಣಿ ಪ್ರತಿಯನ್ನು ನಕಲಿಯಾಗಿ ಸೃಷ್ಟಿಸಲಾಗಿತ್ತು. ಬಸವಕುಮಾರ್ ಪರವಾಗಿ ಅಪರಿಚಿತ ಜಾಮೀನುದಾರನಾಗಿದ್ದ. ಆತನ ಮೂಲಕವೇ ಆರೋಪಿಗೆ ಜಾಮೀನು ಮಂಜೂರಾಗಿತ್ತು' ಎಂದು ತಿಳಿಸಿದರು.

'ಜಾಮೀನು ಪಡೆದಿದ್ದ ಆರೋಪಿ ನ್ಯಾಯಾಲಯದ ವಿಚಾರಣೆಗೆ ಗೈರಾಗುತ್ತಿದ್ದ. ನೋಟಿಸ್ ನೀಡಿದರೂ ವಿಚಾರಣೆಗೆ ಬಂದಿರಲಿಲ್ಲ. ಅವಾಗಲೇ ಜಾಮೀನುದಾರ ಬಸವಕುಮಾರ್ ಅವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ವಿಚಾರಣೆಗೆ ಹಾಜರಾಗಿದ್ದ ಬಸವಕುಮಾರ್, 'ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ನನ್ನ ಹೆಸರಿನಲ್ಲಿ ದಾಖಲೆ ನೀಡಿ ಆರೋಪಿಗೆ ಜಾಮೀನು ಕೊಡಿಸಿದವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಕೋರಿದ್ದರು. ಅವರ ಮನವಿ ಪರಿಷ್ಕರಿಸಿದ ನ್ಯಾಯಾಲಯ, ನಕಲಿ ದಾಖಲೆ ಸೃಷ್ಟಿಸಿ ಜಾಮೀನು ಕೊಡಿಸಿರುವ ಅಪರಿಚಿತನ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಆದೇಶಿಸಿತ್ತು' ಎಂದು ಹೇಳಿದರು.

ಲೋಕಾಯುಕ್ತ ಬಲೆಗೆ ಬೆಸ್ಕಾಂ ಸಿಬ್ಬಂದಿ

ರಾಮನಗರ: ಬೆಸ್ಕಾಂನ ಕುಂಬಳಗೋಡು ವಿಭಾಗದ ಕಿರಿಯ ಎಂಜಿನಿಯರ್ ಮಲ್ಲೇಶ ಹಾಗೂ ಲೈನ್‌ಮನ್ ಬಸವರಾಜು ಎಂಬುವರು ಶುಕ್ರವಾರ ₹ 1.5 ಲಕ್ಷ ಲಂಚ ಪಡೆಯುವ ವೇಳೆ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಹನುಮಂತಯ್ಯ ಎಂಬುವರಿಗೆ ಸೇರಿದ ವಿದ್ಯುತ್ ಸಂಪರ್ಕದ ದಂಡದ ಮೊತ್ತ ₹ 2.8 ಲಕ್ಷ ಬಿಲ್ ಮನ್ನಾ ಮಾಡಲು ಆರೋಪಿಗಳು ಲಂಚಕ್ಕೆ ಬೇಡಿಕೆ ಇಟ್ಟಿದ್ದರು.

ದೂರುದಾರರು ಲೋಕಾಯುಕ್ತಕ್ಕೆ ಮಾಹಿತಿ ನೀಡಿದ್ದು, ಅವರ ಸೂಚನೆಯಂತೆ ಆರೋಪಿಗಳಿಗೆ ಹಣ ನೀಡುತ್ತಿದ್ದ ವೇಳೆ ಅಧಿಕಾರಿಗಳು ದಾಳಿ ನಡೆಸಿ ಹಣದ ಸಮೇತ ಆರೋಪಿಗಳನ್ನು ವಶಕ್ಕೆ ಪಡೆದರು. ಡಿವೈಎಸ್‌ಪಿ ಎಂ.ಆರ್. ಗೌತಮ್, ಇನ್ ಸ್ಪೆಕ್ಟರ್ ಸತೀಶ ನೇತೃತ್ವದ ತಂಡ ಕಾರ್ಯಾಚರಣೆಯ ನೇತೃತ್ವವಹಿಸಿದ್ದರು.

ರೈಲು ಹತ್ತುವಾಗ ಬಿದ್ದು ವ್ಯಕ್ತಿ ಸಾವು

ಹುಬ್ಬಳ್ಳಿ: ಚಲಿಸುತ್ತಿದ್ದ ರೈಲನ್ನು ಹತ್ತುವಾಗ ಕಾಲು ಜಾರಿ ಬಿದ್ದು ಪ್ರಯಾಣಿಕರೊಬ್ಬರು ಮೃತಪಟ್ಟಿರುವ ಘಟನೆ ಹುಬ್ಬಳ್ಳಿಯ ದಕ್ಷಿಣ ರೈಲು ನಿಲ್ದಾಣದಲ್ಲಿ ಶುಕ್ರವಾರ ಬೆಳಿಗ್ಗೆ ನಡೆದಿದೆ. ಬೆಂಗಳೂರಿನ ವಿನೋಬಾ ನಗರದ ಪ್ರಕಾಶ್ ಬಿ. (62) ಮೃತರು.

ಧಾರವಾಡದ ಸಂಬಂಧಿಕರ ಮನೆಯ ಮದುವೆಯಲ್ಲಿ ಭಾಗವಹಿಸಲು ಪ್ರಕಾಶ್ ಅವರು, ಹುಬ್ಬಳ್ಳಿ–ಬೆಂಗಳೂರು ಪ್ಯಾಸೆಂಜರ್ ರೈಲಿನಲ್ಲಿ ಕುಟುಂಬದೊಂದಿಗೆ ಬರುತ್ತಿದ್ದರು. ರೈಲು ನಿಲ್ದಾಣದಲ್ಲಿ ನಿಂತಾಗ, ಆಹಾರ ತರಲು ಅವರು ಕೆಳಕ್ಕಿಳಿದಿದ್ದರು.

ವಾಪಸ್ ಬರುವುದಕ್ಕೆ ಮುಂಚೆ ರೈಲು ನಿಧಾನವಾಗಿ ಮುಂದಕ್ಕೆ ಸಾಗತೊಡಗಿದೆ. ಚಲಿಸುತ್ತಿದ್ದ ರೈಲನ್ನು ಹತ್ತಲು ಮುಂದಾದ ಅವರು, ಕಾಲು ಜಾರಿ ಪ್ಲಾಟ್‌ಫಾರಂ ಮತ್ತು ರೈಲಿನ ನಡುವಿನ ಜಾಗದಲ್ಲಿ ಸಿಲುಕಿ ಮೃತಪಟ್ಟಿದ್ದಾರೆ ಎಂದು ರೈಲ್ವೆ ಪೊಲೀಸರು ತಿಳಿಸಿದರು.

ಡ್ರಗ್ಸ್ ಮಾರುತ್ತಿದ್ದ 'ಬೇಕರಿ' ಬಂಧನ

ಬೆಂಗಳೂರು: ನಗರದಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪಿ ರಿಜ್ವಾನ್ ಪಾಷಾ ಅಲಿಯಾಸ್ ಬೇಕರಿಯನ್ನು (21) ಕಲಾಸಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

'ಮೈಸೂರು ರಸ್ತೆಯ ವಾಲ್ಮೀಕಿ ನಗರದ ರಿಜ್ವಾನ್, ಹಲವು ತಿಂಗಳಿನಿಂದ ಡ್ರಗ್ಸ್ ಮಾರುತ್ತಿದ್ದ ಬಗ್ಗೆ ಮಾಹಿತಿ ಇತ್ತು. ಈತನನ್ನು ಬಂಧಿಸಿ ₹ 1 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಠಾಣೆ ವ್ಯಾಪ್ತಿಯ ಎ.ವಿ. ರಸ್ತೆಗೆ ಡಿ.1ರಂದು ಬೆಳಿಗ್ಗೆ ಬಂದಿದ್ದ ಆರೋಪಿ ರಿಜ್ವಾನ್, ಪರಿಚಯಸ್ಥ ಗ್ರಾಹಕರಿಗೆ ಡ್ರಗ್ಸ್ ಮಾರುತ್ತಿದ್ದ. ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿದಾಗ ಆರೋಪಿ ಸಿಕ್ಕಿಬಿದ್ದ. ಈತನ ವಿರುದ್ಧ ಎಂಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಸದ್ಯ ಆರೋಪಿ ನ್ಯಾಯಾಂಗ ಬಂಧನದಲ್ಲಿದ್ದಾನೆ' ಎಂದು ಪೊಲೀಸರು ತಿಳಿಸಿದರು.

ಎಂಪೈರ್ ವಿರುದ್ಧ ಪ್ರಕರಣ ದಾಖಲು

ಬೆಂಗಳೂರು: ಗ್ರಾಹಕರ ವಾಹನಗಳನ್ನು ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸುವಂತೆ ಮಾಡಿ, ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಅಡ್ಡಿಪಡಿಸಿದ್ದ ಆರೋಪದಡಿ ಎಂಪೈರ್ ಹೋಟೆಲ್ ವ್ಯವಸ್ಥಾಪಕರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಹೊಯ್ಸಳ ಗಸ್ತು ವಾಹನದಲ್ಲಿ ಕರ್ತವ್ಯದಲ್ಲಿದ್ದ ಎಎಸ್‌ಐ ಹೇಮಕುಮಾರ್ ಅವರ ದೂರು ಆಧರಿಸಿ ಎಂಪೈರ್ ಹೋಟೆಲ್ ವ್ಯವಸ್ಥಾಪಕನ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ನೋಟಿಸ್ ನೀಡಿ ವಿಚಾರಣೆ ನಡೆಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಸಂತನಗರದ ಮಿಲ್ಲರ್ಸ್ ರಸ್ತೆಯಲ್ಲಿ ಎಂಪೈರ್ ಹೋಟೆಲ್ ಇದೆ. ನ. 27ರಂದು ತಡರಾತ್ರಿ 2.25ರ ಸುಮಾರಿಗೆ ಹೋಟೆಲ್ ಎದುರು ಗ್ರಾಹಕರ ವಾಹನಗಳನ್ನು ಅಡ್ಡಾದಿಡ್ಡಿಯಾಗಿ ನಿಲ್ಲಿಸಲಾಗಿತ್ತು. ಇದರಿಂದ ಸಾರ್ವಜನಿಕರ ವಾಹನಗಳ ಸಂಚಾರಕ್ಕೆ ಅಡ್ಡಿಯಾಗಿತ್ತು.'

'ಸ್ಥಳಕ್ಕೆ ಹೋಗಿದ್ದ ಗಸ್ತು ವಾಹನದ ಸಿಬ್ಬಂದಿ, ಹೋಟೆಲ್ ಒಳಗೆ ಹೋಗಿ ಪರಿಶೀಲಿಸಿದ್ದರು. ಹೋಟೆಲ್‌ನ ಮೊದಲ ಮಹಡಿಯಲ್ಲಿ ಗ್ರಾಹಕರಿಗೆ ಆಹಾರ ಸರಬರಾಜು ಮಾಡಲಾಗುತ್ತಿತ್ತು. ಅದರ ಫೋಟೊ ತೆಗೆದುಕೊಂಡಿದ್ದ ಸಿಬ್ಬಂದಿ, ಕೆಲಸಗಾರರನ್ನು ಪ್ರಶ್ನಿಸಿದ್ದರು. ವ್ಯವಸ್ಥಾಪಕ ಹೇಳಿದ್ದರಿಂದ ಆಹಾರ ಸರಬರಾಜು ಮಾಡುತ್ತಿರುವುದಾಗಿ ಕೆಲಸಗಾರರು ಹೇಳಿದ್ದರು. ನಂತರ, ಹೋಟೆಲ್ ಬಂದ್ ಮಾಡಿಸಲಾಗಿತ್ತು' ಎಂದು ಮೂಲಗಳು ತಿಳಿಸಿವೆ.

ಕಳ್ಳತನ: ಸಿಕ್ಕಿಬಿದ್ದ ತಳ್ಳುಗಾಡಿ ವ್ಯಾಪಾರಿ

ಬೆಂಗಳೂರು: ನಗರದ ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪಿ ಮಂಜುನಾಥ್ ಅಲಿಯಾಸ್ ಮೂರ್ತಿ ಎಂಬುವವರನ್ನು ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಮಂಜುನಾಥ್ ತಳ್ಳುಗಾಡಿ ವ್ಯಾಪಾರಿ. ನಗರದಲ್ಲಿ ವ್ಯಾಪಾರಕ್ಕಾಗಿ ಸುತ್ತಾಡುತ್ತಿದ್ದ ಈತ, ಮನೆಗಳನ್ನು ಗುರುತಿಸಿ ಕಳ್ಳತನ ಮಾಡುತ್ತಿದ್ದ. ಈತನನ್ನು ಬಂಧಿಸಿ ₹ 6.50 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮಂಜುನಾಥ್, ಅಪರಾಧ ಹಿನ್ನೆಲೆಯುಳ್ಳವ. ಅಪರಾಧ ಪ್ರಕರಣವೊಂದರಲ್ಲಿ ಜೈಲಿಗೆ ಹೋಗಿ ಜಾಮೀನು ಮೇಲೆ ಹೊರಬಂದಿದ್ದ. ತಳ್ಳುಗಾಡಿಯಲ್ಲಿ ಮುಸುಕಿನ ಜೋಳ ಮಾರಲಾರಂಭಿಸಿದ್ದ. ಬೀಗ ಹಾಕಿರುತ್ತಿದ್ದ, ಅಂಗಳದಲ್ಲಿ ಕಸ ಬಿದ್ದಿರುತ್ತಿದ್ದ, ರಂಗೋಲಿ ಹಾಕಿರದ ಮನೆಗಳನ್ನು ಆರೋಪಿ ಗುರುತಿಸುತ್ತಿದ್ದ. ಮನೆಯಲ್ಲಿ ಯಾರೂ ಇಲ್ಲದ್ದನ್ನು ತಿಳಿದುಕೊಂಡು, ಬಾಗಿಲು ಮೀಟಿ ಒಳನುಗ್ಗಿ ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದ.'

'ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣದ ತನಿಖೆ ಕೈಗೊಂಡು, 50 ಸಿಸಿಟಿವಿ ಕ್ಯಾಮೆರಾಗಳ ದೃಶ್ಯ ಪರಿಶೀಲಿಸಲಾಗಿತ್ತು. ಆರೋಪಿಯ ನಡಿಗೆ ಶೈಲಿ ಹಾಗೂ ಮುಖಚಹರೆ ಪತ್ತೆ ಮಾಡಲಾಗಿತ್ತು. ಶ್ರೀರಾಮಪುರದಲ್ಲಿ ತಳ್ಳುಗಾಡಿಯಲ್ಲಿ ವ್ಯಾಪಾರಕ್ಕೆ ಹೊರಟಿದ್ದ ವೇಳೆಯಲ್ಲೇ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ತಿಳಿಸಿದರು.

'ಕದ್ದ ಚಿನ್ನಾಭರಣವನ್ನು ಅಡವಿಡುತ್ತಿದ್ದ ಆರೋಪಿ, ಹಣ ಪಡೆಯುತ್ತಿದ್ದ. ಕೆಲ ಚಿನ್ನಾಭರಣವನ್ನು ಮಾರುತ್ತಿದ್ದ. ಬಂದ ಹಣವನ್ನು ದುಶ್ಚಟ ಹಾಗೂ ಕುಟುಂಬ ನಿರ್ವಹಣೆಗೆ ಬಳಸುತ್ತಿದ್ದ. 10ಕ್ಕೂ ಹೆಚ್ಚು ಕಡೆ ಆರೋಪಿ ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಹೇಳಿದರು.

ಕೆಸಿಆರ್ ಪುತ್ರಿಗೆ ಸಿಬಿಐ ನೋಟಿಸ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ದೆಹಲಿಯ ಅಬಕಾರಿ ನೀತಿ ಹಗರಣದ ಸಂಬಂಧ ತೆಲಂಗಾಣ ಮುಖ್ಯಮಂತ್ರಿ ಅವರ ಪುತ್ರಿ ಕೆ.ಕವಿತಾ ಅವರಿಗೆ ಸಿಬಿಐ ನೋಟಿಸ್ ಜಾರಿ ಮಾಡಿದ್ದು ಡಿ.6ರಂದು ವಿಚಾರಣೆಗೆ ಬರುವಂತೆ ಸೂಚಿಸಿದೆ.

ಕ್ರಿಮಿನಲ್ ಅಪರಾಧ ಸಂಹಿತೆ ಸೆಕ್ಷನ್ 160ರ ಅನ್ವಯ ನೋಟಿಸ್ ಜಾರಿಗೊಳಿಸಿದ್ದು, ಅಂದು ಬೆಳಿಗ್ಗೆ 11 ಗಂಟೆಗೆ ವಿಚಾರಣೆ ನಡೆಸಬೇಕಿದ್ದು, ನಿಮಗೆ ಸೂಕ್ತವಾದ ಸ್ಥಳ ತಿಳಿಸುವಂತೆಯೂ ಹೇಳಿದೆ.

ಪ್ರತಿಯಾಗಿ ಅಧಿಕಾರಿಗಳು ಹೈದರಾಬಾದ್‌ನ ತಮ್ಮ ನಿವಾಸದಲ್ಲಿ ಭೇಟಿಯಾಗಬಹುದು ಎಂದು ನಿಜಾಮಾಬಾದ್‌ನ ಮಾಜಿ ಸಂಸದೆಯೂ ಆಗಿರುವ ಕವಿತಾ ತಿಳಿಸಿದ್ದಾರೆ.

ಇದು, ಬಿಜೆಪಿಯ ರಾಜಕೀಯ ಸಂಚು ಎಂದು ಟೀಕಿಸಿದ್ದು, ತನಿಖೆಗೆ ಪೂರ್ಣ ಸಹಕಾರ ನೀಡಲಾಗುವುದು ಎಂದು ತಿಳಿಸಿದ್ದಾರೆ. ಅಮಿತ್ ಅರೋರಾ ವಿರುದ್ಧದ ರಿಮಾಂಡ್ ವರದಿಯಲ್ಲಿ ಕವಿತಾ ಹೆಸರನ್ನು ಇ.ಡಿ ಉಲ್ಲೇಖಿಸಿತ್ತು. ಹಿಂದೆಯೇ ನೋಟಿಸ್ ನೀಡಲಾಗಿತ್ತು.

ಚುಂಚಘಟ್ಟ ಕೆರೆಯಲ್ಲಿ ರಾಜ್ಯೋತ್ಸವ; ಕರಿಹೋಬನಹಳ್ಳಿ ಕೆರೆಯಲ್ಲಿ ಅಗ್ನಿಸ್ಪರ್ಶ

ಕೆರೆಯಲ್ಲೇ ಪಟಾಕಿ, ಕಾರ್ಖಾನೆ ತ್ಯಾಜ್ಯಕ್ಕೆ ಬೆಂಕಿ

● ಆರ್. ಮಂಜುನಾಥ್

ಬೆಂಗಳೂರು: ಕೆರೆಗಳ ಅಭಿವೃದ್ಧಿಗೆ ಕೋಟ್ಯಂತರ ವೆಚ್ಚ ಮಾಡಿರುವ ಬಿಬಿಎಂಪಿ, ಅದರ ನಿರ್ವಹಣೆಯಲ್ಲಿ ವಿಫಲವಾಗಿದೆ. ಕೆರೆಯ ಅಂಗಳದಲ್ಲೇ ರಾಜ್ಯೋತ್ಸವ, ರಾಜಕೀಯ ಕಾರ್ಯಕ್ರಮಗಳು ನಡೆಯುತ್ತಿವೆ. ಪಟಾಕಿಯನ್ನು ಸಿಡಿಸಿ ಅಂಗಳವನ್ನೇ ಹಾಳು ಮಾಡಲಾಗಿದೆ. ಕಾರ್ಖಾನೆ ತ್ಯಾಜ್ಯವನ್ನೂ ಸುಡಲಾಗುತ್ತಿದೆ. ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಕೆರೆ ಸಂರಕ್ಷಣೆ ಹಾಗೂ ಅಭಿವೃದ್ಧಿ ಪ್ರಾಧಿಕಾರವೂ ಇತ್ತ ಗಮನಹರಿಸಿಲ್ಲ.

ಬೆಂಗಳೂರುದಕ್ಷಿಣ ವಿಧಾನಸಭೆ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಚುಂಚಘಟ್ಟ ಕೆರೆ ಹಿಂದೆ ತ್ಯಾಜ್ಯದ ಗೂಡಾಗಿತ್ತು. ಬಿಬಿಎಂಪಿ ವತಿಯಿಂದ ನಾಲ್ಕಾರು ಕೋಟಿ ವೆಚ್ಚ ಮಾಡಿ ಅಭಿವೃದ್ಧಿ ಮಾಡಿ ಬೇಲಿಯನ್ನೂ ಹಾಕಲಾಗಿದೆ. ಆದರೆ, ಆ ಬೇಲಿಯೊಳಗೇ ರಾಜಕೀಯ, ಸಂಘ–ಸಂಸ್ಥೆಗಳ ಕಾರ್ಯಕ್ರಮಗಳು ಇತ್ತೀಚೆಗೆ ನಡೆಯುತ್ತಿವೆ. ತಮ್ಮ ಮುಖಂಡರನ್ನು ಸಂತಸಪಡಿಸಲು ಬೃಹತ್ ಪಟಾಕಿಗಳನ್ನು ಇಲ್ಲಿ ಸಿಡಿಸಲಾಗಿದೆ. ಕೆರೆ ಅಂಗಳ ಸುಟ್ಟ ಪೇಪರ್‌ಗಳ ತಾಣವಾಗಿದೆ.

ಕರಿಹೋಬನಹಳ್ಳಿ ಕೆರೆ ಅಂಗಳದಲ್ಲಿ ಕಾರ್ಖಾನೆ ತ್ಯಾಜ್ಯಕ್ಕೆ ಬೆಂಕಿ ಇಟ್ಟಿರುವುದು

ಚುಂಚಘಟ್ಟ ಕೆರೆ 23 ಎಕರೆ 9 ಗುಂಟೆ ಪ್ರದೇಶದಲ್ಲಿದೆ. ಬಿಬಿಎಂಪಿ ಅಭಿವೃದ್ಧಿ ಮಾಡಿ ನಾಲ್ಕು ವರ್ಷ ಸಂದಿದ್ದರೂ ಆಗಾಗ್ಗೆ ಆಧುನೀಕರಣ ಎಂದು ಲಕ್ಷಗಟ್ಟಲೆ ವ್ಯಯ ಮಾಡುತ್ತಲೇ ಇದೆ. ಆದರೆ, ಇದೀಗ ರಾಜಕೀಯ, ಸಂಘ–ಸಂಸ್ಥೆಗಳ ಕಾರ್ಯಕ್ರಮಗಳಿಗೂ ಅವಕಾಶ ಮಾಡಿಕೊಟ್ಟಿದೆ. ಇದರಿಂದ ಕೆರೆಯ ಪರಿಸರ ಪೂರ್ಣ ಹಾಳಾಗಿದೆ. ಈ ಬಗ್ಗೆ ದೂರು ನೀಡಿದ್ದರೂ ಕ್ರಮ ಕೈಗೊಂಡಿಲ್ಲ.

'ಚುಂಚಘಟ್ಟದಲ್ಲಿ ರಾಜಕೀಯ ಕಾರ್ಯಕ್ರಮವನ್ನು ಆಯೋಜಿಸಿ ಪಟಾಕಿ ಸಿಡಿಸಿ, ಪರಿಸರ ಹಾಳುಮಾಡಲಾಗಿದೆ. ಇಲ್ಲಿರುವ ಗಿಡಗಳೆಲ್ಲ ಸುಟ್ಟುಹೋಗಿವೆ. ದೂರು ನೀಡಿದರೂ ಕ್ರಮ ಕೈಗೊಂಡಿಲ್ಲ. ಬಿಬಿಎಂಪಿ ಜವಾಬ್ದಾರಿ ಇಲ್ಲದಂತೆ ವರ್ತಿಸಿದೆ' ಎಂದು ಆ್ಯಕ್ಷನ್ ಏಡ್‌ನ ಕಾರ್ಯಕ್ರಮ ವ್ಯವಸ್ಥಾಪಕ ರಾಘವೇಂದ್ರ ಬಿ. ಪಚ್ಚಾಪುರ್ ಆಕ್ರೋಶ ವ್ಯಕ್ತಪಡಿಸಿದರು.

ಪೀಣ್ಯ 2ನೇ ಹಂತದ ಕೈಗಾರಿಕೆ ಪ್ರದೇಶದ ಸಮೀಪವಿರುವ ಕರಿಹೋಬನಹಳ್ಳಿ ಕೆರೆ (ನಸರಸಪ್ಪನಹಳ್ಳಿ) 27 ಎಕರೆ 13 ಗುಂಟೆ ವಿಸ್ತೀರ್ಣದಲ್ಲಿದ್ದು, ಪ್ರತಿದಿನ ಇಲ್ಲಿ ಕಾರ್ಖಾನೆ ತ್ಯಾಜ್ಯವನ್ನು ಸುಡಲಾಗುತ್ತಿದೆ. ಯಾವುದೇ ಕಸವನ್ನು ಸುಡಬಾರದು ಎಂಬ ಆದೇಶವಿದ್ದರೂ ಇಲ್ಲಿ ಪಾಲನೆಯಾಗುತ್ತಿಲ್ಲ. ನಿರ್ವಹಣೆ, ರಕ್ಷಣೆಗೆ ಇರುವವರೇ ತ್ಯಾಜ್ಯ ಹಾಕಲು, ಸುಡಲು ಅನುವು ಮಾಡಿಕೊಡುತ್ತಿದ್ದಾರೆ.

'ಕರಿಹೋಬನಹಳ್ಳಿ ಕೆರೆಯನ್ನು ಈಗ ಅಭಿವೃದ್ಧಿ ಮಾಡುವುದಾಗಿ ಬಿಬಿಎಂಪಿ ಹೇಳುತ್ತಿದೆ. ಆದರೆ ಇದನ್ನು ಮೊದಲು ರಕ್ಷಿಸಬೇಕು. ಕಾರ್ಖಾನೆ ತ್ಯಾಜ್ಯ ಇಲ್ಲಿ ಸುಟ್ಟರೆ ವಿಷಕಾರಕವಾಗುತ್ತದೆ. ಹಲವು ವರ್ಷಗಳಿಂದ ದೂರು ನೀಡುತ್ತಿದ್ದರೂ ಮಾಲಿನ್ಯ ನಿಯಂತ್ರಣ ಮಂಡಳಿ, ಬಿಬಿಎಂಪಿ ಕ್ರಮ ಕೈಗೊಂಡಿಲ್ಲ' ಎಂದು ಪರಿಸರ ಕಾರ್ಯಕರ್ತ ಗೌಡಯ್ಯ ಹೇಳಿದರು.

'ಕೆರೆಯಲ್ಲಿ ಕಾರ್ಯಕ್ರಮಕ್ಕೆ ಅವಕಾಶ ಬೇಡ'

'ಇತ್ತೀಚಿನ ದಿನಗಳಲ್ಲಿ ಕೆರೆಗಳಲ್ಲಿ ಕಾರ್ಯಕ್ರಮ ಆಯೋಜಿಸುವುದು ಹೆಚ್ಚಾಗುತ್ತಿದೆ. ಕೆರೆ ಹೆಸರಲ್ಲಿ ರಾಜಕೀಯ ಕಾರ್ಯಕ್ರಮಗಳಾಗುತ್ತಿವೆ. ಸಂಘ–ಸಂಸ್ಥೆಗಳು ತಮ್ಮ ಪ್ರಚಾರಕ್ಕಾಗಿ ಕೆರೆ ಅಂಗಳವನ್ನು ಬಳಸಿಕೊಳ್ಳುತ್ತಿವೆ. ಕೆರೆಯಲ್ಲಿ ಕಾರ್ಯಕ್ರಮಗಳಿಗೆ ಅವಕಾಶ ನೀಡಬಾರದು. ಮಕ್ಕಳು, ವೃದ್ಧರಿಗೆ ಕೆಲವು ಚಟುವಟಿಕೆಗಳಿಗಷ್ಟೇ ಅವಕಾಶ ಇರಬೇಕು. ಆದರೆ, ಯಾವುದೇ ರೀತಿಯಲ್ಲೂ ಕೆರೆ ಪರಿಸರಕ್ಕೆ ತೊಂದರೆಯಾಗದಂತೆ ಎಚ್ಚರಿಕೆ ವಹಿಸಬೇಕು' ಎಂದು ಪರಿಸರ ಕಾರ್ಯಕರ್ತ ಶ್ರೀನಿವಾಸ್ ಆಗ್ರಹಿಸಿದರು.

ಇನ್ನು ಮುಂದೆ ಎಚ್ಚರ...

'ಯಾವುದೇ ಕೆರೆ ಅಂಗಳದಲ್ಲಿ ಕಾರ್ಯಕ್ರಮಗಳಿಗೆ ಅನುವು ಮಾಡಿಕೊಡಬಾರದು. ಈ ಬಗ್ಗೆ ಸೂಕ್ತ ಆದೇಶ ವಿದ್ದರೂ ಅದು ಪಾಲನೆಯಾಗಿಲ್ಲ. ಹೋಮ್ ಗಾರ್ಡ್‌ಗಳಿಗೆ ಮತ್ತೆ ಕಟ್ಟುನಿಟ್ಟಿನ ಆದೇಶ ನೀಡಲಾಗುತ್ತದೆ. ಇನ್ನು ಕರಿಹೋಬನಹಳ್ಳಿ ಕೆರೆಯ ಅಭಿವೃದ್ಧಿಗೆ ಟೆಂಡರ್ ಕರೆಯಲಾಗಿದೆ. ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗುತ್ತದೆ. ತ್ಯಾಜ್ಯ ಸುಡುತ್ತಿರುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಬಿಬಿಎಂಪಿ ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ಶಶಿಕುಮಾರ್ ತಿಳಿಸಿದರು.

ಐಎಎಸ್ ಅಧಿಕಾರಿಗಳಿಗೆ ನೋಟಿಸ್: ವಿಚಾರಣೆ ಇಂದು

ಒಂದನೇ ಪುಟದಿಂದ...

'ಪ್ರಕರಣದಲ್ಲಿ ಬಂಧಿಸಲಾಗಿದ್ದ ಆರೋಪಿಗಳಿಂದ ಈಗಾಗಲೇ ಸಾಕಷ್ಟು ಮಾಹಿತಿ ಸಂಗ್ರಹಿಸಲಾಗಿದೆ. ಅದೇ ಮಾಹಿತಿ ಆಧರಿಸಿ ಪ್ರಶ್ನೆಗಳನ್ನು ಸಿದ್ಧಪಡಿಸಲಾಗಿದ್ದು, ಇವುಗಳಿಗೆ ಐಎಎಸ್ ಅಧಿಕಾರಿಗಳಿಂದ ಉತ್ತರ ಪಡೆಯಬೇಕಿದೆ. ಅವರು ಹೇಳಿಕೆ ನೀಡಿದ ನಂತರವೇ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದೂ ಹೇಳಿದರು.

ಅಮಾನತಾಗಿದ್ದ ಅಧಿಕಾರಿಗಳು ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಕರ್ತವ್ಯಲೋಪ ಎಸಗಿದ ಆರೋಪದಡಿ ಕೆ. ಶ್ರೀನಿವಾಸ್ ಮತ್ತು ಎಸ್. ರಂಗಪ್ಪ ಅವರನ್ನು ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಸೇವೆಯಿಂದ ಅಮಾನತುಗೊಳಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ನ. 26ರಂದು ಆದೇಶ ಹೊರಡಿಸಿತ್ತು.

ನಲ್ಲಿ ಸಂಪರ್ಕಕ್ಕೆ ನಿಯಮ ಸರಳ

ಬೆಂಗಳೂರು: ಬಿಬಿಎಂಪಿ ಹೊರತುಪಡಿಸಿ ರಾಜ್ಯದ ಎಲ್ಲ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ನಲ್ಲಿ ಸಂಪರ್ಕ ಪಡೆಯಲು ಪೌರಾಡಳಿತ ಇಲಾಖೆ ನಿಯಮಗಳನ್ನು ಸರಳೀಕರಿಸಿದ್ದು, ಅಗತ್ಯ ದಾಖಲೆಗಳು ಇಲ್ಲದಿದ್ದರೆ ಆಧಾರ್ ಕಾರ್ಡ್ ಮತ್ತು ನಷ್ಟ ಭರ್ತಿ ಮುಚ್ಚಳಿಕೆ ಪಡೆದುಕೊಂಡು ನಲ್ಲಿ ಸಂಪರ್ಕ ಕಲ್ಪಿಸಲಾಗುವುದು.

ಡಿ 1 ರಿಂದಲೇ ಅನ್ವಯವಾಗುವಂತೆ ಪೌರಾಡಳಿತ ಇಲಾಖೆ ಸುತ್ತೋಲೆಯೊಂದನ್ನು ಹೊರಡಿಸಿದೆ. ಈಗ ನಗರ ಸ್ಥಳೀಯ ಸಂಸ್ಥೆಗಳಿಂದ ಕುಡಿಯುವ ನೀರಿನ ನಲ್ಲಿ ಸಂಪರ್ಕ ನೀಡಲು ಹಲವಾರು ದಾಖಲೆಗಳನ್ನು ಸಲ್ಲಿಸಬೇಕು. ಅಲ್ಲದೇ, ನೀರಿನ ಸಂಪರ್ಕ ಒದಗಿಸುವ ಪ್ರಕ್ರಿಯೆಯೂ ಜಟಿಲವಾಗಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿದೆ ಎಂಬ ದೂರುಗಳು ಬಂದಿರುವುದರಿಂದ ನಿಯಮಗಳನ್ನು ಸಡಿಲಿಸಲಾಗಿದೆ.

ನಷ್ಟ ಭರ್ತಿ ಮುಚ್ಚಳಿಕೆಯನ್ನು (indemnity bond) ನಿಗದಿತ ನಮೂನೆಯಲ್ಲಿ ₹50ರ ನ್ಯಾಯೇತರ ಮುದ್ರಾಂಕ ಪತ್ರದಲ್ಲಿ ವಿಳಾಸದ ಪುರಾವೆಯೊಂದಿಗೆ (ಆಧಾರ್ ಕಾರ್ಡ್/ ಮತದಾರರ ಗುರುತಿನ ಚೀಟಿ/ ಬ್ಯಾಂಕ್ ಪಾಸ್‌ಬುಕ್/ ಪಾಸ್‌ಪೋರ್ಟ್/ಪಡಿತರ ಚೀಟಿ) ಇವುಗಳಲ್ಲಿ ಯಾವುದಾದರೊಂದನ್ನು ಲಗತ್ತಿಸಿ ಅರ್ಜಿ ಸಲ್ಲಿಸಬಹುದು ಎಂದು ಸುತ್ತೋಲೆ ಹೇಳಿದೆ.

ಒಂದು ವೇಳೆ ನಲ್ಲಿ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದ ಅರ್ಜಿದಾರ ಮನೆಯ ಮಾಲೀಕತ್ವ ಹೊಂದಿಲ್ಲದಿದ್ದರೂ ನಲ್ಲಿ ಸಂಪರ್ಕ ವಿಚಾರವಾಗಿ ನಗರ ಸ್ಥಳೀಯ ಸಂಸ್ಥೆಗೆ ನಷ್ಟವಾದರೆ ಅರ್ಜಿದಾರನೇ ಆ ನಷ್ಟವನ್ನು ಭರ್ತಿ ಮಾಡಿಕೊಡುವ ಸಂಬಂಧ ನಷ್ಟ ಭರ್ತಿ ಮುಚ್ಚಳಿಕೆ ಬರೆದು ಕೊಡಬೇಕು.

ಅಲ್ಲದೇ, ವಿವಾದದ ಕಾರಣದಿಂದ ಉಂಟಾದ ಹಾನಿಯನ್ನು ನಗರ ಸ್ಥಳೀಯ ಸಂಸ್ಥೆಗೆ ಭರಿಸಲು ವಿಫಲವಾದರೆ, ಅಂತಹ ಮೊಬಲಗನ್ನು ಕಟ್ಟಡದ ಅರ್ಜಿದಾರ/ ಮಾಲೀಕನನ್ನು ಜವಾಬ್ದಾರಿಯನ್ನಾಗಿ ಮಾಡಲಾಗುವುದು. ಭೂಕಂದಾಯ ಅಧಿನಿಯಮದಂತೆ ಭೂಕಂದಾಯ ಬಾಕಿ ರೂಪದಲ್ಲಿ ವಸೂಲು ಮಾಡಲು ಕ್ರಮವಹಿಸಲಾಗುವುದು ಎಂದು ಸುತ್ತೋಲೆ ವಿವರಿಸಿದೆ. ಸುತ್ತೋಲೆಯು ಕುಡಿಯುವ ನೀರಿನ ನಲ್ಲಿ ಸಂಪರ್ಕಕ್ಕೆ ಮಾತ್ರ ಅನ್ವಯಿಸುತ್ತದೆ. ಯಾವುದೇ ಸ್ವತ್ತಿನ ಹಕ್ಕು ಸ್ಥಾಪನೆ ಮತ್ತು ಅನಧಿಕೃತ ಕಟ್ಟಡಗಳ ಸಕ್ರಮಕ್ಕೆ ಅನ್ವಯಿಸುವುದಿಲ್ಲ ಎಂದಿದ್ದಾರೆ.

ಮತದಾರರ ಪಟ್ಟಿ: ಕಾಂಗ್ರೆಸ್‌ನಿಂದ ಅಭಿಯಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯಲ್ಲಿನ ವಿವರಗಳನ್ನು ಪರಿಶೀಲಿಸಲು ಅನುಕೂಲವಾಗುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕೆಪಿಸಿಸಿಯು ವಾಟ್ಸ್ ಆ್ಯಪ್ ಮೂಲಕ ಡಿಜಿಟಲ್ ಅಭಿಯಾನ ನಡೆಸಲಿದೆ.

'ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಭಾರಿ ಅಕ್ರಮ ನಡೆದಿದ್ದು, ಬೆಂಗಳೂರು ನಗರದಲ್ಲಿ 6.6 ಲಕ್ಷ ಮತದಾರರ ಹೆಸರನ್ನು ಪಟ್ಟಿಯಿಂದ ಕಿತ್ತುಹಾಕಿರುವ ಅನುಮಾನವಿದೆ. ಅಕ್ರಮ ಪತ್ತೆಯಾದ ಬಳಿಕ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಕೇಂದ್ರ ಚುನಾವಣಾ ಆಯೋಗವೇ ಜಾಗೃತಿ ಮೂಡಿಸುತ್ತಿದೆ. ವಾಟ್ಸ್ ಆ್ಯಪ್ ಮೂಲಕ 10 ಲಕ್ಷಕ್ಕೂ ಹೆಚ್ಚು ಜನರನ್ನು ತಲುಪಿ, ಮತದಾರರ ಪಟ್ಟಿಯಲ್ಲಿರುವ ಹೆಸರು ಮತ್ತು ವಿಳಾಸ ಸರಿ ಇದೆಯೆ? ಎಂಬುದನ್ನು ಪರಿಶೀಲಿಸಿಕೊಳ್ಳುವಂತೆ ಜಾಗೃತಿ ಮೂಡಿಸುವ ಗುರಿ ಹೊಂದಲಾಗಿದೆ' ಎಂದು ಕೆಪಿಸಿಸಿಯ ಅಧಿಕೃತ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಪ್ರಕಟಿಸಲಾಗಿದೆ.

ಕೇಂದ್ರ ಚುನಾವಣಾ ಆಯೋಗದ ಟೋಲ್ ಫ್ರೀ ದೂರವಾಣಿ ಸಂಖ್ಯೆ, ಮತದಾರರ ಪಟ್ಟಿಯನ್ನು ಪ್ರಕಟಿಸಿರುವ ವೆಬ್‌ಸೈಟ್ ವಿಳಾಸ ಮತ್ತಿತರ ವಿವರಗಳನ್ನು ಕೆಪಿಸಿಸಿ ಹೆಸರಿನ ವಾಟ್ಸ್ ಆ್ಯಪ್ ಖಾತೆಯ ಮೂಲಕ ಮತದಾರರ ಜತೆ ಹಂಚಿಕೊಳ್ಳಲಾಗುತ್ತದೆ. ಈ ಕುರಿತು ವಿಡಿಯೊ ತುಣುಕನ್ನೂ ಪಕ್ಷದ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ನೀಡಲಾಗಿದೆ.

'ಆದೇಶವಿಲ್ಲದಿದ್ದರೂ ಪ್ರೌಢಶಾಲಾ ಶಿಕ್ಷಕರ ಬಳಕೆ'

ಬೆಂಗಳೂರು: ಆದೇಶವಿಲ್ಲದಿದ್ದರೂ ಮತದಾರರ ಪಟ್ಟಿ ಪರಿಷ್ಕರಣೆ ಸೇರಿದಂತೆ ಚುನಾವಣಾ ಕಾರ್ಯಗಳಿಗೆ ಪ್ರೌಢಶಾಲಾ ಶಿಕ್ಷಕರನ್ನು ಬಳಸಿಕೊಳ್ಳುತ್ತಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಾರ್ಡ್‌ಗಳಲ್ಲಿ ಈಗಾಗಲೇ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯ ಆರಂಭವಾಗಿದ್ದು, ಮನೆಮನೆಗೆ ತೆರಳಿ ಮಾಹಿತಿ ಸಂಗ್ರಹಿಸಲು ಶಿಕ್ಷಕರನ್ನು ಬಳಸಿಕೊಳ್ಳಲಾಗುತ್ತಿದೆ. ಭಾರತ ಚುನಾವಣಾ ಆಯೋಗ ಅ.4ರಂದು ಪತ್ರ ಬರೆದು ಶಿಕ್ಷಕರನ್ನು ಬೂತ್‌ಮಟ್ಟದ ಅಧಿಕಾರಿಗಳಾಗಿ ನೇಮಿಸಿಕೊಳ್ಳುವಂತೆ ಸೂಚಿಸಿತ್ತು.

ಆಯೋಗದ ಸೂಚನೆಯಂತೆ ಬಿಬಿಎಂಪಿ ಚುನಾವಣಾ ಶಾಖೆಯ ವಿಶೇಷ ಆಯುಕ್ತರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಪತ್ರ ಬರೆದು, ಆಯೋಗದ ನಿರ್ದೇಶನದಂತೆ ಚುನಾವಣಾ ಕಾರ್ಯಕ್ಕೆ ಶಿಕ್ಷಕರನ್ನು ನಿಯೋಜಿಸುವಂತೆ ಕೋರಿದ್ದರು. ಈ ಕುರಿತು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಸಮ್ಮುಖದಲ್ಲಿ ಆಯುಕ್ತರು, ಡಿಡಿಪಿಐ, ಬಿಇಒಗಳ ಸಭೆ ನಡೆಸಲಾಗಿತ್ತು.

ಶಿಕ್ಷಣ ಇಲಾಖೆಯ ಆಯುಕ್ತರು ನ.30ರಂದು ಹೊರಡಿಸಿರುವ ಜ್ಞಾಪನಾ ಪತ್ರದಲ್ಲಿ ಚುನಾವಣಾ ಕಾರ್ಯಕ್ಕೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಬೇಕು. ನೇಮಕಗೊಂಡವರು ತಕ್ಷಣ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸೂಚಿಸಿದ್ದರು.

'ಚುನಾವಣಾ ಕಾರ್ಯಕ್ಕೆ ಪ್ರಾಥಮಿಕ ಶಾಲಾ ಶಿಕ್ಷಕರನ್ನು ನೇಮಿಸಿಕೊಳ್ಳುವಂತೆ ಶಿಕ್ಷಣ ಇಲಾಖೆ ಆಯುಕ್ತರ ಸ್ಪಷ್ಟ ಸೂಚನೆ ಇದ್ದರೂ, ಕೆಲವು ವಾರ್ಡ್‌ಗಳಲ್ಲಿ ಪ್ರೌಢಶಾಲಾ ಶಿಕ್ಷಕರೂ ಭಾಗವಹಿಸುವಂತೆ ಬಿಬಿಎಂಪಿ ಚುನಾವಣಾ ಶಾಖೆ ಒತ್ತಾಯಿಸುತ್ತಿದೆ. ನಿರಾಕರಿಸಿದವರನ್ನು ಬೆದರಿಸಲಾಗುತ್ತಿದೆ' ಎಂದು ಪ್ರೌಢಶಾಲೆಗಳ ಹಲವು ಶಿಕ್ಷಕರು ದೂರಿದ್ದಾರೆ.

'ಪ್ರೌಢಶಾಲಾ ಶಿಕ್ಷಕರನ್ನು ಚುನಾವಣಾ ಕಾರ್ಯಕ್ಕೆ ಬಳಸಿಕೊಳ್ಳಬೇಕು ಎಂಬ ಆದೇಶ ಇಲ್ಲದಿದ್ದರೂ, ಬಿಇಒ ಸೂಚನೆಯಂತೆ ನಮ್ಮ ಶಾಲೆಯಲ್ಲಿ ಮೂವರು ಶಿಕ್ಷಕರನ್ನು ಬಿಎಲ್‌ಒಗಳಾಗಿ ಕಳುಹಿಸಲಾಗಿದೆ. ಈಗ ಮತದಾರರ ನೋಂದಣಾಧಿಕಾರಿಗಳು ಮತ್ತೆ ಮೂವರನ್ನು ಕಳುಹಿಸುವಂತೆ ಸೂಚಿಸಿದ್ದಾರೆ. ಶಾಲೆಯಲ್ಲಿ 180 ಮಕ್ಕಳಿವೆ. ಆರು ಶಿಕ್ಷಕರು ಇದ್ದಾರೆ. ಎಲ್ಲರನ್ನೂ ಕಳುಹಿಸಿದರೆ ಒಂದು ತಿಂಗಳು ಶಾಲೆಯ ಬಾಗಿಲು ಮುಚ್ಚಬೇಕಾಗುತ್ತದೆ. ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ. ಕಳುಹಿಸದಿದ್ದರೆ ಸಮಸ್ಯೆ ಎದುರಿಸಬೇಕಾಗುತ್ತದೆ' ಎನ್ನುತ್ತಾರೆ ಯಶವಂತಪುರ ವಿಧಾನಸಭಾ ಕ್ಷೇತ್ರದ ಪ್ರೌಢಶಾಲೆಯೊಂದರ ಮುಖ್ಯ ಶಿಕ್ಷಕಿ.

ವಿಶೇಷ ಪರಿಷ್ಕರಣೆ: ವೇಳಾಪಟ್ಟಿ ಬದಲು

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಶಿವಾಜಿನಗರ, ಚಿಕ್ಕಪೇಟೆ, ಮಹದೇವಪುರ ವಿಧಾನಸಭೆ ಕ್ಷೇತ್ರಗಳ ಮತದಾರರ ಪಟ್ಟಿಯ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ ವೇಳಾಪಟ್ಟಿಯನ್ನು ಪರಿಷ್ಕರಿಸಿ ರಾಜ್ಯದ ಮುಖ್ಯ ಚುನಾವಣಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಪರಿಷ್ಕೃತ ವೇಳಾಪಟ್ಟಿ ಪ್ರಕಾರ ಆಕ್ಷೇಪಗಳನ್ನು ಡಿ.24ರ ವರೆಗೆ ಸಲ್ಲಿಸಬಹುದು. ಈ ಆಕ್ಷೇಪಣೆಗಳನ್ನು ಜ.6ರೊಳಗೆ ವಿಲೇವಾರಿ ಮಾಡಲಾಗುತ್ತದೆ. ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸುವ ಮುನ್ನ ಆಯೋಗದ ಅನುಮತಿಯನ್ನು ಪಡೆಯಬೇಕು. ಡೇಟಾಬೇಸ್ ನವೀಕರಣ ಮತ್ತು ಪೂರಕ ಪಟ್ಟಿ ಮುದ್ರಣವನ್ನು ಜ.13ರೊಳಗೆ ಪೂರೈಸಬೇಕು. ಅಂತಿಮ ಮತದಾರರ ಪಟ್ಟಿಯನ್ನು ಜ.15ರಂದು ಪ್ರಕಟಿಸಬೇಕು ಎಂದು ತಿಳಿಸಲಾಗಿದೆ.

ಚುನಾವಣೆ ಆಯೋಗದ ವೆಬ್‌ಸೈಟ್ www.ceokarnataka.gov.inನಲ್ಲಿ ಮತದಾರರು ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿದೆಯೇ, ಹೆಸರು ಸರಿಯಾಗಿ ನಮೂದಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬಹುದು. ಹೊಸದಾಗಿ ಹೆಸರು ಸೇರಿಸುವವರು ನಿಗದಿತ ನಮೂನೆಯಲ್ಲಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಬೇಕು ಎಂದು ತಿಳಿಸಲಾಗಿದೆ.

'ಸಾಮಾಜಿಕ ಕ್ರಾಂತಿ ಜನಸಾಮಾನ್ಯರ ಬದುಕಿಗೆ ಬೆಳಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲ್ಯಾಣ ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ನಡೆದ ಶರಣರ ಸಾಮಾಜಿಕ ಕ್ರಾಂತಿ ಜನಸಾಮಾನ್ಯರ ಬದುಕಿಗೆ ಬೆಳಕಾಯಿತು' ಎಂದು ಸಾಹಿತಿ ಆರ್.ಜಿ.ಹಳ್ಳಿ ನಾಗರಾಜ ಹೇಳಿದರು.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ಲಿಂಗಾಯತ ಬಳಗದ ತಿಂಗಳ ಉಪನ್ಯಾಸ ಕಾರ್ಯಕ್ರಮದಲ್ಲಿ 'ವಚನಗಳು ಹಾಗೂ ಸಾಮಾಜಿಕ ಬದಲಾವಣೆ' ಎಂಬ ವಿಷಯದ ಕುರಿತು ಅವರು ಮಾತನಾಡಿದರು.

'ಬಹುಮುಖ ಪ್ರತಿಭೆಯ ಶರಣ–ಶರಣೆಯರು ತಮ್ಮ ಕಾಯಕ, ದಾಸೋಹಕ್ಕೆ ಮಹತ್ವ ಕೊಟ್ಟಿದ್ದರು. ನುಡಿದಂತೆ ನಡೆದು ಆರೋಗ್ಯಕರ ಸಮಾಜದ ನಿರ್ಮಾಣಕ್ಕೆ ಒತ್ತು ನೀಡಿದ್ದರು' ಎಂದರು.

ಎಂ.ಕ್ಯೂ.ಐ. ಕಾಲೇಜ್ ಆಫ್ ಮ್ಯಾನೇಜ್‌ಮೆಂಟ್ ನಿರ್ದೇಶಕ ವಿ. ಪ್ರಭುದೇವ, ಜಾನಪದ ಅಕಾಡೆಮಿ ಮಾಜಿ ರಿಜಿಸ್ಟ್ರಾರ್ ಬಿ.ಎನ್. ಪರಡ್ಡಿ, ಗಣಕತಜ್ಞರಾದ ಸದಾನಂದಮೂರ್ತಿ, ಅರವಿಂದ್, ವಚನಜ್ಯೋತಿ ಬಳಗದ ಪಿನಾಕಪಾಣಿ ಇದ್ದರು.

ಮಣಿಪಾಲ್: ಡಯಾಲಿಸಿಸ್ ಘಟಕಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯಲ್ಲಿ ನಿರ್ಮಿಸಲಾಗಿರುವ 38 ಹಾಸಿಗೆಗಳ ಅತ್ಯಾಧುನಿಕ ಡಯಾಲಿಸಿಸ್ ಘಟಕಕ್ಕೆ ಶುಕ್ರವಾರ ಚಾಲನೆ ದೊರೆಯಿತು.

ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಲನಚಿತ್ರ ನಟಿ ಸಪ್ತಮಿ ಗೌಡ ಅವರು ಘಟಕವನ್ನು ಉದ್ಘಾಟಿಸಿ, ಮಾತನಾಡಿದರು. 'ಈ ಹಿಂದೆ ಮೂತ್ರಪಿಂಡ ಸಮಸ್ಯೆಗೆ ಒಳಗಾದವರು ಅನೇಕ ತೊಂದರೆಗಳನ್ನು ಎದುರಿಸುತ್ತಿದ್ದರು. ಈಗ ತಂತ್ರಜ್ಞಾನದ ನೆರವಿನಿಂದ ಚಿಕಿತ್ಸೆ ಸುಲಭವಾಗಿದೆ. ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿರುವವರು ಡಯಾಲಿಸಿಸ್‌ಗೆ ಕಾಯುವುದನ್ನು ತಪ್ಪಿಸಲು ಈ ಘಟಕ ಸಹಕಾರಿಯಾಗಲಿದೆ' ಎಂದು ಹೇಳಿದರು.

ಮಣಿಪಾಲ್ ಆಸ್ಪತ್ರೆಯ ಅಧ್ಯಕ್ಷ ಡಾ. ಸುದರ್ಶನ್ ಬಲ್ಲಾಳ್, 'ಆಸ್ಪತ್ರೆಯಲ್ಲಿ ಪ್ರತಿನಿತ್ಯ ಸುಮಾರು 140 ರೋಗಿಗಳು ಡಯಾಲಿಸಿಸ್‌ಗೆ ಒಳಗಾಗುತ್ತಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮೂತ್ರಪಿಂಡ ವೈಫಲ್ಯದಿಂದ ಬಳಲುತ್ತಿರುವವರ ಸಂಖ್ಯೆ ಅಧಿಕವಾಗುತ್ತಿದೆ. ದೇಶದಲ್ಲಿ ಪ್ರತಿವರ್ಷ ಶೇ 10ರಷ್ಟು ಮಂದಿ ಮೂತ್ರಪಿಂಡ ವೈಫಲ್ಯಕ್ಕೆ ಒಳಪಡುತ್ತಿದ್ದಾರೆ. ಮೂತ್ರಪಿಂಡ ಸಮಸ್ಯೆ ಎದುರಿಸುತ್ತಿರುವವರಲ್ಲಿ ಶೇ 90ರಷ್ಟು ಮಂದಿ ಸರಿಯಾದ ಚಿಕಿತ್ಸೆ ಸಿಗದೆಯೇ ಮೃತಪಡುತ್ತಿದ್ದಾರೆ' ಎಂದು ತಿಳಿಸಿದರು.

'ಮೂತ್ರಪಿಂಡ ಸಮಸ್ಯೆ ಇರುವವರಿಗೆ ವಾರಕ್ಕೆ ಮೂರು ಸಲ ಡಯಾಲಿಸಿಸ್ ಮಾಡಬೇಕಾಗುತ್ತದೆ. ಮಧುಮೇಹದಿಂದ ಬಳಲುತ್ತಿರುವವರು ಅಧಿಕ ಸಂಖ್ಯೆಯಲ್ಲಿ ಮೂತ್ರಪಿಂಡ ವೈಫಲ್ಯಕ್ಕೆ ಒಳಗಾಗುತ್ತಿದ್ದಾರೆ. ಆದ್ದರಿಂದ ಮಧುಮೇಹದ ಬಗ್ಗೆ ಎಚ್ಚರ ವಹಿಸಬೇಕು. ಧೂಮಪಾನ ಸೇರಿ ವಿವಿಧ ವ್ಯಸನದಿಂದ ದೂರ ಉಳಿಯಬೇಕು' ಎಂದು ಹೇಳಿದರು.

ಡಯಾಲಿಸಿಸ್ ಘಟಕವನ್ನು ಸಪ್ತಮಿ ಗೌಡ ಉದ್ಘಾಟಿಸಿದರು. ಆಸ್ಪತ್ರೆ ನಿರ್ದೇಶಕ ಡಾ. ಮನೀಶ್ ರೈ ಹಾಗೂ ಡಾ. ಸುದರ್ಶನ್ ಬಲ್ಲಾಳ್ ಇದ್ದಾರೆ.

ಮುಖ್ಯಾಂಶಗಳು

- ಘಟಕದಲ್ಲಿ 38 ಹಾಸಿಗೆಗಳ ಸೌಲಭ್ಯ
- ಪ್ರತಿದಿನ 140 ರೋಗಿಗಳಿಗೆ ಚಿಕಿತ್ಸೆ
- ಸರಿಯಾದ ಚಿಕಿತ್ಸೆ ಸಿಗದೆ ಶೇ 90 ಮಂದಿ ಸಾವು

ಕುಟುಂಬ ವ್ಯವಸ್ಥೆ ರಕ್ಷಣೆ: ತೇಜಸ್ವಿ ಪ್ರತಿಪಾದನೆ

ನವದೆಹಲಿ (ಪಿಟಿಐ): 'ಬಿ.ಆರ್. ಅಂಬೇಡ್ಕರ್ ಮತ್ತು ಸಾವರ್ಕರ್ ಪರಸ್ಪರ ವಿರೋಧಿಗಳಾಗಿರಲಿಲ್ಲ. ಇಬ್ಬರೂ ಹುಟ್ಟು ಆಧರಿತ ತಾರತಮ್ಯವನ್ನು ವಿರೋಧಿಸಿದವರು. ಕೈಗಾರೀಕರಣದ ಪರವಾಗಿದ್ದವರು' ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ.

'ಹಿಂದುತ್ವ: ಮೂಲ, ವಿಕಾಸ ಮತ್ತು ಭವಿಷ್ಯ' ವಿಷಯ ಕುರಿತು ಅರವಿಂದನ್ ನೀಲಕಂದನ್ ಆಯೋಜಿಸಿದ್ದ ಸಂವಾದದಲ್ಲಿ ಭಾಗವಹಿಸಿದ್ದ ಅವರು, ಪೀಳಿಗೆಗಳಿಗೆ ಸಂಸ್ಕೃತಿ ಮತ್ತು ಭಾಷೆಯನ್ನು ದಾಟಿಸುವ ಕುಟುಂಬ ವ್ಯವಸ್ಥೆಯನ್ನು ರಕ್ಷಿಸುವುದು ಅಗತ್ಯ ಎಂದು ಹೇಳಿದರು.

ಅಂಬೇಡ್ಕರ್–ಸಾವರ್ಕರ್ ಚರ್ಚೆ ಕುರಿತ ಪ್ರಶ್ನೆಗೆ, ಜಾತಿ ವ್ಯವಸ್ಥೆ ಕುರಿತಂತೆ ಇಬ್ಬರೂ ಒಂದೇ ನಿಲುವು ತಳೆದಿದ್ದರು. ಹುಟ್ಟು ಆಧರಿಸಿ ತಾರತಮ್ಯ ಸಲ್ಲದು ಎಂದೇ ಇಬ್ಬರೂ ಪ್ರತಿಪಾದಿಸಿದ್ದರು ಎಂದು ಹೇಳಿದರು.

ಆರ್ಥಿಕತೆ ವಿಷಯದಲ್ಲಿ ಸಾವರ್ಕರ್ ಮತ್ತು ಅಂಬೇಡ್ಕರ್ ಇಬ್ಬರೂ ಕೈಗಾರೀಕರಣದ ಪರವಾಗಿಯೇ ಇದ್ದರು. ಹಿಂದೂ ಸಮಾಜದಲ್ಲಿ ಆಧುನೀಕತೆ ತರಲು ಇದು ಅಸ್ತ್ರವಾಗಲಿದೆ ಎಂಬುದಾಗಿ ಹೇಳಿದ್ದರು ಎಂದರು.

'ಬಡ ಮಕ್ಕಳ ಭವಿಷ್ಯಕ್ಕೆ ಚಪ್ಪಡಿ ಎಳೆದ ಕೇಂದ್ರ'

ಬೆಂಗಳೂರು: ಅದಾನಿ ಸೇರಿದಂತೆ ಕಾರ್ಪೊರೇಟ್ ಉದ್ಯಮಿಗಳ ಲಕ್ಷಾಂತರ ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡುತ್ತಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ, ವಿದ್ಯಾರ್ಥಿವೇತನ ರದ್ದುಗೊಳಿಸುವ ಮೂಲಕ ಬಡ ಮಕ್ಕಳ ಭವಿಷ್ಯದ ಮೇಲೆ ಚಪ್ಪಡಿ ಎಳೆಯುತ್ತಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಹೇಳಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಮೋದಿ ನೇತೃತ್ವದ ಸರ್ಕಾರವು ಐದು ವರ್ಷಗಳ ಅವಧಿಯಲ್ಲಿ ಶ್ರೀಮಂತರ ₹ 10 ಲಕ್ಷ ಕೋಟಿ ಸಾಲವನ್ನು ಮನ್ನಾ ಮಾಡಿದೆ. ಆದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತ ಮಕ್ಕಳ ವಿದ್ಯಾರ್ಥಿ ವೇತನವನ್ನು ಸ್ಥಗಿತಗೊಳಿಸಿದೆ. ಇದು ಬಡವರ ಪರವಾದ ಸರ್ಕಾರವಲ್ಲ, ಕಾರ್ಪೊರೇಟ್ ಉದ್ಯಮಗಳಿಗಾಗಿ ಇರುವ ವ್ಯವಸ್ಥೆ' ಎಂದರು.

ಕೇಂದ್ರ ಸರ್ಕಾರದ ನಿರ್ಧಾರ ಅತ್ಯಂತ ಅಪಾಯಕಾರಿಯಾಗಿದೆ. ದೇಶದ 22.56 ಕೋಟಿ ಮಕ್ಕಳು ಶಾಲೆಗಳಲ್ಲಿ ಕಲಿಯುತ್ತಿದ್ದಾರೆ. ವಿದ್ಯಾರ್ಥಿ ವೇತನದ ಮೂಲಕ ಅವರ ಶಿಕ್ಷಣಕ್ಕೆ ನೆರವು ನೀಡುವ ಯೋಜನೆಯನ್ನು ಸ್ಥಗಿತಗೊಳಿಸಿರುವುದು ಖಂಡನೀಯ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಮಾತನಾಡಿ, 'ಆರ್‌ಎಸ್‌ಎಸ್ ಕಾರ್ಯಸೂಚಿಯ ಭಾಗವಾಗಿ ವಿದ್ಯಾರ್ಥಿವೇತನ ರದ್ದುಗೊಳಿಸಲಾಗಿದೆ. ಇದು ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾದ ತೀರ್ಮಾನ' ಎಂದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಪ್ರಕಾಶ್ ರಾಥೋಡ್, ಪಕ್ಷದ ಮುಖಂಡ ಎಂ. ರಾಮಚಂದ್ರಪ್ಪ ಇದ್ದರು.

ಧನಸಹಾಯ: ಹಾಲಿ ಮಾರ್ಗಸೂಚಿ ರದ್ದತಿಗೆ ಆಗ್ರಹ

ಬೆಂಗಳೂರು: 'ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ಧನಸಹಾಯ ಒದಗಿಸುವ ಹಾಲಿ ಮಾರ್ಗಸೂಚಿಯನ್ನು ರದ್ದುಪಡಿಸಿ, ಈ ಹಿಂದಿನಂತೆ ಮುಂಚಿತವಾಗಿ ಅನುದಾನ ಒದಗಿಸಬೇಕು' ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ರಾಜ್ಯ ಕಲಾವಿದರ ಒಕ್ಕೂಟ ಆಗ್ರಹಿಸಿದೆ.

ಒಕ್ಕೂಟದ ಪರವಾಗಿ ಕಲಾವಿದ ಜಯಸಿಂಹ ಎಸ್. ಅವರು ಇಲಾಖೆ ನಿರ್ದೇಶಕ ಪ್ರಕಾಶ್ ನಿಟ್ಟಾಲಿ ಅವರಿಗೆ ಮನವಿ ಸಲ್ಲಿಸಿದರು. 'ಡಿಸೆಂಬರ್ ಅಂತ್ಯದೊಳಗೆ 3 ಕಾರ್ಯಕ್ರಮ ಆಯೋಜಿಸಿ, ವರದಿ ಸಲ್ಲಿಸಬೇಕೆನ್ನುವುದು ಅವೈಜ್ಞಾನಿಕ. ಸಂಘ–ಸಂಸ್ಥೆಗಳ ಪದಾಧಿಕಾರಿಗಳಲ್ಲಿ ಬಹುತೇಕರು ಬಡವರಾಗಿದ್ದು, ಜೀವನ ನಿರ್ವಹಣೆಯೂ ಕಷ್ಟವಾಗಿದೆ. ಅವರ ನೆರವಿಗೆ ಬರಬೇಕಾದ ಸರ್ಕಾರ, ಸಂಕಷ್ಟಕ್ಕೆ ನೂಕುತ್ತಿರುವುದು ವಿಪರ್ಯಾಸ' ಎಂದು ಹೇಳಲಾಗಿದೆ.

'ಸೇವಾಸಿಂಧು ಪೋರ್ಟಲ್‌ನಲ್ಲಿ ಮತ್ತೊಮ್ಮೆ ದಾಖಲಾತಿಗಳನ್ನು ಸಲ್ಲಿಸಲು ಸೂಚಿಸಿರುವುದರಿಂದ ಕಲಾವಿದರು ಗೊಂದಲಕ್ಕೆ ಒಳಗಾಗಿದ್ದಾರೆ. ಸ್ವಂತ ಹಣದಲ್ಲಿ ಕಾರ್ಯಕ್ರಮ ನಡೆಸಿ, ದಾಖಲಾತಿ ಸಲ್ಲಿಸಿದರೂ ಅನುದಾನ ಬರುತ್ತದೆ ಎಂಬ ಖಚಿತತೆ ಇಲ್ಲವಾಗಿದೆ. ಕೆಲವು ಪ್ರಭಾವಿ ಸಂಘ–ಸಂಸ್ಥೆಗಳು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸದೆಯೇ ಅನುದಾನ ಪಡೆದಿವೆ' ಎಂದು ಆರೋಪಿಸಲಾಗಿದೆ.

'ನಾಡಿನ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಪ್ರೋತ್ಸಾಹಿಸುತ್ತಿರುವ ಸಂಘ–ಸಂಸ್ಥೆಗಳನ್ನು ಸರ್ಕಾರ ಪ್ರೋತ್ಸಾಹಿಸಬೇಕು. ₹ 2 ಲಕ್ಷದ ಮಿತಿಯನ್ನು ಸಡಿಲಿಸಿ, ಕಾರ್ಯಚಟುವಟಿಕೆ ಅನುಸಾರ ಅನುದಾನ ಒದಗಿಸಬೇಕು' ಎಂದು ಮನವಿ ಪತ್ರದಲ್ಲಿ ತಿಳಿಸಲಾಗಿದೆ.

ನಗರದಲ್ಲಿ ಇಂದು

ಉಚಿತ ಆರೋಗ್ಯ ಮತ್ತು ರಕ್ತದಾನ ಶಿಬಿರ: ಅತಿಥಿಗಳು: ಎಂ. ಮುರಳೀಧರ ಹೆಗ್ಡೆ, ಆನಂದರಾಮ ಶೆಟ್ಟಿ ಬಿ., ಕೆ. ನಿರಂಜನ ಶೆಟ್ಟಿ, ಸುದೀಪ್ ನಾಯಕ್, ಚರಣ್‌ರಾಜ್ ಶೆಟ್ಟಿ, ಸಬನ್ ಶೆಟ್ಟಿ ಗುಡಿಬೆಟ್ಟು, ಆಯೋಜನೆ ಮತ್ತು ಸ್ಥಳ: ಬಂಟರ ಸಂಘದ ಆವರಣ, ವಿಜಯನಗರ, ಬೆಳಿಗ್ಗೆ 7

ವಿಶ್ವ ಅಂಗವಿಕಲರ ದಿನಾಚರಣೆ: ಉದ್ಘಾಟನೆ: ಸದಾನಂದಗೌಡ, ಪಾಲ್ ಮುದ್ದಾ, ಆಯೋಜನೆ: ಸ್ನೇಹದೀಪ್ ಟ್ರಸ್ಟ್ ಫಾರ್ ದಿ ಡಿಸೇಬಲ್ಡ್, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 9

ಗೀತಾ ಜಯಂತಿ ಸಂಭ್ರಮ: ಅತಿಥಿಗಳು: ಬಿ.ವಿ. ಶಶಿರೇಖಾ, ಎ.ಎಚ್. ರಾಮರಾವ್, ಆಯೋಜನೆ: ದಿ ನ್ಯಾಷನಲ್ ಎಜುಕೇಷನ್ ಸೊಸೈಟಿ, ಸ್ಥಳ: ಗೋಪಾಲಸ್ವಾಮಿ ಅಯ್ಯಂಗಾರ್, ಕೆ. ಸಂಪತ್‌ಗಿರಿ ರಾವ್ ಸಭಾಂಗಣ, ನ್ಯಾಷನಲ್ ಹೈಸ್ಕೂಲ್, ಕೆ.ಆರ್. ರಸ್ತೆ, ಬಸವನಗುಡಿ, ಬೆಳಿಗ್ಗೆ 9.30

ಗೀತಾ ಜಯಂತಿ: 'ಗೀತಾ ಪಾರಾಯಣ' ಮಹಾಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಆಯೋಜನೆ: ಗೀತಾ ಮಂದಿರ ಟ್ರಸ್ಟ್, ಶ್ರೀರಾಮಪುರ, ಬೆಳಿಗ್ಗೆ 10

ಕಪ್ಪಣ್ಣ 75 ಸಂಸ್ಕೃತಿ ಸಂಭ್ರಮ, ಬಿ.ಜೆ. ಪಾರ್ವತಿ ವಿ. ಸೋನಾರೆ ಅವರ 'ಅಪ್ಪನೊಳಗೊಬ್ಬ ಅವ್ವ' ಪುಸ್ತಕ ಬಿಡುಗಡೆ: ಎಲ್. ಹನುಮಂತಯ್ಯ, ಕೃತಿ ಪರಿಚಯ: ನಾ.ದಾಮೋದರ ಶೆಟ್ಟಿ, ಅತಿಥಿಗಳು: ಪ್ರಕಾಶ್ ಅಂಗಡಿ, ಸೌಮ್ಯ ಚೇತನ್, ಉಪಸ್ಥಿತಿ: ಎಚ್.ಎಂ. ಶಿವಕುಮಾರ್, ಅಧ್ಯಕ್ಷತೆ: ಎಚ್.ಎಲ್. ಪುಷ್ಪಾ, ಆಯೋಜನೆ ಮತ್ತು ಸ್ಥಳ: ಕಪ್ಪಣ್ಣ ಅಂಗಳ, ಐಟಿಐ ಕಾಲೊನಿ, ಜೆ.ಪಿ. ನಗರ, ಬೆಳಿಗ್ಗೆ 10.30

ವಿಶ್ವ ಅಂಗವಿಕಲರ ದಿನಾಚರಣೆ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಉಪಸ್ಥಿತಿ: ಹಾಲಪ್ಪ ಆಚಾರ್, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ಅಂಗವಿಕಲರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ, ಸ್ಥಳ: ಕಂಠೀರವ ಒಳಾಂಗಣ ಕ್ರೀಡಾಂಗಣ, ಮ್ಯೂಸಿಯಂ ರಸ್ತೆ, ಬೆಳಿಗ್ಗೆ 11

ಗೀತಾ ಜಯಂತಿ ಅಂಗವಾಗಿ 'ಗೀತಾದಾನ ಯಜ್ಞ': ಅತಿಥಿಗಳು: ರಾಜನಾಥ್ ಸಿಂಗ್, ಬಸವರಾಜ ಬೊಮ್ಮಾಯಿ, ಬಿ.ಎಸ್. ಯಡಿಯೂರಪ್ಪ, ಆರ್. ಅಶೋಕ, ಡಾ. ಕೆ. ಸುಧಾಕರ್, ವಿದ್ಯಾಭೂಷಣ, ತೇಜಸ್ವಿ ಸೂರ್ಯ, ಎಂ. ಕೃಷ್ಣಪ್ಪ, ಆಯೋಜನೆ ಮತ್ತು ಸ್ಥಳ: ಇಸ್ಕಾನ್ ರಾಜಾಧಿರಾಜಾ ಗೋವಿಂದ ದೇವಸ್ಥಾನ, ವೈಕುಂಠ ಹಿಲ್, ವಸಂತಪುರ, ಬೆಳಿಗ್ಗೆ 11.30

ಅಂಗವಿಕಲರ ದಿನ ಅಂಗವಾಗಿ ಬುದ್ಧಿಮಾಂದ್ಯ ಮಕ್ಕಳ ವಿಚಾರಗೋಷ್ಠಿ: ಅತಿಥಿಗಳು: ವೈ.ಎಸ್.ಆರ್. ಮೂರ್ತಿ, ಆಯೋಜನೆ ಮತ್ತು ಸ್ಥಳ: ದಿ ಅಸೋಸಿಯೇಷನ್ ಫಾರ್ ದಿ ಮೆಂಟಲಿ ಚಾಲೆಂಜ್ಡ್ (ಎಎಂಸಿ), ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ ಹತ್ತಿರ, ಹೊಸೂರು ರಸ್ತೆ, ಬೆಳಿಗ್ಗೆ 11

ಶಿವಾನಂದ ಬೇಕಲ್ ಅವರು ಬರೆದ ಜಸ್ಟೀಸ್ ಶಿವರಾಜ. ವಿ. ಪಾಟೀಲ್ ಅವರ ಜತೆಗಿನ ಸಂದರ್ಶನಗಳನ್ನಾಧರಿಸಿದ 'ಸುಪ್ರೀಂ ಸೋಲ್' ಪುಸ್ತಕ ಬಿಡುಗಡೆ: ಎಂ. ವೀರಪ್ಪ ಮೊಯಿಲಿ, ಅಧ್ಯಕ್ಷತೆ: ಶಿವರಾಜ.ವಿ. ಪಾಟೀಲ್, ಉಪಸ್ಥಿತಿ: ಡಾ.ಶರಣ್.ಎಸ್. ಪಾಟೀಲ್, ಶಿವಾನಂದ ಬೇಕಲ್, ಸ್ಥಳ: ಸ್ಪರ್ಶ್ ಆಸ್ಪತ್ರೆ ಸಭಾಂಗಣ, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 11

ಜನುಮ ಜನುಮದ ಅನುಬಂಧ: ಉದ್ಘಾಟನೆ: ನಾಗಲಕ್ಷ್ಮೀ ಪುಟ್ಟಣ್ಣ ಕಣಗಾಲ, ಅಧ್ಯಕ್ಷತೆ: ಮಹೇಶ ಜೋಷಿ, ಅತಿಥಿಗಳು: ಶ್ರೀನಾಥ್,ಬಸವರಾಜ್, ಬಾ.ಮಾ. ಹರೀಶ್, ಅಶೋಕ ಕಶ್ಯಪ್, ಪದ್ಮಾ ವಾಸಂತಿ, ಶ್ರೀಧರ್, ಎನ್.ಆರ್. ನಂಜುಂಡೇಗೌಡ, ರೇಖಾರಾವ್, ಪ್ರಗತಿ ಅಶ್ವತ್ಥನಾರಾಯಣ್, ಶಿವಾನಂದ ತಗಡೂರು, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು ಮತ್ತು ಪಟ್ಟಣ್ಣ ಕಣಗಾಲ್ ಪ್ರತಿಷ್ಠಾನ ಟ್ರಸ್ಟ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಸಂಜೆ 4.30

ಶ್ರೀನಾಥ್

ವೈಟ್‌ಫೀಲ್ಡ್ ಮ್ಯೂಸಿಕ್ ಫೆಸ್ಟಿವೆಲ್–2022: ಕರ್ನಾಟಕ ಸಂಗೀತ ಜುಗಲ್‌ಬಂದಿ: ಶಹನಾಯಿ: ಲೋಕೇಶ್ ಆನಂದ್, ನಾದಸ್ವರ: ನೆಮ್ಮರ್ ಎನ್.ಆರ್. ಕಣ್ಣನ್, ತಬಲಾ: ಇಶಾನ್ ಘೋಷ್, ತವಿಲ್: ತಾರಾಪುರಂ. ವಿ.ಎಂ. ಗಣೇಶ್, ಕಥನ ನೃತ್ಯ ಪ್ರದರ್ಶನ: ರಾಜೇಂದ್ರ ಕುಮಾರ್ ಗಂಗಣಿ, ಗಾಯನ: ಮನೋಜ್ ದೇಸಾಯಿ, ತಬಲಾ: ಫತ್ತೇ ಸಿಂಗ್, ಸಾರಂಗಿ: ಮುರಾದ್ ಅಲಿ ಖಾನ್, ಆಯೋಜನೆ: ಆನಂದ ಧ್ವನಿ, ಸ್ಥಳ: ಇನ್ನರ್ ಸರ್ಕಲ್ ಗ್ರೌಂಡ್, ವೈಟ್‌ಫೀಲ್ಡ್, ಸಂಜೆ 5ರಿಂದ

ನೂರ್ ಅಹಮದ್ ಅಲಿ ಖಾನ್ ಸ್ಮಾರಕ ದತ್ತಿ ಉಪನ್ಯಾಸ: ವಿಷಯ: ವರ್ತಮಾನ ಯುಗಕ್ಕೆ ಗುರೂಜಿ ಚಿಂತನೆಗಳ ಪ್ರಸ್ತುತತೆ, ಉಪನ್ಯಾಸಕರು: ಮುಕುಂದ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿಯ ಶತಮಾನೋತ್ಸವ ಸಭಾಂಗಣ, ನೃಪತುಂಗ ರಸ್ತೆ, ಸಂಜೆ 6

ಸದ್ಗುರು ಬಾಬು ಅವರ 'ಗಗನಕೊಂದು ಕಾವ್ಯ ಗುಚ್ಛ' ಕವನ ಸಂಕಲನ ಬಿಡುಗಡೆ: ಉದ್ಘಾಟನೆ: ಎಂ.ಎಸ್. ವೆಂಕಟೇಶ್, ಕವನ ಸಂಕಲನ ಬಿಡುಗಡೆ: ದೊಡ್ಡರಂಗೇಗೌಡ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಅತಿಥಿಗಳು: ಜಿ.ರಶ್ಮಿ, ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಪರಂಪರಾ, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಸಂಜೆ 6



ಬೈ ಟು ಕಾಫಿ

ಬಡಾವಣೆ ರಂಗೋತ್ಸವ: ಉದ್ಘಾಟನೆ: ಶ್ರೀನಿವಾಸ್, ಅಭಿಷೇಕ್ ಅಯ್ಯಂಗಾರ್, 'ಬೈ ಟು ಕಾಫಿ' ನಾಟಕ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ವ್ಯೋಮ್ ಥಿಯೇಟರ್, 8ನೇ ಮುಖ್ಯರಸ್ತೆ, ಜೆ.ಪಿ. ನಗರ, 3ನೇ ಹಂತ, ಲೆನೆಸ್ ಆಸ್ಪತ್ರೆ, ಸಂಜೆ 7

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಶೋಬನಾ, ಆಯೋಜನೆ: ರತ್ನಾಲಯ ಫೌಂಡೇಷನ್, ಸ್ಥಳ: ನೆಕ್ಸಸ್ ಶಾಂತಿನಿಕೇತನ ಮಾಲ್ ಐಟಿಪಿಎಲ್ ಮುಖ್ಯರಸ್ತೆ, ವೈಟ್‌ಫೀಲ್ಡ್, ಸಂಜೆ 7

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಭರವಸೆ

ಅಲೆಮಾರಿ ಅಭಿವೃದ್ಧಿ ನಿಗಮ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲೆಮಾರಿ ಹಾಗೂ ಅರೆ ಅಲೆಮಾರಿಗಳ ಅಭಿವೃದ್ಧಿಗಾಗಿ ಶೀಘ್ರ ಅಲೆಮಾರಿ ಅಭಿವೃದ್ಧಿ ನಿಗಮ ಸ್ಥಾಪಿಸಲಾಗುವುದು ಎಂದು ಸಮಾಜಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಕರ್ನಾಟಕ ರಾಜ್ಯ ಅಲೆಮಾರಿ ಹಾಗೂ ಅರೆ ಅಲೆಮಾರಿ ಮತ್ತು ವಿಮುಕ್ತ ಬುಡಕಟ್ಟುಗಳ ಒಕ್ಕೂಟ, ಚೆನ್ನದಾಸರ ಕ್ಷೇಮಾಭಿವೃದ್ಧಿ ಸಂಘ ಶುಕ್ರವಾರ ಹಮ್ಮಿಕೊಂಡಿದ್ದ ಅಲೆಮಾರಿ ಸಮುದಾಯಗಳ ಅಭಿವೃದ್ಧಿಗೆ ಶ್ರಮಿಸಿದ ಭಾಸ್ಕರದಾಸ್ ಎಕ್ಕಾರು ಅವರ ನೆನಪಿನ ಯಾತ್ರೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭಾಸ್ಕರದಾಸ್ ಅವರ ಹೋರಾಟ, ದೂರದೃಷ್ಟಿಯ ಫಲವಾಗಿ ಕೇಂದ್ರ ಸರ್ಕಾರ ದೇಶದ ಅಲೆಮಾರಿಗಳ ಅಭಿವೃದ್ಧಿ, ಶಿಕ್ಷಣ, ವಸತಿಗೆ ₹ 2 ಸಾವಿರ ಕೋಟಿ ನೀಡಿದೆ. ರಾಜ್ಯದಲ್ಲೂ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಮೊದಲು ಪ್ರತಿಷ್ಠಿತ ಶಾಲೆಗಳ ಪ್ರವೇಶ ಸ್ಥಿತಿವಂತರ ಪಾಲಾಗುತ್ತಿದ್ದವು. ಈ ವರ್ಷದಿಂದ ಪ್ರವೇಶ ನೀಡುವಾಗ ಅಲೆಮಾರಿ, ಬುಡಕಟ್ಟು, ಪೌರಕಾರ್ಮಿಕರು, ಸ್ಮಶಾನದಲ್ಲಿ ಕೆಲಸ ಮಾಡುವವರ ಮಕ್ಕಳಿಗೆ ಮೊದಲ ಪ್ರಾಶಸ್ತ್ಯ ನೀಡಲು ಸೂಚಿಸಲಾಗಿದೆ ಎಂದು ವಿವರ ನೀಡಿದರು.

ರಾಜ್ಯದ ಬಡವರಿಗೆ 10 ಸಾವಿರ ಮನೆಗಳನ್ನು 15 ದಿನಗಳ ಒಳಗೆ ವಿತರಿಸಲಾಗುವುದು. ಭಾಸ್ಕರರಾವ್ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಲಾಗುವುದು, ಬುಡ್ಗ ಜಂಗಮ, ದಕ್ಕಲಿಗರು, ಹಂದಿಗೊಲ್ಲರು, ಹರಿಣಿಶಿಕಾರಿ ಮತ್ತಿತರ ಬುಡಕಟ್ಟು ಜನರ ಅಭಿವೃದ್ಧಿಗೆ ಶ್ರಮಿಸಲಾಗುವುದು. ಆ ಸಮುದಾಯದ ಮಕ್ಕಳಿಗೆ ಮೊದಲೇ ಶಿಕ್ಷಣ ದೊರಕಿದ್ದರೆ ಇಂದು ಐಎಎಸ್ ಅಧಿಕಾರಿಗಳಾಗಿ ವಿಧಾನಸೌಧದಲ್ಲಿ ಇರುತ್ತಿದ್ದರು ಎಂದರು.

'ಅಲೆಮಾರಿ ಸಮುದಾಯದ ರಾಷ್ಟ್ರೀಯ ಆಯೋಗದ ಮಾಜಿ ಅಧ್ಯಕ್ಷ ಭೀಕೂ ರಾಮಜಿ ಇದಾತೆ, ದೇಶದ ಪ್ರಾಚೀನ ದೇಗುಲಗಳು, ಸ್ಮಾರಕಗಳು, ಭವ್ಯ ಕಟ್ಟಡಗಳ ನಿರ್ಮಾತೃಗಳೇ ಅಲೆಮಾರಿ ಸಮುದಾಯ. ಅಂತಹ ಸಮುದಾಯವನ್ನು ಅಪರಾಧ ಹಿನ್ನೆಲೆಯಿಂದ ನೋಡುವ ಪರಿಪಾಟವಿತ್ತು. ಅವರನ್ನು ಸ್ವಾತಂತ್ರ್ಯ ಯೋಧರೆಂದು ಗೌರವಿಸುವ ದಿನಕ್ಕಾಗಿ ಎದುರು ನೋಡುತ್ತಿದ್ದೇವೆ' ಎಂದು ಅಭಿಪ್ರಾಯ ಹಂಚಿಕೊಂಡರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಭಾಸ್ಕರದಾಸ್ ಅವರು ತಮ್ಮನ್ನೂ ಸೇರಿದಂತೆ ಹಲವು ನಾಯಕರನ್ನು ರೂಪಿಸಿದ್ದಾರೆ. ಬಿಜೆಪಿಗೂ ಶಕ್ತಿ ತುಂಬಿದ್ದಾರೆ. ಅಪಘಾತ ಅವರನ್ನು ನಮ್ಮಿಂದ ದೂರ ಮಾಡಿತು ಎಂದು ಕಂಬನಿ ಮಿಡಿದರು.

ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಮಾನ್ಪಡೆ ಪ್ರಾಸ್ತಾವಿಕ ಮಾತನಾಡಿದರು. ಒಕ್ಕೂಟದ ಅಧ್ಯಕ್ಷ ಶೇಷಪ್ಪ ಅಂದೊಳ್ಳು ಅಧ್ಯಕ್ಷತೆ ವಹಿಸಿದ್ದರು. ಒಕ್ಕೂಟದ ಕಾರ್ಯಾಧ್ಯಕ್ಷ ಜವಾಡೆ ಕೆ.ಲೋಕೇಶ್ ಉಪಸ್ಥಿತರಿದ್ದರು.

ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ಭಾಸ್ಕರದಾಸ್ ಎಕ್ಕಾರು ಅವರ ನೆನಪಿನಯಾತ್ರೆಯಲ್ಲಿ ಗಣ್ಯರು ಪುಷ್ಪನಮನ ಸಲ್ಲಿಸಿದರು. ಜವಾಡೆ ಕೆ ಲೋಕೇಶ್, ಭೀಕೂ ರಾಮಜಿ ಇದಾತೆ, ಕೋಟ ಶ್ರೀನಿವಾಸ್ ಪೂಜಾರಿ, ನಳಿನ್ ಕುಮಾರ್ ಕಟೀಲ್, ಶೇಷಪ್ಪ ಅಂದೊಳ್ಳು ಹಾಗೂ ಭಾಸ್ಕರದಾಸ್ ಅವರ ಕುಟುಂಬ ಸದಸ್ಯರು ಇದ್ದಾರೆ– ಪ್ರಜಾವಾಣಿ ಚಿತ್ರ.

ಭಾವ-ಬಾಂಧವ್ಯದ ಕೊಂಡಿ ಬೆಸೆಯಲಿ

> ಮಕ್ಕಳೊಡನೆ ಮಾನಸಿಕ ಬಾಂಧವ್ಯವೇ (Emotional Attachment) ಇಲ್ಲದಿದ್ದಾಗ ಮಕ್ಕಳಿಗೆ ಮಾರ್ಗದರ್ಶಕರಾಗುವುದು ಸಾಧ್ಯವಿಲ್ಲ; ಉಪದೇಶ ನೀತಿಪಾಠಗಳು ಅರ್ಥಹೀನ ಶಬ್ದಗಳಾಗುತ್ತವೆ; ಶಿಸ್ತು, ಶಿಕ್ಷೆಗಳು ತಾತ್ಕಾಲಿಕ ಪರಿಣಾಮಗಳನ್ನು ಮಾತ್ರ ನೀಡಬಹುದಷ್ಟೇ.

ನಡಹಳ್ಳಿ ವಸಂತ್

ಪ್ರೌಢಶಾಲಾ ವಿದ್ಯಾರ್ಥಿಗಳ ಬ್ಯಾಗ್‌ನಲ್ಲಿ ಕಾಂಡೊಮ್‌ಗಳು, ಗರ್ಭನಿರೋಧಕ ಮಾತ್ರೆಗಳು, ಲೈಟರ್, ಸಿಗರೇಟ್ ಗಳು, ವೈಟ್‌ನರ್‌ಗಳು ದೊರಕಿರುವುದು ವರದಿಯಾಗಿದೆ. ಇದು ಆತಂಕಕಾರಿ ವಿಚಾರ. ಹೆಚ್ಚಿನ ನೀತಿಪಾಠ, ಕಟ್ಟುನಿಟ್ಟಿನ ಶಿಸ್ತು, ಕಠಿಣ ಶಿಕ್ಷೆ ಮುಂತಾದವುಗಳ ಹೊರತಾಗಿ ಬೇರೆಯ ಪರಿಹಾರಗಳು ನಮ್ಮ ಸರ್ಕಾರಗಳಿಗೆ, ಶಿಕ್ಷಣತಜ್ಞರಿಗೆ, ಮನಶ್ಶಾಸ್ತ್ರಜ್ಞರಿಗೆ ಹೊಳೆಯುತ್ತಲೇ ಇಲ್ಲ. ದುರದೃಷ್ಟವೆಂದರೆ ನಾವು ಕಟ್ಟಿಕೊಂಡಿರುವ ಆಧುನಿಕ ಸಾಮಾಜಿಕ ವ್ಯವಸ್ಥೆಯ ಅನಿವಾರ್ಯ ಪರಿಣಾಮಗಳು ಇವು ಎನ್ನುವುದನ್ನು ಯಾರೂ ಗಮನಿಸುತ್ತಿಲ್ಲ.

ನಾವೆಲ್ಲರೂ ತಪ್ಪಿದ್ದೆಲ್ಲಿ?

ಆಗಷ್ಟೇ ಜನಿಸಿದ ಮಗುವಿಗೆ ತನ್ನ ಅಗತ್ಯಗಳು ಮಾತ್ರವೇ ಪ್ರಪಂಚವಾಗಿರುತ್ತದೆ. ಮಕ್ಕಳ ಮಿದುಳು ಮತ್ತು ನರಮಂಡಲ ಅಭಿವೃದ್ಧಿ ಹೊಂದುತ್ತಾ ಬಂದಂತೆ ಮಕ್ಕಳು ಹೊರಜಗತ್ತಿನೊಡನೆ ಸಂಪರ್ಕ ಕಲ್ಪಿಸಿಕೊಂಡು ವ್ಯವಸ್ಥಿತ ಬದುಕಿಗೆ ಸಿದ್ಧವಾಗತೊಡಗುತ್ತಾರೆ. 20-22 ವರ್ಷದವರೆಗೂ ಮಿದುಳು ನರಮಂಡಲಗಳ ಬೆಳವಣಿಗೆ ನಡೆಯುತ್ತಲೇ ಇರುತ್ತವೆ. ಈ ಸಮಯದಲ್ಲಿ ಮಕ್ಕಳಿಗೆ ಸಿಗುವ ಕೌಟುಂಬಿಕ ಸಾಮಾಜಿಕ ವಾತಾವರಣ ಅವರ ಮಾನಸಿಕ ಸಮತೋಲನಕ್ಕೆ ಕಾರಣವಾಗುತ್ತದೆ. ಈ ಎಲ್ಲಾ ಅಂಶಗಳಿಗೆ ವೈಜ್ಞಾನಿಕ ಪುರಾವೆಗಳಿವೆ.

ಮಕ್ಕಳಿಗೆ ಎಲ್ಲಾ ವಸ್ತು ಮತ್ತು ವಿಚಾರಗಳ ಕಡೆ ಆಕರ್ಷಣೆ ಸಹಜ. ಆದರೆ ಅಂತಹ ಆಕರ್ಷಣೆಯನ್ನು ನಿಯಂತ್ರಿಸಲು ಅಗತ್ಯವಿರುವ ಹಿಡಿತ (Impulse Control) ಕೌಟುಂಬಿಕ ಸಾಮಾಜಿಕ ಸಂದರ್ಭಗಳಲ್ಲಿ ರೂಪುಗೊಳ್ಳಬೇಕಾಗುತ್ತದೆ. ನಮ್ಮ ಮಕ್ಕಳಲ್ಲಿ ಇಂತಹ ಹಿಡಿತ ಕಾಣಿಸುತ್ತಿಲ್ಲವೆಂದರೆ ಅದರ ಮೂಲಗಳು ಎಲ್ಲಿರಬಹುದು?

ಮಕ್ಕಳ ಮಾನಸಿಕ ಅಗತ್ಯಗಳು

'ಮಗುವೊಂದನ್ನು ಬೆಳೆಸಲು ಸಂಪೂರ್ಣ ಹಳ್ಳಿಯ ಅಗತ್ಯವಿರುತ್ತದೆ' ಎನ್ನುವುದು ಆಫ್ರಿಕಾದ ಬುಡಕಟ್ಟು ಜನರ ನಾಣ್ಣುಡಿ. ಗುಂಪಿನಲ್ಲಿ ಬದುಕುವ ಬುಡಕಟ್ಟು ಜನಾಂಗಗಳು, ಮಕ್ಕಳ ಆರೋಗ್ಯಕರ ಮನೋದೈಹಿಕ ಬೆಳವಣಿಗೆಗೆ ಅತ್ಯುತ್ತಮ ವಾತಾವರಣ ನೀಡುತ್ತವೆ ಎನ್ನುವುದು ಹಲವು ಸಂಶೋಧನೆಗಳಿಂದ ಸಾಬೀತಾಗಿದೆ. ಮಿದುಳು ನರಮಂಡಲಗಳ ಭಿನ್ನಭಿನ್ನ ಸಂಪರ್ಕಜಾಲಗಳ ಆರೋಗ್ಯಕರ ಬೆಳವಣಿಗೆಗೆ ಸಂಘಜೀವನ ಅತ್ಯುತ್ತಮ ವಾತಾವರಣ ಒದಗಿಸುತ್ತದೆ ಎಂದು ಅಂತರ್ವ್ಯಕ್ತಿ ನರಜೀವಶಾಸ್ತ್ರಜ್ಞರಾದ (Interpersonal Neurobiology) ಡಾ. ಡ್ಯಾನ್ ಸಿಗಾಲ್ ಹೇಳುತ್ತಾರೆ.

ಬುಡಕಟ್ಟು ಸಂಸ್ಕೃತಿಗಳಲ್ಲಿ ತಂದೆತಾಯಿಗಳ ಸಂಪರ್ಕದಲ್ಲಿ ಇಲ್ಲದಿದ್ದಾಗಲು ಮಕ್ಕಳು ಗುಂಪಿನ ಇತರ ಎಲ್ಲಾ ಸದಸ್ಯರ ಕಣ್ಗಾವಲಿನಲ್ಲಿ ಬೆಳೆಯುತ್ತಿರುತ್ತಾರೆ. ಮೂರು ನಾಲ್ಕು ತಲೆಮಾರುಗಳ ಅನುಭವ ಕಲಿಕೆಗಳು ಮಕ್ಕಳಿಗೆ ವರ್ಗಾವಣೆಯಾಗುತ್ತಿರುತ್ತವೆ. ಯಾರೇ ಜನ್ಮನೀಡಿದ ಮಕ್ಕಳಾದರೂ, ಅವರು ಸಂಪೂರ್ಣ ಗುಂಪಿಗೆ ಸೇರಿದವರಾಗಿರುತ್ತಾರೆ. 15 ರಿಂದ 20 ವರ್ಷಗಳವರೆಗೂ ವಯಸ್ಕರ ಒಂದು ದೊಡ್ಡ ಗುಂಪು ಮಕ್ಕಳ ಬೆಳವಣಿಗೆ ಕಲಿಕೆಗಳಿಗೆ ಆಸರೆಯಾಗಲು ಸದಾ ಸಿದ್ಧವಿರುತ್ತದೆ. ಮಾನವ ಶಿಶುಗಳಿಗಾಗಿ ಮಾತ್ರ ರೂಪಿಸಲು ಸಾಧ್ಯವಿರುವ ಇಂತಹ ವ್ಯವಸ್ಥೆಗೆ 'ಆಲೋ ಪೇರೆಂಟಿಂಗ್' ಎನ್ನುತ್ತಾರೆ.

ಈಗ ಏನಾಗುತ್ತಿದೆ?

ನಗರಕೇಂದ್ರಿತ ಮತ್ತು ಹಣಕೇಂದ್ರಿತ ಆಧುನಿಕ ನಾಗರಿಕತೆಯಲ್ಲಿ ಏನಾಗುತ್ತಿದೆ? ಹಳ್ಳಿಗಳಲ್ಲಿ ಸಂಘಜೀವನ ಕಾಣೆಯಾಗಿದೆ. ಕೂಡುಕುಟುಂಬಗಳು ಅಪಥ್ಯವಾಗಿವೆ. ನಗರಗಳಲ್ಲಿ ಅಪ್ಪ ಅಮ್ಮಂದಿರು ಮಾತ್ರ ಮಕ್ಕಳಿಗೆ ಮಾನಸಿಕ ಬೆಂಬಲವಾಗಿರಬೇಕಾಗುತ್ತದೆ. ಇವತ್ತಿನ ಜೀವನ ಶೈಲಿಯ ಅಗತ್ಯಗಳಿಗೆ ಪೋಷಕರಿಬ್ಬರೂ ಮನೆಯ ಹೊರಗಡೆ ದುಡಿಯುವುದು ಅನಿವಾರ್ಯವಾಗಿದೆ. 2-3 ವರ್ಷಗಳಿಂದ ಮಕ್ಕಳು ಹೆಚ್ಚಿನ ಸಮಯ ಮನೆಯಲ್ಲಿ ಏಕಾಂಗಿಗಳಾಗಿ, ಬೇಬಿಸಿಟ್ಟಿಂಗ್‌ಗಳಲ್ಲಿ, ಸ್ನೇಹಿತರೊಡನೆ ಅಥವಾ ಮಕ್ಕಳಸ್ನೇಹಿಯಾಗಿರದ ಇವತ್ತಿನ ಶಾಲೆಗಳಲ್ಲಿ ಕಳೆಯುತ್ತಾರೆ. ಮಾನಸಿಕ ಏರುಪೇರುಗಳನ್ನು ನಿಭಾಯಿಸುವ ಕಲಿಕೆ ಮತ್ತು ಆಕರ್ಷಣೆಗಳನ್ನು ಹಿಡಿತಕ್ಕೆ ತರುವುದನ್ನು ಕಲಿಸಬಲ್ಲ ಜವಾಬ್ದಾರಿಯುತ ವಯಸ್ಕರ ಬೆಂಬಲವನ್ನು ಇವತ್ತಿನ ಮಕ್ಕಳು ಕಳೆದುಕೊಂಡಿದ್ದಾರೆ.

ಇವತ್ತು ಮಕ್ಕಳಿಗೆ ಉಳಿದಿರುವ ಮಾನಸಿಕ ಸಂಗಾತಿಗಳು ತಮ್ಮಷ್ಟೇ ಅಪ್ರಬುದ್ಧರಾಗಿರುವ ಇತರ ಮಕ್ಕಳು ಮತ್ತು ಮುಕ್ತವಾಗಿ ದೊರೆಯುತ್ತಿರುವ ಮೊಬೈಲ್, ಅಂತರ್ಜಾಲಗಳು ಮಾತ್ರ. ಪೋಷಕರ ನೀತಿಪಾಠಗಳೆಲ್ಲಾ ಮಕ್ಕಳಿಗೆ ಗೊತ್ತಿರುವುದೇ.

ಆದರೆ ಆಕರ್ಷಣೆಗಳನ್ನು ಹಿಡಿತಕ್ಕೆ ತರುವ ಕಲಿಕೆಗಳೇ ಅವರ ನರಮಂಡಲದಲ್ಲಿ ದಾಖಲಾಗಿಲ್ಲವಲ್ಲ. ಇದರಲ್ಲಿ ಮಕ್ಕಳ ತಪ್ಪೇನಿದೆ? ಹಾಗೆ ನೋಡಿದರೆ ಪೋಷಕರು ಕೆಟ್ಟವರೇನಲ್ಲ. ಮಕ್ಕಳ ಅಗತ್ಯಗಳನ್ನು ಪೂರೈಸುವ ಒತ್ತಡದಲ್ಲಿ ಅವರಿದ್ದಾರೆ. ಪೋಷಕರಿಗೆ ಸೂಕ್ತ ಮಾರ್ಗದರ್ಶನವೂ ಸಿಗುತ್ತಿಲ್ಲ. ಆಧುನಿಕ ಜೀವನ ಶೈಲಿ, ಸಾಮಾಜಿಕ ಆರ್ಥಿಕ ರಾಜಕೀಯ ಶೈಕ್ಷಣಿಕ ರಚನೆಗಳಲ್ಲಿಯೇ ಕುಂದುಗಳಿರುವಾಗ ಪೋಷಕರೊಬ್ಬರೇ ಎಲ್ಲಾ ಬದಲಾವಣೆ ಮಾಡುವುದು ಸುಲಭವಲ್ಲ. ಸರ್ಕಾರಗಳು ಹೆಚ್ಚುಹೆಚ್ಚಿನ ನಿಯಂತ್ರಣ, ನೀತಿನಿಯಮಗಳು ಕಾನೂನು ಶಿಕ್ಷೆಗಳ ಕುರಿತು ಮಾತ್ರ ಮಾತನಾಡುತ್ತಿವೆ. ಮಕ್ಕಳನ್ನು ನಿಭಾಯಿಸಲು ತಜ್ಞರು ಹೇಳುವ 'ಕಿವಿಮಾತುಗಳು' ಇವುಗಳಲ್ಲೇ ಗಿರಕಿಹೊಡೆಯುತ್ತಿವೆ. ಆಳದ ಅನಾಹುತಗಳ ಕಡೆ ಯಾರೂ ಗಮನ ಹರಿಸುತ್ತಿಲ್ಲ. ಇಂತಹ ವಿಷಮ ವ್ಯವಸ್ಥೆಯಲ್ಲಿ ಪೋಷಕರು ಅಸಹಾಯಕಾಗಿದ್ದಾರೆ.

ಮಕ್ಕಳಿಗೆ ವಿದ್ಯೆ ಕಲಿಸಲು ಶಾಲೆ ಮನೆಪಾಠದ ವ್ಯವಸ್ಥೆಗಳಿವೆ. ಅವರ ಆರೋಗ್ಯ ಕಾಪಾಡಲು ವೈದ್ಯರಿದ್ದಾರೆ. ಆದರೆ ಅವರಿಗೆ ಭಾವನಾತ್ಮಕ ಬೆಂಬಲ ನೀಡುತ್ತಾ ಮಾನಸಿಕ ಪ್ರಬುದ್ಧತೆಯನ್ನು ಕಲಿಸಬೇಕಾಗಿರುವ ಕುಟುಂಬ ವ್ಯವಸ್ಥೆಯೇ ಕುಸಿದುಹೋಗಿದೆ. ಮಕ್ಕಳಿಗೆ ತುರ್ತಾಗಿ ಬೇಕಾಗಿರುವುದು ಮಾನಸಿಕ ಬೆಂಬಲವಾಗಿರಬಲ್ಲ ಅಪ್ಪ ಅಮ್ಮಂದಿರು. ಎಲ್ಲಾ ಸಮಸ್ಯೆಗಳಿಗೆ ಪೋಷಕರೇ ಕಾರಣರಲ್ಲ. ಆದರೆ ಮಕ್ಕಳಿಗೆ ಸಹಾಯ ಮಾಡುವ ಜವಾಬ್ದಾರಿ ಮತ್ತು ಸಾಧ್ಯತೆ ಅವರ ಬಳಿಯಿದೆ ಎನ್ನುವುದನ್ನು ಮರೆಯುವಂತಿಲ್ಲ.

(ಲೇಖಕರು: ಶಿವಮೊಗ್ಗದಲ್ಲಿ ಮನೋಚಿಕಿತ್ಸಕರು)

ಪೋಷಕರೇನು ಮಾಡಬಹುದು?

ಪೋಷಕರು, ಶಾಲೆಯಿಂದ ಬಂದ ಮಕ್ಕಳನ್ನು ಊಟ, ಪಾಠ, ಹೋಮ್‌ವರ್ಕ್ ಬಗ್ಗೆ ಕೇಳುವುದರ ಜೊತೆಗೆ, 'ನಿನಗೆ ಯಾವಾಗ ಬೇಸರವಾಗುತ್ತದೆ, ದುಃಖವಾಗುತ್ತದೆ, ಸಿಟ್ಟುಬರುತ್ತದೆ? ಯಾವುದರ ಆಕರ್ಷಣೆ ಉಂಟಾಗುತ್ತದೆ. ಆಗ ಏನು ಮಾಡುತ್ತೀಯಾ? ಸ್ನೇಹಿತರೆಲ್ಲಾ ಇದರ ಬಗೆಗೆ ಏನು ಚರ್ಚೆಮಾಡುತ್ತೀರಾ? ಆಕರ್ಷಣೆಯನ್ನು ಹೇಗೆ ನಿಭಾಯಿಸುತ್ತೀರಾ? ಎಂಬಂತಹ ಮನಸ್ಸಿಗೆ ಸಂಬಂಧಿಸಿದ ವಿಚಾರಗಳನ್ನು ಕೇಳಬೇಕು.

ಮೊಬೈಲ್, ಅಂತರ್ಜಾಲಗಳಂತಹ ಯಾಂತ್ರಿಕ ಸಾಧನಗಳನ್ನು ಬಿಸಾಕಿ, ದಿನದ ಒಂದು ಗಂಟೆಯಾದರೂ ಕುಟುಂಬದ ಸದಸ್ಯರು ಒಟ್ಟಾಗಿ ನಗುತ್ತಾ ಕಿಚಾಯಿಸಿಕೊಳ್ಳುತ್ತಾ ಆಗಾಗ ಜಗಳವನ್ನೂ ಆಡುತ್ತಾ ಕಳೆಯಬೇಕು. ಇಂಥವು ಕೊರತೆಯಾದಾಗ ಮಕ್ಕಳು ಪೋಷಕರಿಂದ ಮಾನಸಿಕವಾಗಿ ದೂರವಾಗುವುದು ಅನಿವಾರ್ಯ ಪರಿಣಾಮ.

ಇನ್ನು, ಹಣಪಡೆದು ನಡೆಸುವ ಬೇಬಿ ಸಿಟ್ಟಿಂಗ್‌ಗಳಿಂದ ಹೆಚ್ಚಿನದನ್ನು ನಿರೀಕ್ಷಿಸಲು ಸಾಧ್ಯವಿಲ್ಲ. ಪೋಷಕರು ತಮ್ಮ ತಮ್ಮಲ್ಲೇ ಗುಂಪುಗಳನ್ನು ಮಾಡಿಕೊಂಡು ಮಕ್ಕಳಿಗೆ ಪರಸ್ಪರ ಬೆಂಬಲ ನೀಡುವ ವ್ಯವಸ್ಥೆ ರೂಪಿಸಿಕೊಳ್ಳಬಹುದು.

ಮತ್ತೊಂದೆಡೆ, ಬೇಬಿ ಸಿಟ್ಟರ್‌ಗಳಿಗೆ, ಅಂಗನವಾಡಿ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಮಕ್ಕಳನ್ನು ನಿಭಾಯಿಸುವ ವಿಶೇಷ ತರಬೇತಿಯ ಅಗತ್ಯವಿರುತ್ತದೆ. ಇದೆಲ್ಲದರ ಕುರಿತು ತಜ್ಞರು ಚರ್ಚಿಸಿ ಸರ್ಕಾರಕ್ಕೆ ಒತ್ತಡ ಹೇರಬೇಕಾಗಿದೆ. ಬದಲಾದ ಸಾಮಾಜಿಕ ಸಂದರ್ಭಗಳಲ್ಲಿ ಬುಡಕಟ್ಟು ಜನಾಂಗಗಳ ಸಂಘಜೀವನದ ಅನುಭವವನ್ನು ಮಕ್ಕಳಿಗೆ ನೀಡುವುದು ಹೇಗೆ ಎಂದು ಚಿಂತಿಸಬೇಕಾಗಿದೆ.



'ಐಟಂ' ಪರಿಭಾಷೆಯ ಸುತ್ತಮುತ್ತ

ವಿದ್ಯಾರ್ಥಿನಿಯೊಬ್ಬರ ಜಡೆ ಎಳೆದು, 'ಐಟಂ' ಎಂದು ಸಂಬೋಧಿಸಿದ ಯುವಕನಿಗೆ ಮುಂಬೈ ನ್ಯಾಯಾಲಯ ಜೈಲುಶಿಕ್ಷೆ ವಿಧಿಸಿದೆ. ಹಾಗೆ ಕರೆಯುವುದು ಅಪರಾಧ ಎಂದು ತೀರ್ಪಿತ್ತಿದೆ . ಈ ಹಿನ್ನೆಲೆಯಲ್ಲಿ 'ಐಟಂ' ಪರಿಭಾಷೆಯ ಸುತ್ತ ಒಂದು ವಿಶ್ಲೇಷಣೆ ಇಲ್ಲಿದೆ.

ಮಂಜುಶ್ರೀ ಎಂ. ಕಡಕೋಳ



ಇಂಗ್ಲಿಷಿನ 'ಐಟಂ' (item) ಪದಕ್ಕೆ ಶಬ್ದಕೋಶದಲ್ಲಿ ವಸ್ತು, ಪದಾರ್ಥ, ಗೃಹಬಳಕೆಯ ವಸ್ತು ಎಂಬರ್ಥವಿದೆ. ಆದರೆ, ಅದೇ ಪದವು ಹೆಣ್ಣನ್ನು ಅಳೆಯುವ ಮಾಪಕವೂ ಆಗಿದೆ! ಹೌದು. ನೀನೊಂದು ಸೂಪರ್ 'ಐಟಂ' ಕಣಮ್ಮಾ. ನಿನ್ನ ಐಟಂ ಸಾಂಗ್ ಇದ್ದರೆ ಬಿಡು ಆ ಸಿನಿಮಾ ಗೆದ್ದಂತೆ!

ಮನರಂಜನೆಯ ಹೆಸರಿನಲ್ಲಿ ಹೆಣ್ಣನ್ನು ಭೋಗದ ವಸ್ತುವನ್ನಾಗಿ ಸೂಚಿಸಲು ಈ ಪದವನ್ನು ಎಷ್ಟೊಂದು ಅಸೂಕ್ಷ್ಮವಾಗಿ ಬಳಸುತ್ತಿದ್ದೇವೆ ಎಂದರೆ ಆ ಪದದ ಮೂಲಾರ್ಥವನ್ನೇ ಮರೆತುಹೋಗುವಷ್ಟು. ಮಾರುಕಟ್ಟೆಯಲ್ಲಿ ಯಾವುದಾದರೊಂದು ಹೊಸ ಮಾದರಿ ಉಡುಪು, ವಸ್ತು ಬಂದಾಗ ಈ ಐಟಂ ಸೂಪರ್ ಆಗಿದೆ ಎಂದು ಹೇಗೆ ಹೇಳುತ್ತೇವೆಯೋ ಹಾಗೇ ಹೆಣ್ಣನ್ನೂ ಮಾರುಕಟ್ಟೆಯ ಸರಕಾಗಿ ಕಾಣಲಾಗುತ್ತಿದೆ.

ಹೀಗೆ ಎಗ್ಗಿಲ್ಲದೇ ಬಳಸುವ 'ಐಟಂ' ಪದ ಮುಂಬೈನ ಯುವ ಉದ್ಯಮಿ ಪಾಲಿಗೆ ಜೈಲುಶಿಕ್ಷೆ ತಂದೊಡ್ಡಿದೆ. ವರ್ಷಗಳ ಹಿಂದೆ ಆಗಿನ್ನೂ ಉದ್ಯಮಿಯಾಗಿರದ ಆ ಯುವಕ, ಹೈಸ್ಕೂಲ್ ವಿದ್ಯಾರ್ಥಿನಿಯೊಬ್ಬಳ ಜಡೆ ಹಿಡಿದೆಳೆದು 'ಐಟಂ' ಅನ್ನುವ ಪದ ಬಳಸಿದ್ದ. ಇದರಿಂದ ಆಘಾತಗೊಂಡಿದ್ದ ಆಕೆ 100ಕ್ಕೆ ಕರೆ ಮಾಡಿದ್ದಳು. ಪೊಲೀಸರು ಸ್ಥಳಕ್ಕೆ ಬರುವಷ್ಟರಲ್ಲಿ ಆ ಯುವಕ ಕಾಲ್ಕಿತ್ತಿದ್ದ. ಆದರೆ, ಆಕೆ ಅಲ್ಲಿನ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಳು. ಘಟನೆ ನಡೆದದ್ದು 2015ರಲ್ಲಾದರೂ ಆ ಘಟನೆಯಿಂದ ವಿಚಲಿತಳಾಗಿದ್ದ ಆಕೆಯ ಮನಸಿಗೆ ನೆಮ್ಮದಿ ದೊರೆಕಿದ್ದು ಈಚೆಗಷ್ಟೇ. ಮುಂಬೈನ ದಿಂಡೋಶಿಯಲ್ಲಿರುವ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಎಸ್.ಜೆ. ಅನ್ಸಾರಿ ಅವರು ಬಾಲಕಿಯನ್ನು (ಈಗ ಯುವತಿ) ಚುಡಾಯಿಸಿದ್ದ ಆ ಯುವಕನಿಗೆ ಐಪಿಸಿ ಸೆಕ್ಷನ್ 354 ಮತ್ತು ಪೋಕ್ಸೊ ಕಾಯಿದೆಯಡಿ ಅಪರಾಧಿ ಎಂದು ಘೋಷಿಸಿ, ಒಂದೂವರೆ ವರ್ಷಕಾಲ ಜೈಲುಶಿಕ್ಷೆ ವಿಧಿಸಿದ್ದಾರೆ.

'ಐಟಂ' ಅನ್ನುವ ಪದ ಮಹಿಳೆಯರನ್ನು ಲೈಂಗಿಕ ಭೋಗವಸ್ತುವಾಗಿ ಚಿತ್ರಿಸುತ್ತದೆ ಮತ್ತು ಐಪಿಸಿ ಸೆಕ್ಷನ್ 354 ರ ಅಡಿಯಲ್ಲಿ ಮಹಿಳೆಯ ಘನತೆಗೆ ಧಕ್ಕೆ ತಂದ ಅಪರಾಧಕ್ಕೆ ಕಾರಣವಾಗುತ್ತದೆ ಎಂದೂ ನ್ಯಾಯಾಧೀಶರು ತೀರ್ಪಿನಲ್ಲಿ ಹೇಳಿದ್ದಾರೆ.

ಈ ತೀರ್ಪು ಬಂದ ಅವಧಿಯಲ್ಲೇ ನಡೆದ ಮತ್ತೊಂದು ಘಟನೆಯಲ್ಲಿ ಬಿಜೆಪಿಯ ನಾಯಕಿಯರಾದ ಖುಷ್ಬೂ ಸುಂದರ್, ನಮಿತಾ, ಗೌತಮಿ ಮತ್ತು ಗಾಯತ್ರಿ ರಘುರಾಮ್ ಅವರನ್ನು 'ಐಟಂ'ಗಳು ಎಂದು ಕರೆದಿದ್ದ ತಮ್ಮದೇ ಪಕ್ಷದ ವಕ್ತಾರ ಸೈದಾಯಿ ಸಾದಿಕ್ ಪರ ಡಿಎಂಕೆ ನಾಯಕಿ ಕನಿಮೋಳಿ ಕ್ಷಮೆ ಯಾಚಿಸಿದ್ದರು.

ಎರಡೂ ಘಟನೆಗಳಲ್ಲಿ ಬಳಸಲಾದ 'ಐಟಂ' ಪದ ಹೆಣ್ಣೆಂದರೆ ಸುಲಭವಾಗಿ ಕೈಗೆಟುವ ವಸ್ತು ಎನ್ನುವಂಥ ಧೋರಣೆಯನ್ನೇ ಹೊಂದಿರುವಂಥದ್ದು.ಈ ಪದದ ಬಳಕೆಯ ಹಿಂದೆ ಲಿಂಗರಾಜಕಾರಣ ಸ್ಪಷ್ಟವಾಗಿ ಗೋಚರಿಸುತ್ತದೆ. ಹೆಣ್ಣೆಂದರೆ ಪುರುಷನ ಬಯಕೆಗಳನ್ನು ತೀರಿಸುವ ಒಂದು ವಸ್ತು. ಹಾಗಾಗಿ ಆಕೆಯನ್ನು ಐಟಂ, ಮಾಲು ಎಂದೆಲ್ಲ ತಮಗೆ ಇಷ್ಟವಾಗುವ ಪರಿಭಾಷೆಯನ್ನು ಸುಲಭವಾಗಿ ಬಳಸುವುದು ಸದ್ದಿಲ್ಲದೇ ರೂಪಿತವಾಗಿದೆ. ಸಿನಿಮಾ, ಟಿ.ವಿ., ಸಾಮಾಜಿಕ ಮಾಧ್ಯಮಗಳು ಇಂಥ ಪದಗಳ ಬಳಕೆಯನ್ನು ಸಾರ್ವತ್ರೀಕರಣಗೊಳಿಸುವಲ್ಲಿ ಮುಂದಿವೆ.

ಇಂಥ ಪದಗಳ ಬಳಕೆ, ರೂಪಿಸುವ ಹಿಂದಿನ ಔಚಿತ್ಯದ ಕುರಿತು ಆ ಕ್ಷೇತ್ರಗಳ ಪರಿಣತರನ್ನು ಕೇಳಿದರೆ, ಇವೆಲ್ಲವೂ ಮನರಂಜನೆಯ, ಮಾರುಕಟ್ಟೆಯ ತಂತ್ರವನ್ನಾಗಿ ಮಾತ್ರ ಬಳಸಲಾಗುತ್ತದೆಯಷ್ಟೇ ಎನ್ನುತ್ತಾರೆ. ಆದರೆ, ಈ ಪದಗಳು ವಾಸ್ತವ ಜೀವನದಲ್ಲಿ ಬೀರುವ ಋಣಾತ್ಮಕ ಪರಿಣಾಮಗಳ ಕುರಿತು ಖೇದ ವ್ಯಕ್ತಪಡಿಸುತ್ತಾರೆ.

ಸುಮನಾ ಕಿತ್ತೂರು

ಸಿನಿಮಾದಿಂದ ಆರಂಭ

80-90ರ ದಶಕದಲ್ಲಿ ಇಂಥ ಪದಗಳು ಹೆಚ್ಚು ಬಳಕೆಯಲ್ಲಿರಲಿಲ್ಲ. ಆದರೆ, 'ಐಟಂ' ಪದವನ್ನು ಹೆಚ್ಚು ಬಳಕೆಗೆ ತಂದಿದ್ದು ಸಿನಿಮಾ ಕ್ಷೇತ್ರ. ಈ ಹಿಂದೆ ಸಿನಿಮಾಗಳಲ್ಲಿ ಕ್ಯಾಬರೆ ಡಾನ್ಸ್, ಬಾರ್ ಡಾನ್ಸ್‌ಗಳಿರುತ್ತಿದ್ದವು. ಜ್ಯೋತಿಲಕ್ಷ್ಮಿ, ಹೆಲನ್, ಸಿಲ್ಕ್ ಸ್ಮಿತಾ ಇಂಥ ಕಲಾವಿದೆಯರು ವಿಲನ್‌ಗಳ ಜತೆಗಿದ್ದು ಇಂಥ ನೃತ್ಯಗಳನ್ನು ಮಾಡ್ತಾ ಇದ್ರು. ಆದರೆ, ಅದನ್ನು ಈಗಿನಂತೆ ಅರ್ಥೈಸಲಾಗುತ್ತಿರಲಿಲ್ಲ. ನೇರವಾಗಿ ಕ್ಲಬ್ ಡಾನ್ಸ್, ಡಿಸ್ಕೊ ಡಾನ್ಸ್ ಇರುತ್ತೆ ಎಂದೇ ನಿರ್ದೇಶಕರೂ ಹೇಳುತ್ತಿದ್ದರು. ಅದರ ಜಾಗಕ್ಕೀಗ 'ಐಟಂ' ಪದ ಬಂದಿದೆ. ಈ ಪದವನ್ನು ಸಿನಿಮಾ ಕ್ಷೇತ್ರವೂ ಸೇರಿದಂತೆ ಜನಸಾಮಾನ್ಯರೂ ಸ್ವೀಕಾರ್ಹ ಮಾಡಿಕೊಂಡಿದ್ದೇವೆ. ಇಂಥ ಪದಗಳು ಜನರೇಷನ್‌ನಿಂದ ಜನರೇಷನ್‌ಗೆ ಸುಲಭವಾಗಿ ದಾಟಿಕೊಂಡು ಬಂದುಬಿಡುತ್ತವೆ. ಸಿನಿಮಾ ಸೃಜನಶೀಲ ಜಗತ್ತು ಅಂತಾದರೆ, ಅಲ್ಲಿ 'ಐಟಂ' ಪದಕ್ಕೆ ಸೃಜನಶೀಲವಾಗಿ ಬೇರೆ ಪದವನ್ನು ಕಾಯಿನ್ ಮಾಡಬಹುದಲ್ಲವೇ? ಪುಟ್ಟ ಮಕ್ಕಳೂ ಇಂಥ ಪದಗಳನ್ನು ಬಳಸುವುದನ್ನು ನೋಡಿ ಬೇಸರ ಎನಿಸುತ್ತದೆ. ಇಂಥದ್ದಕ್ಕೆ ಕಡಿವಾಣ ಹಾಕಲೇ ಬೇಕಿದೆ ಎನ್ನುತ್ತಾರೆ ಸಿನಿಮಾ ನಿರ್ದೇಶಕಿ ಸುಮನಾ ಕಿತ್ತೂರು.

ಸಂಧ್ಯಾರಾಣಿ

ಭರವಸೆಯ ಆಶಾಕಿರಣ

ಕೆಲವು ಜನಪ್ರಿಯ ನಟಿಯರು 'ಐಟಂ ಸಾಂಗ್' ಎಂದು ಕರೆಯುವ ನೃತ್ಯ ಗೀತೆಗೆ ನರ್ತಿಸುತ್ತಿರುವುದರಿದ ಆ ಪದವನ್ನು ಜನ, ಸಿನಿಮಾ ಉದ್ಯಮದವರು ತುಂಬಾ ಸಹಜವೆಂಬಂತೆ ಸ್ವೀಕರಿಸಿಬಿಟ್ಟಿದ್ದಾರೆ. ನಟಿಯರಿಗೂ ಇದರ ಬಗ್ಗೆ ಅರಿವಿಲ್ಲದಿರಬಹುದು. 'ಐಟಂ' ಎನ್ನುವುದನ್ನೇ ಕಾಂಪ್ಲಿಮೆಂಟ್ ಅಂತಲೂ ಸ್ವೀಕರಿಸಲಾಗುತ್ತಿದೆ. ಆ ಪದದ ಬಳಕೆಯ ಹಿಂದಿನ ಉದ್ದೇಶ ಸ್ಪಷ್ಟ. ಅದು ಗಂಡಸಿನ ಆಸೆಯನ್ನು ಬಿಂಬಿಸುತ್ತದೆ. ಆ ಆಸೆ ಕಣ್ಣಲ್ಲಿರಬಹುದು, ಕೈಯಲ್ಲಿರಬಹುದು ಇಲ್ಲವೇ ಮನದಲ್ಲಿರಬಹುದು. ಆದರೆ, ಇಂಥ ಸಂದರ್ಭಗಳಲ್ಲಿ ನ್ಯಾಯಾಲಯದ ತೀರ್ಪುಗಳು ಭರವಸೆಯ ಕಿರಣಗಳಾಗಿ ಗೋಚರಿಸುತ್ತವೆ ಎನ್ನುತ್ತಾರೆ ಸಿನಿಮಾ ವಿಶ್ಲೇಷಕಿ ಸಂಧ್ಯಾರಾಣಿ.

ಎಲ್ಲಿಯವರೆಗೆ ಹೆಣ್ಣನ್ನು ಗಂಡು ತನ್ನೊಂದಿಗೆ ತನ್ನಂತೆಯೇ ಇರುವ ಸಹಜೀವಿ ಅನ್ನುವುದನ್ನು ಪರಿಗಣಿಸುವ ಮನಃಸ್ಥಿತಿಯನ್ನು ರೂಪಿಸಿಕೊಳ್ಳುವುದಿಲ್ಲವೋ ಅಲ್ಲಿಯ ತನಕ ಹೆಣ್ಣು ವಸ್ತುವಾಗಿಯೇ ಗೋಚರಿಸುತ್ತಿರುತ್ತಾಳೆ.

❖



> **ಹೆಣ್ಣನ್ನು ಐಟಂಗೆ ಹೋಲಿಸುವುದೇ ತಪ್ಪು. ಹೆಣ್ಣಿಗೆ ಅವಮಾನವಾಗುವಂಥ ಪದವನ್ನು ಯಾವತ್ತೂ ಬಳಸಬಾರದು. ಸಿನಿಮಾಕ್ಕೆ ಸಂಬಂಧಿಸಿದಂತೆ ಯಾರಾದರೂ ದೂರು ಕೊಟ್ಟರೆ ಕ್ರಮ ಕೈಗೊಳ್ಳಬಹುದು. ಈ ಬಗ್ಗೆ ಮಾನಿಟರಿಂಗ್ ಮಾಡಬಹುದು.**
>
> **ಬಾ.ಮಾ. ಹರೀಶ್,**
> ಅಧ್ಯಕ್ಷ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ

ನವರ ಕ್ಯಾನಪ್ಸ್, ಸಾಮೆ ಸಲಾಡ್

ನಳಪಾಕ

ನವರ ಕೇರಳದ ಜನಪ್ರಿಯ ಔಷಧೀಯ ಕೆಂಪು ಅಕ್ಕಿ. ಇದನ್ನು ಇದರ ಭತ್ತದ ನುಚ್ಚಿನ ಸಮೇತ ಆಯುರ್ವೇದದ ಔಷಧಿಗಳಲ್ಲಿ ಹಲವು ಕಾಯಿಲೆಗಳಿಗೆ ಬಳಸಲಾಗುತ್ತದೆ. ಇದು ಕಡಿಮೆ ತೂಕ ಇರುವ ಮಕ್ಕಳಿಗೆ ಮತ್ತು ಗರ್ಭಿಣಿಯರಲ್ಲಿ ಗರ್ಭದಲ್ಲಿರುವ ಮಗುವಿನ ತೂಕ ಕಡಿಮೆ ಇದ್ದರೆ ಇದು ಉತ್ತಮ ಆಹಾರ. ಇದು ಮಧುಮೇಹಿಗಳಿಗೂ ಉತ್ತಮ. ಈ ಅಕ್ಕಿಯನ್ನು ಹಾಲು ಮತ್ತು ಮೂಲಿಕೆಗಳೊಂದಿಗೆ ಬೇಯಿಸಿ ಔಷಧಿ ರೂಪದಲ್ಲಿ ಸೇವಿಸಲಾಗುತ್ತದೆ.

ಶ್ರೀನಿಧಿ ಅಡಿಗ

ನವರ ಅಕ್ಕಿ ಕ್ಯಾನಪ್ಸ್(ಕಟ್ಲೆಟ್)

ಬೇಕಾಗುವ ಸಾಮಗ್ರಿಗಳು: ಅರ್ಧ ಕಪ್ ನವರ ಅಕ್ಕಿ, ಒಂದೂವರೆ ಕಪ್ ನೀರು, 50 ಮಿ.ಲಿ ಲೀಟರ್ ಎಣ್ಣೆ, ರುಚಿಗೆ ತಕ್ಕಂತೆ ಉಪ್ಪು.

ಟಾಪಿಂಗ್(ಮಾಂಸಾಹಾರ) : 250 ಗ್ರಾಂ ಚಿಕನ್ ಕೀಮಾ, ಸಣ್ಣಗೆ ಹೆಚ್ಚಿದ ಬೆಳ್ಳುಳ್ಳಿಯ ಎಸಳು 3-4 , ಕತ್ತರಿಸಿದ ಸ್ಪ್ರಿಂಗ್ ಆನಿಯನ್ 50 ಗ್ರಾಂ , 50 ಗ್ರಾಂ ಹೆಚ್ಚಿದ ಈರುಳ್ಳಿ, ಒಂದು ಚಮಚ ಸೋಯಾ ಸಾಸ್ ರುಚಿಗೆ ತಕ್ಕಂತೆ ಉಪ್ಪು ಮತ್ತು ಮೆಣಸು, ಒಂದು ಚಮಚ ನಿಂಬೆ ರಸ

ಟಾಪಿಂಗ್(ಸಸ್ಯಾಹಾರ): 250 ಗ್ರಾಂ ಅಣಬೆಗಳು 100 ಗ್ರಾಂ, ಚೌಕಾಕಾರವಾಗಿ ಕತ್ತರಿಸಿದ ಕ್ಯಾರೆಟ್ 100 ಗ್ರಾಂ, ಸಣ್ಣಗೆ ಹೆಚ್ಚಿದ ಈರುಳ್ಳಿ 3-4, ಬೆಳ್ಳುಳ್ಳಿಯ ಎಸಳುಗಳು 3-4, 1 ಚಮಚ ಸೋಯಾ ಸಾಸ್ ರುಚಿಗೆ ತಕ್ಕಂತೆ ಉಪ್ಪು ಮತ್ತು ಮೆಣಸು

ಮಾಡುವ ವಿಧಾನ: ಮೊದಲಿಗೆ ಅಕ್ಕಿಯನ್ನು 15 ನಿಮಿಷಗಳ ಕಾಲ ನೀರಿನಲ್ಲಿ ನೆನೆಸಿ. ನಂತರ ಎರಡು ವಿಷಲ್ ನಲ್ಲಿ ಬೇಯಿಸಿಕೊಳ್ಳಬೇಕು. ಅನ್ನ ಬೆಂದು ತಣ್ಣಗಾದ ನಂತರ, ಕೈಯಲ್ಲಿ ಹದ ಮಾಡಿಕೊಂಡು ಅದರಲ್ಲಿ ನಾಣ್ಯದ ಗಾತ್ರದ ಚಿಕ್ಕ ಬಿಲ್ಲೆಗಳನ್ನು ಮಾಡಿಕೊಳ್ಳಬೇಕು. ನಿಮ್ಮ ರುಚಿಗೆ ತಕ್ಕಂತೆ ನಿಮಗೆ ಬೇಕಾದಲ್ಲಿ ಅನ್ನಕ್ಕೆ ಹೆಚ್ಚುವರಿಯಾಗಿ ಆಯ್ಕೆಯ ಮಸಾಲೆಗಳನ್ನು ಸೇರಿಸಿ ನಂತರ ಬಿಲ್ಲೆಗಳನ್ನು ತಟ್ಟಿಕೊಳ್ಳಬಹುದು. ಬಿಲ್ಲೆಗಳ ತಯಾರಾದ ಮೇಲೆ ಅವುಗಳನ್ನು ತವಾ ಅಥವಾ ಪ್ಯಾನ್‌ನಲ್ಲಿ ಸ್ವಲ್ಪವೇ ಎಣ್ಣೆ ಹಾಕುತ್ತಾ ಮಾಡಬೇಕು. ಕ್ಯಾನಪಿಯ ತಯಾರಿಕೆಯಲ್ಲಿ ಪ್ರಮುಖ ಭಾಗ ಇದರ ಟ್ಯಾಪಿಂಗ್. ಇದನ್ನು ಸಸ್ಯಾಹಾರಿಗಳು ಹಾಗೂ ಮಾಂಸಾಹಾರಿಗಳು ಅವರ ರುಚಿಗೆ ತಕ್ಕಂತೆ **ಮಾಡಿಕೊಳ್ಳಬಹುದು.**

ಸಸ್ಯಾಹಾರ ಖಾದ್ಯ: ಮೊದಲು ಪ್ಯಾನ್‌ಗೆ ಸ್ವಲ್ಪ ಎಣ್ಣೆ ಹಾಕಿಕೊಂಡು ಅದಕ್ಕೆ ಈರುಳ್ಳಿ ಸೇರಿಸಿ. ಅವು ಕಂದು ಬಣ್ಣಕ್ಕೆ ಬರಲು ಪ್ರಾರಂಭಿಸಿದಾಗ, ಚಿಕ್ಕದಾಗಿ ಕತ್ತರಿಸಿದ ಅಣಬೆಗಳು ಮತ್ತು ಕ್ಯಾರೆಟ್‌ಗಳನ್ನು ಸೇರಿಸಬೇಕು. ತರಕಾರಿಗಳು ಬೇಯಲು ಪ್ರಾರಂಭಿಸಿದಾಗ, ಸೋಯಾ ಸಾಸ್, ಉಪ್ಪು ಮತ್ತು ಮೆಣಸಿನ ಪುಡಿಯನ್ನು ಸೇರಿಸಬೇಕು. ಕ್ಯಾನಪಿಗಳನ್ನು ಅಲಂಕರಿಸುವಾಗ ಅವುಗಳನ್ನು ಒಂದು ಪ್ಲೇಟ್‌ನಲ್ಲಿ ಜೋಡಿಸಿ ನಂತರ ಅವುಗಳ ಮೇಲೆ ಸ್ವಲ್ಪ ಸಾಸ್ ಹಾಕಬೇಕು. ನಂತರ ಬೇಯಿಸಿಕೊಂಡ ತರಕಾರಿಗಳನ್ನು ಅದರ ಮೇಲೆ ಹರಡಬೇಕು. ತಾಜಾ ಸೊಪ್ಪುಗಳನ್ನೂ ಇವುಗಳ ಮೇಲೆ ಹರಡಿ ಅಲಂಕರಿಸಲು ಬಳಸಬಹುದು.

ಮಾಂಸಾಹಾರ ಖಾದ್ಯ: ಹುರಿದು ಬೇಯಿಸಿದ ಚಿಕನ್ ಕೀಮಾದ ಉಂಡೆಗಳು, ಚಿಕ್ಕದಾಗಿ ಹೆಚ್ಚಿದ ಬೆಳ್ಳುಳ್ಳಿ, ಕತ್ತರಿಸಿದ ಈರುಳ್ಳಿ ಸೊಪ್ಪು (ಸ್ಪ್ರಿಂಗ್ ಆನಿಯನ್), ಸಣ್ಣಗೆ ಕತ್ತರಿಸಿದ ಈರುಳ್ಳಿ, ಸೋಯಾ ಸಾಸ್ ಮತ್ತು ರುಚಿಗೆ ತಕ್ಕಂತೆ ಉಪ್ಪು ಮತ್ತು ಖಾರದ ಪುಡಿಯನ್ನು ಕ್ಯಾನಪೀಸ್‌ಗಳ ಟಾಪಿಂಗ್‌ಗೆ ಬಳಸಬಹುದು.

ಸಾಮೆ ಅಕ್ಕಿ ಮಸಾಲ ಸಲಾಡ್

ಸಾಮೆ ಅಕ್ಕಿ ರಕ್ತದಲ್ಲಿನ ಸಕ್ಕರೆಯ ಪ್ರಮಾಣವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ, ಹೃದಯ ಸಂಬಂಧಿ ರೋಗಗಳಿಗೆ ಉತ್ತಮ ಮತ್ತು ಇದು ಕೊಬ್ಬನ್ನು ನಿಯಂತ್ರಿಸುತ್ತದೆ. ಸಾಮೆಯಲ್ಲಿ ವಿಟಮಿನ್ ಬಿ3 ದೊರೆಯುತ್ತದೆ.

ಬೇಕಾಗುವ ಪದಾರ್ಥಗಳು: ಅರ್ಧ ಕಪ್ ಸಾಮೆ ಅಕ್ಕಿ, ಒಂದೂವರೆ- ಕಪ್ ನೀರು (ನಿಮ್ಮಲ್ಲಿರುವ ಕುಕ್ಕರ್ ಅವಲಂಬಿಸಿ), ಒಂದು ತುರಿದ ಕ್ಯಾರೆಟ್, ಅರ್ಧ ಲೀಟರ್ ಕಿತ್ತಳೆ ರಸ, 250 ಮಿಲಿ ಆಲಿವ್ ಎಣ್ಣೆ, ಒಂದು ನಿಂಬೆ ರಸ, ಒಂದು ಚಮಚ ಜೇನುತುಪ್ಪ, ಒಂದು ಚಮಚ ವಿನೆಗರ್, ರುಚಿಗೆ ತಕ್ಕಂತೆ ಉಪ್ಪು.

ಅಲಂಕಾರಕ್ಕೆ: ಕತ್ತರಿಸಿದ ಬೀಜರಹಿತ ಸೌತೆಕಾಯಿ, 1 ಕಪ್ ಬೇಯಿಸಿದ ಕಡಲೆ ಕಾಳು (ಮಾಂಸಾಹಾರ ಪ್ರಿಯರು ಚಿಕನ್‌ನನ್ನು ಕಡಲೆ ಬದಲಿಗೆ ಬಳಸಬಹುದು), ಒಂದು ದಾಳಿಂಬೆ ಹಣ್ಣು, ಒಂದು ಮುಷ್ಠಿ ನಿಮ್ಮ ಆಯ್ಕೆಯ ಸೊಪ್ಪು, ಒಂದು ಕತ್ತರಿಸಿದ ಟೊಮೆಟೊ, 1 ಪಲಾವು ಎಲೆ, 2-3 ಲವಂಗ



ತಯಾರಿಸುವ ವಿಧಾನ

ಮೊದಲಿಗೆ ಒಂದು ರೈಸ್ ಕುಕ್ಕರ್‌ನಲ್ಲಿ ಪಲಾವು ಎಲೆ ಮತ್ತು ಲವಂಗವನ್ನು ಸ್ವಲ್ಪ ಎಣ್ಣೆಯನ್ನು ಹಾಕಿ ಬಾಡಿಸಿಕೊಳ್ಳಿ. ಇದಕ್ಕೆ ಸಾಮೆಯನ್ನು ಸೇರಿಸಿ ಸ್ವಲ್ಯ ಹೊತ್ತು ಹುರಿದು, ನಂತರ ನೀರು ಸೇರಿಸಿ ಅದನ್ನು ಎರಡು ವಿಶಲ್‌ವರೆಗೆ ಬೇಯಿಸಿ. ನಂತರ ಪ್ಯಾನ್‌ನಲ್ಲಿ ಕಿತ್ತಳೆ ರಸವನ್ನು ಸೇರಿಸಿ ಮಧ್ಯಮ ಉರಿಯಲ್ಲಿ ನಿಧಾನವಾಗಿ ಬಿಸಿ ಮಾಡಿ ಆಗ ಕಿತ್ತಳೆ ರಸ ದಪ್ಪವಾಗುತ್ತಾ ರಸದ ಅಂಶ ಕಡಿಮೆಯಾಗುತ್ತಾ ಬರುತ್ತದೆ. ರಸದ ಪ್ರಮಾಣ ಮುಕ್ಕಾಲು ಭಾಗಕ್ಕೆ ಇಳಿಯುವವರೆಗೆ/ಕುಗ್ಗುವರೆಗೂ ಈ ಮಿಶ್ರಣವನ್ನು ಕುದಿಸಬೇಕು.

ಕಿತ್ತಳೆ ರಸ ಸಿದ್ಧವಾದ ನಂತರ, ಸಲಾಡ್ ತಯಾರಿ ಆರಂಭಿಸಿ. ಒಂದು ಪಾತ್ರೆಗೆ ಕಿತ್ತಳೆ ರಸ, ಆಲಿವ್ ಎಣ್ಣೆ, ನಿಂಬೆ ರಸ, ಜೇನುತುಪ್ಪ ಮತ್ತು ವಿನೆಗರ್ ಅನ್ನು ಸೇರಿಸಿ ಅದನ್ನು ಹ್ಯಾಂಡ್ ಬ್ಲೆಂಡರ್ ಸಹಾಯದಿಂದ ಮಿಶ್ರಣ ಮಾಡಿಕೊಳ್ಳಬೇಕು. ಅದಕ್ಕೆ ರುಚಿಗೆ ತಕ್ಕಷ್ಟು ಉಪ್ಪು ಬೆರೆಸಬೇಕು. ನಂತರ ಇನ್ನೊಂದು ದೊಡ್ಡ ಪಾತ್ರೆಯಲ್ಲಿ ಬೇಯಿಸಿದ ಸಾಮೆ ಅಕ್ಕಿ ತೆಗೆದುಕೊಂಡು ಅದಕ್ಕೆ ಈ ಕಿತ್ತಳೆ ಹಣ್ಣಿನ ರಸ ಮತ್ತು ಉಳಿದ ಪದಾರ್ಥಗಳನ್ನು ಸೇರಿಸಿ ಮಾಡಿದ ಮಿಶ್ರಣವನ್ನು ಅಗತ್ಯಕ್ಕೆ ತಕ್ಕಷ್ಟು ಹಾಕಬೇಕು. ಅದನ್ನು ಚೆನ್ನಾಗಿ ಮಿಶ್ರಣ ಮಾಡಿದ ನಂತರ ಅದರ ಮೇಲೆ ಕ್ಯಾರೆಟ್ ತುರಿ, ಸೌತೆಕಾಯಿ, ಬೇಯಿಸಿದ ಕಡಲೆ ಕಾಳು (ಮಾಂಸಾಹಾರಕ್ಕಾದರೆ ಚಿಕನ್ ಪೀಸ್), ಕತ್ತರಿಸಿದ ಟೊಮೆಟೊ, ದಾಳಿಂಬೆ ಹಣ್ಣು, ಸೊಪ್ಪು ಇವುಗಳಿಂದ ಅಲಂಕರಿಸಿದರೆ ರುಚಿಕರ ಮಸಾಲಾ ಸಲಾಡ್ ಸಿದ್ಧ.

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಶೇಖರ

ಗಡಿ ಗ್ರಾಮಗಳ ಸ್ಥಿತಿಗತಿ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಆಯ್ದ 8 ವಿಶ್ವವಿದ್ಯಾಲಯಗಳ ಮೂಲಕ ಗಡಿ ಗ್ರಾಮಗಳ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗಳ ಬಗ್ಗೆ ಸಮೀಕ್ಷೆ ನಡೆಸಲಾಗುತ್ತಿದೆ. 6 ತಿಂಗಳಲ್ಲಿ ಸಮಗ್ರ ಅಧ್ಯಯನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ. ಸೋಮಶೇಖರ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಎರಡು ವರ್ಷಗಳ ಸಾಧನೆ ವರದಿ ಬಿಡುಗಡೆ ಮಾಡಿದ ಅವರು, 'ಗಡಿ ಭಾಗದ ಹಳ್ಳಿಗಳಲ್ಲಿನ ಕನ್ನಡಿಗರ ಸ್ಥಿತಿಗತಿಯ ವೈಜ್ಞಾನಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಪ್ರಾಧಿಕಾರ ಕ್ರಮವಹಿಸಿದೆ. ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, ಮೈಸೂರು ವಿಶ್ವವಿದ್ಯಾಲಯ, ಹಂಪಿಯ ಕನ್ನಡ ವಿಶ್ವವಿದ್ಯಾಲಯ, ಮಂಗಳೂರು ವಿಶ್ವವಿದ್ಯಾಲಯ, ಗುಲಬರ್ಗಾ ವಿಶ್ವವಿದ್ಯಾಲಯ, ಬೆಂಗಳೂರು ವಿಶ್ವವಿದ್ಯಾಲಯ ಹಾಗೂ ತುಮಕೂರು ವಿಶ್ವವಿದ್ಯಾಲಯವು ಹಳ್ಳಿಗಳ ಸಮಗ್ರ ಸಮೀಕ್ಷೆ ಕೈಗೊಂಡಿದೆ' ಎಂದು ಅವರು ಹೇಳಿದರು.

ಕನ್ನಡ ಭವನ ನಿರ್ಮಾಣ: 'ರಂಗಾಯಣದ ಸಹಯೋಗದಲ್ಲಿ ರಾಷ್ಟ್ರಭಕ್ತಿ ಮತ್ತು ನಾಡಪ್ರೀತಿ ಬಿಂಬಿಸುವ ನಾಟಕಗಳ ಪ್ರದರ್ಶನಕ್ಕೂ ಅನುದಾನ ಒದಗಿಸಲಾಗಿದೆ. ಕನ್ನಡ ಅಸ್ಮಿತೆಯನ್ನು ಸಂರಕ್ಷಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಕನ್ನಡ ಭವನ ನಿರ್ಮಿಸುವಂತಹ ವಿಶಿಷ್ಟ ಯೋಜನೆಗೆ ನಾಂದಿ ನಾಡಿದೆ. ಕಯ್ಯಾರ ಕಿಞ್ಞಣ್ಣ ರೈ ಅವರ ಹೆಸರಿನಲ್ಲಿ ಕಾಸರಗೋಡಿನಲ್ಲಿ, ಜಯದೇವಿ ತಾಯಿ ಲಿಗಾಡೆ ಅವರ ಹೆಸರಿನಲ್ಲಿ ಅಕ್ಕಲಕೋಟೆಯಲ್ಲಿ ಹಾಗೂ ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ರಾಜ್ಯ ಸರ್ಕಾರ ₹ 5 ಕೋಟಿ ಅನುದಾನ ಘೋಷಿಸಿದೆ' ಎಂದರು.

'ಕಾಸರಗೋಡಿನಲ್ಲಿ ಕಯ್ಯಾರ ಕಿಞ್ಞಣ್ಣ ರೈ ಕುಟುಂಬ, ಅಕ್ಕಲಕೋಟೆಯಲ್ಲಿ ಜಯದೇವಿ ತಾಯಿ ಲಿಗಾಡೆ ಕುಟುಂಬ ಕನ್ನಡ ಭವನ ನಿರ್ಮಾಣಕ್ಕೆ ನಿವೇಶನ ಒದಗಿಸಲು ಸಮ್ಮತಿಸಿವೆ. ಗೋವಾದಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಜಮೀನು ಒದಗಿಸುವಂತೆ ಅಲ್ಲಿನ ಮುಖ್ಯಮಂತ್ರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪತ್ರ ಬರೆದಿದ್ದಾರೆ' ಎಂದರು.

'ಮಕ್ಕಳ ಹೆಸರಲ್ಲಿ ಠೇವಣಿ'

'ಕಾಸರಗೋಡು, ಜತ್ತ, ಅಕ್ಕಲಕೋಟೆ ಹಾಗೂ ದಕ್ಷಿಣ ಸೊಲ್ಲಾಪುರದಲ್ಲಿ ಕನ್ನಡದಲ್ಲಿ ವ್ಯಾಸಂಗ ಮಾಡುವ ಮಕ್ಕಳನ್ನು ಪ್ರೋತ್ಸಾಹಿಸಲು ತಲಾ ₹ 5 ಸಾವಿರ ಠೇವಣಿ ಇರಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. 5 ಸಾವಿರ ಮಕ್ಕಳಿಗೆ ₹ 2.5 ಕೋಟಿ ಅನುದಾನ ಅಗತ್ಯವಿದೆ. ಎಸ್ಸೆಸ್ಸೆಲ್ಸಿ ಮುಗಿದ ಬಳಿಕ ಠೇವಣಿಯ ಹಣ ಮಕ್ಕಳಿಗೆ ದೊರೆಯುತ್ತದೆ. ಅನುದಾನ ದೊರೆತಲ್ಲಿ ಆ ಭಾಗದ ಕನ್ನಡ ಶಿಕ್ಷಕರಿಗೂ ಪ್ರೋತ್ಸಾಹಧನ ನೀಡುವ ಚಿಂತನೆಯಿದೆ' ಎಂದು ಸಿ. ಸೋಮಶೇಖರ್ ಹೇಳಿದರು.

ವರ್ಗಾವಣೆ ಪ್ರಸ್ತಾವನೆ ಕಳಿಸಬೇಡಿ: ಸಿಎಂ

ಬೆಂಗಳೂರು: 'ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಸಂಬಂಧಿಸಿದ ಯಾವುದೇ ವರ್ಗಾವಣೆ ಪ್ರಸ್ತಾವನೆಗಳನ್ನು ಮುಂದಿನ ಸೂಚನೆವರೆಗೂ ತಮ್ಮ ಸಚಿವಾಲಯಕ್ಕೆ ಮಂಡಿಸಬಾರದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ.

ಈ ಸಂಬಂಧ ಟಿಪ್ಪಣಿಯೊಂದನ್ನು ಅವರು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಕಳುಹಿಸಿದ್ದಾರೆ. ಇದರಿಂದ ವಾರ್ಷಿಕ ವರ್ಗಾವಣೆಗೂ ಮುನ್ನ ಕೆಲವು ಅಪರೂಪದ ಪ್ರಕರಣಗಳಲ್ಲಿ ಮುಖ್ಯಮಂತ್ರಿಯವರ ಅನುಮತಿ ಪಡೆದು ವರ್ಗಾವಣೆ ಮಾಡಿಸಿಕೊಳ್ಳುತ್ತಿದ್ದವರಿಗೆ ಹಿನ್ನಡೆಯಾಗಲಿದೆ.

ಈಗ ವರ್ಷದ ಕೊನೆ ಆಗಿರುವುದರಿಂದ ವರ್ಗಾವಣೆಗೆ ಅರ್ಜಿ ತರುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಇದರಿಂದ ಅನಗತ್ಯ ಸಮಸ್ಯೆ ಸೃಷ್ಟಿಯಾಗುತ್ತದೆ ಎಂಬ ಕಾರಣಕ್ಕೆ ಈ ರೀತಿ ಸೂಚನೆ ನೀಡಿದ್ದಾರೆ ಎಂದು ಮುಖ್ಯಮಂತ್ರಿ ಸಚಿವಾಲಯದ ಮೂಲಗಳು ತಿಳಿಸಿವೆ.

ಈ ಮಧ್ಯೆ ಶಿಕ್ಷಕರ ಸಾರ್ವತ್ರಿಕ ವರ್ಗಾವಣೆಯ ಕರಡು ಅಧಿಸೂಚನೆಯನ್ನು ಪ್ರಕಟಿಸಲಾಗಿದ್ದು, ಶಿಕ್ಷಕರೂ ವರ್ಗಾವಣೆಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಆದರೆ, ಮುಖ್ಯಮಂತ್ರಿಯವರ ಟಿಪ್ಪಣಿಯಿಂದ ಈ ವರ್ಷ ವರ್ಗಾವಣೆ ನಡೆಯುತ್ತದೆಯೋ ಇಲ್ಲವೋ ಎಂಬ ಗೊಂದಲಕ್ಕೆ ಶಿಕ್ಷಕರು ಸಿಲುಕಿದ್ದಾರೆ.

ಈ ಕುರಿತು 'ಪ್ರಜಾವಾಣಿ' ಜತೆ ಮಾತನಾಡಿದ ಶಿಕ್ಷಕರೊಬ್ಬರು, ಕಳೆದ ಹತ್ತು ವರ್ಷಗಳಿಂದ ಒಂದೇ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ವರ್ಗಾವಣೆ ಅಧಿಸೂಚನೆ ಹೊರಡಿಸಿದ್ದರಿಂದ ಸಂತಸವಾಗಿತ್ತು. ಆದರೆ, ಮುಖ್ಯಮಂತ್ರಿಯವರ ಟಿಪ್ಪಣಿಯಿಂದ ಈ ವರ್ಷ (2022–23) ವರ್ಗಾವಣೆ ಆಗುವ ಬಗ್ಗೆ ಸಂದೇಹವಿದೆ ಎಂದರು.

ಶಿಕ್ಷಣ ಇಲಾಖೆ ಅಲ್ಲದೇ, ಕೆಲವು ದಿನಗಳ ಹಿಂದೆ ಅರಣ್ಯ ಮತ್ತು ಪರಿಸರ ಇಲಾಖೆಗೂ ಇಂತಹದ್ದೇ ಟಿಪ್ಪಣಿಯೊಂದನ್ನು ಮುಖ್ಯಮಂತ್ರಿ ಕಚೇರಿಯಿಂದ ಹೋಗಿದೆ.

ಪೋಕ್ಸೊ ಪ್ರಕರಣ: ಬಾಲಕನಿಗೆ ಜಾಮೀನು

ಚಿತ್ರದುರ್ಗ: ಪ್ರೌಢಶಾಲೆ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ಆರೋಪಕ್ಕೆ ಪ್ರಕರಣದಲ್ಲಿ 17 ವರ್ಷದ ಬಾಲಕನಿಗೆ ಬಾಲನ್ಯಾಯ ಮಂಡಳಿ ಶುಕ್ರವಾರ ಜಾಮೀನು ಮಂಜೂರು ಮಾಡಿದೆ.

ಶಿವಮೂರ್ತಿ ಶರಣರು ಸೇರಿ ನಾಲ್ವರ ವಿರುದ್ಧ ಅ.13ರಂದು ಪ್ರಕರಣ ದಾಖಲಾಗಿತ್ತು. ನ್ಯಾಯಮಂಡಳಿಯ ಎದುರು ಶರಣಾದ ಬಾಲಕ, ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು.

ಆನೇಕಲ್ ಪುರಸಭೆ: ರೌಡಿಶೀಟರ್ ನಾಮನಿರ್ದೇಶನ

ಒಂದನೇ ಪುಟದಿಂದ...

ನಖರ ಬಾಬು ಕೊಲೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ. ಸಿಸಿಬಿ ರೌಡಿ ನಿಗ್ರಹ ಪಡೆಯ ಅಧಿಕಾರಿಗಳು, ಮಂಜುನಾಥ್‌ನಿಗೆ ಹಲವು ಬಾರಿ ನೋಟಿಸ್ ನೀಡಿ ವಿಚಾರಣೆ ಮಾಡಿದ್ದರು ಎಂದು ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಸೈಲೆಂಟ್ ಸುನೀಲ್ ಏರ್ಪಡಿಸಿದ್ದ ರಕ್ತದಾನ ಕಾರ್ಯಕ್ರಮದಲ್ಲಿ ಬಿಜೆಪಿ ಸಂಸದರಾದ ತೇಜಸ್ವಿ ಸೂರ್ಯ, ಪಿ.ಸಿ. ಮೋಹನ್, ಶಾಸಕ ಉದಯ ಗರುಡಾಚಾರ್ ಭಾಗವಹಿಸಿದ್ದರು. ಸಚಿವ ವಿ.ಸೋಮಣ್ಣ ಅವರನ್ನು ರೌಡಿ ಪಟ್ಟಿಯಲ್ಲಿ ಹೆಸರಿದ್ದ ವಿಲ್ಸನ್ ಗಾರ್ಡನ್ ನಾಗ ಭೇಟಿ ಮಾಡಿದ್ದ. ಮಂಡ್ಯದ ಫೈಟರ್ ರವಿಯನ್ನು ಬಿಜೆಪಿಗೆ ಸೇರಿಸಿಕೊಂಡಿದ್ದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿತ್ತು.

ನಿಧನ ವಾರ್ತೆ

ರಂಗಕರ್ಮಿ ಬಿ.ಎಸ್.ರಾಮಮೂರ್ತಿ

ಬೆಂಗಳೂರು: ರಂಗಕರ್ಮಿ ಬಿ.ಎಸ್. ರಾಮಮೂರ್ತಿ (73) ಅವರು ಶುಕ್ರವಾರ ಹೃದಯಾಘಾತದಿಂದ ನಿಧನರಾದರು. ಮೃತರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ರಾಮಮೂರ್ತಿ

ರಾಮಮೂರ್ತಿ ಅವರು ಮಹಾಗಣಪತಿ ನಗರದಲ್ಲಿ ನೆಲೆಸಿದ್ದರು. ಮೃತರ ಅಂತ್ಯಕ್ರಿಯೆ ಶ್ರೀರಾಮಪುರದ ರುದ್ರಭೂಮಿಯಲ್ಲಿ ಶನಿವಾರ ಬೆಳಿಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಮಮೂರ್ತಿ ಅವರು 'ರಂಗ ಸಂಪದ' ತಂಡದ ಮೂಲಕ ರಂಗ ಪ್ರವೇಶಿಸಿದ್ದರು. ನಾಟಕಗಳನ್ನು ನಿರ್ದೇಶಿಸಿದ್ದೇ ಅಲ್ಲದೆ, 40ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದರು.

ದೆಹಲಿಯ ರಂಗಮಹೋತ್ಸವ, ಮುಂಬೈ, ಲಖನೌ, ದುರ್ಗಾಪುರದಲ್ಲಿ ನಾಟಕಗಳ ಪ್ರಯೋಗ ನಡೆಸಿದ್ದರು. ಜೈಸಿದ್ನಾಯ್ಕ, ಸಂಗ್ಯಾಬಾಳ್ಯ, ಸಾಕ್ಷಿಕಲ್ಲು, ತ್ರಿಶಂಕು, ಕತ್ತಲೆ–ಬೆಳಕು, ಉತ್ತಮ ಪ್ರಭುತ್ವ ಎಂಬ ನಾಟಕಗಳನ್ನು ನಿರ್ದೇಶಿಸಿದ್ದರು. ಹರಕೆಯ ಕುರಿ, ಮಹಾಚೈತ್ರ, ಒಡಲಾಳ, ಸಂದರ್ಭ, ಸನ್ನಿವೇಶ, ಮಹಾಪ್ರಸ್ಥಾನ ಮುಂತಾದ ನಾಟಕಗಳಲ್ಲಿ ಅವರು ಅಭಿನಯಿಸಿದ್ದರು.

ಕೊಟ್ರೇಶಿ ಕನಸು, ಆರಂಭ, ಅಸಂಭವ ಸೇರಿ 10ಕ್ಕೂ ಹೆಚ್ಚು ಸಿನಿಮಾ ಹಾಗೂ 30ಕ್ಕೂ ಹೆಚ್ಚು ಧಾರಾವಾಹಿಗಳಲ್ಲಿ ವಿವಿಧ ಪಾತ್ರ ನಿರ್ವಹಿಸಿದ್ದರು ಎಂದು ಅವರ ಆಪ್ತರು ತಿಳಿಸಿದ್ದಾರೆ.

ಮಯೂರ ಓದಿರಿ

ರಥಯಾತ್ರೆಯಲ್ಲಿ ಕಣ್ಣೀರು

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಕೊಡಿಗೇನಹಳ್ಳಿಯಲ್ಲಿ ಶುಕ್ರವಾರ ನೀರಿನ ಸಂಪಿಗೆ ಬಿದ್ದು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಸಕಾಲದಲ್ಲಿ ಚಿಕಿತ್ಸೆ ಸಿಗದೆ ಬಾಲಕ ಮೃತಪಟ್ಟನು. ಅದೇ ಸಂದರ್ಭದಲ್ಲಿ ಗ್ರಾಮದಲ್ಲಿ ಪಂಚರತ್ನ ರಥಯಾತ್ರೆ ಸಂಚರಿಸಿದ್ದು, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರು ಬಾಲಕನ ಶವ ಕಂಡು ಕಣ್ಣೀರಿಟ್ಟರು.

- ಪ್ರಜಾವಾಣಿ ಚಿತ್ರ

3,368 ಆಂಬುಲೆನ್ಸ್‌ಗಳಿಗೆ ಜಿಪಿಎಸ್: ಹೈಕೋರ್ಟ್‌ಗೆ ಸರ್ಕಾರ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆಂಬುಲೆನ್ಸ್‌ಗಳ ತಡೆರಹಿತ ಸಂಚಾರಕ್ಕೆ ಅನುವು ಮಾಡಿಕೊಡಲು ಈವರೆಗೂ ಒಟ್ಟು 3,368 ಆಂಬುಲೆನ್ಸ್‌ಗಳಿಗೆ ಜಿಪಿಎಸ್ ವ್ಯವಸ್ಥೆ ಅಳವಡಿಸಲಾಗಿದೆ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ರಾಜ್ಯದ ಎಲ್ಲ ಆಂಬುಲೆನ್ಸ್‌ಗಳಿಗೆ ಜಿಪಿಎಸ್ ಅಳವಡಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ 'ಭಾರತ್ ಪುನರುತ್ಥಾನ ಟ್ರಸ್ಟ್' ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ, ಸರ್ಕಾರಿ ವಕೀಲರಾದ ಪ್ರತಿಮಾ ಹೊನ್ನಾಪುರ ಅವರು, ಪ್ರಕರಣಕ್ಕೆ ಸಂಬಂಧಿಸಿದಂತೆ ನವೆಂಬರ್ 8 ರಂದು ಹೈಕೋರ್ಟ್ ನೀಡಿರುವ ಆದೇಶದ ಅನುಪಾಲನಾ ವರದಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ವಿವರ ಸಲ್ಲಿಕೆ: 'ರಾಜ್ಯದಲ್ಲಿ ಖಾಸಗಿ ಹಾಗೂ ಸರ್ಕಾರಕ್ಕೆ ಸೇರಿದ 12,107 ಆಂಬುಲೆನ್ಸ್‌ಗಳಿವೆ. ಸರ್ಕಾರ ಇವುಗಳ ತಪಾಸಣೆ ನಡೆಸಿದಾಗ 3,368ಕ್ಕೆ ಮಾತ್ರವೇ ಜಿಪಿಎಸ್ ಅಳವಡಿಸಿರುವುದು ಕಂಡುಬಂದಿದೆ. ಉಳಿದವುಗಳಿಗೂ ಜಿಪಿಎಸ್ ಅಳವಡಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು' ಎಂದು ಪ್ರತಿಮಾ ಹೊನ್ನಾಪುರ ನ್ಯಾಯಪೀಠಕ್ಕೆ ವಿವರಿಸಿದರು.

'ಸಂಚಾರ ಮಾರ್ಗದ ಕುರಿತು ಸಂಚಾರ ದಟ್ಟಣೆ ನಿಯಂತ್ರಣ ಕೊಠಡಿಗೆ ಮಾಹಿತಿ ನೀಡುವಂತೆ ಎಲ್ಲಾ ಆಂಬುಲೆನ್ಸ್ ಚಾಲಕರಿಗೆ ಮಾಹಿತಿ ನೀಡಲಾಗಿದೆ. ಅದಕ್ಕಾಗಿ ವಿಶೇಷ ಸಹಾಯವಾಣಿ ಸಂಖ್ಯೆಯನ್ನೂ ಪ್ರಕಟಿಸಲಾಗಿದೆ' ಎಂದರು.

'ಸಂಯೋಜಿತ ಆಂಬುಲೆನ್ಸ್ ಸೇವೆಗೆ ಟೆಂಡರ್ ಕರೆಯಲಾಗಿತ್ತು. ಆದರೆ, ಈವರೆಗೂ ಬಿಡ್ ಸ್ವೀಕರಿಸಿಲ್ಲ. ಮುಂದಿನ 15 ದಿನಗಳಲ್ಲಿ ಹೊಸದಾಗಿ ಟೆಂಡರ್ ಅಧಿಸೂಚನೆ ಹೊರಡಿಸಲು ಸರ್ಕಾರ ಸೂಚಿಸಿದೆ' ಎಂಬ ಮಾಹಿತಿ ನೀಡಿದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, '15 ದಿನಗಳವರೆಗೆ ಕಾಯದೆ ಆದಷ್ಟು ಶೀಘ್ರವೇ ಅನುಮೋದನೆ ನೀಡಬೇಕು' ಎಂದು ಸೂಚಿಸಿತು.

'ಸಹಾಯವಾಣಿ ಸಂಖ್ಯೆಯನ್ನು ರಾಜ್ಯದ ಎಲ್ಲಾ ಆಸ್ಪತ್ರೆಗಳಿಗೂ ನೀಡಬೇಕು. ಆಯಾ ಆಸ್ಪತ್ರೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಆಂಬುಲೆನ್ಸ್ ಚಾಲಕರ ದತ್ತಾಂಶ ಪಡೆದು ಪೊಲೀಸರಿಗೆ ಮಾಹಿತಿ ಒದಗಿಸಬೇಕು. ಇದರಿಂದ ಆಂಬುಲೆನ್ಸ್ ಸಂಚರಿಸುವ ಮಾರ್ಗಗಳಲ್ಲಿ ದಟ್ಟಣೆ ನಿವಾರಿಸಲು ಪೊಲೀಸರಿಗೆ ಸಹಾಯವಾಗುತ್ತದೆ ಹಾಗೂ ಹುಸಿ ಕರೆಗಳ ಪರಿಶೀಲನೆಗೆ ಸಹಾಯವಾಗುತ್ತದೆ ಎಂಬುದನ್ನು ಮನವರಿಕೆ ಮಾಡಿಸಬೇಕು' ಎಂದರು.

ಶ್ಲಾಘನೆ: 'ಈ ಪ್ರಕರಣದಲ್ಲಿ ಸರ್ಕಾರ ಪೂರಕವಾಗಿ ಸ್ಪಂದಿಸುತ್ತಿದೆ. ಸರ್ಕಾರದ ಕೆಲಸ ತೃಪ್ತಿಕರವಾಗಿದೆ' ಎಂದು ಶ್ಲಾಘಿಸಿದ ನ್ಯಾಯಪೀಠ, 'ಎಲ್ಲದಕ್ಕೂ ಸರ್ಕಾರವನ್ನೇ ಹೊಣೆ ಮಾಡಲಾಗುವುದಿಲ್ಲ. ನಾಗರಿಕರೂ ಆಂಬುಲೆನ್ಸ್‌ಗಳು ಬಂದಾಗ ಸುಗಮ ಸಂಚಾರಕ್ಕೆ ದಾರಿ ಮಾಡಿಕೊಡಬೇಕು' ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿತು. ವಿಚಾರಣೆಯನ್ನು 2023ರ ಜನವರಿ 11ಕ್ಕೆ ಮುಂದೂಡಲಾಗಿದೆ.

'ಆಯೋಗದಿಂದಲೇ ಪಟ್ಟಿ ಪರಿಷ್ಕರಣೆ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಚುನಾವಣಾ ಆಯೋಗದ ನೇತೃತ್ವದಲ್ಲಿಯೇ ಮತದಾರರ ಪಟ್ಟಿ ಪರಿಷ್ಕರಣೆ ನಡೆಯುತ್ತಿದೆ. ಅಲ್ಪಸಂಖ್ಯಾತರ ಹೆಸರುಗಳನ್ನು ಪಟ್ಟಿಯಿಂದ ಕೈಬಿಡಲಾಗುತ್ತಿದೆ ಎನ್ನುವುದು ಸುಳ್ಳು. ಒಬ್ಬರ ಹೆಸರು 2-3 ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿದ್ದರೆ, ಮತದಾರರು ಅಧಿಕೃತವಾಗಿ ವಾಸವಿರುವ ಕ್ಷೇತ್ರದಲ್ಲಿ ಮಾತ್ರ ಹೆಸರು ಉಳಿಸಿಕೊಳ್ಳಲಾಗುತ್ತಿದೆ. ಉಳಿದೆಡೆ ತೆಗೆಯಲಾಗುತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

> **ಚುನಾವಣಾ ಆಯೋಗವು ಮತದಾರರ ಕರಡು ಪಟ್ಟಿ ಪ್ರಕಟಿಸಿದ್ದು, ಇದನ್ನು ಪರಿಶೀಲಿಸಲು ಪಕ್ಷದ ಕಾರ್ಯಕರ್ತರಿಂದ ಸಮೀಕ್ಷೆ ಮಾಡಿಸಲಾಗುತ್ತಿದೆ.**
> **ಅರವಿಂದ ಬೆಲ್ಲದ,** ಶಾಸಕ

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೆಲವರ ಹೆಸರುಗಳನ್ನು ಅನಧಿಕೃತವಾಗಿ ಹುಬ್ಬಳ್ಳಿ, ಬೆಂಗಳೂರು ಮತದಾರರ ಪಟ್ಟಿಯಲ್ಲಿ ಕಂಡು ಬಂದಿದೆ. ಇಂತಹವನ್ನು ಪರಿಷ್ಕರಿಸಲಾಗುತ್ತಿದ್ದು, ಈ ಈ ಕೆಲಸವನ್ನು ಆಯೋಗ ಮಾಡುತ್ತಿವೆ' ಎಂದು ಅವರು ತಿಳಿಸಿದರು.

'ಚುನಾವಣಾ ಆಯೋಗ ದೂರು ನೀಡಿದಲ್ಲೆಲ್ಲ ರಾಜ್ಯ ಸರ್ಕಾರದ ಅಧಿಕಾರಿಗಳಿಂದ ತನಿಖೆ ಮಾಡಿಸಲಾಗುವುದು' ಎಂದು ಅವರು ಹೇಳಿದರು.

ಎಫ್‌ಐಆರ್‌ನಲ್ಲಿ ದೋಷ: 'ಮೂವರು ಯುವಕರ ಮೇಲಷ್ಟೇ ಎಫ್‌ಐಆರ್ ದಾಖಲಿಸಿ ಪ್ರಕರಣ ಮುಚ್ಚಿಹಾಕುವ ಕೆಲಸ ನಡೆಯುತ್ತಿದೆ. ಇತರರು ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖ ಮಾಡಬೇಕಿತ್ತು. ಪೊಲೀಸರೂ ಕಂಪನಿ ಜೊತೆ ಭಾಗಿಯಾಗಿದ್ದು, ಆಯೋಗ ಸ್ವತಂತ್ರವಾಗಿ ತನಿಖೆ ನಡೆಸಬೇಕು' ಎಂದು ದೂರುದಾರ ರಜತ ಉಳ್ಳಾಗಡ್ಡಿಮಠ ಅವರು ಒತ್ತಾಯಿಸಿದರು.

ವಿದ್ಯಾರ್ಥಿ ಥಳಿತ ಪ್ರಕರಣ: ನಾಲ್ವರು ವಶಕ್ಕೆ

ಬೆಳಗಾವಿ: 'ಇಲ್ಲಿ ಬುಧವಾರ ನಾಡಧ್ವಜ ಹಿಡಿದು ಕುಣಿದ ವಿದ್ಯಾರ್ಥಿ ಮೇಲೆ ಸಹಪಾಠಿಗಳು ಹಲ್ಲೆ ಮಾಡಿದ ಪ್ರಕರಣ ಸಂಬಂಧ ನಾಲ್ವರನ್ನು ವಶಕ್ಕೆ ಪಡೆಯಲಾಗಿದೆ' ಎಂದು ನಗರ ಪೊಲೀಸ್ ಆಯುಕ್ತ ಡಾ.ಎಂ.ಬಿ.ಬೋರಲಿಂಗಯ್ಯ ಹೇಳಿದರು.

'ನೊಂದ ವಿದ್ಯಾರ್ಥಿ ಟಿಳಕವಾಡಿ ಪೊಲೀಸ್ ಠಾಣೆಯಲ್ಲಿ ನೀಡಿದ ದೂರು ಆಧರಿಸಿ ಮೂವರು ಅಪ್ರಾಪ್ತರು, ಒಬ್ಬ ವಯಸ್ಕನ ವಿರುದ್ಧ ಕ್ರಮ ಜರುಗಿಸಲಾಗಿದೆ. ಕಾಲೇಜಿನಲ್ಲಿ ಸೂಕ್ತ ಬಂದೋಬಸ್ತ್ ಕೈಗೊಂಡಿದ್ದೇವೆ' ಎಂದು ತಿಳಿಸಿದರು.

'ನಾಡಧ್ವಜ ಹಿಡಿದ ವಿದ್ಯಾರ್ಥಿ ಥಳಿಸಿದ ವಿದ್ಯಾರ್ಥಿಗಳೂ ಕನ್ನಡಿಗರೇ ಆಗಿದ್ದಾರೆ. ಈ ವಿಚಾರದಲ್ಲಿ ಭಾಷಾ ವಿವಾದ ತರದಂತೆ ವಿದ್ಯಾರ್ಥಿಗಳಿಗೆ ಸೂಚಿಸಲಾಗಿದೆ' ಎಂದು ಡಿಸಿಪಿ ರವೀಂದ್ರ ಗಡಾದಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ಮದಕರಿನಾಯಕ ವಿದ್ಯಾಸಂಸ್ಥೆ (ರಿ.), ಚಿತ್ರದುರ್ಗ

ಅನುದಾನಿತ ಕಾಲೇಜಿನ ಬ್ಯಾಕ್‌ಲಾಗ್ ಬೋಧಕೇತರ ಹುದ್ದೆಗೆ ಅರ್ಜಿ ಆಹ್ವಾನ

ಸದರಿ ಸಂಸ್ಥೆಯಡಿಯಲ್ಲಿ ನಡೆಯುತ್ತಿರುವ ಖಾಸಗಿ ಅನುದಾನಿತ ಮಹಾರಾಜ ಮದಕರಿನಾಯಕ ಪ್ರಥಮ ದರ್ಜೆ ಕಲಾ & ವಾಣಿಜ್ಯ ಕಾಲೇಜು, ಚಿತ್ರದುರ್ಗದಲ್ಲಿ ಬ್ಯಾಕ್‌ಲಾಗ್ ಖಾಲಿಯಿರುವ ದ್ವಿತೀಯ ದರ್ಜೆ ಸಹಾಯಕರು ಹುದ್ದೆಗೆ ನೇಮಕಾತಿ ಮಾಡಿಕೊಳ್ಳಲು ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ ಇವರ ಪತ್ರ ಸಂಖ್ಯೆ:ಪ್ರಾಕಾಶಿ/ಕಾಶಿಇ/01/ಬೋಧಕೇತರ ಬ್ಯಾಹುಭ/ಎಂ.ಎಂ.ಎನ್/2018–19, ದಿ: 10.10.2022 ಇವರು ಈ ಕೆಳಕಂಡ ಬ್ಯಾಕ್‌ಲಾಗ್ ದ್ವಿ.ದ.ಸ ನೇಮಕಾತಿ ಪ್ರಕ್ರಿಯೆಯನ್ನು ಮುಂದುವರೆಸಲು ಅನುಮತಿ ನೀಡಲಾಗಿದ್ದು, ಸದರಿ ಹುದ್ದೆಗೆ ಅರ್ಹ ಪರಿಶಿಷ್ಟ ಜಾತಿ ಅಭ್ಯರ್ಥಿಗಳಿಂದ ಅರ್ಜಿಯನ್ನು ಅಹ್ವಾನಿಸಲಾಗಿದೆ.

ಕ್ರ.ಸಂ.	ಹುದ್ದೆ	ಹುದ್ದೆಗಳ ಸಂಖ್ಯೆ	ಮೀಸಲಾತಿ	ವಯೋಮಿತಿ
01	ದ್ವಿ.ದ.ಸ.	01	ಪರಿಶಿಷ್ಟ ಜಾತಿ (SC)	ಕನಿಷ್ಟ 18 ವರ್ಷಗಳು, ಗರಿಷ್ಟ 40 ವರ್ಷಗಳು

ವಿದ್ಯಾರ್ಹತೆ ಮತ್ತು ಇತರೆ ನಿಬಂಧನೆಗಳು: (1) ಕರ್ನಾಟಕ ಪದವಿ ಪೂರ್ವ ಶಿಕ್ಷಣ ಮಂಡಳಿ ನಡೆಸುವ ಪಿ.ಯು.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಗಳು. (2) ಸಕ್ಷಮ ಅಧಿಕಾರಿಗಳಿಂದ ದೃಢಿಕರಿಸಿದ ಎಲ್ಲಾ ದಾಖಲೆಗಳೊಂದಿಗೆ ಅರ್ಜಿ ಹಾಗೂ ರೂ. 500/– ಗಳ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನ ಡಿಮ್ಯಾಂಡ್ ಡ್ರಾಫ್ಟ್‌ನ್ನು ಅಧ್ಯಕ್ಷರು, ಜಿಲ್ಲಾ ಮದಕರಿನಾಯಕ ವಿದ್ಯಾಸಂಸ್ಥೆ (ರಿ.) ಚಿತ್ರದುರ್ಗ, ಇವರ ಹೆಸರಿನಲ್ಲಿ ತೆಗೆದ ಡಿಡಿಯನ್ನು ಪತ್ರಿಕೆ ಪ್ರಕಟಗೊಂಡ 21 ದಿನಗಳ ಒಳಗಾಗಿ ನೋಂದಣಿ ಅಂಚೆಯ ಮೂಲಕ ಕಳುಹಿಸಬೇಕು. (3) ಎಲ್ಲಾ ದಾಖಲೆಗಳೊಂದಿಗೆ ಅರ್ಜಿಯನ್ನು ಜಂಟಿ ನಿರ್ದೇಶಕರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗಕ್ಕೆ ನಿಗಧಿತ ಅವಧಿಯೊಳಗೆ ಸಲ್ಲಿಸಬೇಕು. (4) ಅನುದಾನಿತ ಕಾಲೇಜುಗಳಿಗೆ ಸಂಬಂಧಿಸಿದ ಕರ್ನಾಟಕ ಸರ್ಕಾರದ ನಿಯಮಗಳ ಪ್ರಕಾರ ಇರುತ್ತದೆ.

ಸಹಿ/– ಎಸ್. ಸಂದೀಪ್, ಅಧ್ಯಕ್ಷರು, ಜಿ.ಮ.ವಿ(ರಿ.), ಚಿತ್ರದುರ್ಗ

ದಿನಾಂಕ: 03.12.2022

ಐಐಟಿ ವಿದ್ಯಾರ್ಥಿಗಳಿಗೆ ಒಂದು ಕೋಟಿ ಸಂಬಳದ ಉದ್ಯೋಗ

ನವದೆಹಲಿ (ಪಿಟಿಐ): ಐಐಟಿ ಮದ್ರಾಸ್‌ನ 25 ವಿದ್ಯಾರ್ಥಿಗಳು ಹಾಗೂ ಐಐಟಿ ಗುವಾಹಟಿಯ 5 ವಿದ್ಯಾರ್ಥಿಗಳು ₹ 1 ಕೋಟಿ ವಾರ್ಷಿಕ ಮೊತ್ತದ ಉದ್ಯೋಗಕ್ಕೆ ಆಯ್ಕೆಯಾಗಿದ್ದಾರೆ.

ಐಐಟಿ ರೂರ್ಕಿಯ ವಿದ್ಯಾರ್ಥಿಯೊಬ್ಬರು ₹ 1.06 ಕೋಟಿ ವಾರ್ಷಿಕ ಪ್ಯಾಕೇಜ್‌ನ ಉದ್ಯೋಗಕ್ಕೆ ಹಾಗೂ ಮತ್ತೊಬ್ಬ ವಿದ್ಯಾರ್ಥಿ ₹1.30 ಕೋಟಿ ವಾರ್ಷಿಕ ಪ್ಯಾಕೇಜ್‌ನ ಉದ್ಯೋಗಕ್ಕೆ ಆಯ್ಕೆಯಾಗಿದ್ದು, 10 ವಿದ್ಯಾರ್ಥಿಗಳು ತಲಾ ₹ 80 ಲಕ್ಷ ವಾರ್ಷಿಕ ಸಂಬಳದ ಉದ್ಯೋಗ ಪಡೆದಿದ್ದಾರೆ.

ಈ ವರ್ಷ ಅತಿಹೆಚ್ಚು ಮೊತ್ತದ ಸಂಬಳದ ಉದ್ಯೋಗಕ್ಕೆ ಐಐಟಿ ವಿದ್ಯಾರ್ಥಿಗಳು ಆಯ್ಕೆಯಾಗುವ ಮೂಲಕ ದಾಖಲೆ ಮಾಡಿದ್ದಾರೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಶೇ 10ರಷ್ಟು ಉದ್ಯೋಗಾವಕಾಶ ಹೆಚ್ಚಿದೆ ಎಂದು ಮೂಲಗಳು ತಿಳಿಸಿವೆ.

‘ಹೊಸ ಹೈಬ್ರಿಡ್ ವ್ಯವಸ್ಥೆಯು ವಿದ್ಯಾರ್ಥಿ-ಉದ್ಯೋಗದಾತರ ಸಂವಹನದ ಗುಣಮಟ್ಟವನ್ನು ಹೆಚ್ಚಿಸುತ್ತದೆ ಮತ್ತು ಹೆಚ್ಚಿನ ಉದ್ಯೋಗಗಳಿಗೆ ಕಾರಣವಾಗುತ್ತದೆ ಎಂದು ನಾವು ಭಾವಿಸುತ್ತೇವೆ’ ಎಂದು ಮದ್ರಾಸ್ ಐಐಟಿಯ ವಿದ್ಯಾರ್ಥಿ ವ್ಯವಹಾರಗಳ ಕಾರ್ಯದರ್ಶಿ ಟಿ.ಬಿ. ರಾಮಕಮಲ್ ಅಭಿಪ್ರಾಯಪಟ್ಟಿದ್ದಾರೆ.

ದೊಡ್ಡ ಕಂಪನಿಗಳು ಮದ್ರಾಸ್ ಐಐಟಿಯ ವಿದ್ಯಾರ್ಥಿಗಳಿಗೆ ಹೆಚ್ಚು ಪ್ರಮಾಣದಲ್ಲಿ ಉದ್ಯೋಗಾವಕಾಶ ಕಲ್ಪಿಸಿವೆ. ಅದರಲ್ಲಿ ಟೆಕ್ಸಾಸ್ ಇನ್‌ಸ್ಟ್ರುಮೆಂಟ್ಸ್ 14, ಬಜಾಜ್ ಆಟೋ ಲಿಮಿಟೆಡ್ ಮತ್ತು ಚೇತಕ್ ಟೆಕ್ ಲಿಮಿಟೆಡ್ 10 ವಿದ್ಯಾರ್ಥಿಗಳಿಗೆ, ಕ್ವಾಲ್ಕಾಮ್ 8, ಜೆಪಿ ಮೋರ್ಗನ್ ಚೇಸ್ ಮತ್ತು ಕೋ 9, ಪ್ರಾಕ್ಟರ್ ಮತ್ತು ಗ್ಯಾಂಬಲ್ 7, ಮೋರ್ಗನ್ ಸ್ಟಾನ್ಲಿ 6, ಗ್ರಾವಿಟನ್ 6, ಮೆಕಿನ್ಸೆ & ಕಂಪನಿ 5 ಮತ್ತು ಕೊಹೆಸಿಟಿ 5 ವಿದ್ಯಾರ್ಥಿಗಳಿಗೆ ಉದ್ಯೋಗ ನೀಡಿವೆ.

ಗುವಾಹಟಿಯ ಐಐಟಿಯು ಶುಕ್ರವಾರ ಉದ್ಯೋಗಮೇಳ ನಡೆಸಿದ್ದು, ಇದರಲ್ಲಿ 84 ಕಂಪನಿಗಳು 290 ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ನೀಡಿವೆ. ಇದರಲ್ಲಿ ಐವರು ವಿದ್ಯಾರ್ಥಿಗಳು ₹ 1 ಕೋಟಿ ಮೊತ್ತದ ವಾರ್ಷಿಕ ಪ್ಯಾಕೇಜ್‌ನ ಉದ್ಯೋಗಕ್ಕೆ ಆಯ್ಕೆಯಾಗಿದ್ದಾರೆ.

ಖರಗಪುರ ವಿದ್ಯಾರ್ಥಿಗೆ ₹2.6 ಕೋಟಿ ವೇತನ

ಖರಗಪುರ, ಪಶ್ಚಿಮ ಬಂಗಾಳ: ಇಲ್ಲಿನ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ವಿದ್ಯಾರ್ಥಿಯೊಬ್ಬರಿಗೆ ವಿದೇಶಿ ಕಂಪನಿಯೊಂದರಲ್ಲಿ ವಾರ್ಷಿಕ ₹2.6 ಕೋಟಿ ವೇತನದ ಉದ್ಯೋಗ ದೊರೆತಿದೆ.

‘ಇದೇ ಸಂಸ್ಥೆಯ ಇನ್ನಿಬ್ಬರು ವಿದ್ಯಾರ್ಥಿಗಳಿಗೆ ತಲಾ ₹1 ಕೋಟಿಯ ಉದ್ಯೋಗ ಲಭಿಸಿದೆ’ ಎಂದು ಮೂಲಗಳು ತಿಳಿಸಿವೆ.

ಬ್ರಾಹ್ಮಣ ವಿರೋಧಿ ಬರಹ: ಸಿಸಿಟಿವಿ ಕ್ಯಾಮೆರಾ ಅಳವಡಿಕೆ

ನವದೆಹಲಿ (ಪಿಟಿಐ): ಕ್ಯಾಂಪಸ್ ಗೋಡೆಗಳ ಮೇಲೆ ಕಿಡಿಗೇಡಿಗಳು ಬ್ರಾಹ್ಮಣ ವಿರೋಧಿ ಬರಹಗಳನ್ನು ಬರೆದಿರುವುದು ಗಮನಕ್ಕೆ ಬಂದ ಬೆನ್ನಲ್ಲೇ ಇಲ್ಲಿನ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಆಡಳಿತವು ಎಲ್ಲಾ ಕೇಂದ್ರಗಳಲ್ಲೂ ಸಿಸಿಟಿವಿ ಕ್ಯಾಮೆರಾ ಅಳವಡಿಸುವಂತೆ ಶುಕ್ರವಾರ ಸೂಚಿಸಿದೆ.

‘ಇನ್ನು ಮುಂದೆ ಆವರಣ ಪ್ರವೇಶಿಸುವವರು ಹಾಗೂ ಹೊರಗೆ ಹೋಗುವವರು ಒಂದೇ ದ್ವಾರವನ್ನು ಬಳಸಬೇಕು. ಒಳಗೆ ಬರುವವರು ದ್ವಾರದ ಬಳಿ ಇಡಲಾಗಿರುವ ಪುಸ್ತಕದಲ್ಲಿ ತಮ್ಮ ವಿವರ ನಮೂದಿಸಬೇಕು’ ಎಂದೂ ಆಡಳಿತ ತಿಳಿಸಿದೆ.

ಸ್ಕೂಲ್ ಆಫ್ ಇಂಟರ್‌ನ್ಯಾಷನಲ್ ಸ್ಟಡೀಸ್-2ರ ಕಟ್ಟಡದ ಗೋಡೆಗಳ ಮೇಲೆ ಬ್ರಾಹ್ಮಣ ಹಾಗೂ ಬನಿಯಾ ವಿರೋಧಿ ಬರಹಗಳನ್ನು ಬರೆಯಲಾಗಿದೆ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

‘ಬ್ರಾಹ್ಮಣರೇ ಭಾರತ ಬಿಟ್ಟು ತೊಲಗಿ’, ‘ಬ್ರಾಹ್ಮಣರೇ, ಬನಿಯಾಗಳೇ ನಿಮಗಾಗಿ ನಾವು ಬರುತ್ತಿದ್ದೇವೆ, ಸೇಡು ತೀರಿಸಿಕೊಳ್ಳುತ್ತೇವೆ’ ಎನ್ನುವ ಘೋಷಣೆಗಳನ್ನು ಗೋಡೆಗಳ ಮೇಲೆ ಬರೆಯಲಾಗಿತ್ತು.

ಸುಳ್ಳುಪತ್ತೆ–ಮಂಪರು ಪರೀಕ್ಷೆಯಲ್ಲೂ ದೃಢ

ಹಂತಕ ಆಫ್ತಾಬ್ ತಪ್ಪೊಪ್ಪಿಗೆ

ನವದೆಹಲಿ (ಪಿಟಿಐ): ಕಾಲ್‌ಸೆಂಟರ್ ಉದ್ಯೋಗಿ, ಮುಂಬೈ ಮೂಲದ ಶ್ರದ್ಧಾ ವಾಲಕರ್ ಹತ್ಯೆ ಪ್ರಕರಣದ ಆರೋಪಿ ಹಾಗೂ ಆಕೆಯ ಸಹಜೀವನದ ಸಂಗಾತಿ ಆಫ್ತಾಬ್ ಅಮೀನ್ ಪೂನಾವಾಲಾ ಪೊಲೀಸ್ ತನಿಖೆಯಲ್ಲಿ ನೀಡಿರುವ ತಪ್ಪೊಪ್ಪಿಗೆ ಹೇಳಿಕೆಗಳು ಮಂಪರು ಪರೀಕ್ಷೆ ಮತ್ತು ಸುಳ್ಳುಪತ್ತೆ ಪರೀಕ್ಷೆ ಎರಡರಲ್ಲೂ ಒಂದೇ ರೀತಿ ಇದ್ದು, ಎರಡರ ಫಲಿತಾಂಶವೂ ತಾಳೆಯಾಗಿದೆ ಎಂದು ಪೊಲೀಸ್ ಮೂಲಗಳು ಶುಕ್ರವಾರ ತಿಳಿಸಿವೆ.

ಆರೋಪಿ ಆಫ್ತಾಬ್ 14 ದಿನಗಳ ಪೊಲೀಸ್ ಕಸ್ಟಡಿ ಅವಧಿಯಲ್ಲಿದ್ದಾಗ ನೀಡಿರುವ ತಪ್ಪೊಪ್ಪಿಗೆ ಹೇಳಿಕೆಗಳು, ಆತನನ್ನು ಮಂಪರು ಪರೀಕ್ಷೆ ಮತ್ತು ಸುಳ್ಳುಪತ್ತೆ ವಿಶ್ಲೇಷಣೆಯ ಪರೀಕ್ಷೆಗಳಿಗೆ ಒಳಪಡಿಸಿದಾಗ ತನಿಖಾಧಿಕಾರಿಗಳು ಕೇಳಿದ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳು ಒಂದೇ ಆಗಿವೆ ಎಂದು ಮೂಲಗಳು ಹೇಳಿವೆ.

ಆರೋಪಿಯನ್ನು ಗುರುವಾರ ದೆಹಲಿಯ ರೋಹಿಣಿ ಆಸ್ಪತ್ರೆಯಲ್ಲಿ ಎರಡು ತಾಸಿಗೂ ಹೆಚ್ಚು ಸಮಯ ಮಂಪರು ಪರೀಕ್ಷೆಗೆ ಒಳಪಡಿಸಲಾಗಿತ್ತು. ಅದಕ್ಕೂ ಮೊದಲು ಸುಳ್ಳುಪತ್ತೆ ಪರೀಕ್ಷೆಯನ್ನೂ ನಡೆಸಲಾಗಿತ್ತು.

‘ಆರೋಪಿ ಈ ಎರಡು ಪರೀಕ್ಷೆಗಳಿಗೆ ಸಂಪೂರ್ಣ ಸಹಕರಿಸಿದ್ದಾನೆ. ವಿಚಾರಣೆಯಲ್ಲಿ ಪೊಲೀಸರು ಕೇಳಿದ ಪ್ರಶ್ನೆಗಳಿಗೆ ನೀಡಿದ್ದ ಅದೇ ಪ್ರತಿಕ್ರಿಯೆಗಳನ್ನು ನೀಡಿದ. ಆತನ ಹೇಳಿಕೆಯಲ್ಲಿ ಯಾವುದೇ ಬದಲಾವಣೆಗಳು ಆಗಿಲ್ಲ. ಆರೋಪಿ ತನ್ನ ಸಹಜೀವನದ ಸಂಗಾತಿ ಶ್ರದ್ಧಾ ವಾಲಕರ್‌ಳನ್ನು ಕೊಂದು, ಆಕೆಯ ದೇಹವನ್ನು 35 ತುಂಡುಗಳಾಗಿ ಕತ್ತರಿಸಿ, ದೆಹಲಿಯ ಛತರ್‌ಪುರ ಅರಣ್ಯ ಪ್ರದೇಶಗಳಲ್ಲಿ ಮತ್ತು ನಗರದ ವಿವಿಧ ಸ್ಥಳಗಳಲ್ಲಿ ಎಸೆದಿದ್ದಾಗಿ ಒಪ್ಪಿಕೊಂಡನು’ ಎಂದು ಮೂಲಗಳು ಹೇಳಿವೆ.

‘ಶ್ರದ್ಧಾಳ ಡಿಎನ್‌ಎ ವರದಿ ಮುಂದಿನ ವಾರ ಬರುವ ನಿರೀಕ್ಷೆ ಇದೆ. ಆಕೆಯ ಮರಣ ಖಚಿತಪಡಿಸಲು ಮತ್ತು ಕಾರಣ ಪತ್ತೆಗೆ ವೈದ್ಯರಿಗೆ ಒಂದಿಷ್ಟು ನಿರ್ದಿಷ್ಟ ಪ್ರಮಾಣದ ಮೂಳೆಗಳು ಸಾಕು. ಶ್ರದ್ಧಾ ವಾಲಕರ್ ತಲೆ ಬುರುಡೆ ಇದುವರೆಗೂ ಪತ್ತೆಯಾಗಿಲ್ಲ. ಈವರೆಗೆ 13ಕ್ಕೂ ಹೆಚ್ಚು ಮೂಳೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಆಕೆಯ ದೇಹದ ಉಳಿದ ಭಾಗಗಳಿಗಾಗಿ ಶೋಧನೆ ಮುಂದುವರಿದಿದೆ. ಆರೋಪಿ ತನ್ನ ಸಹಜೀವನದ ಸಂಗಾತಿಯನ್ನು ಕೊಂದಿರುವುದನ್ನು ಸಾಬೀತುಪಡಿಸಲು ತನಿಖಾ ತಂಡಗಳಿಗೆ ಸಾಕಷ್ಟು ಸಾಕ್ಷ್ಯಗಳು ದೊರೆತಿವೆ’ ಎಂದು ಮೂಲಗಳು ಹೇಳಿವೆ.

2 ತಾಸಿನೊಳಗೆ ಮುಗಿದ ಪ್ರಕ್ರಿಯೆ

ಆರೋಪಿ ಆಫ್ತಾಬ್‌ನ ಮಂಪರು ಪರೀಕ್ಷೆ ವಿಶ್ಲೇಷಣೆ ನಂತರದ ಪ್ರಕ್ರಿಯೆ ಶುಕ್ರವಾರ ಎರಡು ತಾಸುಗಳಲ್ಲಿ ಪೂರ್ಣಗೊಂಡಿತು.

ನ್ಯಾಯಾಂಗ ಬಂಧನದಲ್ಲಿರುವ ಆರೋಪಿಯನ್ನು ಇರಿಸಿರುವ ದೆಹಲಿಯ ತಿಹಾರ್ ಜೈಲಿಗೆ ಬೆಳಿಗ್ಗೆ 11.30ರ ಸುಮಾರಿಗೆ ಆಗಮಿಸಿದ ನಾಲ್ವರು ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಮತ್ತು ತನಿಖಾಧಿಕಾರಿಗಳ ತಂಡವು, ಆಫ್ತಾಬ್ ಜತೆಗೆ ‘ಪರೀಕ್ಷೆಗಳ ನಂತರದ ಸಂದರ್ಶನ’ (ಪೋಸ್ಟ್– ಟೆಸ್ಟ್ ಇಂಟರ್‌ವ್ಯೂ) ನಡೆಸಿತು. ಗುರುವಾರ ನಡೆಸಿದ್ದ ಮಂಪರು ಪರೀಕ್ಷೆಯಲ್ಲಿ ಮತ್ತು ಅದಕ್ಕೂ ಮೊದಲು ನಡೆಸಿದ್ದ ಸುಳ್ಳು ಪತ್ತೆ ಪರೀಕ್ಷೆಯಲ್ಲಿ ಆರೋಪಿ ನೀಡಿದ ಹೇಳಿಕೆಗಳನ್ನು ನಿಯಮಾನುಸಾರ ಆತನಿಗೆ ಈ ತಂಡ ತಿಳಿಸಿತು ಎಂದು ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ಬೇಹುಗಾರಿಕೆ ಪ್ರಕರಣ: ಹೈಕೋರ್ಟ್ ಆದೇಶ ರದ್ದುಪಡಿಸಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಇಸ್ರೊ ವಿಜ್ಞಾನಿಯಾಗಿದ್ದ ನಂಬಿ ನಾರಾಯಣನ್ ಅವರನ್ನು ನಕಲಿ ಬೇಹುಗಾರಿಕೆ ಪ್ರಕರಣದಲ್ಲಿ ಸಿಲುಕಿಸಲು ಯತ್ನಿಸಿರುವ ಆರೋಪ ಎದುರಿಸುತ್ತಿರುವ ನಾಲ್ವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವ ಕೇರಳ ಹೈಕೋರ್ಟ್ ಆದೇಶವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ರದ್ದುಪಡಿಸಿದೆ.

ಹೈಕೋರ್ಟ್ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಸಿ.ಟಿ.ರವಿಕುಮಾರ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಪ್ರಕರಣವನ್ನು ಹೈಕೋರ್ಟ್‌ಗೆ ವರ್ಗಾಯಿಸಿದೆ.

‘ಎಲ್ಲಾ ಮೇಲ್ಮನವಿಗಳನ್ನು ನಾವು ಅಂಗೀಕರಿಸುತ್ತೇವೆ. ಗುಜರಾತ್‌ನ ಈ ಹಿಂದಿನ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಆರ್.ಬಿ.ಶ್ರೀಕುಮಾರ್, ಕೇರಳದ ಮಾಜಿ ಪೊಲೀಸ್ ಅಧಿಕಾರಿಗಳಾದ ಎಸ್.ವಿಜಯನ್ ಮತ್ತು ತಂಬಿ ಎಸ್. ದುರ್ಗಾ ದತ್ತ ಹಾಗೂ ಗುಪ್ತಚರ ಇಲಾಖೆಯ ನಿವೃತ್ತ ಅಧಿಕಾರಿ ಪಿ.ಎಸ್. ಜಯಪ್ರಕಾಶ್ ಅವರಿಗೆ ನಿರೀಕ್ಷಣಾ ಜಾಮೀನು ನೀಡಿರುವ ಹೈಕೋರ್ಟ್ ಆದೇಶ ರದ್ದು ಮಾಡಲಾಗುತ್ತದೆ. ನಿರೀಕ್ಷಣಾ ಜಾಮೀನು ಅರ್ಜಿಗಳ ಕುರಿತು ಹೊಸದಾಗಿ ವಿಚಾರಣೆ ನಡೆಸಿ ನಾಲ್ಕು ವಾರಗಳೊಳಗೆ ಸೂಕ್ತ ತೀರ್ಮಾನ ಕೈಗೊಳ್ಳುವಂತೆ ಹೈಕೋರ್ಟ್‌ಗೆ ಸೂಚಿಸಲಾಗುತ್ತದೆ’ ಎಂದು ನ್ಯಾಯಪೀಠ ಹೇಳಿದೆ.

‘ಹೈಕೋರ್ಟ್ ಪೀಠವು ಜಾಮೀನು ಅರ್ಜಿಯ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವವರೆಗೂ ತನಿಖೆಗೆ ಸಹಕರಿಸುತ್ತಿಲ್ಲ ಎಂಬ ಕಾರಣ ನೀಡಿ ಪ್ರತಿವಾದಿಗಳನ್ನು ಬಂಧಿಸುವಂತಿಲ್ಲ’ ಎಂದೂ ನ್ಯಾಯಪೀಠ ತಿಳಿಸಿದೆ.

ಸೀಟುಗಳ ಭರ್ತಿ: ತಮಿಳುನಾಡು ಸರ್ಕಾರಕ್ಕೆ ‘ಸುಪ್ರೀಂ’ ಅನುಮತಿ

ನವದೆಹಲಿ (ಪಿಟಿಐ): ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿನ ಶೇ 50ರಷ್ಟು ಸೂಪರ್ ಸ್ಪೆಷಾಲಿಟಿ ಸೀಟುಗಳನ್ನು ನೀಟ್ ಅರ್ಹತೆ ಹೊಂದಿರುವ ಸೇವಾನಿರತ ಅಭ್ಯರ್ಥಿಗಳಿಗೆ ಹಂಚಿಕೆ ಮಾಡಲು ತಮಿಳುನಾಡು ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ಅನುಮತಿ ನೀಡಿದೆ.

ಈ ಸಂಬಂಧ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ಬಿ.ಆರ್.ಗವಾಯಿ ಹಾಗೂ ವಿಕ್ರಂ ನಾಥ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು, ರಾಜ್ಯ ಸರ್ಕಾರ ಈ ಸಂಬಂಧ 2020ರ ನವೆಂಬರ್ 7ರಂದು ಹೊರಡಿಸಿದ್ದ ಆದೇಶದ ಪ್ರಕಾರವೇ ಶೇ 50ರಷ್ಟು ಸೂಪರ್ ಸ್ಪೆಷಾಲಿಟಿ ಸೀಟುಗಳನ್ನು 15 ದಿನಗಳೊಳಗೆ ಭರ್ತಿ ಮಾಡುವಂತೆ ತಮಿಳುನಾಡು ಸರ್ಕಾರಕ್ಕೆ ನಿರ್ದೇಶಿಸಿದೆ.

‘ಸೂಪರ್ ಸ್ಪೆಷಾಲಿಟಿ ಸೀಟುಗಳು ರಾಷ್ಟ್ರೀಯ ಸ್ವತ್ತುಗಳಾಗಿದ್ದು ಅವುಗಳು ವ್ಯರ್ಥವಾಗಲು ಅವಕಾಶ ನೀಡಬಾರದು ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಮನವಿ ಮಾಡಿದ್ದಾರೆ. ಸೀಟುಗಳನ್ನು ಭರ್ತಿ ಮಾಡುವುದಕ್ಕೆ ತಮಿಳುನಾಡು ಸರ್ಕಾರಕ್ಕೆ ಅನುಮತಿ ನೀಡಬೇಕು ಎಂಬುದನ್ನು ನಾವು ಮನಗಂಡಿದ್ದೇವೆ’ ಎಂದು ಹೇಳಿದ ಪೀಠ ಪ್ರಕರಣದ ವಿಚಾರಣೆಯನ್ನು 2023ರ ಫೆಬ್ರುವರಿ 14ಕ್ಕೆ ಮುಂದೂಡಿದೆ.

ಸಂಕ್ಷಿಪ್ತ ಸುದ್ದಿ

ಛತ್ತೀಸಗಡ ಸಿಎಂ ಉಪ ಕಾರ್ಯದರ್ಶಿ ಬಂಧಿಸಿದ ಇ.ಡಿ

ರಾಯಪುರ (ಪಿಟಿಐ): ‘ಛತ್ತೀಸಗಡದಲ್ಲಿ ನಡೆದಿದೆ ಎನ್ನಲಾಗಿರುವ ಕಲ್ಲಿದ್ದಲು ತೆರಿಗೆ ವಂಚನೆ ಹಗರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ಉಪ ಕಾರ್ಯದರ್ಶಿ ಸೌಮ್ಯ ಚೌರಾಸಿಯಾ ಅವರನ್ನು ಶುಕ್ರವಾರ ಬಂಧಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ರಾಜ್ಯದ ಪ್ರಭಾವಿ ಅಧಿಕಾರಿಗಳಲ್ಲಿ ಒಬ್ಬರೆನಿಸಿರುವ ಸೌಮ್ಯ ಅವರನ್ನು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಕ್ರಿಮಿನಲ್ ಸೆಕ್ಷನ್‌ಗಳ ಅಡಿಯಲ್ಲಿ ಬಂಧಿಸಲಾಗಿದೆ’ ಎಂದು ತಿಳಿಸಿವೆ.

‘ಮೂಸೇವಾಲ ಹತ್ಯೆ: ಬಂಧಿತ ಶೀಘ್ರ ಭಾರತಕ್ಕೆ’

ಅಹಮದಾಬಾದ್/ಚಂಡೀಗಢ (ಪಿಟಿಐ): ‘ಗಾಯಕ ಸಿಧು ಮೂಸೇವಾಲ ಹತ್ಯೆಯ ಸೂತ್ರಧಾರ ಗ್ಯಾಂಗ್‌ಸ್ಟರ್ ಗೋಲ್ಡಿ ಬರಾಡ್‌ನನ್ನು ಅಮೆರಿಕ ಪೊಲೀಸರು ಕ್ಯಾಲಿಫೋರ್ನಿಯಾದಲ್ಲಿ ವಶಕ್ಕೆ ಪಡೆದಿದ್ದಾರೆ’ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಶುಕ್ರವಾರ ಖಚಿತಪಡಿಸಿದ್ದಾರೆ.

‘ಬರಾಡ್‌ನನ್ನು ವಶಕ್ಕೆ ಪಡೆದಿರುವುದಾಗಿ ಅಮೆರಿಕ ಪೊಲೀಸರು ಭಾರತ ಸರ್ಕಾರ ಹಾಗೂ ಪಂಜಾಬ್ ಸರ್ಕಾರಕ್ಕೆ ಮಾಹಿತಿ ನೀಡಿದ್ದಾರೆ. ಆತನನ್ನು ಭಾರತಕ್ಕೆ ಕರೆತರಲಾಗುವುದು’ ಎಂದು ತಿಳಿಸಿದ್ದಾರೆ.

ಭದ್ರತೆಗೆ ಅದಾನಿ ಅರ್ಜಿ

ಕೊಚ್ಚಿ (ಪಿಟಿಐ): ಇತ್ತೀಚೆಗೆ ಹಿಂಸಾತ್ಮಕ ಪ್ರತಿಭಟನೆಗಳಿಂದಾಗಿ ಕಾಮಗಾರಿ ಸ್ಥಗಿತಗೊಂಡಿರುವ ತಿರುವನಂತಪುರದ ವಿಝಿಂಜಂ ಬಂದರಿನಲ್ಲಿ ನಿರ್ಮಾಣ ಕಾರ್ಯವನ್ನು ಮುಂದುವರಿಸುವ ಸಲುವಾಗಿ ಕೇಂದ್ರೀಯ ಭದ್ರತಾ ಪಡೆಗಳ ನೆರವು ಕೋರಿ ಅದಾನಿ ಸಮೂಹವು ಶುಕ್ರವಾರ ಕೇರಳ ಹೈಕೋರ್ಟ್‌ಗೆ ಮನವಿ ಸಲ್ಲಿಸಿದೆ.

ಪ್ರತಿಭಟನೆಯ ಕಾರಣದಿಂದ ಕಾಮಗಾರಿಗೆ ತಡೆಯೊಡ್ಡುವಿಕೆ ಮತ್ತು ದಿಗ್ಬಂಧನದ ವಿರುದ್ಧ ಸಲ್ಲಿಸಿದ ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿ ಅನು ಶಿವರಾಮನ್ ಅವರು, ಕೇಂದ್ರೀಯ ಭದ್ರತಾ ಪಡೆಗಳನ್ನು ನಿಯೋಜಿಸುವ ಸಾಧ್ಯತೆಯ ಬಗ್ಗೆ ಚರ್ಚಿಸಲು ಕೇಂದ್ರ ಸರ್ಕಾರ ಮತ್ತು ಕೇರಳ ಸರ್ಕಾರಗಳಿಗೆ ಸೂಚನೆ ನೀಡಿದ್ದಾರೆ.

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ
ಕ್ಯಾನ್ಸರ್ ಸಂಶೋಧನೆ ಮತ್ತು ತರಬೇತಿ ಕೇಂದ್ರ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಡಾ. ಎಂ. ಹೆಚ್. ಮರಿಗೌಡ ರಸ್ತೆ, ಬೆಂಗಳೂರು–560 029
ದೂರವಾಣಿ: 91–80–26560722 / 26560723 / 66697999 ಇ–ಮೇಲ್: kidwai@nic.in

No. : KMIO/SME(1)/Tender/DMB Chemicals/358/2022-23 Date:01.12.2022

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಕೆಳಗಿನ ವೈದ್ಯಕೀಯ ಸಲಕರಣೆಗಳ ಪೂರೈಕೆಗಾಗಿ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ಕರೆಯಲಾಗಿದೆ.

Sl. No.	Tender No. & Date	Name of the Items
1	No. KMIO/SME(1)/Tender/DMB Chemicals/358/2022-23 dated: 01.12.2022	Procurement of Chemicals & Reagents to Department of Microbiology for 2 years.
2	No. KMIO/SME(1)/Tender/DMB Chemicals/359/ 2022-23 dated: 01.12.2022	Procurement of Chemicals & Reagents to Department of Biochemistry for 2 years.
3	No. KMIO/SME(1)/Tender/Signage Board/360/ 2022-23 dated: 01.12.2022	Procurement of Signage Boards to KMIO.
4	No. KMIO/SME(1)/Tender/BB Chemicals/361/ 2022-23 dated: 01.12.2022	Procurement of Chemicals & Reagents for aphaeresis Device in Blood Bank
5	No. KMIO/SME(1)/Tender/Blood Bags/355/ 2022-23 (Call-2) dated: 01.12.2022	Procurement of Blood Bags to KMIO for 2 years.
6	No. KMIO/SME(1)/Tender/Chemicals/348/ 2022-23 dated: 01.12.2022	Procurement of ERBA Reagents for 3 Part Hematology Cell Counter.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: 05.12.2022 ರಿಂದ 02.01.2023ರ ವರೆಗೆ. ಬಿಡ್ ದಾಖಲೆಗಳನ್ನು ವೆಬ್‌ಸೈಟ್: https://eproc. karnataka.gov.in ನಿಂದ ನೋಡಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ–ಪೋರ್ಟಲ್ ಶುಲ್ಕ ರೂ. 500/–ನ್ನು ಪಾವತಿಸಿ ಬಿಡ್ಡನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಬಿಡ್ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: 02.01.2023ರ 3:00 ಗಂಟೆಯವರೆಗೆ. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ / ತಿರಸ್ಕರಿಸುವ / ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ನಿರ್ದೇಶಕರು

ವಾಸಸಂಇ/ವಾಪ್ರ/3335/2022–23

SAINIK SCHOOL BIJAPUR - 586 108
(KARNATAKA)
(Joint venture of Ministry of Defence and Govt of Karnataka)

RECRUITMENT OF STAFF ON REGULAR / ON CONTRACTUAL BASIS

1. Applications are invited for the post mentioned below on Regular / Contractual basis as mentioned against each :-

Sl.	Name of Post	No of Post & Cat	Age	Qualifications	Pay
(a)	**Band Master (On Contractual)**	UR-01 (One)	Should be between 18 and 50 years as on 01 Jan 2023	Potential Band Master / Band Major / Drum Major course at the Army Education Corps Training College and Centre, Pachmarhi or equivalent Naval / Air Force courses. **Desirable.** Candidates having higher qualifications, teaching experience in English medium Public School proficiency in English, attainments in co and extra-curricular activities will be given preference. The candidates should be physically fit. **Preference will be given to Ex-servicemen.**	Consolidated salary Rs 25,000/- per month
(b)	**Counselor (Female only) (On Contractual)**	UR-01 (One)	Should be between 21 and 35 years as on 01 Jan 2023	Graduate / Post Graduate in Psychology or Post Graduate in Child Development or Graduate with diploma in Career Guidance and Counseling. **Experience.** (i) Experience in providing career /educational counseling to students in a reputed school. (ii) Registration with Rehabilitation counselor of India as vocational counselor. (iii) Interested in other extracurricular activities and aptitude for residential school life style. (iv) The candidate should be physically fit.	Consolidated Salary will be paid based on the qualification and experience.
(c)	**Accountant (Regular) (Reserved for SC Category only)**	SC-01 (One	Should be between 18 and 50 years as on 01 Jan 2023	(i) B.Com. (ii) Adequate knowledge of Double Entry system of accounting (or) should have work as an Accountant for at least 10 years in Government and Private organization and must be fully conversant with maintenance of accounts in double entry system. **Desirable :-** (i) Minimum 2nd Division / Class Commerce Graduate from a recognized university. (ii) Knowledge of double entry system of accounting. (iii) Fully conversant with Tally and modern Accounting Practices preferably in a fully automated accounting environment. (iv) Must be conversant with maintenance of School accounts, ability to handle Bank Reconciliation, Pay Bills, Trial Balance, Balance Sheets, PF Statements, Calculation of Pay Fixation & Pension, TDS and New Pension Scheme etc. (v) Ability to correspond in English independently.	Level-6, Rs 35400 -112400 (Pre-revised PB-2, Rs 9300-34800 +GP Rs 4200/-)

Note. Candidates applied earlier for the posts of “Band Master” & “Counselor” (advertisement published in Employment Newspaper 27 Aug to 02 Sep 2022) & for the post of “Accountant” (advertisement published in Employment Newspaper 29 Oct 2022 - 04 Nov 2022), no need to apply again.

2. **Pay and Perks for Ser No 1(c).** Rent free accommodation, Pay band, Grade pay, Transport Allowance with DA and Medical Allowance as per Sainik Schools Society Rules & Regulations. Subsidized education for two children, LTC, Bonus, New Pension etc as per Sainik Schools Society Rules & Regulations.
3. **Other Conditions.** (i) Employment conditions / Service Rules are in consonance with Sainik Schools Society Rules & Regulations. (ii) Job is transferable within All India liability. (iii) Selected candidate should be ready to take responsibilities usual to a residential school.
4. **How to Apply.** (i) Apply on application form downloaded from School website **www.sssbj.in** (notification-vacancy link). (ii) Duly filled applications alongwith attested copies of documents and one self addressed envelope with postage stamp of Rs 40/- (for communicating through Speed Post) affixed must reach **Principal Sainik School Bijapur - 586108 (Karnataka).** (iii) **Last date for receipt of Applications in Sainik School Bijapur will be 21 days from the date of first publication of the advertisement.** (iv) Applications should be accompanied by one A/C payee Demand Draft of **Rs. 500/-** (non- refundable) in favour of **Principal, Sainik School Bijapur** payable on State Bank of India Sainik School Campus Bijapur Branch (Code 3163). (v) Applications received after the due date or without the supporting documents or prescribed application fee or not in the prescribed format will be rejected without any intimation.
5. The school will not be responsible for any postal delay or missing of envelope and no claim will be entertained in this regard. **Only short listed Candidates will be called for Written Test / Practical Test/ Interview.** No TA/DA for attending the selection test/interview or for joining the post is admissible as per rules of the school.
6. Candidates are to enclose the following documents alongwith the application: -
   (a) Demand Draft for Rs 500/-.
   (b) Affix Passport size photograph at the space provided in the application form.
   (c) Self addressed envelope with stamps worth Rs 40/-.
   (d) Copies of educational and experience certificates.
   (e) In case, the Applicant is SC/ST/OBC category, the Applicant is to attach a copy of Caste / Category Certificate issued by the concerned authority.
7. The school administration reserves the right to cancel the vacancy due to administrative / policy reasons. For more information you can contact on Telephone No **08352 - 270638.**

Sd/- PRINCIPAL
SAINIK SCHOOL BIJAPUR

ರಾಷ್ಟ್ರೀಯ ಆರೋಗ್ಯ ಅಭಿಯಾನ
ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ
ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು – 560023.
ದೂರವಾಣಿ: 080–23113584, ಇ–ಮೇಲ್: pdrch-hfws@karnataka.gov.in

No: STDC/IRL/01/2020-21 (E-643518) Date: 02-12-2022
NRHM/2022-23/IND303 Lab Cons

ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
For Supply of Laboratory Consumables

ರಾಷ್ಟ್ರೀಯ ಆರೋಗ್ಯ ಅಭಿಯಾನವು ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮಕ್ಕೆ ಅವಶ್ಯವಿರುವ Laboratory Consumable ಗಳನ್ನು ಸರಬರಾಜು ಮಾಡಲು ತಯಾರಕರು/ ಅಧಿಕೃತ ವಿತರಕರುಗಳಿಗೆ ಅಗತ್ಯ ದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್: www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ದಿನಾಂಕ: 02–12–2022 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 21–12–2022ರಂದು ಸಂಜೆ 5.30 ಗಂಟೆಗೆ ಅಥವಾ ಮುಂಚಿತವಾಗಿ.
ಹೆಚ್ಚಿನ ಮಾಹಿತಿಯನ್ನು ಕೆಳಸಹಿದಾರರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಬೆಳಿಗ್ಗೆ 11.00 ರಿಂದ ಸಂಜೆ 5.30 ಗಂಟೆವರೆಗೆ ಪಡೆಯಬಹುದಾಗಿರುತ್ತದೆ.

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

ವಾಸಾಸಂಇ/ವಾ.ಪ್ರ/3334/ಅಡ್ವರ್ಟೋರ್/2022–23

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ ಖನಿಜ ಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು– 560001.ಫೋನ್ ಸಂ. 080–22265383
ವೆಬ್‌ಸೈಟ್: www.kiadb.in ಇ–ಮೇಲ್: cdoce2@kiadb.in or jdtp@kiadb.in

ಸಂ.ಐಎಡಿಬಿ/ಇಎನ್‌ಜಿಜಿ/ಇಐಎ/ಇಸಿ/ಇಟಿಎನ್‌ಡಿ–ಇಸಿ–15/597/2022–23 ದಿನಾಂಕ: 02–12–2022

ಪರಿಸರ ವಿಮೋಚನಾ ಪತ್ರ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪಡೆಯಲು ಯೋಜನಾ ಸಲಹೆಗಾರರನ್ನು ಪಡೆಯಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

ಕೆಐಎಡಿಬಿಯು ಕೆಳಕಂಡ ಕೈಗಾರಿಕಾ ಪ್ರದೇಶಗಳಿಗೆ ರಾಜ್ಯ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರ (ಎಸ್‌ಇಐಎಎ)/ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ (ಎಮ್.ಓ.ಇ.ಎಫ್ & ಸಿ.ಸಿ)ದಿಂದ ಪರಿಸರ ವಿಮೋಚನಾ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪತ್ರಗಳನ್ನು ಪಡೆಯಲು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಸಮ್ಮತಿ ಪತ್ರ (ಸಿ.ಎಫ್.ಇ) ಪಡೆಯಲು ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಮತ್ತು ಇತ್ಯಾದಿಯನ್ನು ಸಿದ್ಧಪಡಿಸಲು ಮತ್ತು ಈ ನಿರಾಕ್ಷೇಪಣಾ ಪತ್ರದ ನಿಬಂಧನೆಗಳಿಗೆ ಅರ್ಧ ವಾರ್ಷಿಕ ಅನುಪಾಲನಾ ವರದಿಯನ್ನು 3 ವರ್ಷಗಳವರೆಗೆ ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸುವುದಕ್ಕಾಗಿ ಸೂಕ್ತ ಯೋಜನಾ ಸಲಹೆಗಾರರಿಂದ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಅಹ್ವಾನಿಸಿದೆ. ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ನವದೆಹಲಿ ಇವರಿಂದ ಮಾನ್ಯತೆ ಪಡೆದ ಯೋಜನಾ ಸಲಹೆಗಾರರು ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ. ಯೋಜನೆಯ ವಿವರಗಳು ಕೆಳಕಂಡಂತಿವೆ.

ಕ್ರ.ಸಂ.	ಉದ್ದೇಶಿತ ಕೈಗಾರಿಕಾ ಪ್ರದೇಶದ ಹೆಸರು	ಅಂದಾಜು ವಿಸ್ತೀರ್ಣ
1	ಕುಡುತಿನಿ ಕೈಗಾರಿಕಾ ಪ್ರದೇಶ, 2ನೇ ಹಂತ, ಕುಡುತಿನಿ ಗ್ರಾಮ, ಬಳ್ಳಾರಿ ಜಿಲ್ಲೆ. (3rd Call)	538.45 acres
2	ಕುಡುತಿನಿ ಕೈಗಾರಿಕಾ ಪ್ರದೇಶ, 3ನೇ ಹಂತ, ಕುಡುತಿನಿ ಗ್ರಾಮ, ಬಳ್ಳಾರಿ ಜಿಲ್ಲೆ.	670.94 acres

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ದಿನಾಂಕಗಳು ಕೆಳಕಂಡಂತಿರುವುದು:

- ಬಿಡ್ ಪೂರ್ವ ವಿಚಾರಣೆಗಳನ್ನು ಸ್ವೀಕರಿಸಲು ಕಡೆಯ ದಿ: 06–12–2022 ಸಂಜೆ 5.00 ಗಂಟೆಯವರೆಗೆ
- ಬಿಡ್ ಪೂರ್ವ ಸಭೆ ನಡೆಯುವ ದಿ: 07–12–2022 ಮಧ್ಯಾಹ್ನ 12.00 ಗಂಟೆಗೆ.
- ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕಡೆಯ ದಿನಾಂಕ: 13–12–2022 ಸಂಜೆ 4.00 ಗಂಟೆಯವರೆಗೆ.
- ತಾಂತ್ರಿಕ ಬಿಡ್ ಗಳನ್ನು ತೆರೆಯುವ ದಿನಾಂಕ: 16–12–2022 ಬೆಳಿಗ್ಗೆ 11.30 ಗಂಟೆಗೆ.

ಸಹಿ/–
ಮುಖ್ಯ ಅಭಿಯಂತರರು–2
ಕೆ.ಐ.ಎ.ಡಿ.ಬಿ, ಬೆಂಗಳೂರು.

ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ
ಕರ್ನಾಟಕ ಸರ್ಕಾರದ ಒಂದು ಉದ್ದಿಮೆ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ ನಾಬದಂಕಾ ವಿಭಾಗ–05
ರೋಡಲಬಂಡಾ–584127 ತಾ: ಲಿಂಗಸುಗೂರು ಜಿ: ರಾಯಚೂರು

ಸಂ.ಕೃಭಾಜನಿನಿ/ನಾಬದಂಕಾ/ವಿ–5/ಯೋಶಾ/2022–23/511,512,513 ದಿನಾಂಕ : 23–11–2022

1/4–ನೇ ಕರೆ ಅಲ್ಪಾವಧಿ ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ), ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿದಾರರಿಂದ ದ್ವಿ–ಲಕೋಟೆ ಪದ್ದತಿ ಮತ್ತು ಏಕ – ಲಕೋಟೆ ಪದ್ದತಿಯಲ್ಲಿ ಶೇಕಡವಾರು ಟೆಂಡರ್‌ಗಳನ್ನು ಈ ಕೆಳಗೆ ತಿಳಿಸಿರುವಂತೆ 2022–23ನೇ ಸಾಲಿನ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಕಟ್ಟಡ ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಇ–ಪ್ರೋಕ್ಯೂರ್ಮೆಂಟ್ ಮೂಲಕ ಅಹ್ವಾನಿಸಲಾಗಿದೆ.

ಲಕೋಟೆ ಪದ್ದತಿ	ದ್ವಿ–ಲಕೋಟೆ	ಏಕ–ಲಕೋಟೆ
ಕಾಮಗಾರಿಗಳ ಸಂಖ್ಯೆ	04	2
ಇಂಡೆಟ್ ಸಂಖ್ಯೆ	23267, 23268,23276 & 23275,	23277 & 23269
ಟೆಂಡರ್ ಅರ್ಜಿ ಪ್ರಾರಂಭವಾಗುವ ದಿನಾಂಕ	29–11–2022	29-11-2022
ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ	17–11–2022 ಸಾಯಂಕಾಲ 04.00 ಗಂಟೆಗೆ	17–11–2022 ಸಾಯಂಕಾಲ 04.00 ಗಂಟೆಗೆ
ಪ್ರೀ ಬಿಡ್ ಸಭೆ ಜರಗುವ ದಿನಾಂಕ	06–12–2022 ಬೆಳಿಗ್ಗೆ 11.00 ಗಂಟೆಗೆ	–
ತಾಂತ್ರಿಕಬಿಡ್ ತರೆಯುವ ದಿನಾಂಕ	19–12–2022 ಬೆಳಿಗ್ಗೆ 11.00 ಗಂಟೆಗೆ	19–12–2022 ಬೆಳಿಗ್ಗೆ 11.00 ಗಂಟೆಗೆ
ಆರ್ಥಿಕ ಬಿಡ್ ತರೆಯುವ ದಿನಾಂಕ	21–12–2022 ಬೆಳಿಗ್ಗೆ 11.00 ಗಂಟೆಗೆ	–

ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ತರರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲ ವಿಳಾಸ http:/www.eproc.karnataka.gov.in ದಲ್ಲಿ ಅಥವಾ ಈ ಕೆಳಗೆ ಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರು
ಕೃಭಾಜನಿನಿ,ನಾಬದಂಕಾ,ವಿಭಾಗ ಸಂ–05 ರೋಡಲಬಂಡಾ

ವಾ.ಸಾ.ಸಂ.ಇ/ರಾಯಚೂರು/443/ಎಂ.ಸಿ&ಎ/2022–23

ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರವರ ಕಛೇರಿ,
ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು.
ಸಂಖ್ಯೆ: ಎಂವೈಜೆಡ್/ಎಸಿಟಿ/ಕಾಮಗಾರಿ/2022–23 ದಿನಾಂಕ: 30.11.2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಪದ್ದತಿಯಲ್ಲಿ ಮಾತ್ರ)

ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು, ಶ್ರೀ ಚಾಮರಾಜೇಂದ್ರ ಮೃಗಾಲಯ, ಮೈಸೂರು, ಇವರು ಈ ಕೆಳಕಂಡ ಕಾಮಗಾರಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆ ಮತ್ತು ಮಾರ್ಗಸೂಚಿ ಅನುಸಾರ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿತ ಮೂರನೇ ದರ್ಜೆ (ಸಿವಿಲ್) ಮತ್ತು ಮೇಲ್ಪಟ್ಟ ಹಾಗೂ Standard Tender Documents KW-1, KW-2 & KW-3 ನಲ್ಲಿ ಅರ್ಹರಿರುವ ಗುತ್ತಿಗೆದಾರರಿಂದ ಇ ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ. (https://eproc.karnataka.gov.in) (Dept. Selection: Zoo Authority) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ : 1 ಕಾಮಗಾರಿ ಹೆಸರು : Construction of Chimpanzee Day crawl inside Sri Chamarajendra Zoological Gardens, Mysuru. Est. cost Rs.60.00Lakhs, ಇ.ಎಂ.ಡಿ. **ಮೊಬಲಗು :** 1,02,000.00, **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ :** 15.12.2022 ರಂದು 16.00 ಘಂಟೆಗೆ. **ಟೆಂಡರ್ ತೆರೆಯುವ ದಿನಾಂಕ :** ತಾಂತ್ರಿಕ ಟೆಂಡರ್ **ದಿ.16.12.2022** ರಂದು 16.15 ಘಂಟೆಗೆ ಹಾಗೂ ಆರ್ಥಿಕ ಟೆಂಡರ್ **ದಿ.17.12.2022** ರಂದು **16.00** ಘಂಟೆ ನಂತರ.

ಕ್ರಮ ಸಂಖ್ಯೆ : 2 ಕಾಮಗಾರಿ ಹೆಸರು : Construction of Gaur holding room and Treatment section inside Pen-1 Guar enclosure at Chamundi Wildlife Rescue & Rehabilitation Centre Kurgally, Mysuru. **Est. cost Rs.40.00Lakhs** ಇ.ಎಂ.ಡಿ. **ಮೊಬಲಗು :** 68,000.00 **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ :** 15.12.2022 ರಂದು 16.00 ಘಂಟೆಗೆ.**ಟೆಂಡರ್ ತೆರೆಯುವ ದಿನಾಂಕ :** ದಿ.16.12.2022 ರಂದು **16.00** ಘಂಟೆ ನಂತರ.

ಕ್ರಮ ಸಂಖ್ಯೆ : 3 ಕಾಮಗಾರಿ ಹೆಸರು : Construction of Headwalls for Waste weir at Pond-3 near Snake enclosure at Zoo Gardens, Mysuru. **Est. cost Rs.16.00Lakhs** ಇ.ಎಂ.ಡಿ. **ಮೊಬಲಗು :** 33,000.00 **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ :** 15.12.2022 ರಂದು 16.00 ಘಂಟೆಗೆ. **ಟೆಂಡರ್ ತೆರೆಯುವ ದಿನಾಂಕ :** ದಿ.16.12.2022 ರಂದು **16.00** ಘಂಟೆ ನಂತರ.

ಷರತ್ತುಗಳು: 1. ಇ–ಪ್ರೊಕ್ ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ **ದಿನಾಂಕ: 30.11.2022**ರ ನಂತರ. **2.** ಇ–ಪ್ರೊಕ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆ **ದಿನಾಂಕ:15.12.2022** ರಂದು 16.00 ಘಂಟೆವರೆಗೆ. **3.** ಇ–ಪ್ರೊಕ್ ಪೋರ್ಟಲ್‌ನಲ್ಲಿ ಟೆಂಡರುಗಳನ್ನು ತೆರೆಯುವ **ದಿನಾಂಕ:16.12.2022** ಮಧ್ಯಾಹ್ನ 16.15 ಘಂಟೆಗೆ **4.** ಇ.ಎಂ.ಡಿ. ಇ–ಪೋರ್ಟಲ್‌ನಲ್ಲಿ ತಿಳಿಸಿರುವ ಪ್ರಕಾರ ಸಲ್ಲಿಸತಕ್ಕದ್ದು. **5.** ಯಾವುದೇ ಟೆಂಡರುಗಳನ್ನು ತಿರಸ್ಕರಿಸುವ ಅಥವಾ ಯಾವುದೇ ಟೆಂಡರ್ ಒಪ್ಪುವ ಅಥವಾ ಸಂದಾನ ಮಾಡುವ ಅಧಿಕಾರ ಹಾಗೂ ಷರತ್ತುಗಳನ್ನು ಸೇರಿಸುವ, ಕೈಬಿಡುವ ಹಾಗೂ ಮಾರ್ಪಾಡು ಮಾಡುವ ಅಧಿಕಾರ ಈ ಕೆಳಗೆ ಸಹಿ ಮಾಡಿದವರಿಗೆ ಇರುತ್ತದೆ. **6.** ಹೆಚ್ಚಿನ ವಿವರಗಳನ್ನು ಇ ಪೋರ್ಟಲ್‌ನಲ್ಲಿ ದೊರೆಯುವ ಸವಿವರ ಪ್ರಕಟಣೆ ಪಡೆಯಬಹುದು.

DIPR/DDMYS/MCA/722/2022-23 ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರು

ಷೇರುಪೇಟೆ ವಹಿವಾಟು

415



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	18812
ಇಂದಿನ ಅಂತ್ಯ	18696
▼	116
ದಿನದ ಕನಿಷ್ಠ	18781

ವಿನಿಮಯ ದರ

$ ಡಾಲರ್	76.24
£ ಪೌಂಡ್	99.75
€ ಯುರೊ	85.58
¥ ಯೆನ್ (100ಕ್ಕೆ)	60.16

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹555
12 ಮೊಟ್ಟೆಗೆ	₹72

ಮೈಸೂರು

100 ಮೊಟ್ಟೆಗೆ	₹555

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515(1515)
ಸೋಯಾ (ರಿಫೈನ್ಡ್)	₹1250(1280)
ಸೂರ್ಯಕಾಂತಿ (ರಿಫೈನ್ಡ್)	₹1400(1410)
ಪಾಮೋಲಿನ್	₹940(950)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2000-2700
ಮಧ್ಯಮ	₹1500-2000
ಸಣ್ಣ	₹500-1000

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು

1ನೇ ದರ್ಜೆ ₹16000-20000

2ನೇ ದರ್ಜೆ ₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹143
ಆರ್‌ಎಸ್‌ಎಸ್-5	₹135
ಗುಡ್ ಲಾಟ್	₹128

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ

ಬಂಟ್ವಾಳ

ಕೋಕ	12500-25000
ಹೊಸತು	27500-38000
ಹಳತು	48000-54500

ಭದ್ರಾವತಿ

ರಾಶಿ	40199-45639

ಚಿತ್ರದುರ್ಗ

ಆಪಿ	43339-43779
ಬೆಟ್ಟೆ	32819-33289
ಕೆಂಪುಗೋಟು	28509-28910
ರಾಶಿ	42829-43269

ಹೊನ್ನಾಳಿ

ರಾಶಿ	45611-45611

ಹೊಸನಗರ

ಕೆಂಪುಗೋಟು	30899-33399
ರಾಶಿ	43899-46170

ಕುಮಟಾ

ಚಿಪ್ಪು	27019-33019
ಕೋಕ	16509-29999
ಫ್ಯಾಕ್ಟರಿ	10169-19429
ಹಳೆಚಾಲಿ	36999-40099
ಹೊಸಚಾಲಿ	29999-33239

ಶಿವಮೊಗ್ಗ

ಬೆಟ್ಟೆ	49100-52100
ಗೊರಬಲು	17051-34098
ಹೊಸತು	43099-45599
ರಾಶಿ	43669-46599
ಸರಕು	55000-76840

ಸಿದ್ದಾಪುರ

ಬಿಳಿಗೋಟು	28199-33099
ಚಾಲಿ	35609-39799
ಕೋಕ	26109-31800
ಕೆಂಪುಗೋಟು	25099-28699
ರಾಶಿ	43099-45099
ತಟ್ಟಿಬೆಟ್ಟೆ	38209-44099

ಯಲ್ಲಾಪುರ

ಆಪಿ	58695-58695
ಬಿಳಿಗೋಟು	25012-35469
ಚಾಲಿ	36300-41069
ಕೋಕ	16892-29212
ಕೆಂಪುಗೋಟು	26899-32499
ರಾಶಿ	44099-49019
ತಟ್ಟಿಬೆಟ್ಟೆ	36799-43200

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)	
ಮೂಡಿಗೆರೆ	
ಎಪಿ	13,200
ಎಸಿ	6,720
ಆರ್‌ಪಿ	8,500
ಆರ್‌ಸಿ	4,530

ಮುಂಬೈ ಧಾರಣೆ

ಶೇಂಗಾ

2–12-2022

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	10850-10900
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525(1525)
ಒಂದು ವಾರದ ಡೆಲಿವರಿ	1520(1520)
ಸೋಯಾ ಕಚ್ಚಾ	1200(1235)
ಪಾಮ್ ವಾರದ ಡೆಲಿವರಿ	938(948)
ಸೂರ್ಯಕಾಂತಿ ಎಣ್ಣೆ ಕಚ್ಚಾ	-- (--)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

53450(53000)

ಬೆಳ್ಳಿ ಕೆ.ಜಿ 64450(63150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹371-668

ದ್ವಿತಳಿ (ಬಿ.ವಿ) ₹350-850

ಕೊಬ್ಬರಿ ಧಾರಣೆ

ಅರಸೀಕೆರೆ	₹11500-12020
ತುರುವೇಕೆರೆ	₹12000-12000

ಪೆಟ್ರೋಲ್, ಡೀಸೆಲ್ ಮಾರಾಟದಿಂದ ಕಂಪನಿಗಳಿಗೆ ನಷ್ಟ

ಪರಿಹಾರ ಕೇಳಲಿದೆ ತೈಲ ಸಚಿವಾಲಯ



ಮುಖ್ಯಾಂಶಗಳು

- ಏಪ್ರಿಲ್ 6ರಿಂದ ಆಗಿಲ್ಲ ಇಂಧನ ಬೆಲೆ ಏರಿಕೆ
- ಬ್ಯಾರೆಲ್‌ಗೆ 116 ಡಾಲರ್ ತಲುಪಿದ್ದ ಕಚ್ಚಾ ತೈಲ ಬೆಲೆ ಈಗ 84 ಡಾಲರ್‌ಗೆ ಇಳಿಕೆ

ನವದೆಹಲಿ (ಪಿಟಿಐ): ಕಚ್ಚಾ ತೈಲದ ಬೆಲೆ ಏರಿದ್ದಾಗಲೂ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಿಸದೆ ಇದ್ದುದರಿಂದಾಗಿ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳಿಗೆ ಆಗಿರುವ ನಷ್ಟವನ್ನು ಭರ್ತಿ ಮಾಡಿಕೊಡುವಂತೆ ಕೇಂದ್ರ ಪೆಟ್ರೋಲಿಯಂ ಸಚಿವಾಲಯವು, ಹಣಕಾಸು ಸಚಿವಾಲಯವನ್ನು ಕೋರಲಿದೆ. ಎಂಟು ತಿಂಗಳಿಂದ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಬದಲಾವಣೆ ಆಗಿಲ್ಲ.

ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದುಸ್ಥಾನ್ ಪೆಟ್ರೋಲಿಯಂ ಕಂಪನಿಗಳು ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿಯಲ್ಲಿ ಒಟ್ಟು ₹ 21,201 ಕೋಟಿ ನಷ್ಟ ಅನುಭವಿಸಿವೆ.

ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಳ ಮಾಡದೆ ಇದ್ದುದರಿಂದಾಗಿ ದೇಶದ ಅರ್ಥ ವ್ಯವಸ್ಥೆಗೆ ಅನುಕೂಲ ಆಗಿದೆ. ಅದಾಗಲೇ ಹೆಚ್ಚಿನ ಮಟ್ಟದಲ್ಲಿರುವ ಹಣದುಬ್ಬರ ದರವು ಇನ್ನಷ್ಟು ಹೆಚ್ಚುವುದನ್ನು ಇದು ತಡೆದಿದೆ. ಹೀಗಾಗಿ, ತೈಲ ಮಾರಾಟ ಕಂಪನಿಗಳು ತಮಗೆ ಆಗಿರುವ ನಷ್ಟವನ್ನು ಭರ್ತಿ ಮಾಡಿಕೊಡುವಂತೆ ಕೋರುವುದರಲ್ಲಿ ಅರ್ಥವಿದೆ ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

‘ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಮೇಲೆ ಸರ್ಕಾರದ ನಿಯಂತ್ರಣ ಇಲ್ಲ. ತೈಲ ಮಾರಾಟ ಕಂಪನಿಗಳು ಬೆಲೆಯನ್ನು ತಾವೇ ನಿರ್ಧರಿಸಬೇಕು. ಆದರೆ ಕಂಪನಿಗಳು ಬೆಲೆ ಹೆಚ್ಚಿಸದೆ ಇರುವ ತೀರ್ಮಾನವನ್ನು ಸ್ವಯಂಪ್ರೇರಣೆಯಿಂದ ಕೈಗೊಂಡವು’ ಎಂದು ಅವರು ವಿವರಿಸಿದ್ದಾರೆ.

ಹಣಕಾಸು ಸಚಿವಾಲಯದ ಕದ ತಟ್ಟುವ ಮೊದಲು ಪೆಟ್ರೋಲಿಯಂ ಸಚಿವಾಲಯವು ಇಡೀ ಹಣಕಾಸು ವರ್ಷದಲ್ಲಿ ಆಗಬಹುದಾದ ನಷ್ಟವನ್ನು ಲೆಕ್ಕ ಹಾಕಲಿದೆ. ಕಚ್ಚಾ ತೈಲ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಈಗ ಕಡಿಮೆ ಆಗಿದ್ದರೂ, ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಪೆಟ್ರೋಲ್ ಹಾಗೂ ಡೀಸೆಲ್ ಮಾರಾಟದಿಂದ ಈಗಲೂ ನಷ್ಟ ಅನುಭವಿಸುತ್ತಿವೆ.

ಕೇಂದ್ರ ಸರ್ಕಾರವು ಅಕ್ಟೋಬರ್‌ನಲ್ಲಿ ಈ ಮೂರು ಕಂಪನಿಗಳಿಗೆ ₹ 22 ಸಾವಿರ ಕೋಟಿ ನೀಡಿದೆ. ಎರಡು ವರ್ಷಗಳ ಅವಧಿಯಲ್ಲಿ ಎಲ್‌ಪಿಜಿ ಸಿಲಿಂಡರ್‌ಗಳ ಮಾರಾಟದಿಂದ ಆಗಿರುವ ನಷ್ಟವನ್ನು ಭರಿಸಿಕೊಳ್ಳುವುದಕ್ಕೆ ಈ ಕಂಪನಿಗಳಿಗೆ ಒಂದು ಬಾರಿಯ ನೆರವಿನ ರೂಪದಲ್ಲಿ ಈ ಹಣ ನೀಡಲಾಗಿದೆ.

ಜನವರಿಯಿಂದ ಮಾರುತಿ ಕಾರು ಬೆಲೆ ಏರಿಕೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಜನವರಿಯಿಂದ ತನ್ನ ಕಾರುಗಳ ಬೆಲೆಯನ್ನು ‘ಗಮನಾರ್ಹವಾಗಿ’ ಹೆಚ್ಚಳ ಮಾಡಲಿದೆ. ತಯಾರಿಕಾ ವೆಚ್ಚದಲ್ಲಿ ಏರಿಕೆ ಹಾಗೂ ವಾಯುಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ 2023ರ ಏಪ್ರಿಲ್‌ನಿಂದ ಜಾರಿಗೆ ಬರಲಿರುವ ಕಠಿಣ ನಿಯಮಗಳ ಪಾಲನೆಗೆ ಸಜ್ಜಾಗಬೇಕಿರುವುದು ಬೆಲೆ ಏರಿಕೆ ತೀರ್ಮಾನಕ್ಕೆ ಕಾರಣ.

ತಯಾರಿಕಾ ವೆಚ್ಚ ಹೆಚ್ಚಾಗಿರುವ ಕಾರಣ, ಗ್ರಾಹಕರಿಗೆ ಬೆಲೆ ಏರಿಕೆಯ ಹೊರೆಯನ್ನು ವರ್ಗಾವಣೆ ಮಾಡುವುದು ಅನಿವಾರ್ಯವಾಗಿದೆ ಎಂದು ಕಂಪನಿಯು ತಿಳಿಸಿದೆ. ಬೆಲೆ ಏರಿಕೆ ಪ್ರಮಾಣದಲ್ಲಿ ಮಾದರಿಯಿಂದ ಮಾದರಿಗೆ ವ್ಯತ್ಯಾಸ ಇರಲಿದೆ. ಆದರೆ ಬೆಲೆ ಹೆಚ್ಚಳ ಎಷ್ಟು ಎಂಬುದನ್ನು ಕಂಪನಿ ತಿಳಿಸಿಲ್ಲ.

ಕಾರು ತಯಾರಿಕೆಗೆ ಅಗತ್ಯವಿರುವ ಸರಕುಗಳ ಬೆಲೆಯು ಎರಡು ವರ್ಷಗಳ ಹಿಂದಿನ ಮಟ್ಟಕ್ಕೆ ಹೋಲಿಸಿದರೆ ಈಗ ದುಬಾರಿಯಾಗಿದೆ ಎಂದು ಕಂಪನಿಯ ಮಾರುಕಟ್ಟೆ ಮತ್ತು ಮಾರಾಟ ವಿಭಾಗದ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಶಶಾಂಕ್ ಶ್ರೀವಾಸ್ತವ ಹೇಳಿದ್ದಾರೆ. ಕಂಪನಿಯು ಏಪ್ರಿಲ್‌ನಲ್ಲಿ ವಾಹನಗಳ ಬೆಲೆಯನ್ನು ಶೇ 1.3ರಷ್ಟು ಹೆಚ್ಚಿಸಿತ್ತು.

ನೈರುತ್ಯ ರೈಲ್ವೆ: ₹ 4,447 ಕೋಟಿ ಆದಾಯ

ಹುಬ್ಬಳ್ಳಿ: ನೈರುತ್ಯ ರೈಲ್ವೆ ಏಪ್ರಿಲ್–ನವೆಂಬರ್ ಅವಧಿಯಲ್ಲಿ ₹ 4,447.62 ಕೋಟಿ ಆದಾಯ ಗಳಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹ 3,400.83 ಕೋಟಿ ಆದಾಯ ಬಂದಿತ್ತು. ಆದಾಯದಲ್ಲಿ ಶೇ 30.78ರಷ್ಟು ಏರಿಕೆಯಾಗಿದೆ ಎಂದು ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಯಾಣಿಕರಿಂದ ಬರುವ ಆದಾಯದಲ್ಲಿ ಕಳೆದ ವರ್ಷಕ್ಕಿಂತ ಶೇ 95.57ರಷ್ಟು ಹೆಚ್ಚಳವಾಗಿದೆ. ₹ 1813.58 ಕೋಟಿ ಆದಾಯ ಬಂದಿದೆ. ಹಿಂದಿನ ವರ್ಷ ₹ 927.31 ಕೋಟಿ ಆದಾಯವಿತ್ತು. ಟಿಕೆಟ್ ಇಲ್ಲದವರಿಗೆ ವಿಧಿಸುವ ದಂಡದ ಮೂಲಕ ₹ 37.74 ಕೋಟಿ ಆದಾಯ ಬಂದಿದೆ.

ಪಾರ್ಸಲ್ ಹಾಗೂ ಲಗೇಜ್‌ದಿಂದ ₹ 93.29 ಕೋಟಿ ಆದಾಯ ಬಂದಿದ್ದು, ಕಳೆದ ವರ್ಷದ ₹ 80.20 ಕೋಟಿ ಆದಾಯಕ್ಕೆ ಹೋಲಿಸಿದರೆ ಶೇ 16.32ರಷ್ಟು ಏರಿಕೆಯಾಗಿದೆ. ಅನುಪಯುಕ್ತ ವಸ್ತುಗಳ (ಸ್ಕ್ರ್ಯಾಪ್ ಸೇಲ್) ಮಾರಾಟದಿಂದ ₹ 113.43 ಕೋಟಿ ಆದಾಯ ಬಂದಿದ್ದು, ಕಳೆದ ವರ್ಷದ ₹ 96.67 ಕೋಟಿಗೆ ಹೋಲಿಸಿದರೆ ಶೇ 17.34ರಷ್ಟು ಏರಿಕೆಯಾಗಿದೆ.

ಟೈರ್ ತಯಾರಿಕೆ ಉದ್ಯಮ: ಕೋವಿಡ್ ನಂತರ ಪ್ರಗತಿ



ಡಾ.ರಘುಪತಿ ಸಿಂಘಾನಿಯಾ

ಮೈಸೂರು: ‘ಕೋವಿಡ್ ನಂತರ ಟೈರ್ ತಯಾರಿಕೆ ಉದ್ಯಮ ನಿರೀಕ್ಷೆಗಿಂತಲೂ ಉತ್ತಮ ಪ್ರಗತಿ ಕಂಡಿದೆ’ ಎಂದು ಜೆಕೆ ಟೈರ್ ಮತ್ತು ಇಂಡಸ್ಟ್ರೀಸ್ ಲಿಮಿಟೆಡ್‌ನ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಡಾ. ರಘುಪತಿ ಸಿಂಘಾನಿಯಾ ತಿಳಿಸಿದರು.

ಕೆಆರ್‌ಎಸ್ ರಸ್ತೆಯಲ್ಲಿರುವ ಜೆಕೆ ಟೈರ್ ‘ವಿಕ್ರಾಂತ’ ಘಟಕದಲ್ಲಿ ಶುಕ್ರವಾರ ನಡೆದ ಸಂಸ್ಥೆಯ ಬೆಳ್ಳಿಹಬ್ಬ ಆಚರಣೆ ಕಾರ್ಯಕ್ರಮದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕೋವಿಡ್ ನಂತರವು ಬೇಡಿಕೆ, ಪೂರೈಕೆ ಹಾಗೂ ಲಾಭಾಂಶದಲ್ಲಿ ಪ್ರಗತಿ ದಾಖಲಿಸಿದೆ. ಉದ್ಯಮವು ಆರೋಗ್ಯಕರ ಬೆಳವಣಿಗೆ ದಾಖಲಿಸಿದೆ’ ಎಂದರು.

‘ಉದ್ಯಮಕ್ಕೆ ಬೇಕಾದ ಕಚ್ಚಾವಸ್ತುಗಳನ್ನು ಅಗತ್ಯಾನುಸಾರ ಶೇ 30ರವರೆಗೂ ಆಮದು ಮಾಡಿಕೊಳ್ಳಲಾಗುತ್ತಿದೆ. ದೇಶದ ಹವಾಮಾನಕ್ಕೆ ಪೂರಕವಾದ, ಅಧಿಕ ಮೈಲೇಜ್, ಪುನರ್ ಬಳಕೆ ಆಗುವಂತಹ ಟೈರ್‌ಗಳ ಉತ್ಪಾದನೆಗೆ ಕಂಪನಿ ಹೆಚ್ಚಿನ ಒತ್ತು ನೀಡಿದೆ’ ಎಂದು ತಿಳಿಸಿದರು.

ಬೆಂಗಳೂರು – ಸ್ಯಾನ್‌ಫ್ರಾನ್ಸಿಸ್ಕೊ ವಿಮಾನಯಾನ ಮತ್ತೆ ಆರಂಭ

ಬೆಂಗಳೂರು: ಟಾಟಾ ಸಮೂಹದ ಒಡೆತನಕ್ಕೆ ಸೇರಿರುವ ಏರ್ ಇಂಡಿಯಾ ವಿಮಾನಯಾನ ಕಂಪನಿಯು ಬೆಂಗಳೂರಿನಿಂದ ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೊ ನಗರಕ್ಕೆ ನೇರ ವಿಮಾನ ಸಂಚಾರವನ್ನು ಶುಕ್ರವಾರದಿಂದ ಮತ್ತೆ ಆರಂಭಿಸಿದೆ.

ವಾರದಲ್ಲಿ ಮೂರು ದಿನ (ಶುಕ್ರವಾರ, ಭಾನುವಾರ ಮತ್ತು ಬುಧವಾರ) ಈ ವಿಮಾನ ಸಂಚಾರ ಇರಲಿದೆ. ಬೆಂಗಳೂರು ಮತ್ತು ಸ್ಯಾನ್‌ಫ್ರಾನ್ಸಿಸ್ಕೊ ನಡುವಿನ ಅಂತರ ವಾಯುಮಾರ್ಗದಲ್ಲಿ ಅಂದಾಜು 13,993 ಕಿ.ಮೀ. ಈ ಮಾರ್ಗದಲ್ಲಿ ವಿಮಾನ ಸಂಚಾರದ ಒಟ್ಟು ಅವಧಿ 17 ಗಂಟೆಗಿಂತ ಹೆಚ್ಚಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಷೇರುಪೇಟೆ: ಎಂಟು ದಿನಗಳ ಗಳಿಕೆಗೆ ವಿರಾಮ

ಮುಂಬೈ (ಪಿಟಿಐ): ಎಂಟು ದಿನಗಳ ಗಳಿಕೆಯ ಓಟಕ್ಕೆ ವಿರಾಮ ನೀಡಿರುವ ದೇಶದ ಷೇರುಪೇಟೆಗಳು, ಶುಕ್ರವಾರದ ವಹಿವಾಟಿನಲ್ಲಿ ಕುಸಿತ ಕಂಡಿವೆ. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 415 ಅಂಶ, ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 116 ಅಂಶ ಇಳಿಕೆ ಕಂಡಿವೆ.

ದೇಶದ ಷೇರುಪೇಟೆಯಲ್ಲಿ ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಷೇರುಗಳ ಮಾರಾಟಕ್ಕೆ ಗಮನ ನೀಡಿದ್ದು ಹಾಗೂ ಜಾಗತಿಕ ಷೇರುಪೇಟೆಗಳಲ್ಲಿ ತೇಜಿ ವಹಿವಾಟು ಇಲ್ಲದಿದ್ದುದು ಸೂಚ್ಯಂಕಗಳ ಇಳಿಕೆಗೆ ಕಾರಣವಾದವು ಎಂದು ವರ್ತಕರು ತಿಳಿಸಿದ್ದಾರೆ.

‘ಹೂಡಿಕೆದಾರರು ಲಾರ್ಜ್‌ಕ್ಯಾಪ್ ವರ್ಗದ ಷೇರುಗಳನ್ನು ಲಾಭ ಗಳಿಕೆಯ ಉದ್ದೇಶದಿಂದ ಮಾರಾಟ ಮಾಡಿದರು’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ. ಎಂಟು ದಿನಗಳ ಏರುಗತಿಯ ವಹಿವಾಟಿನಲ್ಲಿ ಸೆನ್ಸೆಕ್ಸ್ ಒಟ್ಟು 2,139 ಅಂಶ ಏರಿಕೆ ಕಂಡಿದೆ.

ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಗ್‌ಕಾಂಗ್ ಷೇರುಗಳು ಇಳಿಕೆ ಕಂಡಿವೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರವು ಶೇ 0.13ರಷ್ಟು ಕಡಿಮೆ ಆಗಿದ್ದು ಪ್ರತಿ ಬ್ಯಾರೆಲ್‌ಗೆ 86.77ರಂತೆ ಮಾರಾಟವಾಗಿದೆ.

ಪುರಸಭೆ ಕಾರ್ಯಾಲಯ, ಗಜೇಂದ್ರಗಡ, ಜಿಲ್ಲಾ : ಗದಗ–582114

ದೂರವಾಣಿ ಸಂಖ್ಯೆ : 08381–262222 ಫ್ಯಾಕ್ಸ್ : 08381–263552

email address : tmc.gjd@gmail.com

ನಂ.:ಪುಸಗ/15ನೇಹ.ಸಾ.ಮೂ.ಅಅಲ್ಪಾವಧಿ ಇ-ಟೆಂಡರ/2022–23 ದಿ: 01–12–2022

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಪಾರದರ್ಶಕ ಅಧಿನಿಯಮ 1999 & 2000 ಪ್ರಕಾರ ಇ-ಪ್ರೊಕ್ಯೂರಮೆಂಟ್ ಪದ್ಧತಿಯಲ್ಲಿ ಸನ್– 2020–21ನೇ ಸಾಲಿನ 15ನೇ ಹಣಕಾಸು ಸಾಮಾನ್ಯ ಮೂಲ ಅನುದಾನದಡಿ ಬೀದಿ ದೀಪಗಳ ಕಂಬ ಬದಲಾವಣೆ ಕಂಬ, ಲೈನ್ ಅಳವಡಿಕೆ ಅಂದಾಜು ಮೊತ್ತ ರೂ. 24.10 ಲಕ್ಷ, DMA/2022-23/EL/WORK_INDENT141690 ಕಾಮಗಾರಿ ನಿರ್ವಹಣೆಗಾಗಿ ಕೆ.ಡಬ್ಲ್ಯೂ–1 ದಸ್ತಾವೇಜನಲ್ಲಿ ಇ-ಪ್ರೋಕ್ಯೂರಮೆಂಟನಲ್ಲಿ ನೊಂದಾಯಿಸಲ್ಪಟ್ಟ, ಹೆಸ್ಕಾಂ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಇ.ಎಂ.ಡಿ ಹಾಗೂ ಇತರೆ ದಾಖಲೆಗಳ ಹೆಚ್ಚಿನ ಮಾಹಿತಿಗಾಗಿ ಇ-ಪ್ರೋಕ್ಯೂರಮೆಂಟ್ ವೆಬ್ ಸೈಟ್ ಮೂಲಕ http://eproc.karnataka.gov.in ಸಂಪರ್ಕಿಸುವದು, ನಿರ್ಧಾರಿತ ದಿನಾಂಕಗಳು (1) ಇ-ಪ್ರೋಕ್ಯೂರಮೆಂಟ್ ಪದ್ಧತಿಯಲ್ಲಿ ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 13–12–2022 ಸಾಯಂಕಾಲ 5.30 ರವರೆಗೆ (2) ಟೆಂಡರ ತೆರೆಯುವ ದಿನಾಂಕ : 15–12–2022 ಬೆಳಿಗ್ಗೆ, 11:00 ರಂತೆ ಇದ್ದು ನಮೂದಿಸಿದ ದಿನಾಂಕದಂದು ಆನಲೈನ ಮೂಲಕವೇ ಟೆಂಡರ ಸಲ್ಲಿಸುವದು.

ಸಹಿ/– ಮುಖ್ಯಾಧಿಕಾರಿ ಪುರಸಭೆ ಗಜೇಂದ್ರಗಡ | ಸಹಿ/– ಅಧ್ಯಕ್ಷರು ಪುರಸಭೆ ಗಜೇಂದ್ರಗಡ

ವಾಸಾಸಂಇ/ಗದಗ/ಎಂ.ಸಿ.ಎ/470/2022–23

ಕಾರ್ಯಾಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.

ಇ-ಮೇಲ್:zped_cta@yahoo.com ದೂರವಾಣಿ ಸಂ:08194–222372

ಸಂ. ಪಂರಾಜ್‌ಇಂವಿ/ಚಿದು/ಇಇ/ಜೆಇ/ಟೆಂಡರ್/2022–23/2805 ದಿ: 01.12.2022

ಅಲ್ಪಾವಧಿ/ಮರು ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್)

ಉಲ್ಲೇಖಿ ಪತ್ರದ ಪ್ರಕಟಣೆಯಲ್ಲಿ ಚಿತ್ರದುರ್ಗ ಜಿಲ್ಲೆಯ ವಿವಿಧ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಪ್ಯಾಕೇಜ್ ಟೆಂಡರ್‌ಗಳನ್ನೊಳಗೊಂಡಂತೆ ಕೆಲವು ಕಾಮಗಾರಿಗಳಿಗೆ 1ನೇ ಕರೆ ಹಾಗೂ 2ನೇ ಕರೆಯನ್ನು ಒಟ್ಟು 12 ಕಾಮಗಾರಿಗಳಿಗೆ ಅಂದಾಜು ಮೊತ್ತ ಗರಿಷ್ಠ 97.30 ಲಕ್ಷ ಕನಿಷ್ಠ ರೂ. 4.00 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು, ದಿನಾಂಕಗಳು ಈ ಕೆಳಕಂಡಂತಿವೆ. (1) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 07.12.2022 ಸಮಯ 17.30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 08.12.2022 ಸಮಯ 16.00 (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 09.12.2022 ಸಮಯ 16.01 (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 12.12.2022ರ: ಸಮಯ 16.02. ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (https://eproc.karnataka.gov.in) or E-Proc Help desk Phone No: 080-25501216, 080-25501227 ಸಂಪರ್ಕಿಸಲು ಅಥವಾ ದೂರವಾಣಿ ಸಂಖ್ಯೆ: 08194–222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

RO.No.740:DIPR/CTA/MCA/2022-23 | ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಲೋಕೋಪಯೋಗಿ ಇಲಾಖೆ. ತುಮಕೂರು

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.

ಕ್ರ.ಸಂ:ಕಾಇಂ:ಲೋಇವಿ:ತುವು:ಸ ಇಂ–1:ಟೆಂಡರ್–36/2022–23 ದಿನಾಂಕ 30.11.2022

ಟೆಂಡರ್ ಪ್ರಕಟಣೆ ಸಂ.36/2022–23 ದಿನಾಂಕ: 30.11.2022

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 36/2022–23:ದಿನಾಂಕ 30–11–2022ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054–03–337–0–17–154 ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳು ಸುಧಾರಣೆ ಲೆಕ್ಕ ಶೀರ್ಷಿಕೆ ಅಡಿಯಲ್ಲಿ 1 ಕಾಮಗಾರಿಗೆ ಇ-ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಮೊತ್ತ ರೂ.832.34 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.12,48,600/–, ಅರ್ಹ ಗುತ್ತಿಗೆದಾರರು: 1 ನೇ ದರ್ಜೆ, ಕಾಲಾವಧಿ: 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: 28.12.2022 ರ 16.00 ಗಂಟೆಗೆ, ಇ-ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ 30.11.2022 ರಿಂದ 29.12.2022ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: 29.12.2022 ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 30.12.2022 ರ ಸಂಜೆ 16.30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ: 02.01.2023 ರ ಸಂಜೆ 16.30 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.inರಲ್ಲಿ ಪಡೆಯಬಹುದಾಗಿದೆ. **ಸೂಚನೆ:** ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/735/MCA/2022-23

ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ, ತುಮಕೂರು–572 103, ದೂರವಾಣಿ : 0816–2254546

ಸಂಖ್ಯೆ:ತುವಿ/ತಾವಿ/ಉ.ಪ್ರಾ.ವಿ/ಟೆಂ.ಪ್ರ:2022–23/21 ದಿನಾಂಕ: 30.11.2022

ಟೆಂಡರ್ ಪ್ರಕಟಣೆ

ತುಮಕೂರು ವಿಶ್ವವಿದ್ಯಾನಿಲಯದ ಬಿದರಕಟ್ಟೆ ನೂತನ ಕ್ಯಾಂಪಸ್ “ಜ್ಞಾನಸಿರಿ” ಆವರಣದಲ್ಲಿ ನಿರ್ಮಾಣವಾಗುತ್ತಿರುವ ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರ ಕಟ್ಟಡದ ಸುತ್ತಲೂ ಕಾಂಪೌಂಡ್ ನಿರ್ಮಿಸುವ ಕಾಮಗಾರಿಯನ್ನು ನಿರ್ವಹಿಸಲು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ರೂ.72.40 ಲಕ್ಷಗಳಿಗೆ ನಿಯಮಾನುಸಾರ ಟೆಂಡರನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ದಿನಾಂಕ: 15.12.2022 ಕೊನೆಯ ದಿನಾಂಕವಾಗಿದ್ದು ಹೆಚ್ಚಿನ ವಿವರಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ www.eproc.karnataka.gov.in ನಲ್ಲಿ ಸಂಪರ್ಕಿಸಬಹುದು ಅಥವಾ ಈ ಕೆಳಕಂಡ ಅಧಿಕಾರಿಯ ಕಚೇರಿಯಲ್ಲಿ ಪಡೆಯಬಹುದಾಗಿದೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು/ಕುಲಸಚಿವರು, ಉಪ–ಪ್ರಾದೇಶಿಕ ವಿಜ್ಞಾನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ರಾಮನಗರ ವಿಶೇಷ ವಿಭಾಗ, ರಾಮನಗರ.

ಅಲ್ಪಾವಧಿ ಟೆಂಡರ್

ಪ್ರಕಟಣೆ ಸಂಖ್ಯೆ: 10/2022–23 ದಿನಾಂಕ: 29–11–2022

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2022–23 ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ 10 ಸಂಖ್ಯೆಯ ಅಂದಾಜು ಮೊತ್ತ ರೂ. 100.00 ಲಕ್ಷಗಳ ವರೆಗಿನ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇ.ಎಂ.ಡಿ. ಮುಂತಾದ ಇತರ ಮಾಹಿತಿಗಳನ್ನು http://www.eproc.karnataka.gov.in ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ.

1. ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಟೆಂಡರ್ ಡಾಕ್ಯುಮೆಂಟ್ ಅನ್ನು ದಿನಾಂಕ: 29–11–2022 ರಿಂದ 15–12–2022 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.
2. ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು ದಿನಾಂಕ: 15–12–2022 ವೇಳೆ 16.00 ಗಂಟೆಯೊಳಗೆ ಸಲ್ಲಿಸುವುದು.
3. ಟೆಂಡರ್‌ಗಳನ್ನು ತೆರೆಯುವ ದಿನಾಂಕ: 16–12–2022 ವೇಳೆ 16.30 ಗಂಟೆ. (ಸಾಧ್ಯವಾದಲ್ಲಿ)

ಹೆಚ್ಚಿನ ವಿವರಗಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ರಾಮನಗರ

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ (www.kpwd.gov.in)

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001.

ದೂರವಾಣಿ ಸಂಖ್ಯೆ: 080–22133370 ಫ್ಯಾಕ್ಸ್ ಸಂಖ್ಯೆ: 080–22133365

Email ID: eepwdbngdn@yahoo.com E-Portal : https://eproc.karnataka.gov.in

ಟೆಂಡರ್ ಪ್ರಕಟಣೆ ಸಂಖ್ಯೆ: 31/2022–23 ದಿನಾಂಕ: 30.11.2022

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಒಂದು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ದೇವನಹಳ್ಳಿ ಉಪವಿಭಾಗ ಉಪವಿಭಾಗಕ್ಕೆ ಸಂಬಂಧಿಸಿದಂತೆ 3 ಸಂಖ್ಯೆಯ (ರೂ. 6.00 ರಿಂದ 14.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಕಾಮಗಾರಿಗಳ ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸೆಸಿಂಗ್ ಶುಲ್ಕವನ್ನು ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: 02.12.2022 ರಿಂದ. (2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿ:09.12.2022 ಸಂಜೆ 4.00 ಗಂಟೆ ಯವರೆಗೆ. (3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ: 12.12.2022 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/3361/Zenkar/2022-23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ರಾಜರಾಜೇಶ್ವರಿನಗರ ವಿಭಾಗ, ಚೌಡೇಶ್ವರಿ ಬಸ್ ನಿಲ್ದಾಣದ ಬಳಿ, ಜೆ.ಪಿ ಪಾರ್ಕ್, ಮತ್ತೀಕೆರೆ, ಬೆಂಗಳೂರು–560 054

ಸಂಖ್ಯೆ: ಕಾಪಾಅ/ರಾರಾನವಿ/ಟೆಂಡರ್/10/2022–23 ದಿನಾಂಕ: 30.11.2022

ಟೆಂಡರ್ ಮುಂದೂಡಿಕೆ ಪ್ರಕಟಣೆ–2

ಉಲ್ಲೇಖ: ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: ಕಾಪಾಅ/ರಾರಾನವಿ/ಟೆಂಡರ್/10/2022–23, ದಿನಾಂಕ: 07.11.2022

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಈ ಕಚೇರಿಯಿಂದ ಹೊರಡಿಸಲಾದ ಉಲ್ಲೇಖಿತ ಟೆಂಡರ್ ಪ್ರಕಟಣೆಯಂತೆ ಆಹ್ವಾನಿಸಲಾಗಿದ್ದ ಟೆಂಡರ್ ಅನ್ನು ತಾಂತ್ರಿಕ ಕಾರಣಗಳಿಂದ ಟೆಂಡರ್ ಸಲ್ಲಿಸಲು ನಿಗಧಿಪಡಿಸಲಾಗಿದ್ದ ಅಂತಿಮ ದಿನಾಂಕವನ್ನು ಮುಂದೂಡಲಾಗಿರುತ್ತದೆ. ಕಾರಣಾಂತರಗಳಿಂದ ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿರುತ್ತದೆ. ಉಳಿದಂತೆ ಯಾವುದೇ ಬದಲಾವಣೆಗಳಿರುವುದಿಲ್ಲ.

ಮಾರ್ಪಾಡಾದ ಟೆಂಡರ್ ವೇಳಾಪಟ್ಟಿ

1	ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	09.12.2022ರ ಸಂಜೆ 4:00 ಗಂಟೆಗೆ
2	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	12.12.2022ರ ಸಂಜೆ 4:30 ಗಂಟೆಗೆ

ಸಹಿ/– ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಿಭಾಗ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ

ಮುಖ್ಯ ಅಭಿಯಂತರವರ ಕಚೇರಿ, ಆರ್‌ಡಿಡಬ್ಲ್ಯು&ಎಸ್ ಇಲಾಖೆ, 1ನೇ ಮಹಡಿ, "ಇ" ಬ್ಲಾಕ್,ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009

ದೂ.ಸಂ.: 080–22533700, e-mail: cerws14@gmail.com

ಸಂಖ್ಯೆ: ಗ್ರಾಕುನೀ&ನೈಇ/605/ಸಿಇ/ಟೆಕ್./2022–23 ದಿನಾಂಕ: 01.12.2022

ಟೆಂಡರ್ ಆಹ್ವಾನ

ಕರ್ನಾಟಕದಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗೆ ಸ್ವತಂತ್ರ ಪರಿಶೀಲನಾ ಏಜೆನ್ಸಿ (Independent Verification Agency) ಸೇವೆಗಳಿಗಾಗಿ ಅರ್ಹ ಬಿಡ್‌ದಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನ (https://eproc.karnataka.gov.in) ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಇ–ಪೋರ್ಟಲ್ ಮೂಲಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 30.12.2022ರ ಸಂಜೆ 4.00 ಗಂಟೆಯೊಳಗೆ. ಇ.ಎಂ.ಡಿ ಮೊತ್ತ: ರೂ.7,50,000/–. ಸಹಿ/– ಮುಖ್ಯ ಅಭಿಯಂತರರು ಗ್ರಾ.ಕು.ನೀ.&ನೈ.ಇಲಾಖೆ, ಬೆಂಗಳೂರು

DIPR/CP/BCPL/3349/2022-23

ತುಮಕೂರು ಮಹಾನಗರ ಪಾಲಿಕೆ, ತುಮಕೂರು

ದೂ–2278480, ಫ್ಯಾಕ್ಸ್: 2275106, ಇ–ಮೇಲ್: itstaff_ulb_tumkur@yahoo.com ವೆಬ್‌ಸೈಟ್: www.tumkurcity.mrc.gov.in

ಸಂಖ್ಯೆ:ತುಮಪಾ/ಆಶಾ/64/2022–23 ದಿನಾಂಕ 25.11.2022

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್2000ರ ನಿಯಮದಂತೆಈ ಕೆಳಕಂಡ ವಿವಿಧಕಾಮಗಾರಿಗೆ ಸ್ಟ್ಯಾಂಡರ್‌ಟೆಂಡರ್ ಡಾಕ್ಯುಮೆಂಟ್‌ನ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿದ್ದು,ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು ಮಾಹಿತಿಯನ್ನು http://www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಪಾಲಿಕೆಯ ಆರೋಗ್ಯ ಶಾಖೆಯಿಂದ ಮಾಹಿತಿಯನ್ನು ಪಡೆಯಬಹುದಾಗಿದೆ.

ಕಾಮಗಾರಿಯ ಹೆಸರು :– 1. ತುಮಕೂರು ಮಹಾನಗರ ಪಾಲಿಕೆ ಮಾಲಿಕತ್ವದ ವಿವಿಧ ಮಾದರಿಯ ವಾಹನಗಳಿಗೆ ಜಿಪಿಎಸ್ ಯಂತ್ರಗಳನ್ನು ಸರಬರಾಜು ಮಾಡಿ ಅಳವಡಿಸುವಕಾಮಗಾರಿ (: ಅಲ್ಪಾವಧಿ ಮರುಟೆಂಡರ್–DMA/2022-23/IND14507/Call-3) ಅಂದಾಜು ಮೊತ್ತ 10.00 (ಲಕ್ಷಗಳಲ್ಲಿ) ಇ.ಎಮ್.ಡಿ ಮೊತ್ತ ರೂ.25000/–ಗಳಲ್ಲಿ.
2. ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ನಿರ್ಮಿಸುತ್ತಿರುವ 1 ಸಂಖ್ಯೆ ಸ್ವಚ್ಛ ಗೃಹ ಕಲಿಕಾ ಕೇಂದ್ರಕ್ಕೆ ವಿವಿಧ ಮಾದರಿಯ ಕಾರ್ಯರೂಪಿ ಸಮುದಾಯ ಗೊಬ್ಬರ ಘಟಕಗಳು ಮತ್ತು ಮನೆಯ ತ್ಯಾಜ್ಯ ಗೊಬ್ಬರ ಯುನಿಟ್ಗಳನ್ನು DMA/2022-23/IND14610/Call-3) ಅಂದಾಜು ಮೊತ್ತ 27.60 (ಲಕ್ಷಗಳಲ್ಲಿ) ಇ.ಎಮ್.ಡಿ ಮೊತ್ತ ರೂ.55200/–ಗಳಲ್ಲಿ.
3. ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಮನೆ ಮನೆ ತ್ಯಾಜ್ಯ ಸಂಗ್ರಹಣೆಗೆ ಅವಶ್ಯಕವಿರುವ 4 ಬಿನ್ ಗಳುಳ್ಳ ತಳ್ಳುವ ಗಾಡಿಖರೀದಿಸುವ ಕಾಮಗಾರಿ (: ಅಲ್ಪಾವಧಿ ಮರುಟೆಂಡರ್–DMA/2022-23/IND14510/Call-2) ಅಂದಾಜು ಮೊತ್ತ 10.00, ಇ.ಎಮ್.ಡಿ ಮೊತ್ತ ರೂ.25000/–ಗಳಲ್ಲಿ.
4. ತ್ಯಾಜ್ಯವನ್ನೂ ಮೂಲದಲ್ಲಿಯೆ 1) ಹಸಿ ತ್ಯಾಜ್ಯ2) ಒಣ ತ್ಯಾಜ್ಯ 3) ಬಯೋ–ಮೆಡಿಕಲ್‌ತ್ಯಾಜ್ಯ 4) ಹಾನಿಕಾರಕ ತ್ಯಾಜ್ಯ ಮತ್ತು 5) ಇ–ತ್ಯಾಜ್ಯ ಎಂದು ವಿಂಗಡಿಸಿ ನೀಡುವ ಮಾಹಿತಿಯುಳ್ಳ 8"*12" ಅಳತೆಯ ಮಲ್ಟಿ ಕಲರ್ ಸ್ಟಿಕರ್ ಸರಬರಾಜು ಪಡೆಯುವ ಕಾಮಗಾರಿ, ಅಂದಾಜು ಮೊತ್ತ 07.00 (ಲಕ್ಷಗಳಲ್ಲಿ) ಇ.ಎಮ್.ಡಿ ಮೊತ್ತ ರೂ.17500/–ಗಳಲ್ಲಿ.

ಅಲ್ಪಾವಧಿಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ : 1. ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 28.11.2022 ರಿಂದ 05.12.2022 ರವರೆಗೆ. 2. ಟೆಂಡರ್ ಸಲ್ಲಿಸುವ ಕೊನೆ ದಿನಾಂಕ: 05.12.2022 ರಂದು ಸಾಯಂಕಾಲ 4.30 ಗಂಟೆವರೆಗೆ. 3. ತಾಂತ್ರಿಕ ಬಿಡ್‌ನ್ನುತೆರೆಯುವ ದಿನಾಂಕ: 06.12.2022 ಸಾಯಂಕಾಲ 4.45 ಗಂಟೆಗೆ.

ಸಹಿ/– ಕಾರ್ಯಪಾಲಕ ಅಭಿಯಂತರರು ತುಮಕೂರು ಮಹಾನಗರ ಪಾಲಿಕೆ, ತುಮಕೂರು

DIPR/TUM/729/MCA/2022-23

ಕರ್ನಾಟಕ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಗಳ ನಿರ್ದೇಶನಾಲಯ

ಎಸ್. ನಿಜಲಿಂಗಪ್ಪ ರಸ್ತೆ, ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು–10.

ಸಂಖ್ಯೆ: ಇಎಸ್‌ಐಎಸ್/ಇಜಿಎಸ್–2/106/2022–23 ದಿನಾಂಕ: 28.11.2022

ಟೆಂಡರ್ ಪ್ರಕಟಣೆ

Tender for Supply of Laboratory Chemicals for the Department of ESIS Medical Servicesಗೆ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆ, ವಿವರಗಳಿಗೆ ಹಾಗೂ ದಾಖಲಿಸಲು ಸಂಪರ್ಕಿಸಬೇಕಾದ ವೆಬ್‌ಸೈಟ್: www.eproc.karnataka.gov.in ಮುಂಗಡ ಠೇವಣಿ: EMD 2.5% of the total Tender Value including all applicable taxes should be paid (where in Rs. 1,00,000 minimum to be paid without fail). ಪ್ರಿ–ಬಿಡ್ ಮೀಟಿಂಗ್ ದಿನಾಂಕ ಮತ್ತು ಸ್ಥಳ: 07.12.2022ರ ಬೆಳಿಗ್ಗೆ 11.30 ಗಂಟೆಗೆ ಮೇಲ್ಕಂಡ ಕಛೇರಿಯಲ್ಲಿ. ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಲು ಅಂತಿಮ ದಿನಾಂಕ: 15.12.2022ರ ಸಂಜೆ 4.30 ಗಂಟೆಯೊಳಗೆ. ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಸ್ವೀಕರಿಸಿದ ಟೆಂಡರ್‌ಗಳ ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: 19.12.2022ರ ಬೆಳಿಗ್ಗೆ 11.30 ಗಂಟೆಗೆ.

ಸಹಿ/– ನಿರ್ದೇಶಕರು (ಪ್ರ), ಕಾ.ರಾ.ವಿ.ಯೋ.ವೈ ಸೇವೆ

ವಾಸಾಸಂಇ/ವಾಪ್ರ/3320/2022–23

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041

ದೂ: 080–26961928 ಫ್ಯಾಕ್ಸ್–080–26961929

ಸಂಖ್ಯೆ:ರಾಗಾವಿ/ಪ್ರೊಕ್/ವೆಬ್ ಸ್ಟ್ರೀಮಿಂಗ್/63/2022–23 ದಿನಾಂಕ: 01.12.2022

ಇ-ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು ವಿಶ್ವವಿದ್ಯಾಲಯದ ಪರೀಕ್ಷೆ ಕೇಂದ್ರಗಳಿಗೆ (Theory) ವೆಬ್ ಸ್ಟ್ರೀಮಿಂಗ್ ಸೇವೆಯನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ.

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	01/12/2022 ಸಂಜೆ 3:14:00 ಗಂಟೆಗೆ
ಪೂರ್ವ ಬಿಡ್ ಸಭೆಯ ದಿನಾಂಕ	05/12/2022 ಬೆಳಿಗ್ಗೆ 10:30 ಗಂಟೆಗೆ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	09/12/2022 ಸಂಜೆ 5:00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	12/12/2022 ಬೆಳಿಗ್ಗೆ 11:30 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು https://eproc.karnataka.gov.in ನಿಂದ ಪಡೆದುಕೊಳ್ಳಬಹುದು. ಸಹಿ/– ಕುಲಸಚಿವರು

ವಾ.ಸಾ.ಸಂ.ಇ/3333/2022–23

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ (www.kpwd.gov.in)

ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. 560001.

ದೂರವಾಣಿ ಸಂಖ್ಯೆ: 080–22133370 ಫ್ಯಾಕ್ಸ್ ಸಂಖ್ಯೆ: 080–22133365

Email ID: eepwdbngdn@yahoo.com E-Portal : https://eproc.karnataka.gov.in

ಟೆಂಡರ್ ಪ್ರಕಟಣೆ ಸಂಖ್ಯೆ: 32/2022–23 ದಿನಾಂಕ: 01.12.2022

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಒಂದು ಹಾಗೂ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ ನಂ.2 ಉತ್ತರ, ಆನೇಕಲ್ ಹಾಗೂ ದೊಡ್ಡಬಳ್ಳಾಪುರ ಉಪವಿಭಾಗಕ್ಕೆ ಸಂಬಂಧಿಸಿದಂತೆ 20 ಸಂಖ್ಯೆಯ (ರೂ. 5.40 ರಿಂದ 70.00 ಲಕ್ಷಗಳ) ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರೋಸಸಿಂಗ್ ಶುಲ್ಕವನ್ನು ಇ–ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.

1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗಧಿಪಡಿಸಿರುವ ದಿನಾಂಕ: 02.12.2022 ರಿಂದ. 2) ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿ: 13.12.2022 ಸಂಜೆ 4.00 ಗಂಟೆಯವರೆಗೆ. 3) ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ತೆರೆಯುವ ದಿನಾಂಕ 14.12.2022 ಸಂಜೆ 4.30 ಗಂಟೆಗೆ ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ. ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://eproc.karnataka.gov.in) ಮೂಲಕ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು ಲೋ.ಇ, ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/3339/Zenkar/2022-23

ಸುಭಾಷಿತ
ಮಗು ತೊಡಗಿಸಿಕೊಳ್ಳುವ ಸಮಂಜಸವಾದ ಎಲ್ಲ ಚಟುವಟಿಕೆಗಳನ್ನೂ ಗೌರವಿಸಿ.
-ಮರಿಯಾ ಮಾಂಟೆಸ್ಸರಿ

ನ್ಯಾಯಮೂರ್ತಿಗಳ ನೇಮಕ ಕಾರ್ಯಾಂಗ-ನ್ಯಾಯಾಂಗದ ನಡುವೆ ಸಂಘರ್ಷ ಸಲ್ಲದು

ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಮೂರ್ತಿಗಳ ಸಮಿತಿ (ಕೊಲಿಜಿಯಂ) ಮಾಡಿದ್ದ ಶಿಫಾರಸುಗಳ ವಿಚಾರವಾಗಿ ಕೇಂದ್ರ ಸರ್ಕಾರ ಈಚೆಗೆ ತೆಗೆದುಕೊಂಡ ತೀರ್ಮಾನ ಹಾಗೂ ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ಆಡಿದ ಅನಗತ್ಯ ಮಾತುಗಳಿಗೆ ಕೋರ್ಟ್‌ನ ಪ್ರತಿಕ್ರಿಯೆಯು ನ್ಯಾಯಾಂಗದಲ್ಲಿನ ನೇಮಕಾತಿಗಳ ಕುರಿತಾಗಿ ಕೋರ್ಟ್ ಹಾಗೂ ಸರ್ಕಾರದ ನಡುವಿನ ಅಭಿಪ್ರಾಯಭೇದವನ್ನು ಮತ್ತೆ ತೋರಿಸುತ್ತಿದೆ. ಬದಲಿಗೆ, ಇದು ಕೇಂದ್ರ ಸರ್ಕಾರ ಹಾಗೂ ನ್ಯಾಯಾಂಗದ ನಡುವೆ ಸಂಘರ್ಷವೊಂದು ಹುಟ್ಟುತ್ತಿರುವ ಸೂಚನೆಯಂತೆಯೂ ನಿಲ್ಲುತ್ತಿರುವುದು. ಕೊಲಿಜಿಯಂ ರವಾನಿಸಿದ್ದ 21 ಹೆಸರುಗಳ ಪೈಕಿ 19 ಹೆಸರುಗಳನ್ನು ಸರ್ಕಾರವು ಹಿಂದಕ್ಕೆ ಕಳುಹಿಸಿದೆ. ಈ ಪೈಕಿ 10 ಹೆಸರುಗಳನ್ನು ಕೊಲಿಜಿಯಂ ಎರಡನೆಯ ಬಾರಿಗೆ ರವಾನಿಸಿತ್ತು. ಕೇಂದ್ರವು ಕೊಲಿಜಿಯಂ ಕಳುಹಿಸಿದ ಹೆಸರುಗಳನ್ನು ಒಂದು ಬಾರಿ ವಾಪಸ್ ಕಳುಹಿಸಬಹುದು. ಆದರೆ ಎರಡನೆಯ ಬಾರಿಗೆ ಕಳುಹಿಸಿದ ಹೆಸರುಗಳನ್ನು ಅದು ಮರಳಿಸುವಂತಿಲ್ಲ. ನ್ಯಾಯಮೂರ್ತಿಗಳ ನೇಮಕವನ್ನು ವಿಳಂಬ ಮಾಡುವ ಮೂಲಕ, ನೇಮಕಕ್ಕೆ ಅಡ್ಡಿ ಉಂಟುಮಾಡುವ ಮೂಲಕ ಕೇಂದ್ರವು ನ್ಯಾಯಾಲಯದ ಜೊತೆ ಸಂಘರ್ಷಕ್ಕೆ ಹಾತೊರೆಯುತ್ತಿರುವಂತೆ ಕಾಣುತ್ತಿದೆ. ಈ ಬಗೆಯ ಸಂಘರ್ಷದಿಂದ ಕೆಟ್ಟ ಹಾಗೂ ಅನಿರೀಕ್ಷಿತ ಪರಿಣಾಮಗಳು ಎದುರಾಗಬಹುದು.

ಈಗ ಚಾಲ್ತಿಯಲ್ಲಿ ಇರುವ ವ್ಯವಸ್ಥೆಯ ಪ್ರಕಾರ, ಕೊಲಿಜಿಯಂ ಎರಡನೆಯ ಬಾರಿಗೆ ಶಿಫಾರಸು ಮಾಡಿರುವ ಹೆಸರುಗಳನ್ನು ಕೇಂದ್ರ ಕಾನೂನು ಸಚಿವರು ಪ್ರಧಾನಿಯವರಿಗೆ ರವಾನಿಸಬೇಕು. ಸಾಧ್ಯವಾದರೆ ಮೂರು ವಾರಗಳೊಳಗೆ ಕಳುಹಿಸಬೇಕು. ನ್ಯಾಯಮೂರ್ತಿಗಳ ನೇಮಕಕ್ಕೆ ಪ್ರಧಾನಿಯವರು ರಾಷ್ಟ್ರಪತಿಯವರಿಗೆ ಸಲಹೆ ಮಾಡುತ್ತಾರೆ. ಆದರೆ, ನೇಮಕಾತಿಗೆ ಸರ್ಕಾರ ಒಪ್ಪಿಕೊಳ್ಳದಿರುವುದು ದೇಶದ ಕಾನೂನನ್ನು ಪಾಲಿಸದೆ ಇರುವುದಕ್ಕೆ ಸಮ. ಇದು ನ್ಯಾಯಾಲಯದ ಸೂಚನೆಯನ್ನು ಉಲ್ಲಂಘಿಸುವುದಕ್ಕೆ ಸಮ. ದೇಶದ ಕಾನೂನನ್ನು ಪಾಲಿಸುವುದು ಸರ್ಕಾರದ ಹೊಣೆ. ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದ ಪ್ರಕ್ರಿಯೆಯ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಜೊತೆ ಸಹಮತ ಇಲ್ಲದಿರಬಹುದು. ಅಥವಾ, ಕೊಲಿಜಿಯಂ ಶಿಫಾರಸು ಮಾಡಿರುವ ಹೆಸರುಗಳು ಸರ್ಕಾರಕ್ಕೆ ಒಪ್ಪಿಗೆ ಆಗುತ್ತಿರದಿರಬಹುದು. ಹೀಗಿದ್ದರೂ ಜಾರಿಯಲ್ಲಿ ಇರುವ ವ್ಯವಸ್ಥೆಗೆ ಅನುಗುಣವಾಗಿ ಅದು ನಡೆದುಕೊಳ್ಳಬೇಕು ಹಾಗೂ ಶಿಫಾರಸುಗಳನ್ನು ಒಪ್ಪಿಕೊಳ್ಳಬೇಕು.

ನ್ಯಾಯಮೂರ್ತಿಗಳ ನೇಮಕವನ್ನು ವಿಳಂಬ ಮಾಡುವ ಮೂಲಕ, ನೇಮಕಕ್ಕೆ ಅಡ್ಡಿಪಡಿಸುವ ಮೂಲಕ ಕೇಂದ್ರವು ಸಂಘರ್ಷಕ್ಕೆ ಹಾತೊರೆಯುತ್ತಿರುವಂತೆ ಕಾಣುತ್ತಿದೆ

ಸಂವಿಧಾನದ 124(2) ವಿಧಿಯ ಪ್ರಕಾರ, ರಾಷ್ಟ್ರಪತಿಯವರು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಜೊತೆ ಸಮಾಲೋಚಿಸಿ ನ್ಯಾಯಮೂರ್ತಿಗಳನ್ನು ನೇಮಕ ಮಾಡುತ್ತಾರೆ. ದೇಶಕ್ಕೆ ಸ್ವಾತಂತ್ರ್ಯ ದೊರೆತ ಆರಂಭದ ವರ್ಷಗಳಲ್ಲಿ ನೇಮಕಕ್ಕೆ ಹೆಸರು ಶಿಫಾರಸು ಮಾಡುವ ಅಧಿಕಾರವು ಕಾರ್ಯಾಂಗದ ಕೈಯಲ್ಲಿ ಇತ್ತು. ಆದರೆ, 1993ರ 'ನ್ಯಾಯಮೂರ್ತಿಗಳ ಎರಡನೆಯ ಪ್ರಕರಣ'ದ ನಂತರದಲ್ಲಿ ಕೊಲಿಜಿಯಂ ವ್ಯವಸ್ಥೆಗೆ ಸುಪ್ರೀಂ ಕೋರ್ಟ್ ಜೀವ ಕೊಟ್ಟಿತು. ಆಗ ಕೊಲಿಜಿಯಂನಲ್ಲಿ ಸಿಜೆಐ ಹಾಗೂ ಸುಪ್ರೀಂ ಕೋರ್ಟ್‌ನ ಇಬ್ಬರು ಹಿರಿಯ ನ್ಯಾಯಮೂರ್ತಿಗಳು ಇರುತ್ತಿದ್ದರು. ಈ ಕೊಲಿಜಿಯಂ ನ್ಯಾಯಮೂರ್ತಿಗಳನ್ನಾಗಿ ಯಾರನ್ನು ನೇಮಿಸಬೇಕು ಎಂಬ ಶಿಫಾರಸು ಮಾಡುತ್ತಿತ್ತು. ಕೊಲಿಜಿಯಂ ಶಿಫಾರಸು ಆಧರಿಸಿ ನ್ಯಾಯಮೂರ್ತಿಗಳ ನೇಮಕ ಮಾಡುವುದನ್ನು ಸುಪ್ರೀಂ ಕೋರ್ಟ್, ದೇಶದ ಕಾನೂನನ್ನಾಗಿಸಿತು. ಆದರೆ, ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯಲ್ಲಿ ತನ್ನ ಮಾತಿಗೂ ಬೆಲೆ ಇರಬೇಕು ಎಂದು ಕಾರ್ಯಾಂಗವು ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗವನ್ನು (ಎನ್‌ಜೆಎಸಿ) ರೂಪಿಸಿತು. ಈ ಆಯೋಗದ ರಚನೆಗೆ ಸಂಸತ್ತು ಸಂವಿಧಾನಕ್ಕೆ 2014ರಲ್ಲಿ ತಿದ್ದುಪಡಿ ತಂದಿತ್ತು. ನ್ಯಾಯಮೂರ್ತಿಗಳ ನೇಮಕ ಹಾಗೂ ಅವರ ವರ್ಗಾವಣೆಯು ಎನ್‌ಜೆಎಸಿ ಮೂಲಕ ಆಗಬೇಕಿತ್ತು. ಸಿಜೆಐ ನೇತೃತ್ವದ ಎನ್‌ಜೆಎಸಿಯಲ್ಲಿ ಸುಪ್ರೀಂ ಕೋರ್ಟ್‌ನ ಇಬ್ಬರು ಹಿರಿಯ ನ್ಯಾಯಮೂರ್ತಿಗಳು, ಕೇಂದ್ರ ಕಾನೂನು ಸಚಿವ ಹಾಗೂ ಇಬ್ಬರು ಹಿರಿಯ ವ್ಯಕ್ತಿಗಳು ಇರಬೇಕಿತ್ತು. ಎನ್‌ಜೆಎಸಿ ರಚನೆಯನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿತು. ಈ ಆಯೋಗವು ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂತಿದೆ ಎಂದು ಹೇಳಿತ್ತು. ಎನ್‌ಜೆಎಸಿ ರದ್ದುಗೊಳಿಸಿದಾಗಿನಿಂದ, ಆ ಕುರಿತು ಸರ್ಕಾರಕ್ಕೆ ಅಸಮಾಧಾನ ಇದೆ.

ಕೊಲಿಜಿಯಂ ವ್ಯವಸ್ಥೆಯ ಅಡಿಯಲ್ಲಿ ನ್ಯಾಯಮೂರ್ತಿಗಳ ನೇಮಕದ ವಿಚಾರದಲ್ಲಿ ಕಾರ್ಯಾಂಗಕ್ಕೆ ಹೆಚ್ಚಿನ ಪಾತ್ರ ಇಲ್ಲ. ಅಲ್ಲದೆ, ಈ ವ್ಯವಸ್ಥೆಯ ಅಡಿಯಲ್ಲಿ ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯು ಪಾರದರ್ಶಕವಾಗಿಲ್ಲ ಎಂಬ ಟೀಕೆ ಇದೆ. ಕೊಲಿಜಿಯಂ ವ್ಯವಸ್ಥೆಯು ಇನ್ನಷ್ಟು ಪಾರದರ್ಶಕವಾಗಿ ಇರುವಂತೆ ಮಾಡಲಾಗುತ್ತದೆ ಎಂಬ ಭರವಸೆಗಳನ್ನು ನೀಡಲಾಗಿದೆಯಾದರೂ, ಅವು ಕಾರ್ಯರೂಪಕ್ಕೆ ಬಂದಿಲ್ಲ. ಸಿಜೆಐ ಡಿ.ವೈ. ಚಂದ್ರಚೂಡ್, ಹಿಂದಿನ ಸಿಜೆಐ ಯು.ಯು. ಲಲಿತ್ ಅವರು ಕೊಲಿಜಿಯಂ ವ್ಯವಸ್ಥೆಯನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ವ್ಯವಸ್ಥೆ ಕುರಿತ ಟೀಕೆಗಳಲ್ಲಿ ನಿಜಾಂಶ ಇದ್ದಿರಬಹುದು. ಆದರೂ, ಜಾರಿಯಲ್ಲಿ ಇರುವ ವ್ಯವಸ್ಥೆಯು ನಿಷ್ಕ್ರಿಯವಾಗುವಂತೆ ಮಾಡುವುದು ತಪ್ಪು. ಆದರೆ, ಸರ್ಕಾರ ಈಗ ಅದನ್ನೇ ಮಾಡುತ್ತಿದೆ. ನ್ಯಾಯಾಂಗದ ಉನ್ನತ ಹುದ್ದೆಗಳು ಖಾಲಿ ಇರುವಾಗ, ನ್ಯಾಯಾಲಯಗಳಲ್ಲಿ ಲಕ್ಷಾಂತರ ಪ್ರಕರಣಗಳು ವಿಚಾರಣೆಗೆ ಬಾಕಿ ಇರುವಾಗ ನ್ಯಾಯಮೂರ್ತಿಗಳ ನೇಮಕಕ್ಕೆ ಅಡ್ಡಿ ಉಂಟುಮಾಡುವುದು ವ್ಯವಸ್ಥೆಯನ್ನು ದುರ್ಬಲವಾಗಿಸುವುದಕ್ಕೆ ಸಮ. ಅಲ್ಲದೆ, ನ್ಯಾಯ ಬಯಸುವ ಜನರಿಗೆ ನ್ಯಾಯ ನಿರಾಕರಿಸಿದಂತೆಯೂ ಆಗುತ್ತದೆ.

ರಿಜಿಜು ಅವರು ಕೊಲಿಜಿಯಂ ವ್ಯವಸ್ಥೆಯ ಬಗ್ಗೆ ಮತ್ತೆ ಮತ್ತೆ ವಾಗ್ದಾಳಿ ನಡೆಸುತ್ತಿದ್ದಾರೆ. ತಮ್ಮ ಪ್ರತೀ ಹೇಳಿಕೆಯ ಮೂಲಕ ಅವರು ಪರಿಸ್ಥಿತಿ ಬಿಗಡಾಯಿಸುವಂತೆ ಮಾಡುತ್ತಿದ್ದಾರೆ. ಪ್ರಧಾನಿಯವರ ಸಮ್ಮತಿ ಇದ್ದರಷ್ಟೇ ರಿಜಿಜು ಇಂತಹ ಮಾತುಗಳನ್ನು ಆಡಲು ಸಾಧ್ಯ. ರಿಜಿಜು ಅವರು ತೀರಾ ಈಚೆಗೆ ಆಡಿದ ಮಾತಿನಲ್ಲಿ 'ಒಪ್ಪಿಕೊಳ್ಳಿ, ಇಲ್ಲವೇ ಬಿಡಿ' ಎಂಬ ಧೋರಣೆ ಕಾಣಿಸುತ್ತಿತ್ತು. ಕೊಲಿಜಿಯಂ ಶಿಫಾರಸುಗಳ ವಿಚಾರದಲ್ಲಿ ಸರ್ಕಾರ ತೀರ್ಮಾನ ಕೈಗೊಳ್ಳುತ್ತಿಲ್ಲ ಎಂಬ ದೂರು ಹೇಳುವಂತೆ ಇಲ್ಲ ಎನ್ನುವ ಧಾಟಿಯೂ ಅವರ ಮಾತುಗಳಲ್ಲಿ ಇತ್ತು. 'ಶಿಫಾರಸು ಕಡತಗಳನ್ನು ಸರ್ಕಾರವು ಮುಂದಕ್ಕೆ ಕಳುಹಿಸುತ್ತಿಲ್ಲ ಎಂದು ಹೇಳಲೇಬೇಡಿ. ಸರ್ಕಾರಕ್ಕೆ ಕಡತಗಳನ್ನು ಕಳುಹಿಸಬೇಡಿ. ನೀವೇ ನೇಮಕ ಮಾಡಿಕೊಳ್ಳಿ' ಎಂದು ಸಚಿವರು ಹೇಳಿದ್ದಾರೆ. ರಿಜಿಜು ಅವರ ಈ ಮಾತುಗಳಿಗೆ ನ್ಯಾಯಾಲಯವು ಸಂಯಮದಿಂದ ಹಾಗೂ ಪ್ರಬುದ್ಧವಾಗಿ ಪ್ರತಿಕ್ರಿಯೆ ನೀಡಿದೆ. ನ್ಯಾಯಮೂರ್ತಿ ಎಸ್.ಕೆ. ಕೌಲ್ ಅವರು 'ಉನ್ನತ ಸ್ಥಾನದಲ್ಲಿರುವವರಿಂದ ಈ ಮಾತು ಬಂದಿದೆ. ಈ ಮಾತು ಆಡಬಾರದಿತ್ತು. ಹೀಗಾಗಬಾರದಿತ್ತು ಎಂದಷ್ಟೇ ನಾನು ಹೇಳಬಲ್ಲೆ' ಎಂದಿದ್ದಾರೆ. 'ಕಾನೂನಿನ ವಿಚಾರವಾಗಿ ನಿಮಗೆ ಆಕ್ಷೇಪಗಳು ಇದ್ದಿರಬಹುದು. ಆದರೆ, ಕಾನೂನು ಜಾರಿಯಲ್ಲಿ ಇರುವವರೆಗೆ, ಅದೇ ಕಾನೂನು' ಎಂದು ನ್ಯಾಯಾಲಯವು ಸರ್ಕಾರಕ್ಕೆ ನೆನಪು ಮಾಡಿಕೊಟ್ಟಿದೆ.

'ದೇಶದ ಕಾನೂನನ್ನು ತಾನು ಪಾಲಿಸುವುದಿಲ್ಲವೆಂದು ಅಥವಾ ಕಾನೂನು ಪಾಲನೆಯನ್ನು ವಿಳಂಬ ಮಾಡುವುದಾಗಿ ಸರ್ಕಾರ ಹೇಳಿದರೆ, ಇನ್ನೊಂದು ಕಾನೂನಿನ ಬಗ್ಗೆ ಇನ್ನೊಬ್ಬರು ಇದೇ ರೀತಿಯ ಮಾತು ಆಡಬಹುದು' ಎಂದು ಕೂಡ ನ್ಯಾಯಮೂರ್ತಿ ಕೌಲ್ ಹೇಳಿದ್ದಾರೆ. ಕಾನೂನು ಪಾಲಿಸುವುದಿಲ್ಲ ಎಂಬ ಮಾತನ್ನು ಇನ್ಯಾರೋ ಒಬ್ಬರು ಆಡಬೇಕು ಎಂದೇನೂ ಇಲ್ಲ. ಬದಲಿಗೆ, ನ್ಯಾಯಾಲಯದ ಪ್ರಕ್ರಿಯೆಗಳನ್ನು ಪಾಲಿಸದಿದ್ದರೂ ನಡೆಯುತ್ತದೆ ಎಂದಾದರೆ ಸರ್ಕಾರವೇ ಮುಂದೊಂದು ದಿನ ತನಗೆ ಇಷ್ಟವಾಗದ ತೀರ್ಪೊಂದನ್ನು ತಿರಸ್ಕರಿಸುವ ಕೆಲಸ ಮಾಡಬಹುದು. ಅದು ಅಸಹಕಾರ ಆಗುತ್ತದೆ. ಆಗ ನ್ಯಾಯಾಲಯದ ಅಧಿಕಾರವನ್ನು ಕಡೆಗಣಿಸಿದಂತಾಗುತ್ತದೆ. ಹಾಗೆ ಮಾಡಿದಾಗ ವ್ಯವಸ್ಥೆ ಕುಸಿಯುತ್ತದೆ. ಇಂತಹ ಸಂದರ್ಭ ನಿರ್ಮಾಣವಾಗುವುದನ್ನು ತಡೆಯಬೇಕು ಎಂದಾದರೆ ಸರ್ಕಾರವು ನ್ಯಾಯಮೂರ್ತಿಗಳ ನೇಮಕಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಕಡತಗಳನ್ನು ವಿಲೇವಾರಿ ಮಾಡಬೇಕು. ಸುಪ್ರೀಂ ಕೋರ್ಟ್‌ನ ಕೊಲಿಜಿಯಂ ಮುಂದಿನ ವಾರದಲ್ಲಿ ಸಭೆ ಸೇರುವ ನಿರೀಕ್ಷೆ ಇದೆ. ಈಗಿರುವ ಸ್ಥಿತಿ ಇನ್ನಷ್ಟು ಬಿಗಡಾಯಿಸುವುದು ಒಳ್ಳೆಯದಲ್ಲ.

ದೇಶದ ಕಾರ್ಯಾಂಗವು ವ್ಯಾಪ್ತಿ ಮೀರಿ ವರ್ತಿಸುವುದರ ವಿಚಾರವಾಗಿ ನ್ಯಾಯಾಂಗಕ್ಕೆ ತನ್ನದೇ ಆದ ನೈಜ ಕಳವಳ ಇದ್ದಿರಬಹುದು. ನ್ಯಾಯಾಂಗವು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಳ್ಳಲು ಬಯಸುವುದಿಲ್ಲ. ಆದರೆ, ನ್ಯಾಯಮೂರ್ತಿಗಳ ನೇಮಕದ ವಿಚಾರದಲ್ಲಿ ತನಗೆ ಯಾವ ಪಾತ್ರವೂ ಇಲ್ಲ, ತನ್ನ ಅಭಿಪ್ರಾಯಕ್ಕೆ ಅಲ್ಲಿ ಸ್ಥಾನವಿಲ್ಲ ಎಂಬುದು ಸರ್ಕಾರದ ವಾದ. ಆದರೆ ಈ ಭಿನ್ನ ದೃಷ್ಟಿಕೋನ ಹಾಗೂ ಭಿನ್ನ ಗ್ರಹಿಕೆಗಳ ಕಾರಣದಿಂದಾಗಿ ಮೂಡಿರುವ ಸಮಸ್ಯೆಯನ್ನು ಪರಿಹರಿಸಲು ಸರ್ಕಾರವು ನ್ಯಾಯಾಂಗದ ಮೇಲೆ ಒತ್ತಡ ಹೇರುವುದು ಸರಿಯಾಗುವುದಿಲ್ಲ. ನ್ಯಾಯಮೂರ್ತಿಗಳ ನೇಮಕಕ್ಕೆ ಈಗಿರುವ ವ್ಯವಸ್ಥೆಯನ್ನು ಇನ್ನಷ್ಟು ಸುಧಾರಿಸುವ ಉದ್ದೇಶದಿಂದ ಬರುವ ಸಲಹೆಗಳನ್ನು ಕೋರ್ಟ್ ತಿರಸ್ಕರಿಸಲಾಗದು. ಸಹಕಾರ ಹಾಗೂ ಸಮಾಲೋಚನೆಯೇ ಸಮಸ್ಯೆಯನ್ನು ಪರಿಹರಿಸುತ್ತದೆ; ಸಂಘರ್ಷದಿಂದ ಸಮಸ್ಯೆ ಬಗೆಹರಿಯದು.

25 ವರ್ಷಗಳ ಹಿಂದೆ

ಬುಧವಾರ, 3-12-1997

- **ಲೋಕಸಭೆ ವಿಸರ್ಜನೆ ತಪ್ಪಿಸಲು ಯತ್ನ: ಸರ್ಕಾರ ರಚನೆ- ಮತ್ತೆ ಸಂಯುಕ್ತ ರಂಗ, ಕಾಂಗ್ರೆಸ್ ನಡುವೆ ಚರ್ಚೆ**

ನವದೆಹಲಿ, ಡಿ. 2– ಲೋಕಸಭೆಯ ವಿಸರ್ಜನೆ ಅನಿವಾರ್ಯ ಎನ್ನುವ ಪರಿಸ್ಥಿತಿ ಉದ್ಭವಿಸುತ್ತಿದ್ದಂತೆ ಕಾಂಗ್ರೆಸ್ ಪಕ್ಷವು ತನ್ನ ನಿಲುವನ್ನು ಬದಲಾಯಿಸಿದ್ದರಿಂದ ಸರ್ಕಾರ ರಚನೆಯ ಬಗೆಗೆ ಸಂಯುಕ್ತ ರಂಗವು ಮತ್ತೆ ಅದರ ಜೊತೆ ಮಾತುಕತೆಯನ್ನು ಪುನರ್ ಆರಂಭಿಸಿದೆ.

- **ಪಾಕ್ ಅಧ್ಯಕ್ಷರ ರಾಜೀನಾಮೆ**

ಇಸ್ಲಾಮಾಬಾದ್, ಡಿ. 2 (ಎಪಿ)– ಪಾಕಿಸ್ತಾನದ ಅಧ್ಯಕ್ಷ ಫಾರೂಕ್ ಅಹಮದ್ ಲೆಘಾರಿ ಇಂದು ರಾಜೀನಾಮೆ ನೀಡಿದ್ದಾರೆ. ಸಂವಿಧಾನದ ಅನ್ವಯ ಸೆನೆಟ್‌ನ ಅಧ್ಯಕ್ಷ ವಾಸಿಂ ಸಜ್ಜದ್ ತಾತ್ಕಾಲಿಕ ಅಧ್ಯಕ್ಷರಾಗಲಿದ್ದಾರೆ.

50 ವರ್ಷಗಳ ಹಿಂದೆ

ಭಾನುವಾರ, 3-12-1972

- **ತಾಯ್ನಾಡಿಗೆ ಬಂದ ವೀರಯೋಧರಿಗೆ ಹೂಮಳೆ ಸ್ವಾಗತ**

ನವದೆಹಲಿ, ಡಿ. 2– ಪಾಕಿಸ್ತಾನದಿಂದ ಶುಕ್ರವಾರ ಬಿಡುಗಡೆ ಹೊಂದಿ ಇಂದು ಅಮೃತಸರದಿಂದ ದೆಹಲಿ ದಂಡಿಗೆ ಬಂದ 606 ಭಾರತೀಯ ಯುದ್ಧ ಕೈದಿಗಳ ಮೇಲೆ ರೈಲು ನಿಲ್ದಾಣದಲ್ಲಿ ಸಾವಿರಾರು ಜನ ಹೂಮಳೆಗರೆದು ಸ್ವಾಗತ ಕೋರಿದರು.

'ಭಾರತ್ ಮಾತಾಕಿ ಜೈ', 'ಹಿಂದೂಸ್ತಾನ್ ಜಿಂದಾಬಾದ್' ಎಂಬ ಘೋಷಣೆಗಳನ್ನು ವೀರಯೋಧರು ತಮಗೆ ಸಂದ ಭವ್ಯ ಸ್ವಾಗತಕ್ಕೆ ಉತ್ತರವಾಗಿ ಮೊಳಗಿಸಿದರು.

ನಾಗರಿಕ ಸೇವಾ ನೇಮಕಾತಿ ಪ್ರಕ್ರಿಯೆಯಲ್ಲಿ ವಿಚಿತ್ರ ನಿಬಂಧನೆ

ಅಂಗವಿಕಲರಿಗೆ ಮಾನದಂಡವೇ ಅಡ್ಡಿ!

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಹೆಸರು ಇರಾ ಸಿಂಘಾಲ್. ಐಎಎಸ್ ಅಧಿಕಾರಿ. 2014ರಲ್ಲಿ ನಡೆದ ಸಿವಿಲ್ ಸರ್ವಿಸಸ್ ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕ್ ಪಡೆದಾಕೆ. ಅದಕ್ಕೂ ಮುನ್ನ ಇಂಡಿಯನ್ ರೆವಿನ್ಯೂ ಸರ್ವಿಸಸ್ ಪರೀಕ್ಷೆಯಲ್ಲಿ ಮೂರು ಬಾರಿ ಉನ್ನತ ರ‍್ಯಾಂಕ್ ಗಳಿಸಿದ್ದರು. ಆದರೂ ಅವರಿಗೆ ಕೆಲಸ ಸಿಕ್ಕಿರಲಿಲ್ಲ. ಅದಕ್ಕೆ ಕಾರಣ ಅವರಿಗಿದ್ದ ಬೆನ್ನು ಮೂಳೆಯ ಸಮಸ್ಯೆ. ಇರಾ ಅವರು ಸ್ಕೋಲಿಯೊಸಿಸ್‌ನಿಂದ ಬಳಲುತ್ತಿದ್ದರು.

ತಮಗೆ ನಾಗರಿಕ ಸೇವಾ ಹುದ್ದೆಯನ್ನು ನೀಡದ್ದರಿಂದ ನೊಂದ ಇರಾ, ಕೇಂದ್ರೀಯ ಆಡಳಿತ ನ್ಯಾಯಮಂಡಳಿ ಮುಂದೆ ಕೇಸು ದಾಖಲಿಸಿ ಗೆದ್ದೂ ಬಿಟ್ಟರು. ನಂತರ ತರಬೇತಿಗೆ ಹಾಜರಾದರು. ಹುದ್ದೆ ಪಡೆದರು. ಈಗ ದೆಹಲಿಯಲ್ಲಿ ಸೇವಾನಿರತರಾಗಿದ್ದಾರೆ. ಆದರೆ ಇರಾ ಅವರು ಅನುಭವಿಸಿದ ಅವಮಾನ, ನಿರಾಕರಣೆಯನ್ನು ಇಂದಿಗೂ ಅನುಭವಿಸುತ್ತಿರುವ ಸಿವಿಲ್ ಸರ್ವಿಸಸ್ ಹುದ್ದೆಯ ಅಂಗವಿಕಲ ಆಕಾಂಕ್ಷಿಗಳು ತಮಗಾಗುತ್ತಿರುವ ಅನ್ಯಾಯವನ್ನು ಪ್ರಶ್ನಿಸಿ ಕಾನೂನಿನ ಮೊರೆ ಹೋಗಲು ಚಿಂತನೆ ನಡೆಸಿದ್ದಾರೆ.

2021ರ ನಾಗರಿಕ ಸೇವಾ ಪರೀಕ್ಷೆ ಪಾಸಾಗಿರುವ, ಆಯ್ಕೆ ಪ್ರಕ್ರಿಯೆಗೂ ಮುನ್ನ ನಿಗದಿಪಡಿಸಲಾಗಿದ್ದ ಮಾನದಂಡ ಪೂರೈಸಿರುವ 7 ಮಂದಿ ಅಂಗವಿಕಲರು ಆಯ್ಕೆ ಸಮಿತಿ ನಿಗದಿಪಡಿಸಿರುವ 'ಪರ್ಸನ್ ವಿತ್ ಬೆಂಚ್‌ಮಾರ್ಕ್ ಡಿಸೆಬಿಲಿಟಿ' (ಶೇ 40ಕ್ಕಿಂತ ಕಡಿಮೆ ಇರದ ಅಂಗವೈಕಲ್ಯ) ಮಾನದಂಡ ಪೂರೈಸಿದ್ದರೂ ಉದ್ಯೋಗ ತರಬೇತಿ ವಿಭಾಗದಿಂದ ಅವರಿಗೆ ಯಾವುದೇ ಕರೆ ಬಂದಿಲ್ಲ. ಹಿಂದಿನ ಸಾಲಿನ ಪರೀಕ್ಷೆಯ ಅಂತಿಮ ಮೆರಿಟ್ ಲಿಸ್ಟ್‌ನಲ್ಲಿ 749 ಹುದ್ದೆಗಳಿಗೆ ಎದುರಾಗಿ 685 ಅಭ್ಯರ್ಥಿಗಳ ಹೆಸರುಗಳನ್ನು 'ಶಾರ್ಟ್‌ಲಿಸ್ಟ್' ಮಾಡಲಾಗಿತ್ತು. ಅದರಲ್ಲಿ ಇವರೂ ಇದ್ದರು. ಕೈ- ಕಾಲು ಊನವಿರುವವರಿಗೆಂದೇ ಆರು ಹುದ್ದೆಗಳು ಮೀಸಲಿದ್ದವು. ಅವರಲ್ಲಿ ಮೂವರಿಗೆ ಸ್ನಾಯು- ಮೂಳೆ ಸಂಬಂಧಿ ಅಂಗವೈಕಲ್ಯ ಇತ್ತು. ನವೆಂಬರ್ 1ರವರೆಗೆ ಇವರಿಗೆ ಯಾವುದೇ ಹುದ್ದೆ ನೀಡಿರಲಿಲ್ಲ.

ಐಎಎಸ್, ಐಪಿಎಸ್ ಹುದ್ದೆ ಅಲಂಕರಿಸಿ ಜನರ ಸೇವೆ ಮಾಡಬೇಕೆನ್ನುವ ಪದವಿ ಕಲಿತ ವಿದ್ಯಾರ್ಥಿಗಳು ದೇಶದಲ್ಲಿ ಹೆಜ್ಜೆಗೊಬ್ಬರು ಸಿಗುತ್ತಾರೆ. ಸಿಕ್ಕ ಅಧಿಕಾರ, ಸವಲತ್ತು ಬಳಸಿಕೊಂಡು ಪ್ರಾಮಾಣಿಕವಾಗಿ ದುಡಿದು ಸಾಧನೆ ಮಾಡಿದ ಅನೇಕರು ನಮ್ಮ ನಡುವೆ ಇದ್ದಾರೆ. ಸಿವಿಲ್ ಸರ್ವಿಸಸ್ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನಾಧರಿಸಿ ಆಡಳಿತ, ಪೊಲೀಸ್, ವಿದೇಶಾಂಗ, ರೆವಿನ್ಯೂ ವಿಭಾಗಗಳಲ್ಲಿ ಕೆಲಸ ಪಡೆಯುವ ಅಭ್ಯರ್ಥಿಗಳು ತಾವು ಆಯ್ಕೆ ಮಾಡಿಕೊಂಡ ಕ್ಷೇತ್ರಗಳ ಅಭಿವೃದ್ಧಿಗೆ ಶ್ರಮಿಸುತ್ತಾರೆ. ಆದರೆ ಎಲ್ಲ ಸಾಮಾನ್ಯ ಅಭ್ಯರ್ಥಿಗಳಂತೆ ಪರೀಕ್ಷೆ ಎದುರಿಸಿ, ಉನ್ನತ ರ‍್ಯಾಂಕ್ ಗಳಿಸಿ ಅಂತಿಮ ಹಂತದ ಸಂದರ್ಶನದಲ್ಲೂ ತೇರ್ಗಡೆಯಾಗಿರುವ ಅಂಗವಿಕಲರು ತಾವು ಬಯಸಿದ ಇಲಾಖೆಯ ಪೋಸ್ಟಿಂಗ್ ಸಿಗದೆ ಪರದಾಡುವಂತಾಗಿದೆ.

ಅದಕ್ಕೆ ಕಾರಣ, ಅಂಗವೈಕಲ್ಯಕ್ಕೆ ಸಂಬಂಧಿಸಿದಂತೆ ಆಯ್ಕೆ ಸಮಿತಿಯು ನಿಗದಿಪಡಿಸಿರುವ ಮಾನದಂಡಗಳು.

ಯಾವುದೇ ವ್ಯಕ್ತಿಯ ದೈಹಿಕ ನ್ಯೂನತೆ ಶೇ 40ಕ್ಕಿಂತ ಕಡಿಮೆ ಇರದಿದ್ದರೆ ಅಂತಹ ನ್ಯೂನತೆಯನ್ನು ಬೆಂಚ್‌ಮಾರ್ಕ್ ಡಿಸೆಬಿಲಿಟಿ ಎನ್ನುತ್ತಾರೆ. 2016ರ ಅಂಗವಿಕಲರ ಹಕ್ಕುಗಳ ಕಾಯ್ದೆ ಪ್ರಕಾರ, 21 ಪ್ರಮಾಣೀಕೃತ ದೈಹಿಕ ನ್ಯೂನತೆಗಳಿವೆ. ಅವುಗಳಲ್ಲಿ ಕುರುಡು, ಕ್ಷೀಣ ದೃಷ್ಟಿ, ಕುಬ್ಜತೆ, ಕೀಲು- ಮೂಳೆಗಳ ನ್ಯೂನತೆ, ಸೆರೆಬ್ರಲ್ ಪಾಲ್ಸಿ, ಆಟಿಸಮ್ ಸೇರಿವೆ. ದೈಹಿಕ ನ್ಯೂನತೆ ಇರುವವರನ್ನು ಮೂರು ಮುಖ್ಯ ವಿಧಗಳಲ್ಲಿ ವಿಂಗಡಿಸಲಾಗುತ್ತದೆ. ಕೀಲು- ಮೂಳೆ ನ್ಯೂನತೆ ಇರುವವರನ್ನು ಪಿಎಚ್1, ದೃಷ್ಟಿವೈಕಲ್ಯ ಇರುವವರನ್ನು ಪಿಎಚ್2 ಮತ್ತು ಶ್ರವಣದೋಷ ಇರುವವರನ್ನು ಪಿಎಚ್3 ಎಂದು ವರ್ಗೀಕರಿಸಲಾಗಿದೆ.

ಇಲ್ಲಿ ಎರಡು ಮುಖ್ಯ ಅಂಶಗಳಿವೆ. ಒಂದು, ಕ್ರಿಯಾತ್ಮಕ ವರ್ಗೀಕರಣ. ಇದು ನ್ಯೂನತೆಯನ್ನು ಗುರುತಿಸಿ ಅದರ ವಿಧವನ್ನು ತಿಳಿಸುವ ವಿಧಾನ. ಇನ್ನೊಂದು, ದೈಹಿಕ ಅಳತೆಗಳನ್ನಾಧರಿಸಿ ವ್ಯಕ್ತಿಯು ಯಾವ ಯಾವ ಕೆಲಸ ಮಾಡಬಹುದು ಎಂಬುದನ್ನು ನಿರ್ಧರಿಸುವ ಮಾನದಂಡ. ಲೋಕೊಮೋಟಾರ್ ಡಿಸೆಬಿಲಿಟಿ (ಕಾಲು ಮತ್ತು ಕೈ ವೈಕಲ್ಯ), ಸೆರೆಬ್ರಲ್ ಪಾಲ್ಸಿ (ಮೆದುಳಿನ ಪಾರ್ಶ್ವವಾಯು), ಸ್ನಾಯು ಕ್ಷಯ, ಆಟಿಸಮ್, ಬೌದ್ಧಿಕ ನ್ಯೂನತೆ, ಮಾನಸಿಕ ಕಾಯಿಲೆ, ಬಹು ಅಂಗಾಂಗ ನ್ಯೂನತೆ, ನಿರ್ದಿಷ್ಟ ಕಲಿಕೆಯ ಅಸಾಮರ್ಥ್ಯಗಳು ಬೆಂಚ್‌ಮಾರ್ಕ್ ಡಿಸೆಬಿಲಿಟಿಗಳ ಗುಂಪಿಗೆ ಸೇರುತ್ತವೆ. 2021ರಲ್ಲಿ ದೇಶದಾದ್ಯಂತ ವಿವಿಧ ಶ್ರೇಣಿಯ 3,566 ಉದ್ಯೋಗಗಳು ಬೆಂಚ್‌ಮಾರ್ಕ್ ಡಿಸೆಬಿಲಿಟಿ ಇರುವವರಿಗೆ ಮೀಸಲಿದ್ದವು. ಆದರೆ ಅವುಗಳನ್ನು ಪಡೆದುಕೊಳ್ಳಲು ಅಭ್ಯರ್ಥಿಗಳು ಬೇಡದ ಯಾತನೆ ಅನುಭವಿಸುವಂತಾಗಿದೆ.

ಸಮಸ್ಯೆ ಇರುವುದು ಅಭ್ಯರ್ಥಿಗಳ ಕೆಲಸ ಮಾಡಬಲ್ಲ ಕ್ಷಮತೆ, ಪ್ರಮಾಣೀಕೃತ ಅಂಗವೈಕಲ್ಯದ ವಿಧಗಳ ಗುರುತಿಸುವಿಕೆ ಮತ್ತು ಕ್ರಿಯಾತ್ಮಕ ವರ್ಗೀಕರಣದಲ್ಲಿ.

ಉದಾಹರಣೆಗೆ, ಎರಡೂ ಕೈ- ಎರಡೂ ಕಾಲು ಪೂರ್ಣವಾಗಿ ಇರುವವರು ಭಾರತೀಯ ಆಡಳಿತ ಸೇವೆ, ಸಿವಿಲ್ ಅಕೌಂಟ್ಸ್ ಸೇವೆ, ಇಂಡಿಯನ್ ಇನ್‌ಫರ್ಮೇಶನ್ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ಸೇವೆಗಳಾದ ಡ್ಯಾನಿಕ್ಸ್ (DANICS – ದೆಹಲಿ, ಅಂಡಮಾನ್ ನಿಕೋಬಾರ್ ಆಡಳಿತ) ಮತ್ತು ಪಾಂಡಿಕ್ಸ್‌ಗೆ (PONDICS- ಪುದುಚೇರಿಯ ಆಡಳಿತ) ಅರ್ಹತೆ ಪಡೆಯುತ್ತಾರೆ. ಇಲ್ಲಿ ಎಲ್ಲೂ ಕೈಕಾಲುಗಳ ಉದ್ದ ಇಂತಿಷ್ಟೇ ಇರಬೇಕು, ಎತ್ತರ ಇಷ್ಟೇ ಇರಬೇಕು ಎಂದು ಹೇಳಿಲ್ಲ. ಅಂಗ ನ್ಯೂನತೆಯ ವರ್ಗೀಕರಣಕ್ಕೂ ಕಾರ್ಯಕ್ಷಮತೆಗೆ ಬೇಕಾದ ದೈಹಿಕ ಸಾಮರ್ಥ್ಯದ ಮಾನದಂಡಗಳಿಗೂ ಸರಿಯಾದ ಹೊಂದಾಣಿಕೆ ಇಲ್ಲದಿರುವುದೇ ಇಷ್ಟೆಲ್ಲ ಸಮಸ್ಯೆಗಳಿಗೆ ಕಾರಣ ಎಂದಿರುವ ಇರಾ ಸಿಂಘಾಲ್, 'ನನ್ನ ಪ್ರಕರಣ ಮುಗಿದು ಏಳು ವರ್ಷಗಳಾಗಿವೆ, ಆದರೂ ಸಮಸ್ಯೆ ಬಗೆಹರಿದಿಲ್ಲ, ಮೊದಲೇ ಅಂಗವೈಕಲ್ಯದಿಂದ ನೊಂದಿರುವ ಮನಸ್ಸುಗಳಿಗೆ ಸರ್ಕಾರದ ಇಂಥ ನಡೆಯಿಂದ ಇನ್ನಷ್ಟು ಗಾಸಿಯಾಗುತ್ತದೆ' ಎಂದಿದ್ದಾರೆ.

ಈ ಸಾಲಿನಲ್ಲಿ ಸೇವೆಗೆ ನೇಮಕವಾಗದ ಮಹಿಳಾ ಅಭ್ಯರ್ಥಿಯೊಬ್ಬರು, 'ತರಬೇತಿ ಮತ್ತು ನೇಮಕಾತಿ ವಿಭಾಗವು ಕೆಲಸಕ್ಕೆ ಬೇಕಾದ ದೈಹಿಕ ಮಾನದಂಡಗಳಾಗಲೀ ಕೆಲಸ ಮಾಡುವ ಕ್ಷಮತೆಯಾಗಲೀ ಇಲ್ಲ ಎಂಬ ಕಾರಣ ನೀಡಿ ನನಗೆ ಹುದ್ದೆ ನಿರಾಕರಿಸಿದೆ. ನನ್ನ ಮೆರಿಟ್‌ಗೆ ಏನೂ ಬೆಲೆ ಇಲ್ಲದಂತಾಗಿದೆ' ಎಂದು ದುಃಖಿಸುತ್ತಾ, 'ಕೈಕಾಲುಗಳ ನ್ಯೂನತೆಯ ವ್ಯಾಖ್ಯೆ ತುಂಬಾ ದೊಡ್ಡದಿದೆ. ಉದಾಹರಣೆಗೆ, ವ್ಯಕ್ತಿಯ ಕಾಲು ಅಲ್ಪ ಪ್ರಮಾಣದಲ್ಲಿ ಊನವಾಗಿದ್ದು ಆತನಿಗೆ ಇತರರಂತೆ ಓಡಲು, ಹಾರಲು ಸಾಧ್ಯವಾಗದಿರಬಹುದು, ಆದರೆ ನಡೆಯಲು, ನಿಲ್ಲಲು ಯಾವುದೇ ಸಮಸ್ಯೆ ಇರುವುದಿಲ್ಲ. ನೋಡುವುದು, ಕೇಳಿಸಿಕೊಳ್ಳುವುದು, ಮಾತನಾಡುವುದು ಸಾಧ್ಯವಿರುವಾಗ ಅದನ್ನೂ ಪರಿಗಣಿಸಬೇಕಲ್ಲವೇ' ಎಂದು ಪ್ರಶ್ನಿಸುತ್ತಾರೆ.

ಯಾವುದೇ ಇಲಾಖೆಗೆ ಅಭ್ಯರ್ಥಿಯನ್ನು ನೇಮಕ ಮಾಡಿಕೊಳ್ಳುವ ಅಂತಿಮ ಅಧಿಕಾರವು ಸಂಬಂಧಿಸಿದ ನಿಗಮ- ಮಂಡಳಿಗಳಿಗೆ ಇರುತ್ತದೆ. 2015ರವರೆಗೆ ಕಾಲು ಮತ್ತು ಕೈ ವೈಕಲ್ಯ ಇರುವ ಅಭ್ಯರ್ಥಿಗಳನ್ನು ಭಾರತೀಯ ನಾಗರಿಕ ಲೆಕ್ಕ ಇಲಾಖೆ, ಗ್ರೂಪ್ 'ಎ' (ಶ್ರೇಣಿ 3) ಮತ್ತು ಪುದುಚೇರಿಯ ಗ್ರೂಪ್ 'ಬಿ' ಹುದ್ದೆಗಳಿಗೆ ನೇಮಕ ಮಾಡುತ್ತಿರಲಿಲ್ಲ. ಈಗ ನಿರ್ಬಂಧ ತೆರವಾಗಿದೆಯಾದರೂ ಅನುಷ್ಠಾನ ಅಷ್ಟು ಸುಲಭವಲ್ಲ. ಕೀಲು ಮೂಳೆಗಳ ನ್ಯೂನತೆ ಇರುವವರು ನಾಗರಿಕ ಸೇವಾ ವಿಭಾಗದ ಆರು ಹುದ್ದೆಗಳಿಗೆ ಅರ್ಹರು, ಉಳಿದವುಗಳಿಗೆ ಇಲ್ಲ ಎಂಬ ಭಾವನೆ ಆಯ್ಕೆದಾರರಲ್ಲಿದೆ. ಮೆರಿಟ್ ಆಧಾರದಲ್ಲಿ ಪರೀಕ್ಷೆ ನಡೆಸಿ, ದೈಹಿಕ ಲಕ್ಷಣಗಳನ್ನಾಧರಿಸಿ ಹುದ್ದೆ ನೀಡುತ್ತೇವೆ ಎನ್ನುವುದೇ ಅಸಾಂವಿಧಾನಿಕ. ಇದು 2016ರ ಅಂಗವಿಕಲರ ಹಕ್ಕುಗಳ ನೇರ ಉಲ್ಲಂಘನೆಯಾಗುತ್ತದೆ ಎಂಬುದು ತಜ್ಞರ ಮಾತು.

ದೈಹಿಕ ನ್ಯೂನತೆ ಇರುವ ಆಟಗಾರರು ಪ್ಯಾರಾಲಿಂಪಿಕ್ ಕೂಟದಲ್ಲಿ ಚಿನ್ನದ ಪದಕ ಗಳಿಸಿದರೆ ನಮಗೇ ಪದಕ ಸಿಕ್ಕಂತೆ ಸಂಭ್ರಮಿಸುತ್ತೇವೆ. ಪ್ರೇರಣೆದಾಯಕ ಭಾಷಣ ಮಾಡುವಾಗ ಅವರ ಉದಾಹರಣೆ ನೀಡುತ್ತೇವೆ. ದೇಶದ ಅತ್ಯುನ್ನತ 'ಪದ್ಮ' ಪ್ರಶಸ್ತಿ ನೀಡುತ್ತೇವೆ. ಆದರೆ ಅವರೇ ಪರೀಕ್ಷೆ ಬರೆದು ಗಳಿಸಿದ ಅಂಕಗಳಿಗೆ ದೈಹಿಕ ನ್ಯೂನತೆಯ ಆಧಾರದಲ್ಲಿ ವಿಚಿತ್ರ ನಿಬಂಧನೆಗಳನ್ನೊಡ್ಡಿ ನೇಮಕಾತಿ ನಿರಾಕರಿಸುತ್ತೇವೆ. ಇದನ್ನು ಸರಿಪಡಿಸಲಾಗದೆ?

ಚುರುಮುರಿ



ಕಡತ ನಾಪತ್ತೆ!

• ತುರುವೇಕೆರೆ ಪ್ರಸಾದ್

'ಲೇಯ್', ವಿಷಯ ಗೊತ್ತಾಯ್ತಾ? ಮುಖ್ಯಮಂತ್ರಿ ಕಚೇರೀಲೆ ಒಂದು ಕಡತ ನಾಪತ್ತೆ ಆಗಿದೆಯಂತೆ' ಹರಟೆ ಕಟ್ಟೇಲಿ ಕಲ್ಲೇಶಿ ಮಾತು ತೆಗೆದ. 'ಹುಟ್ಟುಗುಣ ಸುಟ್ರೂ ಹೋಗಲ್ಲ, ಫೈಲು ಅಂದ್ಮೇಲೆ ಅದಕ್ಕೆ ಆವಾಗಾವಾಗ ನಾಪತ್ತೆ ಆಗೋದೇ ಒಂದು ಚಾಳಿ, ಅದಕ್ಕೆ ಮುನಿಸಿಪಾಲಿಟಿ ಆದ್ರೇನು, ಮುಖ್ಯಮಂತ್ರಿ ಆಫೀಸ್ ಆದ್ರೇನು?' ಎಂದ ಭದ್ರ.

'ಫೈಲನ್ನ ಇಲಿ ತಿಂದು ಹಾಕಿರಬೇಕು...'

'ಇಲಿಗಳು ಇವೆ ಅಂದ್ಮೇಲೆ ಬೋನು ಇಟ್ಟು ಅವನ್ನು ಹಿಡಿದು ಹಾಕಬೇಕು ತಾನೆ?'

'ಬೋನಿಟ್ಟ ಮೇಲೆ ಅದಕ್ಕೆ ಬೋಂಡ ಕಟ್ಟದೆ ಇದ್ರೆ ಆಗತ್ತಾ? ಇದಕ್ಕೆಲ್ಲಾ ಸರ್ಕಾರ ಬೋಂಡದ ಅಲೋಯೆನ್ಸ್ ಕೊಡ್ಬೇಕಲ್ಲ'.

'ಲೇಯ್, ಬೋನಲ್ಲಿ ಹಿಡಿಯೋಕೆ ಸರ್ಕಾರಿ ಕಚೇರಿಲಿ ಇಲಿಗಳು ಎಲ್ಲಿರುತ್ವೆ? ಏನಿದ್ರೂ ಹೆಗ್ಗಣಗಳದ್ದೇ ಕಾರುಬಾರು! ಅವೇ ತಿಂದು ಹಾಕಿರಬೇಕು'.

'ಲೇಯ್, ಈಗಿನ ಹೆಗ್ಗಣಗಳು ಫೈಲು, ಪೇಪರ‍್ರು ತಿನ್ನಲ್ಲ, ಕರೆನ್ಸಿ ನೋಟು ತಿನ್ನುತ್ತವೆ'.

'ಯಾರಾದರೂ ಬೋಂಡ ತಿಂದು ಕಡತದ ಹಾಳೆಗಳನ್ನ ಹರಿದು ಕೈ ಒರೆಸಿಕೊಂಡು ಎಸೆದಿರಬಹುದಾ?'

'ಸರ್ಕಾರಿ ಕಚೇರಿಲಿ ಪುಷ್ಕಳವಾದ 'ಲಂಚ ಬಾಕ್ಸ್' ಇರ್ಬೇಕಾದ್ರೆ ಬೋಂಡ ಯಾರು ತಿಂತಾರೆ?'

'ಹಾಗಿದ್ರೆ ಇದ್ದಲ್ಲೇ ಇದ್ದು ಕಡತಕ್ಕೆ ಗೆದ್ದಲು ಹತ್ತಿ ಅದು ನಾಶ ಆಗಿರಬಹುದಾ?'

'ಇದ್ದಲ್ಲೇ ಇದ್ರೆ ಕಡತಕ್ಕೆ ಏನ್ ಬೆಲೆ? ಕೈ ಕಡಿತ ಹೋಗ್ಬೇಕು ಅಂದ್ರೆ ಅದು ಒಡ್ಡಾಡ್ತಾನೇ ಇರ್ಬೇಕು'.

'ನೋಡ್ರೋ, ಇದೆಲ್ಲಾ ಸರ್ಕಾರಿ ಸೀಕ್ರೇಟು! ಸರ್ಕಾರದ ಖಜಾನೆ ಸದಾ ಖಾಲಿ. ಕಡತ ನಾಪತ್ತೆ ಅಂದ್ರೆ ಸಾಲಕ್ಕೆ ಅದನ್ನೇ ಯಾಕೆ ಇಟ್ಟಿರಬಾರದು ಒತ್ತೆ? 'ಮಾನ ಅಡಮಾನ' ಅನ್ನೋ ಹ್ಯಾಶ್‌ಟ್ಯಾಗ್‌ನಲ್ಲಿ ಈ ವಿಷಯ ಹರಿಯಬಿಟ್ರೆ ಹೇಗಿರುತ್ತೆ?' ಕಣ್ ಹೊಡೆದ ಕಲ್ಲೇಶಿ.

'ವಿರೋಧಿಗಳ ಕೈಗೆ ಸಿಕ್ರೆ ಥಗ್ ಅನ್ನುತ್ತೆ, ನೀನು ಮಾತ್ರ ಡಿಟೆಕ್ಟಿವ್ ಡಾಗ್!' ಅಂತ ಕಲ್ಲೇಶಿಯ ಬೆನ್ನಿಗೊಂದು ಗುದ್ದಿ ಮೇಲೆದ್ದ ಪರ್ಮೇಶಿ!

ಸಂಗತ

ಸರ್ವರ್ ಸಮಸ್ಯೆ ಸರ್ವವ್ಯಾಪಿ

ಡಿಜಿಟಲ್ ವ್ಯವಸ್ಥೆಯ ಮೂಲಕ ಹಣ ಕಳುಹಿಸಲು ಸರ್ಕಾರ ತರಾತುರಿ ತೋರಿದಂತೆ ಅಂತರ್ಜಾಲ ವ್ಯವಸ್ಥೆಯ ಸುಧಾರಣೆಗೆ ಆಸಕ್ತಿ ತೋರಿಸಬೇಕಾಗಿತ್ತು

• ಪ. ರಾಮಕೃಷ್ಣ ಶಾಸ್ತ್ರಿ

ಗ್ರಾಮ ಪಂಚಾಯಿತಿ ಕಚೇರಿಗೆ ನಮ್ಮ ಮನೆಯಿಂದ ಹೋಗಿ ಬರಲು ನಲವತ್ತು ರೂಪಾಯಿ ಪ್ರಯಾಣ ವೆಚ್ಚವಾಗುತ್ತದೆ. ಪಂಚಾಯಿತಿ ನೌಕರರು ಕೇಳುವ ಮೊದಲೇ ಮನೆ ತೆರಿಗೆ ಕಟ್ಟಿಬಿಡೋಣ ಎಂದು ಪ್ರಾಮಾಣಿಕತನ ಪ್ರದರ್ಶನಕ್ಕೆ ಹೋಗಿದ್ದೆ. ಈಗ ಹಿಂದಿನ ವರ್ಷದ ಹಾಗೆ ಮನೆ ತೆರಿಗೆಯ ಮೊತ್ತಕ್ಕೆ ಕೈಯಲ್ಲಿ ರಸೀದಿ ಬರೆದುಕೊಡುವ ಕ್ರಮವಿಲ್ಲ. 'ಡಿಜಿಟಲ್ ಇಂಡಿಯಾ'ದ ಬೃಹತ್ ಕನಸು ಸಾಕಾರಗೊಳಿಸಲು ಆನ್‌ಲೈನ್ ಮೂಲಕವೇ ಹಣ ಪಾವತಿಯಾಗಬೇಕು.

ಹಿಂದಿನ ಕ್ರಮದಲ್ಲಾದರೆ ಯಾರಾದರೂ ಹಣ ತೆಗೆದುಕೊಂಡು ರಸೀದಿ ಕೊಡುತ್ತಿದ್ದರು. ಆದರೆ ನಾನು ಹೋದ ದಿನ ಬಿಲ್ ಕಲೆಕ್ಟರ್ ರಜೆಯಂತೆ. ಬೆರಳಚ್ಚು ಕೊಡದೆ ತೆರಿಗೆಯ ಖಾತೆ ತೆರೆಯಲು ಸಾಧ್ಯವಿಲ್ಲ. ಸಂಬಂಧಿಸಿದ ಸಹಾಯಕ ರಜೆ ಹಾಕಿದರೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಆದರೆ ಇಲ್ಲಿ ಅದಕ್ಕೂ ಬರ. 'ಹಣ ಕೊಟ್ಟು ಹೋಗಿ, ನಾಳೆ ರಸೀದಿ ತಲುಪಿಸುತ್ತೇವೆ' ಎಂದರು. ಹಣ ಕೊಟ್ಟು ಬಂದರೂ ರಸೀದಿ ಬರಲಿಲ್ಲ. ಸಮಯಕ್ಕೆ ತೆರಿಗೆ ಕೊಡದಿದ್ದರೆ ಅಪರಾಧ. ಆದರೆ ರಸೀದಿ ಕೊಡದಿದ್ದರೆ ಸಹಜ ಭಾವ. ಕರೆ ಮಾಡಿ ಕೇಳಿದರೆ 'ಸರ್ವರ್ ಸರಿ ಇಲ್ಲ, ನಾಳೆ ನೋಡೋಣ' ಎಂಬ ಉತ್ತರ ಬಂತು.

ಭಾರತವು ಡಿಜಿಟಲ್ ಕ್ಷೇತ್ರದಲ್ಲಿ ಕ್ರಾಂತಿ ಮಾಡುತ್ತಿದೆ ಎಂದು ಸರ್ಕಾರದ ಜಾಹೀರಾತುಗಳಲ್ಲಿ ಭಾರಿ ಪ್ರಚಾರ ಮೊಳಗುತ್ತಿದೆ. 5ಜಿ ತರಂಗಾಂತರದ ಅಂತರ್ಜಾಲ ವ್ಯವಸ್ಥೆಯನ್ನು ಸ್ವಾಗತಿಸಲು ದೇಶ ಸಿದ್ಧವಾಗುತ್ತಿದೆ. ಆದರೆ ಜನಸಾಮಾನ್ಯರ ಬದುಕಿನಲ್ಲಿ ಸಾಮಾನ್ಯ ಎನಿಸಿಕೊಂಡ, ಸರ್ವರ್ ಸರಿಯಿಲ್ಲ ಎಂಬ ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ.

ರೈತರಿರಲೀ ವ್ಯಾಪಾರಿಗಳಿರಲೀ ಸರ್ಕಾರಿ ಕಚೇರಿಗಳೊಂದಿಗೆ ಸಂಬಂಧ ಬೆಳೆಸದೆ ಬದುಕುವಂತಿಲ್ಲ. ರೈತನೊಬ್ಬ ಪಹಣಿ ಪತ್ರಕ್ಕಾಗಿ ನಾಡ ಕಚೇರಿಗೆ ಹೋದರೆ ಅಲ್ಲೂ ಇದೇ ಸರ್ವರ್ ಸರಿಯಿಲ್ಲದ ಸಮಸ್ಯೆ. ಗ್ರಾಮೀಣ ಅಂಚೆ ಕಚೇರಿಗಳಲ್ಲಿ ಬಸ್ ನಿರ್ವಾಹಕರ ಟಿಕೆಟ್ ಯಂತ್ರದ ಹಾಗಿರುವ ಸಾಧನವನ್ನು ಕೊಟ್ಟಿದ್ದಾರೆ. ಎಲ್ಲ ವ್ಯವಹಾರವೂ ಗಣಕೀಕೃತವಾಗಿದೆ ಎಂದು ಸರ್ಕಾರ ಹೇಳಿಕೊಳ್ಳಬಹುದು. ಆದರೆ ಬಹುತೇಕ ದಿನಗಳಲ್ಲಿ ವಿವಿಧ ಖಾತೆಗಳಿಗೆ ಹಣ ತುಂಬಲು, ಹಣ ಪಡೆಯಲು ಬರುವವರಿಗೆ ಈ ಸರ್ವರ್ ಬಾಧೆ ತಾಸುಗಟ್ಟಲೆ ಕಾಯಿಸಿ ನಿರಾಸೆಯಿಂದ ಮರಳುವಂತೆ ಮಾಡುತ್ತಿದೆ.

ಬ್ಯಾಂಕ್ ಖಾತೆಯಲ್ಲಿರುವ ಹಣವನ್ನು ₹ 10 ಸಾವಿರದ ತನಕ ಬೆರಳಚ್ಚನ್ನು ಮಾತ್ರ ನೀಡಿ ಪಡೆಯುವ ಅನುಕೂಲವಿದೆ ಎಂಬುದು ದಿಟ. ಆದರೆ ಸರ್ವರ್ ಸರಿಯಿಲ್ಲ ಎಂದು ಅಂಚೆ ಪಾಲಕರು ಬರಿಗೈಯಲ್ಲಿ ಮನೆಗೆ ಕಳುಹಿಸುತ್ತಾರೆ. ದೊಡ್ಡ ಅಂಚೆ ಕಚೇರಿಗಳಲ್ಲಿ ಕಂಪ್ಯೂಟರ್‌ಗಳಿವೆ. ಸಾಮಾನ್ಯವಾಗಿ ಸರ್ವರ್ ಸಮಸ್ಯೆ ಅಷ್ಟೊಂದು ಕಾಡುವುದಿಲ್ಲ. ಆದರೆ ಗ್ರಾಮೀಣ ಜನರ ಪಾಲಿಗೆ ಈ ವ್ಯವಸ್ಥೆ ಇದ್ದರೂ ಲಾಭವಿಲ್ಲದೆ ಊಟಕ್ಕಿಲ್ಲದ ಉಪ್ಪಿನಕಾಯಿಯಂತೆ ಆಗುತ್ತದೆ.

ಡಿಜಿಟಲ್ ವ್ಯವಸ್ಥೆಯ ಮೂಲಕ ಹಣ ಕಳುಹಿಸಲು ಸರ್ಕಾರ ತರಾತುರಿ ತೋರಿದಂತೆ ಅಂತರ್ಜಾಲ ವ್ಯವಸ್ಥೆಯ ಸುಧಾರಣೆಗೆ ಆಸಕ್ತಿ ತೋರಿಸಬೇಕಾಗಿತ್ತು. ಸರ್ಕಾರಿ ಸ್ವಾಮ್ಯದ ಬಿಎಸ್‌ಎನ್‌ಎಲ್, ದೂರವಾಣಿ ಕ್ಷೇತ್ರದಲ್ಲಿ ಒಂದು ಕಾಲದಲ್ಲಿ ಗಳಿಸಿದ್ದ ಕೀರ್ತಿಯೆಲ್ಲವೂ ಈಗ ಮಣ್ಣುಗೂಡಿದೆ. ವಿದ್ಯುತ್ ಇದ್ದರೆ ಮಾತ್ರ ಅದರ ಸಂಕೇತ ಸಿಗುತ್ತದೆ. ಗೋಪುರವು ಸಂಕೇತ ನೀಡಬೇಕಿದ್ದರೆ ವಿದ್ಯುತ್ ಬೇಕು. ಜನರೇಟರ್ ಸೌಲಭ್ಯ ಇಲ್ಲ. ಇದ್ದರೂ ಅದಕ್ಕೆ ಬೇಕಾದ ಡೀಸೆಲ್ ಪೂರೈಕೆಯಿಲ್ಲ. ಹೀಗಾಗಿ ಗ್ರಾಮೀಣ ಭಾಗದ ಜನರಿಗೆ ಇದರಿಂದ ಲಾಭವಿಲ್ಲ. ಇನ್ನು ಖಾಸಗಿ ಕಂಪನಿಗಳಂತೂ ಗ್ರಾಮೀಣ ಜನರನ್ನು ಕಡೆಗಣಿಸಿದಂತೆ ಕಾಣುತ್ತದೆ. ಸಂಕೇತ ಸಿಗಬೇಕಿದ್ದರೆ ಅದರ ಗೋಪುರದ ಕೆಳಗೆ ಹೋಗಿ ನಿಲ್ಲಬೇಕಾದಂತಹ ಕ್ಷೀಣ ಸಂಕೇತ ವ್ಯವಸ್ಥೆಯಿದೆ.

ಸೌಲಭ್ಯವನ್ನು ಅಳವಡಿಸುವುದರಲ್ಲಿ ಇರುವ ತರಾತುರಿಯು ಅವ್ಯವಸ್ಥೆಯನ್ನು ಸರಿಪಡಿಸುವಲ್ಲಿ ಇಲ್ಲವಾಗುತ್ತದೆ. ಸರ್ವರ್ ಸಮಸ್ಯೆಯ ಕಾರಣದಿಂದ ಹಳ್ಳಿಯ ಜನ ಮತ್ತೆ ಮತ್ತೆ ಕಚೇರಿಯ ದಾರಿ ತುಳಿಯಲು ಹಣವೂ ಖರ್ಚಾಗುತ್ತದೆ, ಸಮಯವೂ ವ್ಯರ್ಥವಾಗುತ್ತದೆ.

ಇಪ್ಪತ್ತೊಂದನೆಯ ಶತಮಾನದ ಕಾಲು ಭಾಗ ಮುಗಿಯುತ್ತಿದೆ. ವಿದೇಶಗಳಿಗೆ ಹೋಗಿಬಂದು ಅಲ್ಲಿನ ರಸ್ತೆಗಳನ್ನು ಹೊಗಳುತ್ತೇವೆ. ಅಂತರ್ಜಾಲ ಸೌಕರ್ಯವನ್ನು ವೈಭವೀಕರಿಸುತ್ತೇವೆ. ಆದರೆ ನಮಗೆ ಇನ್ನೂ ಅದು ಸಾಧ್ಯವಾಗಿಲ್ಲ. ಅಲಕ್ಷ್ಯದ ಪರಿಣಾಮವಾಗಿ ಜನ ಅಲೆದಾಡುವಂತಾಗಿದೆ. ಇದು, ಜನಸಾಮಾನ್ಯರ ಸಹನೆಗೆ ಎಸೆಯುವ ಸವಾಲು ಅಲ್ಲವೇ? ಒಂದು ಸಲ ಕಚೇರಿಗೆ ಬಂದಾಗ ಇಂತಹ ಅವ್ಯವಸ್ಥೆಯ ಕಾರಣದಿಂದ ಫಲಾನುಭವಿ ಬರಿಗೈಯಲ್ಲಿ ಮರಳಿಹೋದರೆ ಅವನಿಗೆ ಉಂಟಾಗುವ ನಷ್ಟಕ್ಕೆ ಯಾರು ಹೊಣೆ? ಇಂತಹ ಬಾಧೆಗಳು ಸಂಭವಿಸಿದಾಗ ಕೈಯಲ್ಲೇ ರಸೀದಿ ಬರೆದುಕೊಡಲು ನಿರ್ದೇಶಿಸಿದರೆ ಶ್ರಮಪಟ್ಟು ಕಚೇರಿಗೆ ಪಾದಯಾತ್ರೆ ಮಾಡಿದವರಿಗೆ ಉಪಕಾರವಾದೀತು.

ಅಂಚೆ ಕಚೇರಿಯಿರಲಿ, ನಾಡ ಕಚೇರಿಯಿರಲಿ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದರಲ್ಲಿ ತಪ್ಪಿಲ್ಲ. ಆದರೆ ಆಧುನೀಕರಣವನ್ನು ಅನುಷ್ಠಾನಗೊಳಿಸುವ ಧಾವಂತದಲ್ಲಿ ಮತ್ತೆ ಮತ್ತೆ ಸಂಭವಿಸುವ ಪರಿಹಾರ ಸಾಧ್ಯವಿರುವ ಸಮಸ್ಯೆಗಳು ಜನರ ಬದುಕಿನೊಂದಿಗೆ ಆಟವಾಡುವುದು ಕ್ಷಮಾರ್ಹವಲ್ಲ.

ವಾಚಕರ ವಾಣಿ

ಸಾಹಿತ್ಯ ಸಮ್ಮೇಳನ: ಅನವಶ್ಯಕ ನಿರ್ಬಂಧ

ಹಾವೇರಿಯಲ್ಲಿ ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರತಿನಿಧಿಗಳಾಗಲು ಬಯಸುವವರು ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿರಬೇಕು ಎಂಬ ನಿಯಮ ಸರಿಯಲ್ಲ. ಪರಿಷತ್ತಿನ ಸರ್ವ ಸದಸ್ಯರ ಸಭೆಯಲ್ಲಿ ಭಾಗವಹಿಸುವುದಕ್ಕೆ ಮಾತ್ರ ಸದಸ್ಯರಾಗಿರುವುದು ಅವಶ್ಯಕ. ಅದರ ವಿನಾ ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ನೋಂದಾಯಿಸಿಕೊಳ್ಳಲು ಈ ರೀತಿಯ ನಿರ್ಬಂಧ ಹೇರಬಾರದು.

ಈ.ಬಸವರಾಜು, ಬೆಂಗಳೂರು

ಶಿಕ್ಷಣ 'ಜ್ಞಾನ ಕೇಂದ್ರಿತ' ಆಗಬಾರದೇ?

ಪಿಯು ಪರೀಕ್ಷಾ ಪದ್ಧತಿಯಲ್ಲಿ ಬದಲಾವಣೆ ತರಲು ಮುಂದಾಗಿರುವ ರಾಜ್ಯ ಸರ್ಕಾರ, ಪ್ರತೀ ವಿಷಯದ ಪ್ರಶ್ನೆಪತ್ರಿಕೆಯಲ್ಲೂ ಬಹು ಆಯ್ಕೆಯ ಪ್ರಶ್ನೆಗಳನ್ನು ಅಳವಡಿಸಲು ಚಿಂತನೆ ನಡೆಸಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ಡಿ. 1). ಶಿಕ್ಷಣವನ್ನು ಪರೀಕ್ಷಾ ಕೇಂದ್ರಿತವಾಗಿ ಗ್ರಹಿಸುವುದು ಒಂದು ವಿಧಾನವಾದರೆ, ಜ್ಞಾನ ಕೇಂದ್ರಿತವಾಗಿ ಗ್ರಹಿಸುವುದು ಮತ್ತೊಂದು ವಿಧಾನ. ಇಂದು ಬಹುತೇಕ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಿದ್ಧಗೊಳಿಸುವ ಶಿಕ್ಷಣವನ್ನು ನೀಡಲಾಗುತ್ತಿದೆಯೇ ವಿನಾ ಜ್ಞಾನವನ್ನು ನೀಡುವ ಶಿಕ್ಷಣವನ್ನು ಅಲ್ಲ. ಈಗಾಗಲೇ ಪರೀಕ್ಷೆಗಳಿಗಾಗಿ ತಯಾರಿಸುವ ಪ್ರಶ್ನೆಪತ್ರಿಕೆಗಳು ಸಾಧ್ಯವಾದಷ್ಟು ನೇರವಾಗಿರಬೇಕು, ಸುಲಭವಾಗಿರಬೇಕು ಎಂಬ ಅಲಿಖಿತ ನಿಯಮ ಒಂದು ಕಡೆಯಾದರೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ ಬಹಳ ಉದಾರವಾಗಿದೆ. ಇದರಿಂದಾಗಿ ಸತತ ಹತ್ತು ವರ್ಷಗಳು ಕಲಿತ ಕನ್ನಡವನ್ನು ಸರಾಗವಾಗಿ ಮಾತನಾಡುವುದಕ್ಕೂ ಓದುವುದಕ್ಕೂ ಬರೆಯುವುದಕ್ಕೂ ಬಾರದ ಪರಿಸ್ಥಿತಿ ಇಂಗ್ಲಿಷ್ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳದ್ದಾದರೆ, ಇಂಗ್ಲಿಷನ್ನು ಮಾತನಾಡುವುದಕ್ಕೂ ಬರೆಯುವುದಕ್ಕೂ ಓದುವುದಕ್ಕೂ ಬಾರದ ಸ್ಥಿತಿ ಕನ್ನಡ ಮಾಧ್ಯಮ ಶಾಲೆಗಳ ವಿದ್ಯಾರ್ಥಿಗಳದ್ದಾಗಿದೆ.

ಇದೇ ಪರಿಸ್ಥಿತಿಯು ಆಯ್ಕೆಯ ವಿಷಯಗಳಲ್ಲೂ ಇದೆ. ಎಲ್ಲದಕ್ಕೂ ಅಂಕಗಳೇ ಮಾನದಂಡವಾಗಿರುವಾಗ, ವಿದ್ಯಾರ್ಥಿಗಳು ಮತ್ತು ಪೋಷಕರು ಅದಕ್ಕಾಗಿ ಹಪಹಪಿಸುವುದು ತಪ್ಪಲ್ಲ. ಆದರೆ ಸರ್ಕಾರವೂ ಅದೇ ದಿಸೆಯಲ್ಲಿ ಯೋಚಿಸಿದರೆ, ಶಿಕ್ಷಣವನ್ನು 'ಜ್ಞಾನ ಕೇಂದ್ರಿತ'ವಾಗಿ ಮಾಡುವವರು ಯಾರು?

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಸರ್ಕಾರಿ ಆಸ್ಪತ್ರೆ ಅಪಥ್ಯವೇಕೆ?

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅನಾರೋಗ್ಯದಿಂದ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ರಾಜಕಾರಣಿಗಳಿಗೂ ಅಧಿಕಾರಿಗಳಿಗೂ ಸರ್ಕಾರಿ ಆಸ್ಪತ್ರೆಯೆಂದರೆ ಅಪಥ್ಯವೇಕೆ? ಸರ್ಕಾರಿ ಆಸ್ಪತ್ರೆಗಳಲ್ಲಿ ಸರಿಯಾದ ಚಿಕಿತ್ಸೆ ದೊರೆಯುವುದಿಲ್ಲ ಎಂಬ ಭಾವವೇ? ಅದೇ ನಿಜವಾದರೆ ಆ ಕೊರತೆಯನ್ನು ಸರಿಪಡಿಸಬೇಕಾದದ್ದು ಅವರ ಕರ್ತವ್ಯವಲ್ಲವೇ? ಸರ್ಕಾರಿ ಆಸ್ಪತ್ರೆಗಳು ಇರುವುದು ಬಡವರಿಗೆ ಮಾತ್ರವೇ? ಸರಿಯಾದ ಚಿಕಿತ್ಸೆ ದೊರೆಯದೆ ಬಡವರ ಜೀವ ಅಪಾಯಕ್ಕೆ ಸಿಲುಕಬೇಕೆ?

ಅಧಿಕಾರಿಗಳು ಮತ್ತು ರಾಜಕಾರಣಿಗಳು ಅನಾರೋಗ್ಯಕ್ಕೆ ಈಡಾದಾಗ ಸರ್ಕಾರಿ ಆಸ್ಪತ್ರೆಗೆ ದಾಖಲಾದರೆ ಅಲ್ಲಿನ ಅವ್ಯವಸ್ಥೆಗಳನ್ನು ಕಂಡು ಸರಿಪಡಿಸಬಹುದು. ಈ ದಿಸೆಯಲ್ಲಿ ಇದು ಒಂದು ರೀತಿಯಲ್ಲಿ ಅಪೂರ್ವ ಅವಕಾಶ ಎಂದರೆ ತಪ್ಪಲ್ಲ. ಗಿರಿನಾಥ್ ಅವರು ಸರ್ಕಾರಿ ಆಸ್ಪತ್ರೆಗೆ ದಾಖಲಾಗುವ ಮೂಲಕ ಮಾದರಿಯಾಗಬಹುದಿತ್ತು.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಧೈರ್ಯದಿಂದ ಎದುರಿಸಬೇಕಿತ್ತು

'ಎಲ್ಲಿಯವರೆಗೆ ಹೆದರುವವರು ಇರುತ್ತಾರೋ ಅಲ್ಲಿಯವರೆಗೆ ಹೆದರಿಸುವವರು ಇದ್ದೇ ಇರುತ್ತಾರೆ!' ಎಂದು ಮಹಾಭಾರತದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಹೇಳುವ ಮಾತು ಪ್ರಸ್ತುತವೆನಿಸುತ್ತದೆ. ಕೋಲಾರ ಜಿಲ್ಲೆಯ ನಂಗಲಿ ಭಾಗದಲ್ಲಿ ನಡೆದಿರುವ ಪ್ರಕರಣದಿಂದ ಈ ಮಾತು ನೆನಪಾಯಿತು. ದಲಿತ ಯುವಕನು ಒಕ್ಕಲಿಗ ಯುವಕರ ಬೈಕ್ ಅನ್ನು ಹಿಂದಿಕ್ಕಿದ್ದಕ್ಕೆ ಆ ಜಾತಿಯ ನಾಲ್ವರು ಯುವಕರು ದಲಿತ ಯುವಕನನ್ನು ಮರಕ್ಕೆ ಕಟ್ಟಿ ಥಳಿಸಿದ್ದಾರೆ, ಇದರಿಂದ ಮನನೊಂದ ಯುವಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಹೇಳಲಾಗಿದೆ. ಇದೆಂತಹ ವಿಪರ್ಯಾಸ. ಅದೇ ಯುವಕ ಆ ನಾಲ್ವರನ್ನು ಧೈರ್ಯದಿಂದ ಎದುರಿಸಿ, ಜಾತಿ ನಿಂದನೆ ಮಾಡಿದವರಿಗೆ ಕಾನೂನಾತ್ಮಕ ಶಿಕ್ಷೆ ಕೊಡಿಸಿದ್ದರೆ ಆತ ಇತರ ದಲಿತರಿಗೆ ಮಾದರಿಯಾಗುತ್ತಿದ್ದ. ಅದು ಬಿಟ್ಟು ಅವಮಾನವಾಯಿತು ಎಂದು ಪ್ರಾಣ ಬಿಟ್ಟರೆ ಏನು ಸಾಧಿಸಿದಂತಾಯಿತು?

ದಲಿತ ಯುವಕರು ಯಾವುದೇ ಅವಮಾನಗಳಿಗೆ ಜಗ್ಗದೆ 'ಶಿಕ್ಷಣ, ಸಂಘಟನೆ, ಹೋರಾಟ' ಎನ್ನುವ ಅಂಬೇಡ್ಕರ್ ಅವರ ಅಸ್ತ್ರವನ್ನು ಉಪಯೋಗಿಸಿ ಎದುರಾಳಿಗಳ ಎದೆ ನಡುಗುವಂತೆ ಬದುಕಬೇಕು. ದಲಿತ ಎನ್ನುವ ಕೀಳರಿಮೆಯನ್ನು ಮೊದಲು ಕಿತ್ತು ಬಿಸಾಕಿದರೆ ಆಗ ಭಯ ತಾನಾಗಿಯೇ ದೂರವಾಗುತ್ತದೆ.

ರಾಜು ಬಿ. ಲಕ್ಕಂಪುರ, ಜಗಳೂರು

ಸಿಟ್ಟು ತಣಿಸುವ ಪ್ರಯತ್ನ...

'ದಿ ಕಾಶ್ಮೀರ್ ಫೈಲ್ಸ್' ಚಲನಚಿತ್ರದ ಬಗ್ಗೆ ಗೋವಾದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ತೀರ್ಪುಗಾರರ ಮಂಡಳಿಯ ಅಧ್ಯಕ್ಷರಾದ ಇಸ್ರೇಲ್‌ನ ನದಾವ್ ಲಪಿಡ್ ಅವರು ನೀಡಿದ ಹೇಳಿಕೆಗಾಗಿ ಇಸ್ರೇಲ್ ರಾಯಭಾರಿ ಭಾರತದ ಕ್ಷಮೆ ಕೇಳುವ ಅಗತ್ಯವಿರಲಿಲ್ಲ. ಸಂಪಾದಕೀಯದಲ್ಲಿ ಬರೆದಿರುವಂತೆ (ಪ್ರ.ವಾ., ಡಿ. 1), ಈ ಹೇಳಿಕೆ ಎರಡೂ ದೇಶಗಳ ನಡುವಿನ ಸಂಬಂಧವನ್ನು ಹಾಳು ಮಾಡುವಂಥದ್ದಾಗಿರಲಿಲ್ಲ ನಿಜ. ಆದರೆ ಭಾರತವು ಇಸ್ರೇಲಿನಿಂದ ಬಹಳಷ್ಟು ತಂತ್ರಜ್ಞಾನವನ್ನು ಅಮದು ಮಾಡಿಕೊಳ್ಳುತ್ತದೆ. ಬಹುಶಃ ಅಂತಹ ವ್ಯವಹಾರದ ಮೇಲೆ ಈ ಹೇಳಿಕೆ ಏನೂ ಪರಿಣಾಮ ಬೀರದಿದ್ದರೂ ತೆರೆಯ ಹಿಂದಿನ ಮತ್ತು ಸರ್ಕಾರಗಳ ನಡುವೆ ಮಾತ್ರ ನಡೆಯುವ ಒಪ್ಪಂದಗಳು, ವ್ಯವಹಾರಗಳ ಮೇಲೆ ಇದು ದೊಡ್ಡ ಪರಿಣಾಮವನ್ನೇ ಬೀರುತ್ತಿತ್ತೇನೊ. ಅದಕ್ಕಾಗಿಯೇ, ಮುನಿಸಿಕೊಂಡ ಮಗುವನ್ನು ಸಮಾಧಾನಪಡಿಸುವ ರೀತಿಯಲ್ಲಿ ಸರ್ಕಾರದ ಕೋಪವನ್ನು ಬೇಗ ತಣಿಸಲು ಇಸ್ರೇಲಿಗೆ ಈ ಕ್ಷಮೆಯಾಚನೆ ಅನಿವಾರ್ಯವಾಗಿತ್ತು ಅನಿಸುತ್ತದೆ!

ರವಿಕಿರಣ್ ಶೇಖರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೀಸಲಾತಿ: ಮಿತಿ ಮತ್ತು ರದ್ದತಿಯ ಭೀತಿ

ಒಬಿಸಿ ಸಮುದಾಯಗಳು ಮೀಸಲಾತಿ ಪಡೆಯಲು ಮತ್ತು ಕೆನೆಪದರವನ್ನು ಮೀಸಲಾತಿಯಿಂದ ಹೊರಗೆ ಇರಿಸಲು ನಿಗದಿ ಮಾಡಿದ ಆದಾಯ ಮಿತಿಗಿಂತ ಇಡಬ್ಲ್ಯುಎಸ್‌ಗೆ ನಿಗದಿ ಮಾಡಲಾಗಿರುವ ಆದಾಯ ಮಿತಿಯು ಬಹಳ ಹೆಚ್ಚು. ಇತರ ಮೀಸಲಾತಿಯ ವ್ಯಾಪ್ತಿಯಲ್ಲಿ ಬರುವ ವರ್ಗಗಳು ಬಡತನದಲ್ಲಿಯೇ ಇದ್ದರೂ ಈ ವರ್ಗಗಳನ್ನು ಇಡಬ್ಲ್ಯುಎಸ್ ಮೀಸಲಾತಿಗೆ ಪರಿಗಣಿಸಲಾಗುವುದಿಲ್ಲ ಎಂಬುದು ಆಘಾತಕರ. ಇದಕ್ಕೆ ಯಾವುದೇ ಕಾರಣವನ್ನೂ ನೀಡಲಾಗಿಲ್ಲ

ಮೀಸಲಾತಿ ಚರ್ಚೆ 5

• ನ್ಯಾಯಮೂರ್ತಿ ಕೆ. ಚಂದ್ರು

ಮೀಸಲಾತಿಯು ಶೋಷಿತ ವರ್ಗಗಳನ್ನು ಸಶಕ್ತಗೊಳಿಸುವ ಪ್ರಕ್ರಿಯೆ ಎಂಬುದರ ಕುರಿತು ನಿರಂತರವಾಗಿ ಚರ್ಚೆ ನಡೆದಿದೆ. ಮೀಸಲಾತಿಯ ಪರಿಕಲ್ಪನೆಗೆ ಸಂಬಂಧಿಸಿ 'ವರ್ಗ' ಮತ್ತು 'ಜಾತಿ'ಯ ವಿಚಾರದ ಗ್ರಹಿಕೆಯು ನ್ಯಾಯಾಂಗಕ್ಕೆ ಮಾತ್ರವಲ್ಲ ಮುಖ್ಯವಾಹಿನಿಯ ರಾಜಕೀಯ ಪಕ್ಷಗಳ ನಿಲುಕಿಗೆ ಕೂಡ ಸಿಕ್ಕಿಲ್ಲ. ಸಂವಿಧಾನದಲ್ಲಿ 395 ವಿಧಿಗಳು ಇದ್ದರೂ 15 ಮತ್ತು 16ನೇ ವಿಧಿಗಳಲ್ಲಿ ಮಾತ್ರ 'ಜಾತಿ' ಮತ್ತು 'ವರ್ಗ'ದ ಪ್ರಸ್ತಾಪ ಇದೆ. ಅಷ್ಟೊಂದು ಸುದೀರ್ಘವಾದ ಸಂವಿಧಾನದಲ್ಲಿಯೂ 'ವರ್ಗ' ಮತ್ತು 'ಜಾತಿ'ಯ ವ್ಯಾಖ್ಯಾನ ಇಲ್ಲ. ಸಂವಿಧಾನ ರಚನಾ ಸಭೆಯ ಚರ್ಚೆಗಳಲ್ಲಿ ಕೂಡ ಈ ಎರಡು ಪದಗಳ ಕುರಿತು ಸಂವಾದ ನಡೆದಿಲ್ಲ.

'ಜಾತಿ' ಮತ್ತು 'ವರ್ಗ'ಕ್ಕೆ ಸಂಬಂಧಿಸಿದ ಮೊದಲ ಪರೀಕ್ಷೆಯು ಮದ್ರಾಸ್ ಹೈಕೋರ್ಟ್‌ನ ಮುಂದೆ ಬಂತು. ಬಳಿಕ ಅದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತು. ಮದ್ರಾಸ್ ಪ್ರಾಂತ್ಯದ ಆಗಿನ ಸರ್ಕಾರವು (ಉತ್ತರ ಮಲಬಾರ್, ದಕ್ಷಿಣ ಕನ್ನಡ, ಆಂಧ್ರ ಪ್ರದೇಶ ಒಳಗೊಂಡ ಪ್ರದೇಶ) ಸರ್ಕಾರಿ ಉದ್ಯೋಗಗಳನ್ನು ಜಾತಿ ಮತ್ತು ಧರ್ಮದ ಆಧಾರದಲ್ಲಿ ಹಂಚಿಕೆ ಮಾಡುವ ಪದ್ಧತಿ ಅಳವಡಿಸಿಕೊಂಡಿತ್ತು. 1950ರ ಜನವರಿ 26ರಂದು ಸಂವಿಧಾನವು ಜಾರಿಗೆ ಬಂದ ಬಳಿಕವೂ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕಾಲೇಜುಗಳ ಪ್ರವೇಶಕ್ಕೆ ಜಾತಿ ಆಧಾರಿತ ಸರ್ಕಾರಿ ಆದೇಶವನ್ನು ಸರ್ಕಾರವು ಹೊರಡಿಸಿತ್ತು. ಈ ಆದೇಶದ ಆಧಾರದಲ್ಲಿ ಹೀಗೆ ಮೀಸಲಾತಿ ನೀಡಲಾಗಿತ್ತು– ಬ್ರಾಹ್ಮಣೇತರರು (ಹಿಂದೂ) (6), ಹಿಂದುಳಿದ ಹಿಂದುಗಳು (2), ಬ್ರಾಹ್ಮಣರು (2), ಹರಿಜನ (2), ಆಂಗ್ಲೊ ಇಂಡಿಯನ್ ಮತ್ತು ಭಾರತೀಯ ಕ್ರೈಸ್ತರು (1) ಮತ್ತು ಮುಸ್ಲಿಂ (1).

ಮದ್ರಾಸ್ ಸರ್ಕಾರವು 1950ರ ಜುಲೈ 27ರಂದು ಹೊರಡಿಸಿದ್ದ ಆದೇಶವನ್ನು ಮದ್ರಾಸ್ ಹೈಕೋರ್ಟ್ ರದ್ದುಪಡಿಸಿತ್ತು. ಮದ್ರಾಸ್ ಸರ್ಕಾರವು ಈ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತು. ಮದ್ರಾಸ್ ಹೈಕೋರ್ಟ್‌ನ ಆದೇಶವನ್ನು ರದ್ದುಪಡಿಸಲು ಸುಪ್ರಿಂ ಕೋರ್ಟ್ ನಿರಾಕರಿಸಿತು. ದಕ್ಷಿಣದಲ್ಲಿ ಉಂಟಾದ ಪ್ರತಿಭಟನೆಯ ಕಾರಣದಿಂದಾಗಿ ಸರ್ಕಾರವು ಸಂವಿಧಾನಕ್ಕೆ ಮೊದಲ ತಿದ್ದುಪಡಿ ಮಾಡಿ 16(4) ವಿಧಿಯನ್ನು ಸೇರಿಸಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಮೀಸಲಾತಿ ನೀಡಿತು. ಹೀಗೆ, ಈ ತಿದ್ದುಪಡಿಯು ಮೀಸಲಾತಿ ಪ್ರಕ್ರಿಯೆಯ ಮೈಲುಗಲ್ಲಾಯಿತು.

ಆದರೆ, ಜಾತಿ ಮತ್ತು ವರ್ಗದ ಗೋಜಲು ಪ್ರಶ್ನೆಯು ನ್ಯಾಯಾಲಯಗಳನ್ನು ಸದಾ ಕಾಲ ಕಾಡುತ್ತಲೇ ಬಂದಿದೆ. ಹಿಂದುಳಿದ ವರ್ಗಗಳನ್ನು ಗುರುತಿಸಲು ಕರ್ನಾಟಕ ಸರ್ಕಾರವು ಆಯೋಗವೊಂದನ್ನು ನೇಮಿಸಿದ ವಿಚಾರವು ಸುಪ್ರೀಂ ಕೋರ್ಟ್ ಮುಂದೆ ಬಂತು. ನ್ಯಾಯಮೂರ್ತಿ ಒ.ಚಿನ್ನಪ್ಪ ರೆಡ್ಡಿ ಅವರು ಜಾತಿ ಮತ್ತು ವರ್ಗದ ನಡುವಣ ಸಂಬಂಧವನ್ನು ಹೀಗೆ ವಿವರಿಸಿದ್ದಾರೆ: 'ಭಾರತದ ಗ್ರಾಮೀಣ ಸಮಾಜದಲ್ಲಿ ಸಾಮಾಜಿಕ ಸ್ಥಾನಮಾನ ಮತ್ತು ಆರ್ಥಿಕ ಶಕ್ತಿಯು ಜಾತಿ ವ್ಯವಸ್ಥೆಯೊಂದಿಗೆ ಎಷ್ಟೊಂದು ಹಾಸು ಹೊಕ್ಕಾಗಿದೆ ಎಂದರೆ ಜಾತಿಯೇ ಸಾಮಾಜಿಕ ಹಿಂದುಳಿದಿರುವಿಕೆ ಮತ್ತು ಬಡತನದ ಕಾರಣ ಎಂದು ಯಾವುದೇ ಹಿಂಜರಿಕೆ ಇಲ್ಲದೆ ಹೇಳಬಹುದು. ಆದ್ದರಿಂದ, ಸಾಮಾಜಿಕ ಹಿಂದುಳಿದಿರುವಿಕೆಯನ್ನು ವ್ಯಕ್ತಿಯ ಜಾತಿಯ ಜೊತೆಗೆ ಗುರುತಿಸಬಹುದು'.

'ಒಂದು ಜಾತಿಯು ಸಾಮಾಜಿಕವಾಗಿ ಹಿಂದುಳಿದಿದೆ ಎಂಬುದನ್ನು ಗುರುತಿಸಲು ಬಡತನ, ಜಾತಿ, ವೃತ್ತಿ ಮತ್ತು ವಸತಿಯು ಮುಖ್ಯ ಅಂಶಗಳಾಗಿವೆ... ಆದರೆ, ನಮ್ಮ ದೇಶದ ಬಹುಪಾಲು ಜನರು ಬಡವರೇ ಆಗಿರುವುದರಿಂದ ಮತ್ತು ಅವರಲ್ಲಿ ಕೆಲವರು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಮುಂದುವರಿದಿದ್ದು, ಕೆಲವರು ಹಿಂದುಳಿದಿರುವುದರಿಂದ ಸಾಂವಿಧಾನಿಕವಾಗಿ ಹಿಂದುಳಿದವರು ಎಂದು ಗುರುತಿಸಲು ಬಡತನವೊಂದನ್ನೇ ಮಾನದಂಡವಾಗಿ ಇರಿಸಿಕೊಳ್ಳಲು ಸಾಧ್ಯವಿಲ್ಲ' (ಕೆ.ವಿ.ವಸಂತ್ ಕುಮಾರ್, 1985).

ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ (ಎಸ್‌ಇಬಿಸಿ) ಮಂಡಲ್ ಆಯೋಗದ ವರದಿಯ ಆಧಾರದಲ್ಲಿ 1990ರ ದಶಕದಲ್ಲಿ ಮೀಸಲಾತಿ ಘೋಷಿಸಿದಾಗ, ಬಲಪಂಥೀಯ ರಾಜಕೀಯ ಪಕ್ಷಗಳ ಕುಮ್ಮಕ್ಕಿನಿಂದ ವಿದ್ಯಾರ್ಥಿಗಳು ಗಲಭೆ ಸೃಷ್ಟಿಸಿದರು. ವಿಚಾರವು ಸುಪ್ರೀಂ ಕೋರ್ಟ್ ಮುಂದೆ ಮತ್ತೊಮ್ಮೆ ಬಂತು ಮತ್ತು ಒಂಬತ್ತು ನ್ಯಾಯಮೂರ್ತಿಗಳ ಪೀಠವು ಅದರ ವಿಚಾರಣೆ ನಡೆಸಿತು. ಸಂವಿಧಾನದ 16(4)ನೇ ವಿಧಿಯು ಸಾಮಾಜಿಕ ಹಿಂದುಳಿದಿರುವಿಕೆಗೆ ಸಂಬಂಧಿಸಿದ್ದಾಗಿದೆ ಮತ್ತು ಖಂಡಿತವಾಗಿಯೂ ಭಾರತದಲ್ಲಿ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಹಿಂದುಳಿದಿರುವಿಕೆಯು ಒಂದರೊಡನೊಂದು ತಳಕು ಹಾಕಿಕೊಂಡಿದೆ. ಆರ್ಥಿಕ ಮಾನದಂಡವೊಂದರ ಮೇಲೆ ಮಾತ್ರ ಹಿಂದುಳಿದ ವರ್ಗವನ್ನು ಗುರುತಿಸಲು ಸಾಧ್ಯವಿಲ್ಲ. ಹಾಗಾಗಿಯೇ ಆರ್ಥಿಕ ಮಾನದಂಡದ ಮೂಲಕ ಮಾತ್ರ ಮೀಸಲಾತಿಯನ್ನೂ ನೀಡಲಾಗದು (ಇಂದಿರಾ ಸಾಹ್ನಿ, 1992).

ಏಮ್ಸ್, ಜವಾಹರಲಾಲ್ ಸ್ನಾತಕೋತ್ತರ ವೈದ್ಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಮುಂತಾದ ಸಂಸ್ಥೆಗಳು ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಪ್ರವೇಶಾತಿಯಲ್ಲಿ ಮೀಸಲಾತಿಯನ್ನು ಹೊರಗಿಟ್ಟಾಗ ಸಂವಿಧಾನಕ್ಕೆ 93ನೇ ತಿದ್ದುಪಡಿಯನ್ನು 2006ರಲ್ಲಿ ಸಂಸತ್ತು ತಂದಿತು. ಈ ತಿದ್ದುಪಡಿಗೆ ಅನುಗುಣವಾಗಿ ಕೇಂದ್ರೀಯ ಶಿಕ್ಷಣ ಸಂಸ್ಥೆಗಳು (ಪ್ರವೇಶಾತಿಯಲ್ಲಿ ಮೀಸಲಾತಿ) ಕಾಯ್ದೆ 2006 ಅನ್ನು ಜಾರಿಗೆ ತರಲಾಯಿತು. ಇದರ ಪ್ರಕಾರ, ಎಸ್‌ಸಿಗೆ ಶೇ 15, ಎಸ್‌ಟಿಗೆ ಶೇ 7.5 ಮತ್ತು ಇತರ ಹಿಂದುಳಿದ ವರ್ಗಗಳಿಗೆ ಶೇ 27ರಷ್ಟು ಮೀಸಲಾತಿಯನ್ನು ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ನೀಡಲಾಯಿತು.

ಇತರ ಹಿಂದುಳಿದ ವರ್ಗಗಳ ಜನರು ಸರ್ಕಾರಿ ನೌಕರಿಗೆ ಸೇರುವ ಸಂದರ್ಭದಲ್ಲಿ ಮಾತ್ರ ಮೀಸಲಾತಿಗೆ ಅರ್ಹತೆ ಹೊಂದಿದ್ದಾರೆಯೇ ಹೊರತು ಸೇರಿದ ನಂತರ ಅಲ್ಲ ಎಂದು ಮಂಡಲ್ ಆಯೋಗದ ಅನ್ವಯ ಒಬಿಸಿಗೆ ಮೀಸಲಾತಿಯ ವಿಚಾರದ ವಿಚಾರಣೆಯಲ್ಲಿ ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, 1995ರಲ್ಲಿ 77ನೇ ತಿದ್ದುಪಡಿ ಮೂಲಕ ಸಂವಿಧಾನಕ್ಕೆ 16 (4ಎ) ವಿಧಿಯನ್ನು ಸೇರಿಸಲಾಯಿತು. ಸರ್ಕಾರಿ ಹುದ್ದೆಯ ಯಾವುದೇ ವರ್ಗ ಅಥವಾ ವರ್ಗಗಳಲ್ಲಿ ಇರುವವರಿಗೂ ಬಡ್ತಿಯಲ್ಲಿ ಮೀಸಲಾತಿ ನೀಡಲು ಈ ತಿದ್ದುಪಡಿಯು ಅವಕಾಶ ಕೊಟ್ಟಿತು.

ಎಸ್‌ಸಿ, ಎಸ್‌ಟಿ ಸಮುದಾಯಗಳಿಗೆ ಬಡ್ತಿಯಲ್ಲಿ ಮೀಸಲಾತಿ ನೀಡಲು ಹಲವು ರಾಜ್ಯ ಸರ್ಕಾರಗಳು ನಡೆಸಿದ ಪ್ರಯತ್ನ ಫಲ ನೀಡಿಲ್ಲ. ಉತ್ತರಾಖಂಡ ಸರ್ಕಾರವು ಪ್ರಮಾಣಾತ್ಮಕ ದತ್ತಾಂಶ ಸಂಗ್ರಹಿಸಲು ಸಮಿತಿಯೊಂದನ್ನು ನೇಮಿಸಿತು. ಪ್ರಾತಿನಿಧ್ಯ ಕಡಿಮೆ ಇರುವ ಎಸ್‌ಸಿ, ಎಸ್‌ಟಿ ಸಮುದಾಯಗಳ ಜನರಿಗೆ ಬಡ್ತಿಯಲ್ಲಿ ಮೀಸಲಾತಿ ನೀಡಬೇಕು ಎಂದು ಸಮಿತಿ ಶಿಫಾರಸು ಮಾಡಿತು. ಆದರೆ, ಸರ್ಕಾರ ಅದನ್ನು ನಿರಾಕರಿಸಿತು. ಈ ವಿಚಾರವು ಸುಪ್ರೀಂ ಕೋರ್ಟ್‌ಗೆ ಬಂತು. ಬಡ್ತಿಯಲ್ಲಿ ಮೀಸಲಾತಿ ನೀಡಲೇಬೇಕು ಎಂದು ನ್ಯಾಯಾಲಯದ ಮೂಲಕ ಸರ್ಕಾರದ ಮೇಲೆ ಒತ್ತಡ ಹೇರಲಾಗದು ಎಂದು ಕೋರ್ಟ್ ಹೇಳಿತು (ಮುಕೇಶ್ ಕುಮಾರ್, 2020).

ಈ ಮೂಲಕ, ಸರ್ಕಾರಿ ಉದ್ಯೋಗದ ಬಡ್ತಿಯಲ್ಲಿ ಮೀಸಲಾತಿಗೆ ಪೂರ್ಣವಿರಾಮ ಬಿತ್ತು ಮತ್ತು ಬಡ್ತಿಯಲ್ಲಿ ಮೀಸಲು ಒಂದು ಕನಸಾಗಿ ಬಿಟ್ಟಿತು. ಸಂವಿಧಾನದ 12ನೇ ವಿಧಿಯ ಅನ್ವಯ, ಸರ್ಕಾರಿ ಸ್ವಾಮ್ಯದ ಉದ್ದಿಮೆಗಳು (ಪಿಎಸ್‌ಯು) ಸರ್ಕಾರದ ಭಾಗವೇ ಆಗಿವೆ. ಹಾಗಾಗಿ, ಅಲ್ಲಿನ ನೇಮಕಾತಿಯಲ್ಲಿ ಮೀಸಲಾತಿ ನೀಡುವುದು ಕಡ್ಡಾಯ. ಆದರೆ, ಉದಾರೀಕರಣ ಮತ್ತು ಖಾಸಗೀಕರಣದ ಕಾರಣದಿಂದ ಪಿಎಸ್‌ಯುಗಳಲ್ಲಿ ಇದ್ದ ಸರ್ಕಾರದ ಬಂಡವಾಳವನ್ನು ಹಿಂದಕ್ಕೆ ಪಡೆಯಲಾಗಿದೆ. ಈ ಮೂಲಕ ಪಿಎಸ್‌ಯುಗಳಲ್ಲಿ ಕೂಡ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಇಲ್ಲದಂತಾಗಿದೆ.

ಲೋಕಸಭೆಗೆ 2019ರಲ್ಲಿ ಚುನಾವಣೆ ನಡೆಯುವುದಕ್ಕೆ ಸ್ವಲ್ಪ ಮೊದಲು, ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಸಂವಿಧಾನಕ್ಕೆ 103ನೇ ತಿದ್ದುಪಡಿಯನ್ನು ತರಾತುರಿಯಲ್ಲಿ ತಂದಿತು. 2019ರ ಜನವರಿ 14ರಿಂದ ಜಾರಿಗೆ ಬರುವಂತೆ ಈ ತಿದ್ದುಪಡಿಯನ್ನು ಸಂಸತ್ತು ಅಂಗೀಕರಿಸಿತು. ಸವರ್ಣೀಯರಲ್ಲಿ ಇರುವ ಆರ್ಥಿಕವಾಗಿ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಭಾರಿ ಆದಾಯ ಮಿತಿಯ ಮೀಸಲಾತಿಯು 2019ರ ಲೋಕಸಭಾ ಚುನಾವಣೆಯಲ್ಲಿ ನೆರವು ನೀಡಬಹುದು ಎಂಬುದು ಲೆಕ್ಕಾಚಾರವಾಗಿತ್ತು. ಎಲ್ಲ ರೀತಿಯ ಮೀಸಲಾತಿಯೂ ಶೇ 50ರ ಮಿತಿಯನ್ನು ಮೀರಬಾರದು ಎಂದು ಸುಪ್ರೀಂ ಕೋರ್ಟ್ ನಿಗದಿ ಮಾಡಿದ್ದನ್ನು ಈ ವಿಶೇಷ ಶೇ 10ರ ಮೀಸಲಾತಿಯು ಮೀರುತ್ತದೆ ಎಂಬುದನ್ನು ಸರ್ಕಾರವು ಗಣನೆಗೇ ತೆಗೆದುಕೊಳ್ಳಲಿಲ್ಲ. ಎಸ್‌ಸಿ ಮತ್ತು ಎಸ್‌ಟಿ ಸಮುದಾಯಗಳಿಗೆ ಜನಸಂಖ್ಯೆಯ ಆಧಾರದಲ್ಲಿ ಮೀಸಲಾತಿ ನಿಗದಿ ಮಾಡಲಾಗಿದೆ. ಒಬಿಸಿ ಮೀಸಲಾತಿಯನ್ನು ನಿಗದಿ ಮಾಡುವಾಗ ಜನಸಂಖ್ಯೆಯ ಅನುಪಾತವನ್ನು ಗಣನೆಗೆ ತೆಗೆದುಕೊಂಡಿಲ್ಲ. ಮೀಸಲಾತಿಯನ್ನು ಶೇ 27ಕ್ಕೆ ನಿಗದಿ ಮಾಡಲಾಯಿತು.

ಮೀಸಲಾತಿಯಿಂದ ಹೊರಗೆ ಇದ್ದ ಸಮುದಾಯಗಳ ಜನಸಂಖ್ಯೆಯ ದತ್ತಾಂಶವನ್ನು ಸರ್ಕಾರವು ಯಾವತ್ತೂ ಸಂಗ್ರಹಿಸಿದ್ದೇ ಇಲ್ಲ. ಹೀಗಿರುವಾಗ, ಮೀಸಲಾತಿಯನ್ನು ಶೇ 10ಕ್ಕೆ ನಿಗದಿ ಮಾಡಿದ್ದು ಹೇಗೆ ಎಂಬುದು ಸ್ಪಷ್ಟವಿಲ್ಲ. ಒಬಿಸಿ ಸಮುದಾಯಗಳು ಮೀಸಲಾತಿ ಪಡೆಯಲು ಮತ್ತು ಕೆನೆಪದರವನ್ನು ಮೀಸಲಾತಿಯಿಂದ ಹೊರಗೆ ಇರಿಸಲು ನಿಗದಿ ಮಾಡಿದ ಆದಾಯ ಮಿತಿಗಿಂತ ಇಡಬ್ಲ್ಯುಎಸ್‌ಗೆ ನಿಗದಿ ಮಾಡಲಾಗಿರುವ ಆದಾಯ ಮಿತಿಯು ಬಹಳ ಹೆಚ್ಚು. ಇತರ ಮೀಸಲಾತಿಯ ವ್ಯಾಪ್ತಿಯಲ್ಲಿ ಬರುವ ವರ್ಗಗಳು ಬಡತನದಲ್ಲಿಯೇ ಇದ್ದರೂ ಈ ವರ್ಗಗಳನ್ನು ಇಡಬ್ಲ್ಯುಎಸ್ ಮೀಸಲಾತಿಗೆ ಪರಿಗಣಿಸಲಾಗುವುದಿಲ್ಲ ಎಂಬುದು ಆಘಾತಕರ. ಇದಕ್ಕೆ ಯಾವುದೇ ಕಾರಣವನ್ನೂ ನೀಡಲಾಗಿಲ್ಲ.

ಇಡಬ್ಲ್ಯುಎಸ್ ಮೀಸಲಾತಿ ಮತ್ತು 103ನೇ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ 3:2 ಬಹುಮತದೊಂದಿಗೆ ಎತ್ತಿ ಹಿಡಿದಿದೆ. ಮೀಸಲಾತಿ ಹೊಂದಿರುವ ಇತರ ವರ್ಗಗಳಿಗೆ ಕೂಡ ಇಡಬ್ಲ್ಯುಎಸ್ ಮೀಸಲಾತಿಯನ್ನು ಏಕೆ ವಿಸ್ತರಿಸಿಲ್ಲ ಎಂಬುದು ಮಾತ್ರ ಭಿನ್ನಮತದ ತೀರ್ಪು ನೀಡಿದ ನ್ಯಾಯಮೂರ್ತಿಗಳ ಪ್ರಶ್ನೆಯಾಗಿತ್ತು. ಕೇಂದ್ರವು ನಿಗದಿ ಮಾಡಿರುವ ಆದಾಯ ಮಿತಿಯ ಕುರಿತೂ ಕೆಲವು ಸಂದೇಹಗಳನ್ನು ವ್ಯಕ್ತಪಡಿಸಲಾಗಿದೆ (ಜನಹಿತ ಅಭಿಯಾನ, 2022). ಸುಪ್ರೀಂ ಕೋರ್ಟ್ ನಿಗದಿ ಮಾಡಿದ ಶೇ 50ರ ಮೀಸಲಾತಿಯ ಉಲ್ಲಂಘನೆಯ ಕುರಿತು ಅನುಮಾನ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳು, ತಮಿಳುನಾಡಿದ್ದೂ (ಶೇ 69) ಸೇರಿದಂತೆ ವಿವಿಧ ರಾಜ್ಯಗಳ ಮೀಸಲಾತಿ ವ್ಯವಸ್ಥೆಯ ಮರುಪರಿಶೀಲನೆಗೆ ಇದು ಅಡ್ಡಿ ಮಾಡಬಹುದು ಎಂದಿದ್ದಾರೆ.

ಇಡಬ್ಲ್ಯುಎಸ್ ಸಮುದಾಯಗಳಿಗೆ ನೀಡಲಾದ ಶೇ 10ರಷ್ಟು ಮೀಸಲಾತಿಯು ಈವರೆಗೆ ಇದ್ದ ಪ್ರತಿಭೆ ಮತ್ತು ಮೀಸಲಾತಿ ಎಂಬ ವಾದವನ್ನು ತಳ್ಳಿ ಹಾಕುತ್ತದೆ. ಈವರೆಗೆ ಅಪರಿಚಿತವಾಗಿದ್ದ ಇಡಬ್ಲ್ಯುಎಸ್ ವರ್ಗಕ್ಕೆ ಮೀಸಲಾತಿ ನೀಡುವ ಮೂಲಕ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳನ್ನು ಸಶಕ್ತೀಕರಿಸಲು ಸಂವಿಧಾನದಲ್ಲಿಯೇ ಅಡಕವಾಗಿದ್ದ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು 103ನೇ ತಿದ್ದುಪಡಿಯು ಹೂತು ಹಾಕಿದೆ. ರಾಜ್ಯಗಳಿಗೆ ಒಂದು ಅನುಕೂಲವೂ ಆಗಿದೆ. ಮೀಸಲಾತಿ ಹೊಂದಿರುವ ವರ್ಗಗಳಿಗೆ ಶೇ 50ಕ್ಕಿಂತ ಹೆಚ್ಚು ಮೀಸಲಾತಿ ನೀಡಿದ್ದ ರಾಜ್ಯಗಳಿಗೆ ಇದ್ದ ಭಯವನ್ನು ಹೋಗಲಾಡಿಸಿದೆ.

ಅದರ ಜೊತೆಗೆ, ಮೀಸಲಾತಿಯ ಪರಿಕಲ್ಪನೆಯು ನ್ಯಾಯಾಲಯದಿಂದಲೇ ಗಂಡಾಂತರಕ್ಕೆ ಒಳಗಾಗಿದೆ. ಬಹುಮತದ ತೀರ್ಪು ಕೊಟ್ಟ ನ್ಯಾಯಮೂರ್ತಿಗಳಲ್ಲಿ ಒಬ್ಬರು ಗುಜರಾತ್ ಹೈಕೋರ್ಟ್‌ನಲ್ಲಿ ಇದ್ದಾಗ ಹೀಗೆ ಹೇಳಿದ್ದರು: 'ಸ್ವಾತಂತ್ರ್ಯ ಬಂದು 65 ವರ್ಷಗಳ ಬಳಿಕವೂ ಈ ದೇಶದಲ್ಲಿ ಮೀಸಲಾತಿ ಕೇಳುತ್ತಿರುವುದು ನಾಚಿಕೆಗೇಡು'. ಅವರ ಪ್ರಕಾರ, ಮೀಸಲಾತಿಯು ಈ ದೇಶವನ್ನು ನಾಶಪಡಿಸಿದೆ, ದೇಶವು ಸರಿಯಾದ ದಿಕ್ಕಿನಲ್ಲಿ ಪ್ರಗತಿ ಹೊಂದುವುದಕ್ಕೆ ಇದು ಅಡ್ಡಿಯಾಗಿದೆ. ಅವರು 2028ರಲ್ಲಿ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಆಗಲಿದ್ದಾರೆ. ಅವರು ಎರಡು ವರ್ಷಕ್ಕೂ ಹೆಚ್ಚು ಅವಧಿಗೆ ಈ ಹುದ್ದೆಯಲ್ಲಿ ಇರಲಿದ್ದಾರೆ. ಹಾಗಾಗಿಯೇ, ಈಗ ಇರುವ ಪ್ರಶ್ನೆಯು ಮೀಸಲಾತಿಯ ಮಿತಿಯದ್ದು ಅಷ್ಟೇ ಅಲ್ಲ, ಮೀಸಲಾತಿ ಪರಿಕಲ್ಪನೆಯೇ ರದ್ದತಿಯಾಗಲಿದೆ ಎಂಬುದು ಕೂಡಾ ಆಗಿದೆ.

ಲೇಖಕ: ನಿವೃತ್ತ ನ್ಯಾಯಮೂರ್ತಿ, ಮದ್ರಾಸ್ ಹೈಕೋರ್ಟ್

'ತೀರ್ಪು ಅತಾರ್ಕಿಕ'

ಮೀಸಲಾತಿಯ ಪ್ರಮಾಣವು ಶೇ 50ರಷ್ಟನ್ನು ಮೀರಬಾರದು ಎಂದು ಇಂದಿರಾ ಸಾಹ್ನಿ ಪ್ರಕರಣದಲ್ಲಿ ತೀರ್ಪು ನೀಡಿದ್ದು 9 ನ್ಯಾಯಮೂರ್ತಿಗಳ ಸಂವಿಧಾನ ಪೀಠ. ಈಗ ಈ ಮಿತಿಯನ್ನು ಮೀರಬಹುದು ಎಂದು ಇಡಬ್ಲ್ಯುಎಸ್ ಪ್ರಕರಣದಲ್ಲಿ ತೀರ್ಪು ನೀಡಿದ್ದು, ಐವರು ನ್ಯಾಯಮೂರ್ತಿಗಳ ಸಂವಿಧಾನ ಪೀಠ. 9 ನ್ಯಾಯಮೂರ್ತಿಗಳ ಪೀಠವು ನೀಡಿದ್ದ ತೀರ್ಪನ್ನು ಐವರು ನ್ಯಾಯಮೂರ್ತಿಗಳ ಪೀಠವು ಮೀರುವುದು ಕಾನೂನುಬದ್ಧವಲ್ಲ. ಯಾವ ಸಮುದಾಯದ ಜನರ ಸಂಖ್ಯೆ ಎಷ್ಟಿದೆ ಮತ್ತು ಅವರ ಹಿಂದುಳಿದಿರುವಿಕೆಯ ಪ್ರಮಾಣ ಎಂಥದ್ದು ಎಂದು ವಿವರಿಸುವ ಮಂಡಲ ಆಯೋಗದ ವರದಿಯ ಆಧಾರದಲ್ಲಿ ಇಂದಿರಾ ಸಾಹ್ನಿ ಪ್ರಕರಣದಲ್ಲಿ ತೀರ್ಪು ನೀಡಲಾಗಿತ್ತು. ಆದರೆ ಇಡಬ್ಲ್ಯುಎಸ್ ಪ್ರಕರಣದಲ್ಲಿನ ತೀರ್ಪು ನೀಡುವಾಗ ಇಂತಹ ಯಾವುದೇ ವೈಜ್ಞಾನಿಕ ವರದಿಯನ್ನು ಆಧರಿಸಿಲ್ಲ. ಅಲ್ಲದೆ ಇಡಬ್ಲ್ಯುಎಸ್ ಅಡಿಯಲ್ಲಿ ಮೀಸಲಾತಿ ಪಡೆದಿರುವ ಸಮುದಾಯದ ಜನರ ಸಂಖ್ಯೆ ಎಷ್ಟಿದೆ? ಅವರ ಬಡತನದ ಸ್ವರೂಪ ಎಂಥದ್ದು ಎಂಬುದರ ಬಗ್ಗೆ ಯಾವುದೇ ವೈಜ್ಞಾನಿಕ ಅಧ್ಯಯನ ನಡೆದಿಲ್ಲ. ಹೀಗಿದ್ದೂ ಒಟ್ಟು ಜನಸಂಖ್ಯೆಯ ಶೇ 3ರಷ್ಟಿರುವವರಿಗೆ ಶೇ 10ರಷ್ಟು ಮೀಸಲಾತಿ ನೀಡಲಾಗಿದೆ. ಬೇರೆ ವರ್ಗಗಳಿಗೆ ಮೀಸಲಾತಿಗಾಗಿ ₹ 4 ಲಕ್ಷದ ಆದಾಯದ ಮಿತಿ ಇದ್ದರೆ, ಇಡಬ್ಲ್ಯುಎಸ್ ಮೀಸಲಾತಿಯಲ್ಲಿ ₹ 8 ಲಕ್ಷದ ಆದಾಯದ ಮಿತಿ ನೀಡಲಾಗಿದೆ. ಇದರಲ್ಲಿ ತರ್ಕವೇ ಇಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಈ ತೀರ್ಪು ಅತಾರ್ಕಿಕ, ಅಸಾಂವಿಧಾನಿಕ. ಹೀಗಾಗಿಯೇ ಈ ತೀರ್ಪನ್ನು ಮರುಪರಿಶೀಲಿಸಲು ಕೋರಿ ಅರ್ಜಿ ಸಲ್ಲಿಕೆಯಾಗಿದೆ.

ಅಖಿಲಾ ವಿದ್ಯಾಸಂದ್ರ, ವಕೀಲೆ ಮತ್ತು ಸಾಮಾಜಿಕ ಕಾರ್ಯಕರ್ತೆ

'ಸಾಮಾಜಿಕ ನ್ಯಾಯಕ್ಕೆ ಅಪಚಾರ ಆಗದಿರಲಿ'

ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವವರು ಹಾಗೂ ಸರ್ಕಾರಿ ಸೇವೆಗಳಲ್ಲಿ ಸರಿಯಾದ ಪ್ರಾತಿನಿಧ್ಯ ಹೊಂದಿಲ್ಲದ ಸಮುದಾಯಗಳಿಗೆ ಮೀಸಲಾತಿ ಕಲ್ಪಿಸಬೇಕು ಎಂದು ಸಂವಿಧಾನದ 15(4)ನೇ ಮತ್ತು 16(4)ನೇ ವಿಧಿಗಳಲ್ಲಿ ಹೇಳಲಾಗಿತ್ತು. ಆ ಪ್ರಕಾರವೇ ಮೀಸಲಾತಿ ವ್ಯವಸ್ಥೆಯನ್ನು ರೂಪಿಸಲಾಗಿತ್ತು. ಈಗ ಕೇಂದ್ರ ಸರ್ಕಾರವು ಸಂವಿಧಾನಕ್ಕೆ 103ನೇ ತಿದ್ದುಪಡಿ ಮೂಲಕ ಆರ್ಥಿಕವಾಗಿ ಹಿಂದುಳಿದವರಿಗೆ ಮೀಸಲಾತಿ ಕಲ್ಪಿಸುವುದನ್ನೂ ವಿಧಿ 16(4)ರ ವ್ಯಾಪ್ತಿಗೆ ತಂದಿದೆ. ಹಿಂದುಳಿದ ವರ್ಗಗಳ ಆಯೋಗ ಸೇರಿದಂತೆ ಸೂಕ್ತ ಸಂಸ್ಥೆಗಳಿಂದ ಅಧ್ಯಯನ ನಡೆಸಿ, ವರದಿ ಪಡೆದ ಬಳಿಕವೇ ಮೀಸಲಾತಿ ವಿಚಾರದಲ್ಲಿ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಇದು ಸಂಪುಟ ಸಭೆಯಲ್ಲಿ ದಿಢೀರ್ ತೀರ್ಮಾನ ಕೈಗೊಳ್ಳುವಂತಹ ವಿಚಾರವಲ್ಲ.

ವಿಸ್ತೃತವಾದ ಅಧ್ಯಯನ ನಡೆಸಿ, ಕಾಲಕಾಲಕ್ಕೆ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಮುಂದುವರಿದವರು ಹಾಗೂ ಸರ್ಕಾರಿ ಸೇವೆಗಳಲ್ಲಿ ಗಣನೀಯ ಪ್ರಾತಿನಿಧ್ಯ ಪಡೆದ ಸಮುದಾಯಗಳನ್ನು ಮೀಸಲಾತಿಯಿಂದ ಹೊರಗಿಡುವುದು ನಡೆಯಬೇಕು. ಅದೇ ರೀತಿ ಪ್ರಾತಿನಿಧ್ಯ ಪಡೆಯದ ಸಮುದಾಯಗಳಿಗೆ ನ್ಯಾಯ ಒದಗಿಸಬೇಕು. ಬಡತನವೊಂದನ್ನೇ ಆಧರಿಸಿ ಮೀಸಲಾತಿ ಕಲ್ಪಿಸಬಾರದು. ರಾಜಕೀಯ, ಆರ್ಥಿಕ ಪ್ರಾಬಲ್ಯ ಹೊಂದಿರುವ ಸಮುದಾಯಗಳ ಬಡವರು ಮತ್ತು ಪ್ರಾತಿನಿಧ್ಯವೇ ಇಲ್ಲದ ಸಮುದಾಯಗಳ ಬಡವರನ್ನು ಆರ್ಥಿಕ ಮಾನದಂಡದ ಆಧಾರದಲ್ಲಿ ಒಂದೇ ತಕ್ಕಡಿಯಲ್ಲಿ ತೂಗಲು ಸಾಧ್ಯವೆ? ಕೆಲವು ಸಮುದಾಯಗಳು ತಮ್ಮಲ್ಲಿನ ಬಡವರಿಗೆ ಸ್ವಯಂ ಶಕ್ತಿ ತುಂಬುವಷ್ಟು ಶಕ್ತವಾಗಿವೆ. ಸಣ್ಣ ಸಮುದಾಯಗಳಷ್ಟೇ ಎಲ್ಲದಕ್ಕೂ ಸರ್ಕಾರಗಳನ್ನು ನೆಚ್ಚಿಕೊಂಡಿರುತ್ತವೆ. ಅಂತಹ ಸಮುದಾಯಗಳನ್ನು ಕೇಂದ್ರೀಕರಿಸಿಕೊಂಡು ಮೀಸಲಾತಿಗೆ ಸಂಬಂಧಿಸಿದ ತೀರ್ಮಾನಗಳನ್ನು ಕೈಗೊಳ್ಳುವುದು ನ್ಯಾಯಯುತ.

ದೇಶದ ಕೆಲವು ರಾಜ್ಯಗಳಲ್ಲಿ ಮೀಸಲಾತಿಯ ಪ್ರಮಾಣ ಶೇಕಡ 50ರಷ್ಟನ್ನು ಮೀರಿದೆ. ಹಲವು ರಾಜ್ಯಗಳಲ್ಲಿ ಶೇ 50ರ ಮಿತಿಯಲ್ಲಿದೆ. ದೇಶದ ಜನರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿ ಹಾಗೂ ಸರ್ಕಾರಿ ಸೇವೆಗಳಲ್ಲಿನ ಪ್ರಾತಿನಿಧ್ಯದ ಕುರಿತು ಸಮಗ್ರ ಸಮೀಕ್ಷೆ ನಡೆಸಿ, ಅದರ ಆಧಾರದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಮೀಸಲಾತಿ ನೀತಿ ರೂಪಿಸಬೇಕಿದೆ. ಮೀಸಲಾತಿಗೆ ಸಂಬಂಧಿಸಿದ ವಿಚಾರಗಳಲ್ಲಿ ರಾಜ್ಯಗಳ ಅಧಿಕಾರವನ್ನು ಕೇಂದ್ರ ಸರ್ಕಾರ ಅತಿಕ್ರಮಿಸಲು ಅವಕಾಶ ಇರಕೂಡದು. ಮೀಸಲಾತಿಯು ಪ್ರತಿಭೆ ಮತ್ತು ಆರ್ಥಿಕ ಸ್ಥಿತಿಯ ಆಧಾರದಲ್ಲಿ ನಿರ್ಧಾರವಾಗುತ್ತದೆ. ಮೀಸಲಾತಿ ವ್ಯಾಪ್ತಿಯಲ್ಲಿರುವವರಿಗೆ ಪ್ರತಿಭೆ ಇರುವುದಿಲ್ಲ ಎಂಬ ಮನಸ್ಥಿತಿ ಬದಲಾಗಬೇಕು. ಸಾಮಾಜಿಕ ನ್ಯಾಯಕ್ಕೆ ಅಪಚಾರ ಆಗದಂತೆ ಈ ವಿಚಾರದಲ್ಲಿ ತೀರ್ಮಾನಗಳು ಆಗಬೇಕು. ಸಂಸತ್ತು, ವಿಧಾನಮಂಡಲ ಹಾಗೂ ಸಾರ್ವಜನಿಕವಾಗಿ ವಿಸ್ತೃತ ಚರ್ಚೆ ಆಗಬೇಕು. ಮೀಸಲಾತಿಗೆ ಸಂಬಂಧಿಸಿದ ವಿಚಾರಗಳಲ್ಲಿ ನ್ಯಾಯಾಂಗವು ಹೆಚ್ಚು ಎಚ್ಚರಿಕೆಯಿಂದ ತೀರ್ಮಾನಗಳನ್ನು ನೀಡುವಂತಾಗಬೇಕು.

ವಿ.ಆರ್. ಸುದರ್ಶನ್, ಮಾಜಿ ಸಭಾಪತಿ, ವಿಧಾನ ಪರಿಷತ್

'ಸೂಕ್ತ ಕಾನೂನು ರೂಪಿಸಬೇಕು'

ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೀಸಲಾತಿ ಪ್ರಮಾಣ ಹೆಚ್ಚಳವನ್ನು ನಾನು ಸ್ವಾಗತಿಸುತ್ತೇನೆ. ಆರ್ಥಿಕ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿ ಎತ್ತಿ ಹಿಡಿದ ಸುಪ್ರೀಂ ಕೋರ್ಟ್ ತೀರ್ಪಿನಲ್ಲಿರುವ ಕೆಲವು ಅಂಶಗಳನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗುತ್ತದೆ. ಮೀಸಲಾತಿ ಪ್ರಮಾಣ ಶೇ 50ಕ್ಕಿಂತ ಹೆಚ್ಚಿಗೆ ಇರಬಾರದು ಎಂಬುದು ಆರ್ಥಿಕವಾಗಿ ಹಿಂದುಳಿದವರಿಗೆ ಅನ್ವಯ ಆಗುವುದಿಲ್ಲ. ಆದರೆ, ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳಿಗೆ ಅನ್ವಯಿಸುತ್ತದೆ ಎಂದು ಈ ಆದೇಶದಲ್ಲಿ ಬರೆಯಲಾಗಿದೆ. ಸರ್ಕಾರ ಇತ್ತೀಚೆಗೆ ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿರುವುದನ್ನು ಕಾರ್ಯರೂಪಕ್ಕೆ ತರಲು ಸುಪ್ರೀಂ ಕೋರ್ಟ್‌ನ ಈ ಆದೇಶವು ತೊಡಕಾಬಹುದು. ಆದ್ದರಿಂದ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳ ಹಿತ ಕಾಯಲು ಸುಪ್ರೀಂ ಕೋರ್ಟ್ ತೀರ್ಪು ಮರುಪರಿಶೀಲನೆ ಕೋರಿ ಸರ್ಕಾರ ಅರ್ಜಿ ಸಲ್ಲಿಸಿ ಪ್ರಯತ್ನಿಸಬೇಕು ಅಥವಾ ಸೂಕ್ತ ಕಾನೂನು ರೂಪಿಸಬೇಕು.

ಎಚ್.ಕಾಂತರಾಜು, ಮಾಜಿ ಅಧ್ಯಕ್ಷ, ರಾಜ್ಯ ಹಿಂದುಳಿದ ವರ್ಗಗಳ ಆಯೋಗ

ಪದಬಂಧ 5157

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಆಗಮಗಳನ್ನು ತಿಳಿದವನು (4)
3. ಕೊಂಬೆಯಿಂದ ಕೊಂಬೆಗೆ ಓಡಾಡುವ ಪ್ರಾಣಿ (4)
5. ಕಸಿ ಮಾಡಿದ ಜಾಗದಲ್ಲಿರುವ ಮರಳು (3)
7. ಇದು ಬೇರೆಯವರ ಹಣ (4)
9. ತೆಪ್ಪ ಎಂಬರ್ಥವಿರುವ ಸಂವತ್ಸರ(2)
10. ವರ್ಣನೆಯಲ್ಲಿ ಬಂದಿರುವ ಅಕ್ಷರ (2)
11. ಯುದ್ಧಭೂಮಿಯಿದು (4)
13. ಸಂತನಿಂದ ಮುಂದುವರೆದ ಪೀಳಿಗೆ! (3)
16. ಅತಿಯಾದ ಬಾಯಾರಿಕೆ (4)
17. ಬಹಳವಾಗಿ ಭೇದಿಯಾಗುವ ಒಂದು ರೋಗ (4)

ಮೇಲಿಂದ ಕೆಳಕ್ಕೆ
1. ಆಲದ ಮರದ ಹತ್ತಿರವಿರುವ ಸೋಮಾರಿ! (3)
2. ಎಳೆಮಾವಿನ ಕಾಯಿ ಕಂಡಾಗ ಈ ಸ್ಪಂದನ! (3)
3. ಅಪ್ಪಟ ಸಸ್ಯಾಹಾರ ಇದು (4)
4. ಅಕ್ಕರಾಸ್ತೆಯಿಂದ ನಡೆದು ಹೋಗುವ ದಾರಿ (2)
6. ಕರದೊಳಗಿರುವ ಹೂಳಿಟ್ಟ ನಿಧಿ (4)
7. ಪರಿಣಯಕ್ಕಾಗಿ ಕೈಗೊಡಿರುವ ಸಂಚಾರ (3)
8. ಅದೇ ತಾನೆ ಹುಟ್ಟಿದುದು (4)
12. ದೇಗುಲದಲ್ಲಿ ಮೂಲ ವಿಗ್ರಹವನ್ನು ಇಟ್ಟಿರುವ ಒಳಭಾಗ (4)
13. ಜೊತೆಯಲ್ಲಿ ಇರುವ ವ್ಯಕ್ತಿ (3)
14. ಇಲ್ಲಿ ಕತ್ತಲೆ ಆವರಿಸಿದೆ (3)
15. ನಾಟಕದಲ್ಲಿ ಒಂದು ವಿಭಾಗ (2)



5156ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಶಾಪಗ್ರಸ್ತ 2.ಪರಂಪರೆ 4.ಮಾನವೀಯ 6.ಸಂಪದ 7.ಕಸ 9.ನಿಷೇಧ 11.ರಕಂ 13.ಆಲೋಲ 14.ಕಡಿವಾಣ 16.ಮಕಮಲ್ಲು 17.ಅಸಂಬದ್ಧ

ಮೇಲಿಂದ ಕೆಳಕ್ಕೆ:
1.ಶಾಖಮಾಪಕ 2.ಪರೆ 3.ಪರೋಪಕಾರ 5.ಯವನಿ 8.ಸಮಾಲೋಚಕ 10.ಧನಿಕ 12.ಕಂಕಣಬದ್ಧ 15.ಜೊಲ್ಲು

ಸುಡೊಕು 5543

2				9		7		
	1		4		7		5	2
		9		5			6	
	9			2		8		6
3		7	1		6			
	2			7		1		4
1			9	8			4	
	7					2		8
8		2		1				

5542 ಸುಡೊಕು

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9	6	4	1	3	8	7	2	5
1	5	3	7	6	2	8	9	4
2	8	7	5	4	9	1	6	3
3	9	1	2	7	4	6	5	8
6	2	5	9	8	3	4	7	1
7	4	8	6	1	5	2	3	9
5	7	2	8	9	1	3	4	6
4	1	9	3	2	6	5	8	7
8	3	6	4	5	7	9	1	2

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಡಿಸೆಂಬರ್ 3, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ಏಕಾದಶಿ ಗಂ. 29-35 ನಕ್ಷತ್ರ: ರೇವತಿ ಗಂ. 30-16 ಯೋಗ: ವ್ಯತೀಪಾತ ಗಂ. 28-34, ಕರಣ: ವಣಿಜ ಗಂ. 17-34, ವೃಶ್ಚಿಕ ಮಾಸದ 16 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 –10-30 ಸೂರ್ಯೋದಯ : 06-42 ಸೂರ್ಯಾಸ್ತ : 05-58
ಮುಸ್ಲಿಂ ದಿನಾಂಕ : 08 ಜುಮಾದುಲ್ಲಾವಲ್
ದಿನ ವಿಶೇಷ : ಗೀತಾ ಜಯಂತಿ, ಮೌನ ಏಕಾದಶಿ (ಜೈನ್)
ಅದೃಷ್ಟ ಸಂಖ್ಯೆ : 5

ಮೇಷ: ರಾಜಕೀಯ ರಂಗದಲ್ಲಿ ಬಹಳ ದಿನಗಳ ನಂತರ ಯಶಸ್ಸು ದೊರೆಯಲಿದೆ. ಪ್ರಯತ್ನ ಪಟ್ಟ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡುವುದು. ಮನೆಮದ್ದುಗಳಿಂದ ಮನೆಯವರ ಆರೋಗ್ಯ ಸುಧಾರಣೆಯಾಗುತ್ತದೆ.

ವೃಷಭ: ವೃತ್ತಿ ಹಾಗೂ ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ. ಈ ದಿನ ನೀವು ಕೈಗೊಳ್ಳುವ ನಿರ್ಧಾರಗಳು ಮನಸ್ಸಿಗೆ ನೆಮ್ಮದಿ ತರಲಿದೆ. ಲೇವಾದೇವಿ ವ್ಯವಹಾರ ಲಾಭ ತರಲಿದೆ. ಕೌಟುಂಬಿಕ ಸುಖದೊಂದಿಗೆ ಸರ್ವತೋಮುಖ ಅಭಿವೃದ್ಧಿ.

ಮಿಥುನ: ವಿಜ್ಞಾನ ವಿಷಯದ ವಿದ್ಯಾರ್ಥಿಗಳಿಗೆ ಓದಿನಲ್ಲಿ ಆಸಕ್ತಿ ಹೆಚ್ಚುವುದು. ಮನೆಯ ವ್ಯವಹಾರಗಳಲ್ಲಿ ಇದ್ದಂತಹ ಹಲವು ತೊಡಕುಗಳು ಒಮ್ಮತದಿಂದ ದೂರಾಗಲಿದೆ. ಇನ್ನೊಬ್ಬರಿಗೆ ಮೋಸ ಮಾಡುವುದು ಸರಿಯಲ್ಲ.

ಕರ್ಕಾಟಕ: ಬೇಡದ ವಿಷಯದಲ್ಲಿ, ಅಪರಿಚಿತ ವ್ಯಕ್ತಿಗಳಲ್ಲಿ, ನಿಮಗೆ ಸಂಬಂಧವಿಲ್ಲದ ವಿಚಾರದಲ್ಲಿ ವಾದ ಮಾಡುವುದು ಸರಿಯಲ್ಲ. ಮೌನವಾಗಿರಿ. ವಿನಾ ಕಾರಣ ಯಾವುದೇ ವಿವಾದಕ್ಕೆ ಸಿಲುಕದಿರಿ.

ಸಿಂಹ: ಪುತ್ರರ ಸಹಕಾರ ಸಹಾಯದಿಂದ ಮನೆತನದ ವ್ಯಾಪಾರ ವ್ಯವಹಾರದಲ್ಲಿ ಮತ್ತಷ್ಟು ಬಲ ಬಂದಂತಾಗಿ ವಿಸ್ತರಣೆಗೆ ಅನುಕೂಲವಾಗಲಿದೆ. ಬಹಳ ದಿನಗಳ ಸಾಲ ಮಾರುಪಾವತಿ ಮಾಡಲು ಕಾಲ ಕೂಡಿಬರಲಿದೆ.

ಕನ್ಯಾ: ವಿಳಂಬವಾಗಿದ್ದ ನಿಮ್ಮ ಕಾರ್ಯಗಳು ಚುರುಕುಗೊಳ್ಳುವುದು. ಈ ದಿನ ಅನಿರೀಕ್ಷಿತ ಸುತ್ತಾಟದಿಂದ ಆಯಾಸ ತೋರಿಬರಲಿದೆ. ಸಂಜೆ ವೇಳೆಗೆ ಅದರಿಂದ ಬಂದ ಲಾಭಾಂಶದಿಂದ ಆಯಾಸ ಮಾಯವಾದಂತಾಗುವುದು.

ತುಲಾ: ಅಣ್ಣತಮ್ಮಂದಿರ ಒಳ ಜಗಳದಿಂದ ಮುಖ್ಯವಾದ ಒಂದು ಕಾರ್ಯಕ್ರಮಕ್ಕೆ ತಡೆಯಾಗುವುದು. ಭೂ ವ್ಯವಹಾರದಲ್ಲಿ ಈ ದಿನ ನಷ್ಟವನ್ನು ಅನುಭವಿಸಬೇಕಾಗಬಹುದು. ಆರೋಗ್ಯ ವೃದ್ಧಿಯಾಗುವುದು.

ವೃಶ್ಚಿಕ: ಭೂಖರೀದಿ ಯೋಗವಿದೆ. ಈ ದಿನ ಸತ್ಕಾರ್ಯಗಳ ನಿರ್ವಹಣೆಗೆ ಸಹಕಾರ ಕೋರಿ ಬರುವವರಿಗೆ ನಿಮ್ಮಿಂದಾಗುವ ಸಹಾಯವನ್ನು ಮಾಡಿ, ಇದು ನಾಳೆ ನಿಮಗೆ ಶ್ರೀರಕ್ಷೆಯಾಗಲಿದೆ. ಅಚ್ಚರಿಯಿಂದ ಕೂಡಿದ ದಿನವಾಗುವುದು.

ಧನು: ಸಾತ್ವಿಕ ನಡತೆಯಿಂದ ಜನಪ್ರಿಯತೆ ಹೊಂದುವಿರಿ. ಇಂದಿನಿಂದ ಹಣದ ಹರಿವು ಸುಗಮವಾಗಲಿದೆ. ನಿಮ್ಮ ಬಳಿ ಇರುವ ಬೃಹತ್ ಯೋಜನೆಗಳಿಗೆ, ಅವಕಾಶಗಳು ಹಾಗೂ ಸನ್ನಿವೇಶಗಳು ದೊರೆತು ಜೀವಬಂದಂತಾಗುವುದು.

ಮಕರ: ವೈಯಕ್ತಿಕ ಜೀವನದಲ್ಲಿನ ಅಸ್ಪಷ್ಟ ವಿಚಾರಗಳನ್ನು ಸ್ಪಷ್ಟಪಡಿಸಿಕೊಳ್ಳುವ ದಿಕ್ಕಿನಲ್ಲಿ ಈ ದಿನ ಒಂದು ಮುಖಾಮುಖಿ ಸಂಭಾಷಣೆಯನ್ನು ಮಾಡಬೇಕಾಗುತ್ತದೆ. ಈ ದಿನ ಯಾವುದೇ ಕೆಲಸಕ್ಕಾದರೂ ಸಂತಸದಿಂದ ಮುನ್ನುಗ್ಗಿರಿ.

ಕುಂಭ: ನಿಸ್ವಾರ್ಥ ಮನೋಭಾವದಿಂದ ಮಾಡಿದ ಕೆಲಸಗಳು ಈ ದಿನ ಫಲ ನೀಡಲಿದೆ. ಸ್ನೇಹಿತರ ಜೊತೆಗಿನ ಕಷ್ಟ-ಸುಖದ ಸಂಭಾಷಣೆ ಅಭಿವೃದ್ಧಿಗೆ ದಾರಿ ದೀಪವಾಗಲಿದೆ. ಹೊರ ದೇಶಕ್ಕೆ ಹೋಗುವ ಕನಸಿಗೆ ಈ ದಿನ ಪುಷ್ಟಿ ಸಿಗುವುದು.

ಮೀನ: ನಿಮ್ಮ ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಇಂದು ಸರಿಯಾದ ದಿನ. ಬಯಸಿದವರು ದೂರಾಗುವ ಆತಂಕ ಎದುರಾಗಬಹುದು. ಧೈರ್ಯ ಮತ್ತು ಬುದ್ಧಿವಂತಿಕೆಯ ಮಾತುಗಳು ನಿಮ್ಮನ್ನು ಕಾಪಾಡಲಿದೆ.

ಕ್ರಿಕೆಟ್ ಟೆಸ್ಟ್: ಆಸ್ಟ್ರೇಲಿಯಾಕ್ಕೆ ಇನಿಂಗ್ಸ್ ಮುನ್ನಡೆ

ಪರ್ತ್ (ಎಎಫ್‌ಪಿ): ಮಿಚೆಲ್ ಸ್ಟಾರ್ಕ್ ಮತ್ತು ಪ್ಯಾಟ್ ಕಮಿನ್ಸ್ ಅವರ ಪರಿಣಾಮಕಾರಿ ದಾಳಿಯ ಮುಂದೆ ವೆಸ್ಟ್ ಇಂಡೀಸ್ ತಂಡವು ಇಲ್ಲಿ ಆಸ್ಟ್ರೇಲಿಯಾ ಎದುರು ನಡೆಯುತ್ತಿರುವ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ದೊಡ್ಡ ಹಿನ್ನಡೆ ಅನುಭವಿಸಿತು.

ಮೊದಲ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ತಂಡವು 598 ರನ್‌ಗಳನ್ನು ಗಳಿಸಿ ಡಿಕ್ಲೇರ್ ಮಾಡಿತ್ತು. ಅದಕ್ಕುತ್ತರವಾಗಿ ವಿಂಡೀಸ್ ತಂಡವು 98. 2 ಓವರ್‌ಗಳಲ್ಲಿ 283 ರನ್ ಗಳಿಸಿ ಆಲೌಟ್ ಆಯಿತು. 315 ರನ್‌ಗಳ ಮುನ್ನಡೆ ಗಳಿಸಿದ ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್ ಆರಂಭಿಸಿದ್ದು, 1 ವಿಕೆಟ್ ಕಳೆದುಕೊಂಡು 29 ರನ್ ಗಳಿಸಿದೆ.

ವಿಕೆಟ್ ಗಳಿಸಿದ ಪ್ಯಾಟ್ ಕಮಿನ್ಸ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು –ಎಎಫ್‌ಪಿ ಚಿತ್ರ

ವಿಂಡೀಸ್ ಇನಿಂಗ್ಸ್‌ಗೆ ಬ್ರಾಥ್‌ವೇಟ್ (64; 166ಎ, 4X5, 6X1) ಮತ್ತು ತೇಜನಾರಾಯಣ ಚಂದ್ರಪಾಲ್ (51; 79ಎ, 4X7, 6X1) ಉತ್ತಮ ಆರಂಭ ನೀಡಿದರು. ಆದರೆ ವಿಂಡೀಸ್ ಬ್ಯಾಟರ್‌ಗಳು ದೊಡ್ಡ ಮೊತ್ತ ಗಳಿಸದಂತೆ ಪ್ಯಾಟ್ ಕಮಿನ್ಸ್ (34ಕ್ಕೆ3) ಹಾಗೂ ಸ್ಟಾರ್ಕ್ (51ಕ್ಕೆ3) ತಡೆಯೊಡ್ಡಿದರು. ಸ್ಪಿನ್ನರ್ ನೇಥನ್ ಲಯನ್ (61ಕ್ಕೆ2) ಕೂಡ ಉತ್ತಮವಾಗಿ ಬೌಲಿಂಗ್ ಮಾಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 4ಕ್ಕೆ598ಡಿಕ್ಲೇರ್ಡ್, ವೆಸ್ಟ್ ಇಂಡೀಸ್: 98.2 ಓವರ್‌ಗಳಲ್ಲಿ 283 (ಕ್ರೇಗ್ ಬ್ರಾಥ್‌ವೇಟ್ 64, ತೇಜನಾರಾಯಣ ಚಂದ್ರಪಾಲ್ 51, ಬ್ಲ್ಯಾಕ್‌ವುಡ್ 36, ಜೇಸನ್ ಹೋಲ್ಡರ್ 27, ಶಾಮರ್ ಬ್ರೂಕ್ಸ್ 33, ಮಿಚೆಲ್ ಸ್ಟಾರ್ಕ್ 51ಕ್ಕೆ3, ಪ್ಯಾಟ್ ಕಮಿನ್ಸ್ 34ಕ್ಕೆ3, ನೇಥನ್ ಲಯನ್ 61ಕ್ಕೆ2) ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 11 ಓವರ್‌ಗಳಲ್ಲಿ 1 ವಿಕೆಟ್‌ಗೆ 29 (ಡೇವಿಡ್ ವಾರ್ನರ್ ಬ್ಯಾಟಿಂಗ್ 17, ಮಾರ್ನಸ್ ಲಾಬುಷೇನ್ ಬ್ಯಾಟಿಂಗ್ 3)

ಶೆಲ್ಡನ್ ಜಾಕ್ಸನ್ ಅಜೇಯ ಶತಕ; ಋತುರಾಜ್ ಗಾಯಕವಾಡ ಮಿಂಚು

ಸೌರಾಷ್ಟ್ರಕ್ಕೆ ವಿಜಯ್ ಹಜಾರೆ ಟ್ರೋಫಿ

ಅಹಮದಾಬಾದ್ (ಪಿಟಿಐ): ತಮ್ಮ ವೃತ್ತಿಜೀವನದಲ್ಲಿಯೇ ಶ್ರೇಷ್ಠವಾದ ಇನಿಂಗ್ಸ್ ಆಡಿದ ಶೆಲ್ಡನ್ ಜಾಕ್ಸನ್ ಸೌರಾಷ್ಟ್ರ ತಂಡಕ್ಕೆ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯ ಪ್ರಶಸ್ತಿಯ ಕಾಣಿಕೆ ನೀಡಿದರು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಫೈನಲ್‌ನಲ್ಲಿ ಸೌರಾಷ್ಟ್ರ ತಂಡವು ಐದು ವಿಕೆಟ್‌ಗಳಿಂದ ಮಹಾರಾಷ್ಟ್ರ ತಂಡವನ್ನು ಪರಾಭವಗೊಳಿಸಿತು.

ಟೂರ್ನಿಯಲ್ಲಿ ಶತಕದ ಹ್ಯಾಟ್ರಿಕ್ ಮಾಡಿದ ಋತುರಾಜ್ ಗಾಯಕವಾಡ (108; 131ಎ, 4X7, 6X4) ಅವರ ಬ್ಯಾಟಿಂಗ್‌ನಿಂದ ಮಹಾರಾಷ್ಟ್ರ ತಂಡವು 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 248 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಸೌರಾಷ್ಟ್ರ ತಂಡದ ಅನುಭವಿ, ಆರಂಭಿಕ ಬ್ಯಾಟರ್ ಶೆಲ್ಡನ್ ಜಾಕ್ಸನ್ (ಅಜೇಯ 133; 136ಎ, 4X12, 6X5) ಆಟ ರಂಗೇರಿತು. ಸೌರಾಷ್ಟ್ರ ತಂಡವು ಇನಿಂಗ್ಸ್‌ನಲ್ಲಿ ಇನ್ನೂ 21 ಎಸೆತಗಳು ಬಾಕಿ ಇರುವಾಗಲೇ ವಿಜಯೋತ್ಸವ ಆಚರಿಸಿತು. 2007-08ರಲ್ಲಿ ಪ್ರಶಸ್ತಿ ಜಯಿಸಿತ್ತು. ಇದೀಗ ಎರಡನೇ ಬಾರಿ ಚಾಂಪಿಯನ್ ಆಗಿದೆ.

36 ವರ್ಷದ ಶೆಲ್ಡನ್ ಹಾಗೂ ಹರ್ವಿಕ್ ದೇಸಾಯಿ (50; 67ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 125 ರನ್ ಸೇರಿಸಿದರು. ಈ ಅಡಿಪಾಯದ ಮೇಲೆ ತಂಡದ ಗೆಲುವಿನ ಸೌಧ ನಿರ್ಮಾಣವಾಯಿತು. 29ನೇ ಓವರ್‌ನಲ್ಲಿ ಮಹಾರಾಷ್ಟ್ರದ ಮುಕೇಶ್ ಚೌಧರಿ ಎಸೆತದಲ್ಲಿ ದೇಸಾಯಿ ಔಟಾದಾಗ ಜೊತೆಯಾಟ ಮುರಿದುಬಿತ್ತು.

ಈ ಸಂದರ್ಭವನ್ನು ಬಳಸಿಕೊಳ್ಳಲು ಮಹಾರಾಷ್ಟ್ರದ ಬೌಲರ್‌ಗಳು ಪ್ರಯತ್ನಿಸಿದರು. ಇದರಿಂದಾಗಿ 67 ರನ್‌ಗಳ ಅಂತರದಲ್ಲಿ ಒಟ್ಟು ಐದು ವಿಕೆಟ್‌ಗಳು ಪತನವಾದವು. ಆದರೆ ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ ಇನ್ನೊಂದೆಡೆ ಶೆಲ್ಡನ್ ಗಟ್ಟಿಯಾಗಿ ನಿಂತರು.

ಅಹಮದಾಬಾದ್‌ನಲ್ಲಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಸೌರಾಷ್ಟ್ರ ತಂಡದ ಆಟಗಾರರ ಸಂಭ್ರಮ –ಬಿಸಿಸಿಐ ಟ್ವಿಟರ್ ಚಿತ್ರ

40ನೇ ಓವರ್‌ನಲ್ಲಿ ಶೆಲ್ಡನ್ ಜೊತೆಗೂಡಿದ ಚಿರಾಗ್ ಜಾನಿ (ಔಟಾಗದೆ 30) ವಿಕೆಟ್ ಪತನಕ್ಕೆ ಅವಕಾಶ ಕೊಡಲಿಲ್ಲ.

ಋತುರಾಜ್ ಶತಕ: ಮಹಾರಾಷ್ಟ್ರ ತಂಡದ ಋತುರಾಜ್ ಗಾಯಕವಾಡ ಟೂರ್ನಿಯಲ್ಲಿ ಸತತ ಮೂರನೇ ಶತಕ ಗಳಿಸಿದರು. ಈ ಟೂರ್ನಿಯಲ್ಲಿ ಒಟ್ಟು ಐದು ಪಂದ್ಯಗಳಿಂದ 660 ರನ್ ಗಳಿಸಿದರು. ಅದರಲ್ಲಿ ಒಟ್ಟು ನಾಲ್ಕು ಶತಕ ಗಳಿಸಿದರು. ಟೂರ್ನಿಯ ಶ್ರೇಷ್ಠ ಆಟಗಾರ ಗೌರವ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮಹಾರಾಷ್ಟ್ರ: 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 248 (ಋತುರಾಜ್ ಗಾಯಕವಾಡ 108, ಅಜೀಂ ಖಾಜಿ 37, ನೌಷಾದ್ ಶೇಖ್ ಔಟಾಗದೆ 31, ಚಿರಾಗ್ ಜಾನಿ 43ಕ್ಕೆ3) ಸೌರಾಷ್ಟ್ರ: 46.3 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 249 (ಹರ್ವಿಕ್ ದೇಸಾಯಿ 50, ಶೆಲ್ಡನ್ ಜಾಕ್ಸನ್ ಅಜೇಯ 133, ಚಿರಾಗ್ ಜಾನಿ ಅಜೇಯ 30, ಮುಖೇಶ್ ಚೌಧರಿ 38ಕ್ಕೆ2, ವಿಕ್ಕಿ ಓಸ್ವಾಲ್ 20ಕ್ಕೆ2) ಫಲಿತಾಂಶ: ಸೌರಾಷ್ಟ್ರಕ್ಕೆ5 ವಿಕೆಟ್ ಜಯ ಮತ್ತು ಪ್ರಶಸ್ತಿ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ. ಹೆಚ್ ಎಸ್ ಭಾಗ್ಯಲಕ್ಷ್ಮಿ
ಶ್ರೀ. ಹೆಚ್. ಎ. ಕೆಂಪೇಗೌಡರವರ ಧರ್ಮಪತ್ನಿ
ತಾ. 23.11.2022 ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ತಾ. 03.12.2022ನೇ ಶನಿವಾರದಂದು ಬೆಳಿಗ್ಗೆ 10.00ಘಂಟೆಗೆ ಭಾವನ ಫಾರಂ, ರಾಮಸಂದ್ರ ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರಿನಲ್ಲಿ ಏರ್ಪಡಿಸಲಾಗಿದೆ, ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.
ದುಃಖತಪ್ತರು:
ಹೆಚ್. ಎ. ಕೆಂಪೇಗೌಡ, ಮಾಜಿ ಬಿಬಿಎಂಪಿ ಸದಸ್ಯರು, ಹನುಮಂತ ನಗರ ವಾರ್ಡ್
ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು

ವೀಕ್ಷಕ ವಿವರಣೆ ವೇಳೆ ರಿಕಿ ಪಾಂಟಿಂಗ್ ಅಸ್ವಸ್ಥ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ನಾಯಕ ರಿಕಿ ಪಾಂಟಿಂಗ್ ಅಸ್ವಸ್ಥರಾಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಪರ್ತ್‌ನಲ್ಲಿ ನಡೆಯುತ್ತಿರುವ ಆಸ್ಟ್ರೇಲಿಯಾ–ವೆಸ್ಟ್ ಇಂಡೀಸ್ ನಡುವಣ ಟೆಸ್ಟ್ ಪಂದ್ಯಕ್ಕೆ ಅವರು ವೀಕ್ಷಕ ವಿವರಣೆ ಮಾಡುವ ಸಂದರ್ಭದಲ್ಲಿ ಅಸ್ವಸ್ಥರಾದರು.

ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಹೃದಯದ ಪರೀಕ್ಷೆ ನಡೆಸಲಾಯಿತು.

‘ಆಸ್ಟ್ರೇಲಿಯಾ ತಂಡದ ವೈದ್ಯ ಲೇಹ್ ಗೋಲ್ಡಿಂಗ್ ಮತ್ತು ಮಾಜಿ ಕೋಚ್ ಜಸ್ಟಿನ್ ಲ್ಯಾಂಗರ್, ಪಾಂಟಿಂಗ್ ಅವರನ್ನು ಆಸ್ಪತ್ರೆಗೆ ಕರೆದೊಯ್ದರು’ ಎಂದು ಸಿಡ್ನಿ ಮಾರ್ನಿಂಗ್ ಹೆರಾಲ್ಡ್ ವರದಿ ಮಾಡಿದೆ.

ಪಾಂಟಿಂಗ್

47 ವರ್ಷದ ಪಾಂಟಿಂಗ್ ಪರೀಕ್ಷೆ ಹಾಗೂ ಆರೈಕೆಯ ನಂತರ ಸುಧಾರಿಸಿಕೊಂಡಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

‘ಪಾಂಟಿಂಗ್ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಸರಣಿಯಲ್ಲಿ ಅವರು ಕಾಮೆಂಟ್ರಿ ಕಾರ್ಯವನ್ನು ಮುಂದುವರಿಸುವುದಿಲ್ಲ’ ಎಂದು ವಕ್ತಾರರು ತಿಳಿಸಿದ್ದಾರೆ.

ರಾಜ್ಯಮಟ್ಟದ ‘ಫ್ಲೋರ್ ಬಾಲ್’ ಟೂರ್ನಿ ನಾಳೆ

ಕುಮಟಾ (ಉತ್ತರ ಕನ್ನಡ): ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ‘ಫ್ಲೋರ್ ಬಾಲ್’ ಪಂದ್ಯಾವಳಿಯು ಡಿ.4ರಂದು ಬೆಳಿಗ್ಗೆ 10ಕ್ಕೆ ಪಟ್ಟಣದ ಡಾ.ಎ.ವಿ.ಬಾಳಿಗಾ ವಾಣಿಜ್ಯ ಕಾಲೇಜು ಆವರಣದಲ್ಲಿ ಉದ್ಘಾಟನೆಯಾಗಲಿದೆ.

25 ಜಿಲ್ಲೆಗಳಿಂದ 450 ಕ್ರೀಡಾಪಟುಗಳು, 50 ಜನ ತಂಡ ವ್ಯವಸ್ಥಾಪಕರು ಸೇರಿ 500 ಮಂದಿ ಭಾಗವಹಿಸಲಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಹನುಮಂತಪ್ಪ ನಿಟ್ಟೂರು ಶುಕ್ರವಾರ ತಿಳಿಸಿದ್ದಾರೆ.

‘ಫ್ಲೋರ್ ಬಾಲ್’ ಕ್ರೀಡೆಯನ್ನು ಹಾಕಿಯ ಮಾದರಿಯಲ್ಲೇ ಹೊರಾಂಗಣ ಅಥವಾ ಒಳಾಂಗಣದಲ್ಲಿ ಆಡಲಾಗುತ್ತದೆ. ಪ್ಲಾಸ್ಟಿಕ್ ಚೆಂಡು ಮತ್ತು ಹಾಕಿ ಬ್ಯಾಟ್ ಮಾದರಿಯ ಪ್ಲಾಸ್ಟಿಕ್ ‘ಸ್ಟಿಕ್’ ಬಳಸಲಾಗುತ್ತದೆ. ಒಂದು ತಂಡದಲ್ಲಿ ಗೋಲ್ ಕೀಪರ್ ಸೇರಿದಂತೆ ಒಟ್ಟು ಏಳು ಆಟಗಾರರು ಇರುತ್ತಾರೆ.

ಇಂಗ್ಲೆಂಡ್ ಬೃಹತ್ ಮೊತ್ತ; ಪಾಕ್ ದಿಟ್ಟ ಹೋರಾಟ

ಶಫೀಕ್, ಇಮಾಮ್ ತಾಳ್ಮೆಯ ಆಟ

ರಾವಲ್ಪಿಂಡಿ (ಪಿಟಿಐ): ಆರಂಭಿಕ ಜೋಡಿ ಅಬ್ದುಲ್ಲಾ ಶಫೀಕ್ ಮತ್ತು ಇಮಾಮ್ ಉಲ್ ಹಕ್ ಅವರು ತಾಳ್ಮೆಯ ಬ್ಯಾಟಿಂಗ್ ಮೂಲಕ ಇಂಗ್ಲೆಂಡ್ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಪಾಕಿಸ್ತಾನದ ಹೋರಾಟಕ್ಕೆ ಜೀವ ತುಂಬಿದರು.

ಪಂದ್ಯದ ಮೊದಲ ದಿನವಾದ ಗುರುವಾರ ಬ್ಯಾಟಿಂಗ್ ಮಾಡಿದ್ದ ಇಂಗ್ಲೆಂಡ್ ತಂಡದ ನಾಲ್ವರು ಶತಕ ಬಾರಿಸಿದ್ದರು. ತಂಡವು ಒಂದೇ ದಿನದಲ್ಲಿ 506 ರನ್ ಗಳಿಸಿ ವಿಶ್ವದಾಖಲೆ ಬರೆದಿತ್ತು. ಎರಡನೇ ದಿನ ಆಟ ಮುಂದುವರಿಸಿದ ಇಂಗ್ಲೆಂಡ್ 657 ರನ್‌ಗಳಿಗೆ ಆಲೌಟ್ ಆಯಿತು. ರಾತ್ರಿ ಕ್ರೀಸ್ ಕಾಯ್ದಿದ್ದ ಹ್ಯಾರಿ ಬ್ರೂಕ್ (153) ರನ್ ಶತಕೋತ್ತರ ಅರ್ಧಶತಕ ಪೂರೈಸಿದರು. ಆದರೆ ಸ್ಟೋಕ್ಸ್ ಅರ್ಧಶತಕದ ಸನಿಹ ಎಡವಿದರು. ಬ್ಯಾಟರ್‌ಗಳ ಸ್ವರ್ಗದಂತಿರುವ ಪಿಚ್‌ನಲ್ಲಿ ಪಾಕ್ ತಂಡದ ನಸೀಂ ಶಾ ಮೂರು ಹಾಗೂ ಜಹೀದ್ ಮೆಹಮೂದ್ ನಾಲ್ಕು ವಿಕೆಟ್‌ಗಳನ್ನು ಕಬಳಿಸಿದರು.

ಇನಿಂಗ್ಸ್ ಆರಂಭಿಸಿದ ಆತಿಥೇಯ ತಂಡದ ಶಫೀಕ್ ಹಾಗೂ ಇಮಾಮ್ ಯಾವುದೇ ಧಾವಂತ ತೋರಲಿಲ್ಲ. ಶಫೀಕ್ (ಬ್ಯಾಟಿಂಗ್ 89; 158ಎ, 4X10, 6X2) ಮತ್ತು ಇಮಾಮ್ (ಬ್ಯಾಟಿಂಗ್ 90; 148ಎ, 4X13, 6X1) ಉತ್ತಮ ಆರಂಭ ನೀಡಿದರು. ಆತ್ಮವಿಶ್ವಾಸದಿಂದ ಬ್ಯಾಟಿಂಗ್ ಮಾಡಿದರು. ಇದರಿಂದಾಗಿ ದಿನದಾಟದ ಮುಕ್ತಾಯಕ್ಕೆ ತಂಡವು 51 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 181 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 101 ಓವರ್‌ಗಳಲ್ಲಿ 657 (ಹ್ಯಾರಿ ಬ್ರೂಕ್ 153, ಬೆನ್ ಸ್ಟೋಕ್ಸ್ 41, ವಿಲ್ ಜ್ಯಾಕ್ಸ್ 30, ರಾಬಿನ್ಸನ್ 37, ನಸೀಂ ಶಾ 140ಕ್ಕೆ3, ಮೊಹಮ್ಮದ್ ಅಲಿ 124ಕ್ಕೆ2, ಜಹೀದ್ ಮೆಹಮೂದ್ 235ಕ್ಕೆ4) ಪಾಕಿಸ್ತಾನ: 51 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 181 (ಶಫೀಕ್ ಬ್ಯಾಟಿಂಗ್ 89, ಇಮಾಮ್ ಉಲ್ ಹಕ್ ಬ್ಯಾಟಿಂಗ್ 90).

ಹಾಕಿ: ಭರತ್ ಎರಡು ಗೋಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭರತ್ ಗಳಿಸಿದ ಎರಡು ಗೋಲುಗಳ ಬಲದಿಂದ ಬಳ್ಳಾರಿ ಹಾಕಿ ಕ್ಲಬ್ ತಂಡವು ರಾಜ್ಯ ಬಿ ಡಿವಿಷನ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಜಯ ಗಳಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಬಳ್ಳಾರಿ 2–1ರಿಂದ ಅರಿಸ್ಟೊಕ್ರಾಟ್ ಕ್ಲಬ್ ಎದುರು ಗೆದ್ದಿತು. ಭರತ್ 23 ಮತ್ತು 33ನೇ ನಿಮಿಷಗಳಲ್ಲಿ ಕೈಚಳಕ ತೋರಿದರು. ಅರಿಸ್ಟೊಕ್ರಾಟ್ ಪರ ರಿನೀತ್ ಕಾರ್ಯಪ್ಪ 36ನೇ ನಿಮಿಷದಲ್ಲಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ಶನಿವಾರ ನಡೆಯುವ ಪಂದ್ಯದಲ್ಲಿ ಅರಿಸ್ಟೊಕ್ರಾಟ್–ಬಿಸಿವೈಎ ‘ಎ’ ಸೆಣಸಲಿವೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
Part-Time Jobs
ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

General
ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

VACANCY
Essjay Ericsson Pvt Ltd
EXPERIENCED IN TELECOM TOWER WORK ONLY
RIGGERS
Salary :15000-20000 PM (In-Hand - as per experience)
Qualification: 8th, 10th
TECHNICIANS
Salary: 15000-25000 PM (In-Hand - as per experience)
Qualification: 10th & ITI
ENGINEERS
Salary: 20000-35000 PM (In-Hand - as per experience)
Qualification: Diploma, B.Tech
MALE CANDIDATES ONLY
Please send CV to: shubhangi.bhatnagar.bo@essjayericsson.com
WhatsApp on: 8076039489

ಸಾರ್ವಜನಿಕ ಪ್ರಕಟಣೆ
ಶ್ರೀ ಗಣಪತಿ ಸೇವಾ ಸಮಿತಿ(ರಿ),
ಕೆ.ಎಚ್.ಬಿ ಕಾಲೋನಿ, ಕೋರಮಂಗಲ, ಬೆಂಗಳೂರು.
ದೂರವಾಣಿ:080-25532568
9964785268
No: GSSKML/GM/001-2022-23
ಟೆಂಡರ್ ಪ್ರಕಟಣೆ
ಸಮಿತಿಯ ಕಾರ್ಯದರ್ಶಿ ಈ ಮೂಲಕ ತಿಳಿಸುವುದೇನೆಂದರೆ ಆವರಣದಲ್ಲಿ ನಿರ್ಮಾಣ ಮಾಡಲಿರುವ “ಗಣೇಶ ಮಹಲ್” ಕಟ್ಟಡದ ಕಾಮಗಾರಿ ತುಂಡುಗುತ್ತಿಗೆ ಆಧಾರದಲ್ಲಿ (ಲೇಬರ್ ಕಾಂಟ್ರಾಕ್ಟ್) ನೀಡಲಾಗುವುದು. ಅನುಭವ ಇಚ್ಛೆಯುಳ್ಳ ಗುತ್ತಿಗೇದಾರರು ಕಾರ್ಯದರ್ಶಿಯವರನ್ನು ಕಛೇರಿಯಲ್ಲಿ ಸಂಪರ್ಕಿಸಿ ದಿನಾಂಕ 10.12.2022ರ ಒಳಗೆ ಶುಲ್ಕ ರೂ 500/– ಪಾವತಿಸಿ ಟೆಂಡರ್ ಅರ್ಜಿಯನ್ನು ಪಡೆದು 15.12.2022ರ ಮಧ್ಯಾಹ್ನ 1 ಗಂಟೆ ಒಳಗೆ ಸಲ್ಲಿಸುವುದು.
ಸಹಿ/- ಕಾರ್ಯದರ್ಶಿ

ಪ್ರವಾಸ
Travel
A/C ರೂಂ ಹಾಗು A/C ಬಸ್ಸಿನಲ್ಲಿ 11.01.2023 15.02.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು 17.01.2023 08.02.2023 ದುಬೈ,ಅಬುಧಾಬಿ 5 ದಿನಗಳು. 13.12.2022 12.01.2023 ಗುಜರಾತ್ 8 ದಿನಗಳು. 13.12.2022 03.01.2023 ರಾಜಸ್ಥಾನ್ 9 ದಿನಗಳು. 17.01.2023 11.02.2023 ಕಾಶಿ,ಗಯಾ,ಅಯೋಧ್ಯ 7 ದಿನಗಳು. 04.12.2022 18.01.2023 ಕುಂಭಕೋಣಂ,ರಾಮೇಶ್ವರ 6 ದಿನಗಳು. 22.12.2022 28.12.2022 ಧರ್ಮಸ್ಥಳ ಹೊರನಾಡು 4 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು.3 9448402248 7022547922

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 26.01.2023 ರಿಂದ 8 ದಿನಗಳ ವಿಯಟ್ನಂ ಕಾಂಬೋಡಿಯಾ. 22.01.2023 04.02.2023 ರಿಂದ 6 ದಿನಗಳ ದುಬೈ,ಅಬುಧಾಬಿ. 22.01.2023 09.02.2023 ರಿಂದ 7/11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 24.12.2022 ರಿಂದ 8 ದಿನಗಳ ಸ್ನೋ ಸ್ಪೆಷಲ್ ಶಿಮ್ಲಾ ಮನಾಲಿ. 25.12.2022 ರಿಂದ 5 ದಿನಗಳ ಕನ್ಯಾಕುಮಾರಿ ರಾಮೇಶ್ವರ. 20.01.2023 08.02.2023 23.02.2023 ರಿಂದ 8 ದಿನಗಳ ಕಾಶಿ,ಗಯಾ,ಚಿತ್ರಕೂಟ ನೈಮಿಶಾರಣ್ಯ. 30.01.2023 04.03.2023 ರಿಂದ 8 ದಿನಗಳ ಪುರಿ,ಕೊಲ್ಕತ್ತ,ಕಾಶಿ. 20.01.2023 06.02.2023 ರಿಂದ 8/17 ದಿನಗಳ ಗುಜರಾತ್ ರಾಜಸ್ಥಾನ್. 23.02.2023 ರಿಂದ 11 ದಿನಗಳ ಮಧ್ಯಪ್ರದೇಶ. ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 8088887677 080-23385837

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9945445809, 9902433500

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION CORNER
ಸ್ಪರ್ಧಾಮಿತ್ರ ACADEMY
IAS / KAS
Prelims and Mains
PSI / PDO / PC
RRB / SSC Bank-Exams
Near Attigupppe Metro Station, opp. Maruti Medicals (338 Pillar) Vijayanagar, Bengaluru - 40.
9535111188 / 9535111199

27.01.2023ರಿಂದ 15ದಿನಗಳ 4`ಜ್ಯೋತಿರ್ಲಿಂಗ`ಸಮೇತ ದ್ವಾರಕಾ,ಅಹಮದಾಬಾದ್, ಮಾತೃಗಯಾ,ರನ್`ಆಫ್`ಕಚ್, ಪಾವಘಡ,ಭುಜ್` ವಿಮಾನ`ಮತ್ತು`AC`ಬಸ್ಸು 28.12.2022ರಿಂದ ಪಂಚರಾಮಕ್ಷೇತ್ರ`ಸಮೇತ ಭದ್ರಾಚಲಂ,ರಾಮಾನುಜ`ಪ್ರತಿಮೆ ವಿಶಾಖಪಟ್ಟಣ,ಹೈದರಾಬಾದ್ 13ದಿನಗಳು`AC`ಬಸ್ಸಿನಲ್ಲಿ ಏಷ್ಯನ್`ಟ್ರಾವೆಲ್`ಲೈನ್ಸ್. 164/3,ಅರ್.ವಿ.ರಸ್ತೆ, ಬೆಂಗಳೂರು–04. ಸಂಪರ್ಕಿಸಿ:`ಷಣ್ಮುಗಾನಂದ– 8105657052/ 9480182865.

28.01.2023ರಿಂದ 7/9ದಿನಗಳ ವಿಮಾನ,AC`ಬಸ್ಸಿನಲ್ಲಿ ಕಾಶಿವಿಶ್ವನಾಥ,ಬೈದ್ಯನಾಥ್, 2`ಜ್ಯೋತಿರ್ಲಿಂಗ`ಸಮೇತ ಅಯೋಧ್ಯ,ಅಲಹಾಬಾದ್, ಗಯಾ.ಹಾಗೂ`7/9ದಿನಗಳ ರಾಮೇಶ್ವರ,ಕನ್ಯಾಕುಮಾರಿ, ಮದುರೈ,ನವಗ್ರಹ ಏಷ್ಯನ್`ಟ್ರಾವೆಲ್`ಲೈನ್ಸ್. 164/3,ಅರ್.ವಿ.ರಸ್ತೆ ಬೆಂಗಳೂರು–04. ಸಂಪರ್ಕಿಸಿ:`ಷಣ್ಮುಗಾನಂದ– 8105657052/ 9480182865.

ಭವಿಷ್ಯ
Astrology
ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಸ್ತ್ರೀ ಪುರುಷ, ಶತ್ರುಕಾಟ, ಗಂಡಹೆಂಡತಿ ದೂರವಾಗಿದ್ದರೆ, ನಿಮ್ಮಂತೆ ಆಗಲು. 2 ದಿನದಲ್ಲಿ ಪರಿಹಾರ 9611968471

ಬಿಲ್ಡರ್ ಎಸೆನ್ಷಿಯಲ್
Water Proofing
ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ASTRO YATRA
ಶ್ರೀ ರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ
31 ವರ್ಷದ ಸುದೀರ್ಘ ಅನುಭವುಳ್ಳ, ವಂಶಪಾರಂಪರಿಕ ಜ್ಯೋತಿಷ್ಯರು
ಗುರೂಜಿ ಮಹೇಶ್‌ಭಟ್
ಮಕ್ಕಳು ಪ್ರೀತಿಯಲ್ಲಿ ಬಿದ್ದು ಮಾತು ಕೇಳದಿದ್ದಲ್ಲಿ, ಪ್ರೀತಿಯಲ್ಲಿ ನಂಬಿ ಮೋಸ, ಪ್ರೀತಿಸಿದವರಿಂದ ತೊಂದರೆ, ಇಷ್ಟಪಟ್ಟವರು ನಿಮ್ಮಂತೆ ಬರಲು, ಮದುವೆಯಲ್ಲ ವಿಳಂಬ, ಗಂಡ–ಪರಸ್ತ್ರೀ ವಶದಲ್ಲಿದ್ದರೆ, ಡೈವೋರ್ಸ್ ಪ್ರಾಬ್ಲಂ, ಪುರುಷತ್ವ ಸಮಸ್ಯೆ, ಅತ್ತೆ ಕಾಟ, ಶತ್ರುಕಾಟ, ಹಣಕಾಸು, ಮಾಂತ್ರಿಕ ಸಮಸ್ಯೆಯಿಂದ ಆರೋಗ್ಯ ತೊಂದರೆ, ಇನ್ಯಾವುದೇ ಬಗೆಹರಿಯದಂತಹ ಕಠಿಣ ಸಮಸ್ಯೆಗಳಿಗೆ ಕೆಲವೇ ಗಂಟೆಗಳಲ್ಲಿ ಗ್ಯಾರಂಟಿ ಪರಿಹಾರ. ಸ್ತ್ರೀಯರಿಗೆ ವಿಶೇಷ ಪರಿಹಾರ.
Google, TV, FB, Insta, Youtube ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ಹಣ ಕಳೆದುಕೊಂಡಿದ್ದರೆ, ಶುದ್ಧ, ಶೀಘ್ರ ಪರಿಹಾರಕ್ಕಾಗಿ ಕರೆಮಾಡಿ
ಖಾಯಂ ವಿಳಾಸ: ನಂ. 15, 1ನೇ ಮೇನ್, 1ನೇ ಕ್ರಾಸ್, ಅಯ್ಯಣ್ಣ ಶೆಟ್ಟಿ ಲೇಔಟ್, ಪೊಲೀಸ್ ಸ್ಟೇಷನ್ ಹಿಂಭಾಗ, ಬ್ಯಾಟರಾಯನಪುರ, ಮೈಸೂರು ರಸ್ತೆ, ಬೆಂಗಳೂರು.
ದೂರದ ಊರಿನವರಿಗೆ ಫೋನಿನ ಮೂಲಕ ಪರಿಹಾರ. 9686999517

ಪ್ರಜಾವಾಣಿ
ರಿಯಲ್ ಎಸ್ಟೇಟ್
ಪ್ರತಿ ಶುಕ್ರವಾರ + ಶನಿವಾರ + ಭಾನುವಾರ ಪ್ರಜಾವಾಣಿ ಆಲ್ ಕರ್ನಾಟಕ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2100/-*
FOR 15 WORDS
*ಜಿಎಸ್‌ಟಿ ಹೊರತುಪಡಿಸಿ
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9886213331 | 9731810277
9901641752 | 9845114560 |
080- 45557163 | 45557164

ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ಹೇಳಿಕೆ

ಜಾಗತಿಕ ಬಿಕ್ಕಟ್ಟು ಪರಿಹರಿಸುವ ದೇಶವಾಗಿ ಭಾರತ

ವಿಶ್ವಸಂಸ್ಥೆ (ಪಿಟಿಐ): ಜಾಗತಿಕ ಬಿಕ್ಕಟ್ಟುಗಳಿಗೆ ಸೂಕ್ತ ಪರಿಹಾರ ಒದಗಿಸುವ ಮತ್ತು ಸಕಾರಾತ್ಮಕ ಕೊಡುಗೆ ನೀಡುವ ಬದ್ಧತೆಯ ದೇಶವಾಗಿ ವಿಶ್ವದ ಉನ್ನತ ಕೋಷ್ಟಕದಲ್ಲಿ ತನ್ನ ಸ್ಥಾನ ಪಡೆಯಲು ಭಾರತ ಸಜ್ಜಾಗಿದೆ ಎಂದು ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ರುಚಿರಾ ಕಾಂಬೋಜ್ ತಿಳಿಸಿದರು.

ವಿಶ್ವಸಂಸ್ಥೆಯ ಭದ್ರತಾಮಂಡಳಿಯಲ್ಲಿ ಸರದಿ ಪ್ರಕಾರ ಲಭಿಸುವ ಅಧ್ಯಕ್ಷ ಸ್ಥಾನವನ್ನು ಗುರುವಾರ ವಹಿಸಿಕೊಂಡು ಅವರು ಮಾತನಾಡಿದರು.

ಭದ್ರತಾ ಮಂಡಳಿಯಲ್ಲಿ ಡಿಸೆಂಬರ್ 1ರಿಂದ 31ರವರೆಗಿನ ತಿಂಗಳ ಅಧ್ಯಕ್ಷತೆ ಭಾರತಕ್ಕೆ ಸಿಕ್ಕಿದೆ. ವಿಶ್ವಸಂಸ್ಥೆಯ ಕಾಯಂ ಪ್ರತಿನಿಧಿಯಾಗಿ ರುಚಿರಾ ಅವರು, ಅತ್ಯಂತ ಪ್ರಭಾವಿ ಅಧ್ಯಕ್ಷರ ಸ್ಥಾನವನ್ನು ಒಂದು ತಿಂಗಳಿಗೆ ಅಲಂಕರಿಸಿದ ಭಾರತದ ಮೊದಲ ಮಹಿಳೆ ಎನಿಸಿಕೊಂಡರು. 2021ರ ಆಗಸ್ಟ್ ನಂತರ ಎರಡನೇ ಬಾರಿಗೆ ಭಾರತವು ಭದ್ರತಾ ಮಂಡಳಿಯ ಚುನಾಯಿತ ಸದಸ್ಯ ಸ್ಥಾನ ಪಡೆದಿದೆ.

ಕಳೆದ ಎರಡು ವರ್ಷಗಳಿಂದ ಜಗತ್ತು ಹಲವು ಬಿಕ್ಕಟ್ಟುಗಳೊಂದಿಗೆ ಸಾಗುತ್ತಿರುವಾಗ, ಭಾರತ ಯಾವಾಗಲೂ ಪರಿಹಾರ ಒದಗಿಸುವ ರಾಷ್ಟ್ರವಾಗಿಯೇ ಇದೆ. ಕೋವಿಡ್ 19 ಸಾಂಕ್ರಾಮಿಕ ರೋಗ ಉಲ್ಲೇಖಿಸಿ ಅವರು, ಭಾರತವು ಅಗತ್ಯವಿರುವ ದೇಶಗಳಿಗೆ ಔಷಧಿಗಳು, ವೈದ್ಯಕೀಯ ಉಪಕರಣಗಳು, ವೈದ್ಯಕೀಯ ತಂಡಗಳನ್ನು ಕಳುಹಿಸಿದೆ. 100ಕ್ಕೂ ಹೆಚ್ಚು ದೇಶಗಳಿಗೆ 2.40 ಕೋಟಿ ಕೋವಿಡ್ ಲಸಿಕೆಗಳನ್ನು ಪೂರೈಸಿದೆ. ಮಾನವೀಯ ಬಿಕ್ಕಟ್ಟುಗಳು ಎದುರಾದಾಗೆಲ್ಲ ಸ್ಪಂದಿಸಿದ್ದೇವೆ. ಈ ಎಲ್ಲ ಅಂಶಗಳು ಜಾಗತಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ರಾಷ್ಟ್ರವಾಗಿ ಭಾರತವು ವಿಶ್ವದ ಉನ್ನತ ಕೋಷ್ಟಕದಲ್ಲಿ ತನ್ನ ಸ್ಥಾನ ಪಡೆಯಲು ಸಿದ್ಧವಾಗಿದೆ ಎನ್ನುವುದನ್ನು ಸೂಚಿಸುತ್ತದೆ ಎಂದು ಹೇಳಿದರು.

ಭಯೋತ್ಪಾದನೆ ಹತ್ತಿಕ್ಕಲು ಮತ್ತು ಬಹುಪಕ್ಷೀಯತೆ ಸುಧಾರಣೆಗೆ ಸಹಿ ಹಾಕುವ ಸಂದರ್ಭದಲ್ಲಿ ಮಾತನಾಡಿದ ರುಚಿರಾ, ‘ಪ್ರಜಾಪ್ರಭುತ್ವದ ರಕ್ಷಣೆಗೆ ಏನು ಮಾಡಬೇಕೆಂದು ಭಾರತಕ್ಕೆ ಯಾರೂ ಹೇಳಬೇಕಾಗಿಲ್ಲ. ಭಾರತವು ಎಲ್ಲರಿಗೂ ತಿಳಿದಿರುವಂತೆ ವಿಶ್ವದ ಅತ್ಯಂತ ಪ್ರಾಚೀನ ನಾಗರಿಕತೆಯ ದೇಶ. ನಮ್ಮ ಪ್ರಜಾಪ್ರಭುತ್ವದ ಬೇರುಗಳು 2,500 ವರ್ಷಗಳ ಹಿಂದಿನವು. ನಾವು ಯಾವಾಗಲೂ ಪ್ರಜಾಪ್ರಭುತ್ವವಾಗಿಯೇ ಬದುಕಿದ್ದೇವೆ’ ಎಂದು, ಭಾರತದಲ್ಲಿ ಪ್ರಜಾಪ್ರಭುತ್ವ ಮತ್ತು ಪತ್ರಿಕಾ ಸ್ವಾತಂತ್ರ್ಯದ ಕುರಿತ ಪ್ರಶ್ನೆಗೆ ಉತ್ತರಿಸಿದರು.

‘ರಷ್ಯಾ– ಉಕ್ರೇನ್ ಬಿಕ್ಕಟ್ಟು: ಭಾರತ ಮೌನಿಯಲ್ಲ’

‘ರಷ್ಯಾ-ಉಕ್ರೇನ್ ಸಂಘರ್ಷದಲ್ಲಿ ಭಾರತ ಏನೂ ಮಾಡದೇ ಕೈಕಟ್ಟಿ ನಿಷ್ಕ್ರಿಯವಾಗಿ ಕುಳಿತಿಲ್ಲ. ಉಭಯ ರಾಷ್ಟ್ರಗಳೊಂದಿಗೆ ಮಾತುಕತೆ ನಡೆಸುತ್ತಲೇ ಇದೆ. ಭಾರತವು ಶಾಂತಿಯ ಕಡೆಗಿದ್ದು, ರಾಜತಾಂತ್ರಿಕತೆ ಮತ್ತು ಮಾತುಕತೆ ಮೂಲಕ ಬಿಕ್ಕಟ್ಟು ಶಮನಕ್ಕೆ ಒಲವು ತೋರಿಸಿದೆ’ ಎಂದು ರುಚಿರಾ ಕಾಂಬೋಜ್ ಹೇಳಿದರು.

‘ಭಾರತವು ರಷ್ಯಾ ಜೊತೆ ಪ್ರಮುಖವಾದ ಸಂಬಂಧ ಹೊಂದಿದೆ. ಉಕ್ರೇನ್ ಸಂಘರ್ಷದ ಆರಂಭದಿಂದಲೂ ನಮ್ಮ ನಿಲುವು ಸ್ಥಿರ ಮತ್ತು ದೃಢವಾಗಿರುವುದನ್ನು ಸ್ಪಷ್ಟವಾಗಿ ಹೇಳಿದ್ದೇವೆ. ಸಂಘರ್ಷ ಕೊನೆಗೊಳಿಸಲು ರಾಜತಾಂತ್ರಿಕ ಮತ್ತು ಮಾತುಕತೆ ಮಾರ್ಗ ಅನುಸರಿಸುವುದನ್ನು ಭಾರತ ಬೆಂಬಲಿಸುತ್ತಾ ಬಂದಿದೆ’ ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

ರಷ್ಯಾ ವಿರೋಧಿ ಮತ್ತು ಚೀನಿ ವಿರೋಧಿ ಮೈತ್ರಿಗೆ ಭಾರತವನ್ನು ಎಳೆದುಕೊಳ್ಳಲು ನ್ಯಾಟೊ ಯತ್ನಿಸುತ್ತಿದೆ ಎಂಬ ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಅವರ ಹೇಳಿಕೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಪ್ರಧಾನಿ ನರೇಂದ್ರ ಮೋದಿ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಉಭಯ ರಾಷ್ಟ್ರಗಳ ನಾಯಕರ ಜತೆ ಮಾತುಕತೆ ನಡೆಸುತ್ತಲೇ ಇದ್ದಾರೆ. ‘ಇದು ಯುದ್ಧದ ಯುಗವಲ್ಲ’ ಎಂದು ಮೋದಿಯವರು ಹೇಳಿದ ಮಾತು ಜಾಗತಿಕವಾಗಿ ಸ್ವೀಕೃತವಾಗಿದೆ. ಬಾಲಿಯ ಜಿ20 ಶೃಂಗದ ಘೋಷಣೆಯಲ್ಲೂ ಮೋದಿ ಅವರ ಈ ಮಾತು ಅನುರಣಿಸಿದೆ’ ಎಂದು ಹೇಳಿದರು.

‘ಜನಾಂಗೀಯ ತಾರತಮ್ಯ ಅನುಭವಿಸಿದ್ದೆ’

ಲಂಡನ್ (ಪಿಟಿಐ): ‘ಬ್ರಿಟನ್‌ನಲ್ಲಿ ನಾನೂ ಜನಾಂಗೀಯ ತಾರತಮ್ಯ ಅನುಭವಿಸಿದ್ದೆ. ಆದರೆ ಇಂಥ ಸಮಸ್ಯೆಯನ್ನು ಎದುರಿಸಲು ಅಗತ್ಯವಿರುವ ಅಸಾಧಾರಣ ಪ್ರಗತಿಯನ್ನು ದೇಶವು ಸಾಧಿಸಿದೆ’ ಎಂದು ಬ್ರಿಟನ್ ಪ್ರಧಾನಿ ರಿಷಿ ಸುನಕ್ ಹೇಳಿದ್ದಾರೆ.

ಬಕ್ಕಿಂಗ್‌ಹ್ಯಾಮ್ ಅರಮನೆಯಲ್ಲಿ ಉದ್ಭವಿಸಿರುವ ವರ್ಣಭೇದ ನೀತಿ ಸಮಸ್ಯೆ ಬೆನ್ನಲ್ಲೇ ಗುರುವಾರ ರಾತ್ರಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ‘ಅರಮನೆಯ ಆಂತರಿಕ ವಿಚಾರದ ಬಗ್ಗೆ ಮಾತನಾಡುವುದಿಲ್ಲ. ಆದರೆ ಕ್ರಮ ಕೈಗೊಳ್ಳುತ್ತೇವೆ’ ಎಂದು ಹೇಳಿದರು.

‘ಈಗಲೂ ಜನಾಂಗೀಯ ತಾರತಮ್ಯ ಇದೆ ಎಂದು ಭಾವಿಸುವುದಿಲ್ಲ. ಏಕೆಂದರೆ ಇಂಥ ಸಮಸ್ಯೆ ವಿರುದ್ಧ ಹೋರಾಡಲು ದೇಶವು ಅಸಾಧಾರಣ ಪ್ರಗತಿ ಸಾಧಿಸಿದೆ. ಹಾಗಂತ ನಮ್ಮ ಜವಾಬ್ದಾರಿ ಪೂರ್ಣಗೊಂಡಿಲ್ಲ. ಎಲ್ಲಿ ಇಂಥ ತಾರತಮ್ಯ ಕಂಡರೂ ಅದನ್ನು ಖಂಡಿಸಬೇಕು’ ಎಂದರು.

‘ಯುದ್ಧ್ ಅಭ್ಯಾಸ್’ಗೆ ಮೂಗುತೂರಿಸದಿರಿ: ಚೀನಾಕ್ಕೆ ಅಮೆರಿಕ ಖಡಕ್ ಎಚ್ಚರಿಕೆ

ನವದೆಹಲಿ (ಪಿಟಿಐ): ಉತ್ತರಾಖಂಡದ ಸಮೀಪ ದೇಶದ ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಬಳಿ ಭಾರತ– ಅಮೆರಿಕ ಸೇನಾ ಪಡೆಗಳು ನಡೆಸುತ್ತಿರುವ ‘ಯುದ್ಧ್ ಅಭ್ಯಾಸ್’ ಜಂಟಿ ಸಮರಾಭ್ಯಾಸಕ್ಕೆ ಚೀನಾ ವ್ಯಕ್ತಪಡಿಸಿರುವ ವಿರೋಧವನ್ನು ಅಮೆರಿಕ ಶುಕ್ರವಾರ ತಿರಸ್ಕರಿಸಿದ್ದು, ‘ಇದರಲ್ಲಿ ನೀವು ಮೂಗು ತೂರಿಸಬೇಡಿ’ ಎಂದು ಚೀನಾಕ್ಕೆ ತಿರುಗೇಟು ನೀಡಿದೆ.

ಭಾರತಕ್ಕೆ ಅಮೆರಿಕದ ರಕ್ಷಣಾ ವ್ಯವಹಾರಗಳ ಉಸ್ತುವಾರಿಯಾಗಿ ಹೊಸದಾಗಿ ನೇಮಕವಾಗಿರುವ ರಾಯಭಾರಿ ಎಲಿಜಬೆತ್ ಜೋನ್ಸ್ ಅವರು, ಪ್ರಾದೇಶಿಕ ಭದ್ರತಾ ಸವಾಲುಗಳನ್ನು ಎದುರಿಸಲು ಹೆಚ್ಚು ಸಮರ್ಥವಾಗಲು ಭಾರತದ ಪ್ರಯತ್ನಗಳನ್ನು ಅಮೆರಿಕ ಬೆಂಬಲಿಸುತ್ತದೆ. ಭಾರತದ ಜತೆಗಿನ ಸಹಭಾಗಿತ್ವವನ್ನು ತನ್ನ ಅತ್ಯಂತ ಪರಿಣಾಮಕಾರಿ ಸಂಬಂಧಗಳಲ್ಲಿ ಒಂದೆಂದು ಅಮೆರಿಕ ನೋಡುತ್ತದೆ ಎಂದರು.

ಕಳೆದ ತಿಂಗಳು ಬಾಲಿಯಲ್ಲಿ ನಡೆದ ಜಿ 20 ಶೃಂಗಸಭೆಯ ಕೊನೆಯಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ನಡುವಿನ ಸಭೆಯಲ್ಲಿ ಹೊಂದಾಣಿಕೆ ಮೂಡುವ ಸೂಚನೆಗಳು ಕಾಣಿಸಲಿಲ್ಲ. ಇಂಡೋ-ಪೆಸಿಫಿಕ್ ವಲಯದ ಮುಕ್ತತೆಗೆ ಅಮೆರಿಕ ಬದ್ಧವಾಗಿದೆ ಎಂದು ಜೋನ್ಸ್ ಹೇಳಿದರು.

‘ಯುದ್ಧ್ ಅಭ್ಯಾಸ್’ ವಿರೋಧಿಸಿದ್ದ ಚೀನಾ, ‘ಇದು ನವದೆಹಲಿ ಮತ್ತು ಬೀಜಿಂಗ್ ನಡುವೆ ಉಭಯ ರಾಷ್ಟ್ರಗಳ ಗಡಿ ಸಮಸ್ಯೆ ಸಂಬಂಧ ನಡೆದಿರುವ ಒಪ್ಪಂದಗಳ ಆಶಯ ಉಲ್ಲಂಘಿಸುತ್ತದೆ. ಉಭಯ ರಾಷ್ಟ್ರಗಳ ನಡುವೆ ಪರಸ್ಪರ ನಂಬಿಕೆಯನ್ನು ಗಟ್ಟಿಗೊಳಿಸುವುದಿಲ್ಲ’ ಎಂದು ಹೇಳಿತ್ತು.

ಅಂಡಮಾನ್‌ನ 21 ದ್ವೀಪಗಳಿಗೆ ಯೋಧರ ಹೆಸರು

ಪೋರ್ಟ್ ಬ್ಲೇರ್ (ಪಿಟಿಐ): ಕೇಂದ್ರಾಡಳಿತ ಪ್ರದೇಶವಾದ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿನ ಜನವಸತಿ ಇಲ್ಲದ 21 ದ್ವೀಪಗಳಿಗೆ ದೇಶದ ಅತ್ಯುತ್ತಮ ಸೇನಾ ಪ್ರಶಸ್ತಿಯಾದ ಪರಂವೀರ ಚಕ್ರ ಪ್ರಶಸ್ತಿ ಸ್ವೀಕರಿಸಿದ ಸೈನಿಕರ ಹೆಸರನ್ನು ಕೇಂದ್ರ ಸರ್ಕಾರ ಹೆಸರಿಸಿದೆ.

ಉತ್ತರ ಮತ್ತು ಮಧ್ಯ ಅಂಡಮಾನ್‌ನಲ್ಲಿ 16 ದ್ವೀಪಗಳು ಹಾಗೂ ದಕ್ಷಿಣ ಅಂಡಮಾನ್‌ನಲ್ಲಿ 5 ದ್ವೀಪ ಸೇರಿ ಒಟ್ಟು 21 ದ್ವೀಪಗಳಿಗೆ ನಾಮಕರಣ ಮಾಡಲಾಗಿದ್ದು, ಕೇಂದ್ರದ ಈ ನಡೆಯನ್ನು ಅಂಡಮಾನ್ ಮತ್ತು ನಿಕೋಬಾರ್ ದ್ವೀಪದ ಸಂಸದ ಕುಲದೀಪ್ ರಾಯ್ ಶರ್ಮಾ ಸ್ವಾಗತಿಸಿದ್ದಾರೆ.

ಜಗತ್ತಿನ ನಂಬರ್ 1 ಶ್ರೀಮಂತ ಇಲಾನ್ ಮಸ್ಕ್ ಹೇಳಿಕೆ

‘ಮಾನವನ ಮಿದುಳಿಗೆ ಚಿಪ್ ಅಳವಡಿಕೆ’

ಸ್ಯಾನ್ ಫ್ರಾನ್ಸಿಸ್ಕೊ (ಎಪಿ): ಆಲೋಚನೆಗಳನ್ನು ಗ್ರಹಿಸಿ, ಕಂಪ್ಯೂಟರ್ ಹಾಗೂ ಮೊಬೈಲ್‌ನೊಂದಿಗೆ ನೇರ ಸಂವಹನ ಮಾಡುವ ಚಿಪ್ ಅನ್ನು ಮಾನವನ, ಮಿದುಳಿಗೆ ಅಳವಡಿಸುವ ಕಾರ್ಯ ಇನ್ನು ಆರು ತಿಂಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಜಗತ್ತಿನ ನಂಬರ್ 1 ಶ್ರೀಮಂತ ಇಲಾನ್ ಮಸ್ಕ್ ಹೇಳಿದ್ದಾರೆ. ಮಸ್ಕ್ ಒಡೆತನದ ‘ನ್ಯೂರಾಲಿಂಕ್’ ಕಂಪನಿ ಇಂಥದ್ದೊಂದು ಸಾಧನ ತಯಾರಿಸಿದೆ.

‘ಈ ಸಾಧನದ ಬಳಕೆಗೆ ಅನುಮತಿ ಕೋರಿ ಎಲ್ಲಾ ದಾಖಲೆಗಳನ್ನು ಎಫ್‌ಡಿಎಗೆ (ಅಮೆರಿಕದ ಆಹಾರ ಹಾಗೂ ಔಷಧಿ ಪ್ರಾಧಿಕಾರ) ಸಲ್ಲಿಸಲಾಗಿದೆ. ಬಹುಶಃ ಇನ್ನು ಆರು ತಿಂಗಳಲ್ಲಿ ಮನುಷ್ಯನ ತಲೆಯಲ್ಲಿ ಮೊದಲ ಚಿಪ್ ಅಳವಡಿಕೆಯಾಗಲಿದೆ. ಇದು ಪೂರ್ಣಗೊಂಡ ಬಳಿಕ ನಾನೂ ಈ ಚಿಪ್ ಅನ್ನು ಅಳವಡಿಸಿಕೊಳ್ಳುತ್ತೇನೆ’ ಎಂದು ಮಸ್ಕ್ ಹೇಳಿದ್ದಾರೆ.

‘ಮಾನವನಲ್ಲಿ ನಾಣ್ಯ ಗಾತ್ರದ ಚಿಪ್ ಅಳವಡಿಸುವ ಪ್ರಕ್ರಿಯೆಯ ಕುರಿತ ಕೆಲಸದಲ್ಲಿ ನಿರತರಾಗಿದ್ದೇವೆ. ಅಷ್ಟೇ ಜಾಗರೂಕತೆಯನ್ನೂ ವಹಿಸುತ್ತಿದ್ದೇವೆ’ ಎಂದು ಮಸ್ಕ್ ಹೇಳಿದ್ದಾರೆ.

ಆರಂಭಿಕ ಹಂತದಲ್ಲಿ ಸ್ನಾಯುಗಳು ನಿಷ್ಕ್ರಿಯವಾಗಿರುವವರ ಮೇಲೆ ಪ್ರಯೋಗ ಮಾಡಲಾಗುತ್ತದೆ. ಕೈಗಳ ಮೂಲಕ ಬಳಸುವುದಕ್ಕಿಂತ ವೇಗವಾಗಿ ಈ ಸಾಧನದ ಮೂಲಕ ಮೊಬೈಲ್ ಆಪರೇಟ್ ಮಾಡಬಹುದು ಎಂದು ಮಸ್ಕ್ ಹೇಳಿದ್ದಾರೆ.

ಗೋಲು ಗಳಿಸಿದ ಜಪಾನ್‌ನ ಅವೊ ತನಕಾ (ಎಡದಿಂದ ಎರಡನೆಯವರು) ಸಂಭ್ರಮ –ಎಎಫ್‌ಪಿ ಚಿತ್ರ

ಮತ್ತೊಂದು ಅಚ್ಚರಿಯ ಫಲಿತಾಂಶ: ಪ್ರೀ ಕ್ವಾರ್ಟರ್‌ಗೆ ಉಭಯ ತಂಡಗಳು

ಜಪಾನ್‌ಗೆ ಸಾಟಿಯಾಗದ ಸ್ಪೇನ್

ದೋಹಾ (ಎಎಫ್‌ಪಿ): ಮತ್ತೊಂದು ಅಚ್ಚರಿಯ ಫಲಿತಾಂಶ ನೀಡಿದ ಜಪಾನ್‌ನ ತಂಡವು ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 16ರ ಘಟ್ಟ ತಲುಪಿತು.

ಇಲ್ಲಿನ ಖಲೀಫಾ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಗುರುವಾರ ತಡರಾತ್ರಿ ನಡೆದ 'ಇ' ಗುಂಪಿನ ಹಣಾಹಣಿಯಲ್ಲಿ ಜಪಾನ್ 2–1ರಿಂದ ಬಲಿಷ್ಠ ಸ್ಪೇನ್ ತಂಡಕ್ಕೆ ಆಘಾತ ನೀಡಿತು..ಇಲ್ಲಿ ಸೋತರೂ ಸ್ಪೇನ್‌ನ ಪ್ರೀಕ್ವಾರ್ಟರ್ ಅರ್ಹತೆಗೆ ಧಕ್ಕೆಯಾಗಲಿಲ್ಲ. ಆದರೆ ಈ ಫಲಿತಾಂಶವು ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ ತಂಡವನ್ನು ಟೂರ್ನಿಯಿಂದ ಹೊರಹಾಕಿತು.

ಜರ್ಮನಿ ಇದೇ ಗುಂಪಿನ ಕೊನೆಯ ಪಂದ್ಯದಲ್ಲಿ ಕೋಸ್ಟರಿಕಾ ಎದುರು 4–2ರಿಂದ ಗೆದ್ದಿತು. ಆದರೆ ಗೋಲು ಅಂತರದಲ್ಲಿ ಹಿನ್ನಡೆಯಾಗಿದ್ದರಿಂದ ಆ ತಂಡದ ಪ್ರೀಕ್ವಾರ್ಟರ್ ಪ್ರವೇಶದ ಬಾಗಿಲು ಮುಚ್ಚಿತು.

ಗುಂಪು ಹಂತದ ಪಂದ್ಯಗಳು ಕೊನೆಗೊಂಡ ಬಳಿಕ ಸ್ಪೇನ್ ಮತ್ತು ಜರ್ಮನಿ ತಲಾ 4 ಪಾಯಿಂಟ್ಸ್ ಗಳಿಸಿದ್ದವು.

ಜಪಾನ್ ತಂಡದ ಮತ್ತೊಂದು ಶ್ರೇಷ್ಠ ಜಯ: ಗುಂಪಿನ ಮೊದಲ ಪಂದ್ಯದಲ್ಲಿ ಜರ್ಮನಿಗೆ ಆಘಾತ ನೀಡಿದ್ದ ಜಪಾನ್ ಈ ಪಂದ್ಯದಲ್ಲಿಯೂ ಉತ್ತಮ ಆಟವಾಡಿತು.

ಪಂದ್ಯದ 11ನೇ ನಿಮಿಷದಲ್ಲೇ ಹೆಡರ್ ಮೂಲಕ ಚೆಂಡನ್ನು ಗುರಿ ಸೇರಿಸಿದ ಅಲ್ವೆರೊ ಮೊರಾಟ ಅವರು ಸ್ಪೇನ್ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಆದರೆ ಮೊದಲಾರ್ಧದ ಬಳಿಕ ಜಪಾನ್ ಆಟ ರಂಗು ಪಡೆದುಕೊಂಡಿತು.

ರಿತ್ಸು ದೊವಾನ್ 48ನೇ ನಿಮಿಷದಲ್ಲಿ ಚೆಂಡನ್ನು ಗೋಲ್‌ಪೋಸ್ಟ್‌ಗೆ ಸೇರಿಸಿದರು. ಇದಾದ ಮೂರು ನಿಮಿಷದಲ್ಲೇ ಆವೊ ತನಕಾ ಗೋಲು ಗಳಿಸಿದಾಗ ಜಪಾನ್ ಆಟಗಾರರ ಸಂಭ್ರಮದ ಕಟ್ಟೆಯೊಡೆಯಿತು. ಆದರೆ ಈ ಕುರಿತು ಗೊಂದಲವಿದ್ದ ಕಾರಣ ವಿಡಿಯೊ ಮರುಪರಿಶೀಲಿಸಿ ಗೋಲು ನೀಡಲಾಯಿತು.

ಇದಾದ ಬಳಿಕ ಸ್ಪೇನ್ ಅವಕಾಶ-ಗಳನ್ನು ಸೃಷ್ಟಿಸಿಕೊಳ್ಳಲು ಪರದಾಡಿತು. ಕೊನೆಯ ಹಂತದಲ್ಲಿ ಎದುರಾಳಿಯ ರಕ್ಷಣಾ ಕೋಟೆಯನ್ನು ಭೇದಿಸಲು ನಡೆಸಿದ ಹರಸಾಹಸ ವ್ಯರ್ಥವಾಯಿತು.

16ರ ಘಟ್ಟದಲ್ಲಿ ಸ್ಪೇನ್ ತಂಡವು ಮೊರೊಕ್ಕೊ ಎದುರು ಆಡಲಿದ್ದರೆ, ಜಪಾನ್ ತಂಡವು ಕ್ರೊವೇಷ್ಯಾಗೆ ಮುಖಾಮುಖಿಯಾಗಲಿದೆ.

ಗುಂಪು 'ಇ' ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಡ್ರಾ	ಸೋಲು	ಗೋಲು ಅಂತರ	ಪಾಯಿಂಟ್
ಜಪಾನ್	3	2	0	1	1	6
ಸ್ಪೇನ್	3	1	1	1	6	4
ಜರ್ಮನಿ	3	1	1	1	1	4
ಕೋಸ್ಟರಿಕಾ	3	1	0	2	-8	3

ಗೋಲುಗಳ ವಿವರ

ಜಪಾನ್- 2
ರಿತ್ಸು ದೊವಾನ್ (48ನೇ ನಿ.)
ಅವೊ ತನಕಾ (51ನೇ ನಿ.)
ಸ್ಪೇನ್-1
ಅಲ್ವೆರೊ ಮೊರಾಟ (11ನೇ ನಿ.)

ಹೊರಬಿದ್ದ 4 ಬಾರಿಯ ಚಾಂಪಿಯನ್ ಜರ್ಮನಿ

ಅಲ್ ಖೋರ್, ಕತಾರ್ (ಎಎಫ್‌ಪಿ): ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ ಸತತ ಎರಡನೇ ವಿಶ್ವಕಪ್ ಟೂರ್ನಿಯಲ್ಲಿ ಗುಂಪು ಹಂತದಲ್ಲೇ ಹೊರಬಿದ್ದಿತು.

ಅಲ್‌ಬೈತ್ ಕ್ರೀಡಾಂಗಣದಲ್ಲಿ ಗುರುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಜರ್ಮನಿ ತಂಡವು ಕೋಸ್ಟರಿಕಾವನ್ನು ಮಣಿಸಿತು. ಗೆಲ್ಲಲೇಬೇಕಿದ್ದ ಹಣಾಹಣಿಯಲ್ಲಿ ಜಯ ಒಲಿದರೂ ಆ ತಂಡದ ಪ್ರೀಕ್ವಾರ್ಟರ್ ಅರ್ಹತೆಯು ಜಪಾನ್–ಸ್ಪೇನ್ ನಡುವಣ ಪಂದ್ಯದ ಫಲಿತಾಂಶವನ್ನು ಅವಲಂಬಿಸಿತ್ತು. ಸ್ಪೇನ್ ಈ ಪಂದ್ಯದಲ್ಲಿ ಗೆದ್ದಿದ್ದರೆ ಅಥವಾ ಡ್ರಾ ಮಾಡಿಕೊಂಡಿದ್ದರೆ ಜರ್ಮನಿಗೆ ಅವಕಾಶವಿತ್ತು. ಈ ಸೋಲಿನೊಂದಿಗೆ ಕೋಸ್ಟರಿಕಾ ತಂಡವೂ ಟೂರ್ನಿಯಿಂದ ಹೊರಬಿದ್ದಿತು.

ಜರ್ಮನಿ ತಂಡಕ್ಕಾಗಿ ಕಾಯ್ ಹವೆರ್ಜ್ ಎರಡು ಗೋಲು ಗಳಿಸಿದರು. ಸೆರ್ಜ್ ಗ್ನ್ಯಾಬ್ರಿ ಮತ್ತು ನಿಕ್ಲಾಸ್ ಫುಲ್‌ಕ್ರಗ್ ತಲಾ ಒಂದು ಗೋಲು ಹೊಡೆದರು. ಕೋಸ್ಟರಿಕಾ ಪರ ಯೆಲ್‌ಸ್ಟಿನ್ ತಜೆದಾ ಚೆಂಡನ್ನು ಗುರಿ ಸೇರಿಸಿದರೆ, ಜರ್ಮನಿಯ ಮ್ಯಾನ್ಯುಯೆಲ್ ನೆಯುರ್ 'ಉಡುಗೊರೆ ಗೋಲು' ನೀಡಿದರು.

2018ರಲ್ಲಿ ರಷ್ಯಾದಲ್ಲಿ ನಡೆದ ಟೂರ್ನಿಯಲ್ಲೂ ಜರ್ಮನಿ ಗುಂಪು ಹಂತದಲ್ಲೇ ಸೋತು ಹೊರನಡೆದಿತ್ತು.

ಗೋಲುಗಳ ವಿವರ: ಜರ್ಮನಿ– 4: ಸೆರ್ಜ್ ಗ್ನ್ಯಾಬ್ರಿ (10ನೇ ನಿ.), ಕಾಯ್ ಹವೆರ್ಜ್ (73, 85ನೇ ನಿ.), ನಿಕ್ಲಾಸ್ ಫುಲ್‌ಕ್ರಗ್ (89ನೇ ನಿ.), ಕೋಸ್ಟರಿಕಾ–2: ಯೆಲ್ಟ್‌ಸಿನ್ ತಜೆದಾ (58ನೇ ನಿ.), ಮ್ಯಾನ್ಯುಯೆಲ್ ನೆಯುರ್ (70ನೇ ನಿ. 'ಉಡುಗೊರೆ ಗೋಲು')

ಕ್ವಾರ್ಟರ್‌ನತ್ತ ಅರ್ಜೆಂಟೀನಾ ಚಿತ್ತ

ಆಸ್ಟ್ರೇಲಿಯಾ ಎದುರಾಳಿ; ಆತ್ಮವಿಶ್ವಾಸದಲ್ಲಿ ಮೆಸ್ಸಿ ಬಳಗ

ದೋಹಾ (ರಾಯಿಟರ್ಸ್/ ಎಪಿ): ಸ್ಟಾರ್ ಆಟಗಾರ ಲಯೊನೆಲ್ ಮೆಸ್ಸಿ ಮೇಲೆ ನಿರೀಕ್ಷೆ ಇಟ್ಟುಕೊಂಡಿರುವ ಅರ್ಜೆಂಟೀನಾ ತಂಡ, ವಿಶ್ವಕಪ್ ಟೂರ್ನಿಯ ಪ್ರಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಶನಿವಾರ ಆಸ್ಟ್ರೇಲಿಯಾ ವಿರುದ್ಧ ಸೆಣಸಲಿದೆ.

ತನ್ನ ಮೊದಲ ಪಂದ್ಯದಲ್ಲಿ ಸೌದಿ ಅರೇಬಿಯಾ ಕೈಯಲ್ಲಿ ಆಘಾತ ಅನುಭವಿಸಿದ್ದ ಅರ್ಜೆಂಟೀನಾ, ಆ ಬಳಿಕ ಪುಟಿದೆದ್ದು ನಿಂತಿದೆ. ನಾಕೌಟ್ ಹಂತದಲ್ಲೂ ಗೆಲುವಿನ ಓಟ ಮುಂದುವರಿಸುವ ವಿಶ್ವಾಸದಲ್ಲಿ ಆಟಗಾರರು ಇದ್ದಾರೆ. ಅಹಮದ್ ಬಿನ್ ಅಲಿ ಕ್ರೀಡಾಂಗಣದಲ್ಲಿ ಮೆಸ್ಸಿ ಮೋಡಿ ಮಾಡುವರು ಎಂಬುದು ಅವರ ಅಭಿಮಾನಿಗಳ ನಿರೀಕ್ಷೆ.

ಮೆಸ್ಸಿ ಈ ಟೂರ್ನಿಯಲ್ಲಿ ಗಳಿಸಿದ ಎರಡು ಗೋಲುಗಳು ಸೇರಿದಂತೆ ವಿಶ್ವ-ಕಪ್‌ನಲ್ಲಿ ಒಟ್ಟು ಎಂಟು ಸಲ ಚೆಂಡನ್ನು ಗುರಿ ಸೇರಿಸಿದ್ದಾರೆ. ಆದರೆ ನಾಕೌಟ್ ಹಂತದಲ್ಲಿ ಅವರು ಒಂದೂ ಗೋಲು ಗಳಿಸಿಲ್ಲ. ಈ ಬಾರಿ ಆ ಕೊರತೆಯನ್ನು ನೀಗಿಸುವರೇ ಎಂಬುದನ್ನು ನೋಡಬೇಕು.

'ಎಲ್ಲ ಎದುರಾಳಿಗಳೂ ಕಠಿಣ ಸ್ಪರ್ಧೆ ಒಡ್ಡಬಲ್ಲರು ಎಂಬುದರ ಅರಿವಿದೆ. ಈ ಪಂದ್ಯವೂ ಕಠಿಣವಾಗಿರಲಿದೆ' ಎಂದು ಮೆಸ್ಸಿ ಹೇಳಿದ್ದಾರೆ.

ಮೆಸ್ಸಿ ಅಲ್ಲದೆ ಅಲೆಕ್ಸಿಸ್ ಮ್ಯಾಕ್ ಅಲಿಸ್ಟರ್, ಎಂಜೊ ಫೆರ್ನಾಂಡಿಸ್, ಜೂಲಿಯನ್ ಅಲ್ವಾರೆಜ್ ಮತ್ತು ರಾಡ್ರಿಗೊ ಡಿ ಪಾಲ್ ಅವರು ಉತ್ತಮ ಲಯದಲ್ಲಿ ಆಡುತ್ತಿರುವುದು ಅರ್ಜೆಂಟೀನಾ ಕೋಚ್ ಲಯೊನೆಲ್ ಸ್ಕಾಲೊನಿ ಅವರಿಗೆ ಸಮಾಧಾನ ನೀಡಿದೆ.

ಆಸ್ಟ್ರೇಲಿಯಾ ತಂಡ ವಿಶ್ವಕಪ್‌ನಲ್ಲಿ ಈ ಹಿಂದೆ ಒಮ್ಮೆ ಮಾತ್ರ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಆಡಿತ್ತು. 2006ರ ಟೂರ್ನಿಯಲ್ಲಿ ಇಟಲಿ ಎದುರು 0–1 ಗೋಲುಗಳಿಂದ ಸೋತಿತ್ತು.

'ಈ ಪಂದ್ಯದಲ್ಲಿ ನಾವು ಗೆಲ್ಲುತ್ತೇವೆ ಎಂದು ಯಾರೂ ನಿರೀಕ್ಷಿಸಿಲ್ಲ. ಎಲ್ಲರಿಗೂ ಆಘಾತ ನೀಡುವುದು ನಮ್ಮ ಗುರಿ' ಎಂದು ಆಸ್ಟ್ರೇಲಿಯಾ ತಂಡದ ಫಾರ್ವರ್ಡ್ ಆಟಗಾರ ಮ್ಯಾಥ್ಯೂ ಲೆಕೀ ಆತ್ಮವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮುಖಾಮುಖಿ: 1988ರ ಬಳಿಕ ಉಭಯ ತಂಡಗಳು ಏಳು ಸಲ ಮುಖಾಮುಖಿಯಾಗಿವೆ. ಅರ್ಜೆಂಟೀನಾ ಐದರಲ್ಲಿ ಗೆಲುವು ಪಡೆದಿದ್ದರೆ, ಆಸ್ಟ್ರೇಲಿಯಾ ಒಮ್ಮೆ ಮಾತ್ರ ಗೆದ್ದಿದೆ. ಒಂದು ಪಂದ್ಯ ಡ್ರಾ ಆಗಿದೆ. ವಿಶ್ವಕಪ್ ಟೂರ್ನಿಯಲ್ಲಿ ಇವೆರಡು ತಂಡಗಳು ಎದುರಾಗುತ್ತಿರು-ವುದು ಇದೇ ಮೊದಲು.

ಆಸ್ಟ್ರೇಲಿಯಾ ತಂಡದ ಆಟಗಾರರು ಅಭ್ಯಾಸದಲ್ಲಿ ಪಾಲ್ಗೊಂಡರು –ಎಎಫ್‌ಪಿ ಚಿತ್ರ

ಪ್ರೀಕ್ವಾರ್ಟರ್‌ಫೈನಲ್ ವೇಳಾಪಟ್ಟಿ

ದಿನಾಂಕ	ಪಂದ್ಯ	ಸಮಯ
ಡಿ.3	ನೆದರ್ಲೆಂಡ್ಸ್–ಅಮೆರಿಕ	ರಾತ್ರಿ 8.30
ಡಿ.3	ಅರ್ಜೆಂಟೀನಾ–ಆಸ್ಟ್ರೇಲಿಯಾ	ತಡರಾತ್ರಿ 12.30
ಡಿ.4	ಫ್ರಾನ್ಸ್–ಪೋಲೆಂಡ್	ರಾತ್ರಿ 8.30
ಡಿ.4	ಇಂಗ್ಲೆಂಡ್–ಸೆನೆಗಲ್	ತಡರಾತ್ರಿ 12.30
ಡಿ.5	ಜಪಾನ್–ಕ್ರೊವೇಷ್ಯಾ	ರಾತ್ರಿ 8.30
ಡಿ.5	ಜಿ ಗುಂಪಿನ ಅಗ್ರಸ್ಥಾನ–ಎಚ್ ಗುಂಪಿನ ಎರಡನೇ ಸ್ಥಾನ	ತಡರಾತ್ರಿ 12.30
ಡಿ.6	ಮೊರೊಕ್ಕೊ–ಸ್ಪೇನ್	ರಾತ್ರಿ 8.30
ಡಿ.6	ಎಚ್ ಗುಂಪಿನ ಅಗ್ರಸ್ಥಾನ– ಜಿ ಗುಂಪಿನ ಎರಡನೇ ಸ್ಥಾನ	ತಡರಾತ್ರಿ 12.30
ನೇರಪ್ರಸಾರ	ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್	

ಪ್ರೀ ಕ್ವಾರ್ಟರ್ ಫೈನಲ್‌ಗೆ ದಕ್ಷಿಣ ಕೊರಿಯಾ

ಪೋರ್ಚುಗಲ್‌ಗೆ ಆಘಾತ; ಗೆದ್ದರೂ ಟೂರ್ನಿಯಿಂದ ಹೊರಬಿದ್ದ ಉರುಗ್ವೆ

ಅಲ್ ರಯ್ಯಾನ್ (ರಾಯಿಟರ್ಸ್): ಹ್ವಾಂಗ್ ಹೀ ಚಾನ್ ಅವರು ಇಂಜುರಿ ಅವಧಿಯಲ್ಲಿ ಗಳಿಸಿದ ಗೋಲಿನ ನೆರವಿನಿಂದ ಪೋರ್ಚುಗಲ್ ತಂಡವನ್ನು ಮಣಿಸಿದ ದಕ್ಷಿಣ ಕೊರಿಯಾ, ವಿಶ್ವಕಪ್ ಟೂರ್ನಿಯ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಎಜುಕೇಶನ್ ಸಿಟಿ ಕ್ರೀಡಾಂಗಣ-ದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಕೊರಿಯಾ 2–1 ಗೋಲುಗಳಿಂದ ಗೆದ್ದಿತು.

ಈ ಪಂದ್ಯದಲ್ಲಿ ಸೋತರೂ ಪೋರ್ಚುಗಲ್ ಆರು ಪಾಯಿಂಟ್ಸ್ ಗಳಿಸಿ 'ಎಚ್' ಗುಂಪಿನಲ್ಲಿ ಅಗ್ರಸ್ಥಾನ ಪಡೆದು ನಾಕೌಟ್ ಹಂತ ಪ್ರವೇಶಿಸಿತು. ನಾಲ್ಕು ಪಾಯಿಂಟ್ಸ್ ಕಲೆಹಾಕಿದ ದಕ್ಷಿಣ ಕೊರಿಯಾ ಎರಡನೇ ಸ್ಥಾನ ಗಳಿಸಿತು. ಮೂರು ಮತ್ತು ನಾಲ್ಕನೇ ಸ್ಥಾನ ಪಡೆದ ಉರುಗ್ವೆ ಹಾಗೂ ಘಾನಾ ತಂಡಗಳು ಟೂರ್ನಿಯಿಂದ ನಿರ್ಗಮಿಸಿದವು.

ರಿಕಾರ್ಡೊ ಹೊರ್ಟ ಅವರು ಐದನೇ ನಿಮಿಷದಲ್ಲಿ ಗೋಲು ಗಳಿಸಿ ಪೋರ್ಚುಗಲ್‌ಗೆ ಮುನ್ನಡೆ ತಂದಿತ್ತರು. ಕಿಮ್ ಯಂಗ್ ವೊನ್ 27ನೇ ನಿಮಿಷದಲ್ಲಿ ಗೋಲು ಗಳಿಸಿದ್ದರಿಂದ ದಕ್ಷಿಣ ಕೊರಿಯಾ ಸಮಬಲ ಸಾಧಿಸಿತು.

ಆ ಬಳಿಕ ಉಭಯ ತಂಡಗಳು ಜಿದ್ದಾಜಿದ್ದಿನ ಸೆಣಸಾಟ ನಡೆಸಿದವು. ಪಂದ್ಯ ಇನ್ನೇನು ಡ್ರಾದಲ್ಲಿ ಕೊನೆಗೊಳ್ಳಲಿದೆ ಎನ್ನುವಷ್ಟರಲ್ಲಿ ಚಾನ್ (90+1) ಗೆಲುವಿನ ಗೋಲು ಗಳಿಸಿದರು.

ಹೊರಬಿದ್ದ ಉರುಗ್ವೆ, ಘಾನಾ: 'ಎಚ್' ಗುಂಪಿನ ಇನ್ನೊಂದು ಪಂದ್ಯದಲ್ಲಿ ಉರುಗ್ವೆ 2–0 ಗೋಲುಗಳಿಂದ ಘಾನಾ ತಂಡವನ್ನು ಮಣಿಸಿತು. ಆದರೆ ಗೋಲು ಸರಾಸರಿಯಲ್ಲಿ ಹಿಂದೆ ಬಿದ್ದ ಉರುಗ್ವೆ ಮುಂದಿನ ಹಂತ ಪ್ರವೇಶಿಸಲು ವಿಫಲವಾಯಿತು.

ಜಾರ್ಜಿಯನ್ ಡೆಅರಾ ಅಸ್ಕಯೆಟಾ ಅವರು 26 ಮತ್ತು 32ನೇ ನಿಮಿಷಗಳಲ್ಲಿ ಗೋಲು ಗಳಿಸಿ ಉರುಗ್ವೆಗೆ ಮುನ್ನಡೆ ತಂದಿತ್ತರು. ಇನ್ನಷ್ಟು ಗೋಲು ಗಳಿಸುವ ತಂಡದ ಪ್ರಯತ್ನಕ್ಕೆ ಫಲ ದೊರೆಯಲಿಲ್ಲ. ಉರುಗ್ವೆ 3–0 ಅಂತರದಿಂದ ಜಯಿಸಿದ್ದರೆ ಗೋಲು ಸರಾಸರಿಯಲ್ಲಿ ಕೊರಿಯಾ ತಂಡವನ್ನು ಹಿಂದಿಕ್ಕಿ ನಾಕೌಟ್‌ಗೆ ಪ್ರವೇಶಿಸುತ್ತಿತ್ತು.

ದಕ್ಷಿಣ ಅಮೆರಿಕದ ತಂಡ ಎರಡು ದಶಕಗಳಲ್ಲಿ ನಾಕೌಟ್ ಪ್ರವೇಶಿಸಲು ವಿಫಲವಾಗಿದ್ದು ಇದೇ ಮೊದಲು. ತಂಡದ ಸ್ಟಾರ್ ಆಟಗಾರ ಲೂಯಿಸ್ ಸೊರೇಜ್ ಅವರು ದುಃಖ ತಡೆಯಲಾಗದೆ ಬಿಕ್ಕಿಬಿಕ್ಕಿ ಅತ್ತರು. ಇತರ ಆಟಗಾರರು ನಿರಾಸೆಯ ಮೊಗಹೊತ್ತು ಕ್ರೀಡಾಂಗಣ ತೊರೆದರು.

ಗೆಲುವಿನ ಗೋಲು ಗಳಿಸಿದ ಹ್ವಾಂಗ್ ಹೀ ಚಾನ್ ಅವರ ಸಂಭ್ರಮ –ಎಎಫ್‌ಪಿ ಚಿತ್ರ

ಸೆಮಿಫೈನಲ್‌ಗೆ ಕರ್ನಾಟಕ ತಂಡ

ಬೆಂಗಳೂರು: ರೋಶಿನಿ ಜಾನ್ ಗಳಿಸಿದ 23 ಪಾಯಿಂಟ್ಸ್ ನೆರವಿನಿಂದ ಕರ್ನಾಟಕ ತಂಡವು ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ತಲುಪಿತು.

ರಾಜಸ್ಥಾನದ ಉದಯಪುರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಎಂಟರಘಟ್ಟದ ಹಣಾಹಣಿಯಲ್ಲಿ ಕರ್ನಾಟಕ 74–62ರಿಂದ ಮಹಾರಾಷ್ಟ್ರ ತಂಡವನ್ನು ಸೋಲಿಸಿತು. ಕರ್ನಾಟಕ ತಂಡದ ನಾಯಕಿ ಲೋಪಮುದ್ರಾ 13 ಪಾಯಿಂಟ್ಸ್ ಕಲೆಹಾಕಿದರು.

ನಾಲ್ಕರ ಘಟ್ಟದಲ್ಲಿ ಕರ್ನಾಟಕ ತಂಡವು ಕೇರಳ ತಂಡವನ್ನು ಎದುರಿಸಲಿದೆ.

ಐಎಸ್‌ಎಲ್: ಕಂಠೀರವದಲ್ಲಿ ಎಟಿಕೆಎಂಬಿ ಸವಾಲು

ಚೆಟ್ರಿ ಬಳಗಕ್ಕೆ ಜಯದ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ಪಂದ್ಯದಲ್ಲಿ ಎಫ್‌ಸಿ ಗೋವಾ ತಂಡವನ್ನು ಮಣಿಸಿ ಆತ್ಮವಿಶ್ವಾಸದಲ್ಲಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಶನಿವಾರ ಎಟಿಕೆ ಮೋಹನ್ ಬಾಗನ್ ಸವಾಲಿಗೆ ಸಜ್ಜಾಗಿದೆ.

ಇಲ್ಲಿಯ ಕಂಠೀರವ ಕ್ರೀಡಾಂಗಣ-ದಲ್ಲಿ ಉಭಯ ತಂಡಗಳ ನಡುವಣ ಪೈಪೋಟಿಗೆ ವೇದಿಕೆ ಸಜ್ಜುಗೊಂಡಿದೆ. ಕಳೆದ ಶನಿವಾರ ಮಡಗಾಂವ್‌ನಲ್ಲಿ ನಡೆದ ಪಂದ್ಯದಲ್ಲಿ ಜಾವಿ ಹೆರ್ನಾಂಡೆಜ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಬಿಎಫ್‌ಸಿ 2–0ಯಿಂದ ಗೋವಾಕ್ಕೆ ಸೋಲುಣಿಸಿತ್ತು. ಸತತ ನಾಲ್ಕು ಪಂದ್ಯಗಳಲ್ಲಿ ಸೋತ ಬಳಿಕ ಲಭಿಸಿದ ಈ ಗೆಲುವು ತಂಡದಲ್ಲಿ ಹೊಸ ಉತ್ಸಾಹ ತಂದಿದೆ.

ಟೂರ್ನಿಯಲ್ಲಿ ಆಡಿದ ಏಳು ಪಂದ್ಯಗಳಿಂದ ಬಿಎಫ್‌ಸಿ ಕೇವಲ ಎರಡು ಗೆಲುವು ದಾಖಲಿಸಿದೆ. ಒಂದರಲ್ಲಿ ಡ್ರಾ ಮಾಡಿಕೊಂಡು ನಾಲ್ಕು ಪಂದ್ಯಗಳಲ್ಲಿ ಸೋತಿದೆ. ಏಳು ಪಾಯಿಂಟ್ಸ್ ಗಳಿಸಿ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿದೆ. ಆದರೆ ಮೋಹನ್ ಬಾಗನ್ 13 ಪಾಯಿಂಟ್ಸ್‌ನೊಂದಿಗೆ ನಾಲ್ಕನೇ ಸ್ಥಾನದಲ್ಲಿದೆ. ಬೆಂಗಳೂರಿನಲ್ಲಿ ಆಡಿದ ಹಿಂದಿನ ಪಂದ್ಯದಲ್ಲಿ ಬಿಎಫ್‌ಸಿ 0–1ರಿಂದ ರಿಂದ ಈಸ್ಟ್ ಬೆಂಗಾಲ್‌ಗೆ ಮಣಿದಿತ್ತು.

'ಎಟಿಕೆಂಬಿ ಎದುರಿನ ಹಣಾಹಣಿಯನ್ನೂ ಎಲ್ಲ ಪಂದ್ಯಗಳಂತೆಯೇ ಪರಿಗಣಿಸ-ಲಿದ್ದೇವೆ. ಆ ತಂಡದ ಸಾಮರ್ಥ್ಯ ಮತ್ತು ದೌರ್ಬಲ್ಯದ ಅರಿವಿದೆ. ಗೋವಾ ಎದುರಿನ ಪಂದ್ಯದಲ್ಲಿ ತೋರಿದ ಲಯವನ್ನೇ ಇಲ್ಲಿಯೂ ಮುಂದುವರಿಸುವೆವು' ಎಂದು ಬಿಎಫ್‌ಸಿ ಮುಖ್ಯ ಕೋಚ್ ಸೈಮನ್ ಗ್ರೇಸನ್ ಹೇಳಿದ್ದಾರೆ. ನಾಯಕ ಸುನಿಲ್ ಚೆಟ್ರಿ, ಫಿಜಿ ದೇಶದ ಪ್ರತಿಭೆ ರಾಯ್‌ಕೃಷ್ಣ, ಜಾವಿ ಹೆರ್ನಾಂಡೆಜ್ ಮೇಲೆ ಬಿಎಫ್‌ಸಿ ನಿರೀಕ್ಷೆ ಇಟ್ಟುಕೊಂಡಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಟಿವಿ, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ಅಭ್ಯಾಸನಿರತ ಸುನಿಲ್ ಚೆಟ್ರಿ

ಕಬಡ್ಡಿ: ಯೋಧಾಸ್ ತಂಡ ಜಯಭೇರಿ

ಹೈದರಾಬಾದ್: ರೇಡರ್ ಪ್ರದೀಪ್ ನರ್ವಾಲ್ ಗಳಿಸಿದ 13 ಪಾಯಿಂಟ್‌ಗಳ ಬಲದಿಂದ ಯುಪಿ ಯೋಧಾಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಜಯ ಗಳಿಸಿತು.

ಇಲ್ಲಿಯ ಗಚ್ಚಿಬೌಳಿ ಕ್ರೀಡಾಂಗಣ-ದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಯುಪಿ 38–28ರಿಂದ ಯು ಮುಂಬಾ ತಂಡವನ್ನು ಪರಾಭವಗೊಳಿಸಿತು. ವಿಜೇತ ತಂಡಕ್ಕೆ ರೋಹಿತ್ ತೋಮರ್ (8 ಪಾಯಿಂಟ್) ಕೂಡ ಕಾಣಿಕೆ ನೀಡಿದರು. ಮುಂಬಾ ತಂಡಕ್ಕಾಗಿ ಗುಮಾನ್ ಸಿಂಗ್ 10 ಪಾಯಿಂಟ್ ಗಳಿಸಿದರು.

ಆರಂಭದಿಂದಲೂ ಉತ್ತಮ ಆಟವಾಡಿದ ಯುಪಿ ಮೊದಲಾರ್ಧದ ವೇಳೆಗೆ 19–14ರಿಂದ ಮುಂದಿತ್ತು. ದ್ವಿತೀಯಾರ್ಧದಲ್ಲೂ ಅದೇ ಲಯಯೊಂದಿಗೆ ಆಡಿ ಗೆದ್ದಿತು.

ಮತ್ತೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ 40–34ರಿಂದ ಪಟ್ನಾ ಪೈರೇಟ್ಸ್ ಎದುರು ಗೆದ್ದಿತು.

ಇಂದಿನ ಪಂದ್ಯಗಳು

ದಬಾಂಗ್ ಡೆಲ್ಲಿ– ಪುಣೇರಿ ಪಲ್ಟನ್
ಟೈಟನ್ಸ್–ತಮಿಳ್ ತಲೈವಾಸ್
ಪಿಂಕ್ ಪ್ಯಾಂಥರ್ಸ್– ಬೆಂಗಾಲ್ ವಾರಿಯರ್ಸ್

ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಜೈಪುರ	19	13	6	0	69
ಪುಣೇರಿ	19	12	5	2	69
ಯುಪಿ	19	11	6	2	65
ಬೆಂಗಳೂರು	19	11	7	1	63
ತಲೈವಾಸ್	19	8	7	4	56
ಡೆಲ್ಲಿ	19	9	9	1	54

ಕ್ರಿಕೆಟ್: ರಾಜೇಶ್ವರಿಗೆ ಸ್ಥಾನ, ಪೂಜಾ ಅಲಭ್ಯ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧದ ಟಿ20 ಕ್ರಿಕೆಟ್ ಸರಣಿಗೆ ಭಾರತ ಮಹಿಳಾ ಕ್ರಿಕೆಟ್ ತಂಡವನ್ನು ಶುಕ್ರವಾರ ಪ್ರಕಟಿಸಲಾಗಿದ್ದು, ಕರ್ನಾಟಕದ ರಾಜೇಶ್ವರಿ ಗಾಯಕವಾಡ ಸ್ಥಾನ ಗಿಟ್ಟಿಸಿದ್ದಾರೆ. ಗಾಯದಿಂದ ಚೇತರಿ-ಸಿಕೊಳ್ಳುತ್ತಿರುವ ಪೂಜಾ ವಸ್ತ್ರಕಾರ್ ಅವರನ್ನು ಆಯ್ಕೆ ಮಾಡಿಲ್ಲ.

ಐದು ಪಂದ್ಯಗಳ ಟಿ20 ಸರಣಿಯು ಮುಂಬೈನಲ್ಲಿ ಡಿಸೆಂಬರ್ 9ರಂದು ಮುಂಬೈನಲ್ಲಿ ಆರಂಭವಾಗಲಿದೆ. ಹರ್ಮನ್‌ಪ್ರೀತ್ ಕೌರ್ ಅವರು ತಂಡದ ನಾಯಕಿಯಾಗಿದ್ದಾರೆ. ಆಂಧ್ರದ ಎಡಗೈ ಮಧ್ಯಮವೇಗಿ ಅಂಜಲಿ ತಂಡಕ್ಕೆ ಆಯ್ಕೆಯಾಗಿರುವ ಹೊಸಮುಖ.

ತಂಡ ಇಂತಿದೆ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪನಾಯಕಿ), ಶಫಾಲಿ ವರ್ಮಾ, ಯಷ್ಟಿಕಾ ಭಾಟಿಯಾ (ವಿಕೆಟ್ ಕೀಪರ್), ಜೆಮಿಮಾ ರಾಡ್ರಿಗಸ್, ದೀಪ್ತಿ ಶರ್ಮಾ, ರಾಧಾ ಯಾದವ್, ರಾಜೇಶ್ವರಿ ಗಾಯಕವಾಡ, ರೇಣುಕಾ ಸಿಂಗ್ ಠಾಕೂರ್, ಮೇಘನಾ ಸಿಂಗ್, ಅಂಜಲಿ ಸರ್ವಾನಿ, ದೇವಿಕಾ ವೈದ್ಯ, ಎಸ್. ಮೇಘನಾ, ರಿಚಾ ಘೋಷ್ (ವಿಕೆಟ್ ಕೀಪರ್) ಮತ್ತು ಹರ್ಲೀನ್ ಡಿಯೊಲ್.

ಶನಿವಾರ, 3 ಡಿಸೆಂಬರ್ 2022

ಪ್ರಜಾವಾಣಿ

ಪ್ರಜಾ ಪ್ಲಸ್+

ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಚಳಿಗಾಲದಲ್ಲಿ ಹೀಗಿರಲಿ ಆಹಾರ 1

ಚಳಿಗಾಲದಲ್ಲಿ ಹೀಗಿರಲಿ ಆಹಾರ

ಸುಮಾ ಬಿ.

ಚಳಿಗಾಲ ಮೆಲ್ಲಗೆ ಮೈಯನ್ನು ಆವರಿಸುತ್ತಿದೆ. ಸುಳಿಗಾಳಿ ತ್ವಚೆಯನ್ನು ಒಣಗಿಸುತ್ತಿದೆ. ಈ ಸಮಯದಲ್ಲಿ ಮಕ್ಕಳು ಮತ್ತು ವಯಸ್ಸಾದವರನ್ನು ನೋಡಿಕೊಳ್ಳುವುದೇ ಸವಾಲು. ಈ ಕಾಲದಲ್ಲಿ ಯಾವ ವಯೋಮಾನದವರು ಯಾವ ಆಹಾರ ಸೇವಿಸಬೇಕು, ಯಾವುದನ್ನು ಸೇವಿಸಬಾರದು, ಯಾವುದನ್ನು ತಿಂದರೆ ದೇಹಕ್ಕೆ ಅನುಕೂಲ, ಅನನುಕೂಲ ಎನ್ನುವ ಗೊಂದಲ ಶುರುವಾಗುತ್ತದೆ.

ಆದರೆ, ಈ ಋತುಮಾನದಲ್ಲಿ ಸಿಗುವ ಎಲ್ಲ ಬಗೆಯ ಹಣ್ಣುಗಳನ್ನೂ, ಆಹಾರ ಪದಾರ್ಥಗಳನ್ನು ಧಾರಾಳವಾಗಿ ಸೇವಿಸಬಹುದು. ಹಾಗೆ ಸೇವಿಸುವಾಗ ಇತಿ– ಮಿತಿ ಇರಲಿ ಎನ್ನುವರು ಆಹಾರ ತಜ್ಞರು.

ಚಳಿಗಾಲದಲ್ಲಿ ವಾತಾವರಣದ ತಾಪಮಾನ ಇಳಿಕೆಯಾಗುವಂತೆ, ದೇಹದ ತಾಪಮಾನವೂ ಇಳಿಯುತ್ತದೆ. ಇದನ್ನು ಸರಿದೂಗಿಸಿಕೊಳ್ಳಲು ಶರೀರವು ಚಯಾಪಚಯ ಕ್ರಿಯೆಯನ್ನು ಏರಿಸಿಕೊಳ್ಳುವ ಮೂಲಕ ಉಷ್ಣವನ್ನು ಉತ್ಪಾದಿಸಿಕೊಳ್ಳುತ್ತದೆ. ಆಹಾರದಲ್ಲಿ ಕೊಬ್ಬಿನ ಅಂಶವನ್ನು ಕರಗಿಸುತ್ತ ಚಯಾಪಚಯ ಕ್ರಿಯೆ ಹೆಚ್ಚಿಸುತ್ತದೆ. ಇದರಿಂದ ಚಳಿಗಾಲದಲ್ಲಿ ಹೆಚ್ಚು ಆಹಾರ ದೇಹಕ್ಕೆ ಬೇಕೆನಿಸುತ್ತದೆ. ಹೆಚ್ಚು ಹಸಿವು ಉಂಟಾಗುತ್ತದೆ. ಹಸಿವು ಎಂದು ಏನೇನೊ ತಿನ್ನುವ ಬದಲು ಸಮತೋಲಿತ ಆಹಾರ ಸೇವಿಸಬೇಕು ಎನ್ನುವುದು ಆಹಾರ ತಜ್ಞರ ಸಲಹೆ.

ಋತುವಿಗೆ ಅನುಸಾರ ನಮ್ಮ ಆಹಾರ ಬದಲಾವಣೆ ಮಾಡಿಕೊಳ್ಳುವುದು ಆರೋಗ್ಯದ ದೃಷ್ಟಿಯಿಂದ ಹೆಚ್ಚು ಸೂಕ್ತ. ಗೋಧಿ, ಹೆಸರು ಕಾಳು, ಅಕ್ಕಿ, ವಿವಿಧ ಬಗೆಯ ಧಾನ್ಯಗಳನ್ನು ಅಡುಗೆಯಲ್ಲಿ ಬಳಸಿ. ಹಾಗಲಕಾಯಿ, ಸೋರೆಕಾಯಿ, ಹೀರೆಕಾಯಿ, ಕುಂಬಳಕಾಯಿ ಚಳಿಗಾಲದ ಅಂತ್ಯಕ್ಕೆ ಸಿಗುವ ಅವರೆಕಾಯಿಯನ್ನು ಅಡುಗೆಯಲ್ಲಿ ಬಳಸಿ. ಈ ಸಮಯದಲ್ಲಿ ಹಸಿ ಶೇಂಗಾ ಬೇಯಿಸಿ ತಿಂದರೆ ಹೆಚ್ಚು ಪ್ರೋಟಿನ್ ಲಭ್ಯವಾಗುತ್ತದೆ. ಶುಷ್ಕ ವಾತಾವರಣದ ಈ ಸಮಯದಲ್ಲಿ ಜಿಡ್ಡಿನಂಶ ಯುಕ್ತ ಹಾಲು, ಮಜ್ಜಿಗೆ, ತುಪ್ಪ, ಕೆನೆಯನ್ನೂ ನಿಯಮಿತವಾಗಿ ಸೇವಿಸಿದರೆ ಒಳ್ಳೆಯದು. ಹೆ ಉಪ್ಪು, ಹುಳಿ ಮತ್ತು ಖಾರದ ಪದಾರ್ಥಗಳನ್ನು ಹೆಚ್ಚು ಬಳಸಬಾರದು.

‘ಕಷಾಯಕ್ಕೆ ಬಳಸುವ ಕಾಳು ಮೆಣಸು, ಅರಿಶಿನ, ಚಕ್ಕೆ, ಲವಂಗ, ಏಲಕ್ಕಿ ಈ ರೀತಿಯ ಮಸಾಲೆ ಪದಾರ್ಥಗಳು ಆರೋಗ್ಯ ವೃದ್ಧಿಸಿಕೊಳ್ಳಲು ಸಹಕಾರಿಯಾಗುತ್ತವೆ. ಮಧುಮೇಹ, ಹೃದಯ ಸಂಬಂಧಿ ಕಾಯಿಲೆ ಉಳ್ಳವರು ಹೆಚ್ಚು ನಾರಿನಂಶ ಇರುವ ಆಹಾರ ತಿನ್ನಬೇಕು. ಸೊಪ್ಪುಗಳು, ಬಣ್ಣ ಬಣ್ಣದ ತರಕಾರಿಗಳನ್ನು ಹೆಚ್ಚು ಸೇವಿಸಬೇಕು. ನಾವು ಉಣ್ಣುವ ತಟ್ಟೆಯಲ್ಲಿನ ಪದಾರ್ಥಗಳು ಹೆಚ್ಚು ಬಣ್ಣಗಳಿಂದ ಕೂಡಿದ್ದರೆ ಆರೋಗ್ಯ ವೃದ್ಧಿಸುತ್ತದೆ ಎನ್ನುತ್ತಾರೆ ಆಹಾರ ತಜ್ಞೆ ಚೈತ್ರಾ ಕಿರಣ್.

ಗ್ರೀನ್ ಟೀ ಕುಡಿಯಿರಿ: ಚಳಿಗಾಲದ ಸಮಯದಲ್ಲಿ ದೇಹ ರಕ್ಷಣೆಗೆ ಗ್ರೀನ್ ಟೀ ಹೆಚ್ಚು ಸಹಕಾರಿ. ಸುಲಭದಲ್ಲಿ ಸಿಗುವ ಪುದಿನಾ, ದೊಡ್ಡ ಪತ್ರೆ, ತುಳಸಿ, ಒಂದೆಲಗ, ಅಮೃತಬಳ್ಳಿ ಇವುಗಳನ್ನು ಒಂದೊಂದು ದಿನ ಒಂದೊಂದು ಎಲೆಗಳನ್ನು ಗ್ರೀನ್ ಟೀಗೆ ಬಳಸಬಹುದು. ಈ ಗಿಡಗಳ ಎಲೆಗಳನ್ನು ಕುದಿಯುವ ನೀರಿಗೆ ಹಾಕಬೇಕು. ನೀರು ತಣ್ಣಗಾದ ಬಳಿಕ ಕುಡಿಯಬೇಕು. ಗ್ರೀನ್ ಟೀ ಕೊಳ್ಳಲಾಗದವರು ಹೀಗೆ ಮಾಡಿ. ಎಲೆಗಳಲ್ಲಿರುವ ಅಂಶಗಳು

ನೀರಿನೊಂದಿಗೆ ಬೆರೆತು ಹೊಸ ಸ್ವಾದ ನೀಡುತ್ತವೆ. ಅದನ್ನೆ ಗ್ರೀನ್ ಟೀ ರೀತಿ ಬಳಸಹುದು. ಇದಕ್ಕಾಗಿ ಮನೆಯಲ್ಲೇ ಪುಟ್ಟ ಕೈತೋಟ ಮಾಡಿಕೊಂಡರೆ ಅನುಕೂಲ. ಒಂದಷ್ಟು ಪಾಟ್‌ಗಳಲ್ಲಿ ಔಷಧೀಯ ಸಸ್ಯಗಳನ್ನು ಬೆಳೆಸಿಕೊಂಡು ಗ್ರೀನ್ ಟೀ ಸುಲಭದಲ್ಲಿ ಮಾಡಿಕೊಳ್ಳಬಹುದು. ಅಲ್ಲದೆ, ಚಳಿಗಾಲದ ಈ ಸಮಯದಲ್ಲಿ ಕಷಾಯದ ಜತೆ ಪ್ರತಿ ದಿನ ಒಂದೊಂದು ಬಗೆಯ ಎಲೆಯನ್ನು ಹಾಕಿ ಕುದಿಸಿ ಬೆಳಿಗ್ಗೆ ಸಮಯದಲ್ಲಿ ಒಂದು ಹೊತ್ತು ಕುಡಿದರೆ ದೇಹದ ಉಷ್ಣತೆ ಕಾಪಾಡಿಕೊಳ್ಳಬಹುದು.

‘ಚಳಿಗಾಲದಲ್ಲಿ ಸಾಮಾನ್ಯವಾಗಿ ನೀರಿನಿಂದ ಉಂಟಾಗುವ ಕಾಯಿಲೆಗಳು ಹೆಚ್ಚು. ಆದ್ದರಿಂದ ಕುದಿಸಿ ಆರಿಸಿದ ನೀರನ್ನು ಸೇವಿಸಬೇಕು. ಕೆಲವರು ಗಂಟಲಿಗೆ ಹಿತವಾಗರಿಲಿ ಎಂದು ತಣ್ಣನೆ ನೀರನ್ನು ಸ್ವಲ್ಪ ಮಾತ್ರ ಬಿಸಿ ಮಾಡಿಕೊಂಡು ಕುಡಿಯುತ್ತಾರೆ. ಈ ಕ್ರಮ ತಪ್ಪು. ನೀರಿನ ಉಷ್ಣತೆಗೆ ತಕ್ಕಂತೆ ಕೆಲವು ಬ್ಯಾಕ್ಟೀರಿಯಾಗಳು, ವೈರಸ್‌ಗಳು ಆಕ್ಟಿವ್ ಆಗುತ್ತವೆ. ಆಗ ಆ ನೀರನ್ನು ಸೇವಿಸುವುದರಿಂದ ಲಾಭಕ್ಕಿಂತ ತೊಂದರೆಯೇ ಹೆಚ್ಚು. ಹಾಗಾಗಿ ಚೆನ್ನಾಗಿ ಕುದಿಸಿ ಆರಿಸಿದ ನೀರನ್ನೇ ಕುಡಿಯಬೇಕು’ ಎನ್ನುವರು ಚೈತ್ರಾ ಕಿರಣ್.

ಬೆಚ್ಚಗಿನ ಬಟ್ಟೆ ಧರಿಸಿ ಚಳಿ ದೂರ ಮಾಡಬಹುದು. ಆದರೆ ದೇಹದ ಆಂತರಿಕ ಆರೋಗ್ಯ ಕಾಪಾಡಿಕೊಳ್ಳಲು ಒಂದಷ್ಟು ಆಹಾರ ಕ್ರಮಗಳನ್ನು ಬದಲಿಸಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಆಹಾರ ತಜ್ಞರು ನೀಡಿದ ಕೆಲವು ಸಲಹೆ ಇಲ್ಲಿವೆ...

- ಶೀತ ಉಂಟು ಮಾಡುವಂತಹ ಪದಾರ್ಥಗಳಿಗೆ ಉಷ್ಣದ ಪದಾರ್ಥಗಳನ್ನು ಸೇರಿಸಿ ತಿಂದರೆ ದೇಹಕ್ಕೆ ಉತ್ತಮ. ಉದಾಹರಣೆಗೆ ಸೌತೆಕಾಯಿ, ಸೀಬೇಕಾಯಿ ಶೀತ ಉಂಟುಮಾಡುತ್ತವೆ ಎಂದರೆ, ಅದರ ಹೋಳುಗಳ ಮೇಲೊಂದಿಷ್ಟು ಕಾಳು ಮೆಣಸಿನ ಪುಡಿ, ಉಪ್ಪು ಉದುರಿಸಿಕೊಂಡು ಸವಿದರೆ ಸಮತೋಲನ ಕಾಯ್ದುಕೊಳ್ಳಬಹುದು.
- ಚಳಿಗಾಲದಲ್ಲಿ ಕಿತ್ತಲೆ ಹಣ್ಣು ಶೀತ ಎಂದು ಹೇಳುವವರು ಕಿತ್ತಲೆ ಬದಲು ಮೂಸಂಬಿ ಹಣ್ಣು ಸೇವಿಸಬಹುದು. ಚಳಿಗಾಲದಲ್ಲಿ ವಿಟಮಿನ್ ‘ಸಿ’ ಅಂಶ ಹೆಚ್ಚು ಬೇಕು. ಹಾಗಾಗಿ ಈ ಹಣ್ಣುಗಳನ್ನು ನಿಯಮಿತವಾಗಿ ಸೇವಿಸಬೇಕು.
- ಮೂರು ವರ್ಷದ ಮೇಲ್ಪಟ್ಟ ಮಕ್ಕಳಿಗೆ ದೊಡ್ಡ ಪತ್ರೆ ರಸ ಹಾಗೂ ಜೇನುತುಪ್ಪ ಬೆರೆಸಿ ಆಗಾಗ ಕೊಡಬಹುದು. ಹಿಪ್ಪಲಿ, ಜೇಷ್ಠಮಧು ತೇಯ್ದು ವಾರಕ್ಕೆ ಒಮ್ಮೆ ಕೊಡಬಹುದು.
- ಹೊರಗಿನ ಆಹಾರ ತಿನ್ನುವುದನ್ನು ಆದಷ್ಟು ಕಡಿಮೆ ಮಾಡಬೇಕು.
- ಚಳಿಗಾಲದಲ್ಲಿ ಸಾಮಾನ್ಯವಾಗಿ ನೀರು ಕುಡಿಯುವುದನ್ನು ಬಹುತೇಕರು ಕಡಿಮೆ ಮಾಡುತ್ತಾರೆ. ಅದು ತಪ್ಪು. ಶುಷ್ಕ ವಾತಾವರಣ ಇರುವುದರಿಂದ ದೇಹದಲ್ಲೂ ನೀರಿನ ಪ್ರಮಾಣ ಕಡಿಮೆಯಾಗುತ್ತದೆ. ಹಾಗಾಗಿ ಹೆಚ್ಚು ನೀರು ಕುಡಿಯಬೇಕು.
- ಫ್ರಿಜ್‌ನಲ್ಲಿ ಆಹಾರ ಇಟ್ಟು ತಿನ್ನುವ ಪ್ರವೃತ್ತಿ ಬಿಡಿ.
- ಹುಳಿ ಅಂಶಗಳನ್ನು ತಿಂದರೆ ಶೀತ ಆಗುತ್ತದೆ, ಕೆಮ್ಮು ಬರುತ್ತದೆ ಎಂಬ ಕಲ್ಪನೆ ಬಹುತೇಕರಲ್ಲಿದೆ. ಆದರೆ ಅದು ತಪ್ಪು ತಿಳಿವಳಿಕೆ. ಹುಳಿ ಪದಾರ್ಥಗಳಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಸುವಂತಹ ಗುಣಗಳಿರುತ್ತವೆ. ಕಿತ್ತಲೆ, ಮೂಸಂಬಿ, ನೆಲ್ಲಿ ಕಾಯಿ ತಿನ್ನಬಹುದು. ನೆಲ್ಲಿಕಾಯಿಯಿಂದ ಮೊರಬ್ಬ ತಯಾರಿಸಿ ಮಕ್ಕಳಿಗೂ ಕೊಡಬಹುದು.
- ಮಸಾಲೆ ಪದಾರ್ಥಗಳನ್ನು ಅಡುಗೆಗಳಲ್ಲಿ ಹೆಚ್ಚು ಬಳಸಬೇಕು.

ಮಕ್ಕಳ ಬಗ್ಗೆ ಜಾಗ್ರತೆ..

- ಚಳಿಗಾಲದ ಸಮಯದಲ್ಲಿ ಮಕ್ಕಳು ಹುಷಾರು ತಪ್ಪುವುದು ಹೆಚ್ಚು. ಶೀತ, ಜ್ವರ, ಕೆಮ್ಮು ಮುಂತಾದವು ಹೆಚ್ಚು ಕಾಡುತ್ತವೆ. ಆಗ ಕುದಿಸಿ ಆರಿಸಿದ ನೀರನ್ನು ಹೆಚ್ಚು ಹೆಚ್ಚು ಕುಡಿಸಬೇಕು. ಭೇದಿ ಉಂಟಾದರೆ ಉಪ್ಪು, ಸಕ್ಕರೆ, ನಿಂಬೆಹಣ್ಣು ಬೆರೆಸಿ ಮನೆಯಲ್ಲೆ ಒಆರ್‌ಎಸ್ ತಯಾರಿಸಿ ಮಕ್ಕಳಿಗೆ ಕೊಡಬೇಕು.
- ಕರಿದ ಪದಾರ್ಥ, ಹೆಚ್ಚು ಎಣ್ಣೆ ಅಂಶವಿರುವ ತಿನಿಸು ಕಡಿಮೆ ತಿನ್ನಿ. ಮನೆಯಲ್ಲೇ ತಯಾರಿಸಿದ ಕರಿದ ಪದಾರ್ಥಗಳನ್ನು ಮಿತವಾಗಿ ತಿಂದರೆ ಉತ್ತಮ. ಹಾಗಂತ ಸಂಪೂರ್ಣ ವರ್ಜ್ಯ ಮಾಡುವುದೂ ಸರಿಯಲ್ಲ.
- ಕರಿದ ಪದಾರ್ಥದ ಬದಲು ಮಕ್ಕಳಿಗೆ ಶೇಂಗಾ ಮಿಠಾಯಿ, ಕೊಬ್ಬರಿ ಬರ್ಫಿ ಮಾಡಿಕೊಡಬಹುದು. ಇವು ಆರೋಗ್ಯ ಪೂರ್ಣವೂ ಹೌದು. ಮಕ್ಕಳೂ ಖುಷಿಯಾಗಿ ತಿನ್ನುವರು.

ಅರಿವು ಹರಿವು

ಶೀತಕಾಲ; ಮಕ್ಕಳ ಆರೋಗ್ಯ ರಕ್ಷಣೆ !

ಚಳಿಗಾಲ ಬಂದ ತಕ್ಷಣ ಮಕ್ಕಳಲ್ಲಿ ಕಫ, ಕೆಮ್ಮು ಸೇರಿದಂತೆ ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳೇ ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ಶುಷ್ಕ ವಾತಾವರಣಕ್ಕೆ ಹೊಂದಿಕೊಂಡಿರುವ ಮಕ್ಕಳು, ತಾಪಮಾನದಲ್ಲಿ ಕುಸಿತ ಕಂಡಾಗ ಆರೋಗ್ಯ ಏರುಪೇರಾಗುವುದು ಸಹಜ. ನಾನು ಮಕ್ಕಳ ಆರೋಗ್ಯವನ್ನು ನಾಲ್ಕು ಭಾಗವಾಗಿ ಪರಿವರ್ತಿಸಿದ್ದು, ಪ್ರತಿ ವಯಸ್ಸಿಗೂ ಅದರದೇ ಆದ ಮುಂಜಾಗ್ರತಾ ಕ್ರಮಗಳು ಅಗತ್ಯ’ ಎಂಬುದು ಕಲಬುರ್ಗಿಯ ಮಕ್ಕಳ ತಜ್ಞೆ ಡಾ. ಅರುಂಧತಿ ಪಾಟೀಲ್ ಅಭಿಮತ.

ಹಾಗಾದರೆ ಚಳಿಗಾಲದಲ್ಲಿ ಮಕ್ಕಳ ಆರೋಗ್ಯ ರಕ್ಷಣೆ ಹೇಗೆ ? ಇಲ್ಲಿದೆ ವೈದ್ಯರು ನೀಡುವ ನಾಲ್ಕು ಸಲಹೆಗಳು

- ಮೊದಲನೆಯದ್ದು: ನವಜಾತ ಶಿಶುಗಳನ್ನು ಆದಷ್ಟು ಬೆಚ್ಚಗೆ ಇಡಬೇಕು. ಮುಖ್ಯವಾಗಿ ಶಿಶುಗಳ ತಲೆಗೆ ಶೀತಗಾಳಿ, ಎ.ಸಿ, ತಣ್ಣೀರು ತಗಲದಂತೆ ನೋಡಿಕೊಳ್ಳಬೇಕು. ಮೈಗೆ ಎಣ್ಣೆ ಹಚ್ಚಿ, ಬಿಸಿನೀರಿನಿಂದ ಸ್ನಾನ ಮಾಡಿಸುವ ರೂಢಿ ಒಳ್ಳೆಯದು. ಹೆಚ್ಚು ಚಳಿ ಉಂಟಾದರೆ ಬಿಸಿಯಾದ ಬಾಟಲಿಯನ್ನು ಬಟ್ಟೆಯಲ್ಲಿ ಸುತ್ತಿ ಮಗುವಿಗೆ ಹಿತಕರವಾಗುವಂಥ ಶಾಖ ನೀಡಬೇಕು. ಮೇಲಾಗಿ, ಬಾಣಂತಿ ಕೂಡ ಇದರಲ್ಲಿ ಎಚ್ಚರಿಕೆ ವಹಿಸಬೇಕು.
- ಎರಡನೆಯದ್ದು: ಒಂದರಿಂದ ಐದು ವರ್ಷದೊಳಗಿನ ಮಕ್ಕಳು ಹೊರಗೆ ಹೆಚ್ಚು ಓಡಾಡದಂತೆ ಗಮನಿಸಬೇಕು. ಉಲ್ಲನ್ ಬಟ್ಟೆಗಳನ್ನು ಹಾಕಿ ದೇಹವನ್ನು ಆದಷ್ಟು ಬೆಚ್ಚಗೆ ಇಡಿ. ಜ್ವರ ಕಂಡುಬಂದರೆ ಮಾತ್ರ ತೆಳುವಾದ ಬಟ್ಟೆ ಹಾಕಿ, ಗಾಳಿಯಾಡುವಂತೆ ಮಾಡಿ. ‘ಫ್ಲೂ’ ಅಂಟಿಕೊಂಡರೆ ವೈದ್ಯರನ್ನು ಸಂಪರ್ಕಿಸಿ. ಮನೆಯಲ್ಲಿಯೇ ಕಫ ನಿವಾರಕ ಔಷಧಿ ಇದೆ ಹಾಕುವುದು, ಮಾತ್ರೆ ನುಂಗಿಸುವುದು ಬೇಡ. ಈ ಔಷಧವನ್ನು ಮಗುವಿನ ಆರೋಗ್ಯ ಸ್ಥಿತಿ ನೋಡಿ ಕೊಡಬೇಕಾಗುತ್ತದೆ. ತಾವೇ ವೈದ್ಯರು ಎಂಬಂತೆ ಏನೆಲ್ಲ ಔಷಧಿ ಹಾಕುವವರೂ ಇದ್ದಾರೆ. ಇದರಿಂದ ಆರೋಗ್ಯ ಕೆಡುವ ಜತೆಗೆ, ರೋಗನಿರೋಧಕ ಶಕ್ತಿಯೂ ಕ್ಷೀಣಿಸುತ್ತದೆ. ಹಾಗಾಗಿ, ಸ್ವಯಂ ಉಪಚಾರ ಮಾಡಿ ಮಗುವಿಗೆ ಹಿಂಸೆ ಕೊಡಬೇಡಿ.
- ಮೂರನೆಯದ್ದು: ಶೀತಗಾಳಿ ಹೆಚ್ಚಾದಂತೆ ಚರ್ಮದ ತೇವಾಂಶ ಕಡಿಮೆಯಾಗುತ್ತದೆ. ಇದು ಚರ್ಮತುರಿಕೆ, ಅಲರ್ಜಿ, ಚರ್ಮರೋಗಗಳಿಗೂ ಕಾರಣವಾಗಬಹುದು. ಮಕ್ಕಳಲ್ಲಿ ಹೆಚ್ಚಾಗಿ ಅಲರ್ಜಿ ಕಂಡುಬರುತ್ತದೆ. ಹೆಚ್ಚು ನೀರು ಕುಡಿಯುವುದೇ ಇದಕ್ಕೆ ಮುಂಜಾಗ್ರತಾ ಕ್ರಮ. ಮಕ್ಕಳು ಆಟದಲ್ಲಿ ಮೈಮರೆತರೂ ಅವರಿಗೆ ನೀರು ಕುಡಿಸುವುದನ್ನು ಮರೆಯಬೇಡಿ.
- ನಾಲ್ಕನೆಯದ್ದು: ರೋಗ ನಿರೋಧಕ ಶಕ್ತಿ ಕಡಿಮೆ ಇರುವ, ಅಪೌಷ್ಟಿಕತೆಯಿಂದ ಬಳಲುವ ಅಥವಾ ಅಸ್ತಮಾದಂಥ ರೋಗಗಳು ಇರುವ ಮಕ್ಕಳ ಬಗ್ಗೆ ತುಂಬಾ ಕಾಳಜಿ ವಹಿಸಬೇಕು. ಚಳಿಯಿಂದ ದೇಹವು ಸುಕ್ಕುಗಟ್ಟುವುದರಿಂದ ಅಸ್ತಮಾ ಇದ್ದ ಮಕ್ಕಳು ತೀವ್ರ ಉಸಿರಾಟದ ತೊಂದರೆ ಎದುರಿಸುತ್ತಾರೆ. ಅಪೌಷ್ಟಿಕತೆಯಿಂದ ಬಳಲುವ ಮಕ್ಕಳು ಸಣ್ಣಪುಟ್ಟ ಕಾರಣಕ್ಕೂ ಕಾಯಿಲೆ ಬೀಳುತ್ತಾರೆ. ಹಾಗಾಗಿ, ಅವರನ್ನು ಹೆಚ್ಚು ಬೆಚ್ಚಗೆ ಇಡಿ, ಬೆಚ್ಚನೆಯ ಊಟ, ಬಿಸಿನೀರು ಕೊಡಿ.

ಸ್ಪೈನ್‌ಹೆಲ್ತ್ ನಮ್ಮ ಮ್ಯಾಟ್ರೆಸಸ್‌ನ ಶ್ರೇಣಿಗಳು
ULTRABLISS The Joy of Blissful Sleep | AEROLUXE Enjoy Easy Breezy Sleep | ACCUBE Making Sleep Healthier | REJUVE Relax Renew Rejuvenate

Scan to visit our website

BENGALURU: BHARAT BEDDING HOUSE. Tel. No.: 8217616866 • **CAUVERY FURNITURE.** Tel. No.: 9739245736 • **K. G. HANDLOOM AND FURNISHING.** Tel. No.: 9215511077 • **KASHIF ENTERPRISES.** Tel. No.: 9341898983 • **KRUPA AGENCIES.** Tel. No.: 9845682879 • **LAKSHMI WOOD N SPACE.** Tel. No.: 9845814584 • **MAGNUM FURNITURE** Tel. No.: 9886785573 • **MAHAVEER MARKETING.** Tel. No.: 9845666091 • **MAYUR TEX.** Tel. No.: 9986370027 • **MODERNITIVE.** Tel. No.: 9986112622 • **NEW LIFESTYLE FURNITURES.** Tel. No.: 9902348921 • **R. R. ENTERPRISES.** Tel. No.: 9845034445 • **RAJAJAESHWARI FURNITURE.** Tel. No.: 9880805554 • **SRI MATHAJI PLASTICS.** Tel. No.: 8291121164 • **SRI VENKATESWARA MARKETING.** Tel. No.: 9448227833 • **I5 INTERIORS - BANGALORE (URBAN)** Tel. No.: 9844513131 • **WOOD MART - BANGLORE (URBAN).** Tel. No.: 9738794830 • **S. L. V. MARKETING.** Tel. No.: 9845788667 • **MISRA FURNITURE - THIPPASANDRA.** Tel. No.: 8197623269 • **FOAM TECH ENTERPRISES - BANAHA.** Tel. No.: 7022296091 • **THIRUVAIL: RUBY CERAMICS.** Tel. No.: 9945682881 • **BALLALBAGH: V. V. AGENCIES.** Tel. No.: 9845226077 • **UDUPI: DISHA MARKETING.** Tel. No.: 9448134941 / 8660233700

For franchise and trade enquiries, please contact: Sridhar Gowda: 9739777373, Arvind Mallya: 9620224007

makani

'ಇನಾಮ್ದಾರ್' ಕಥೆ ಗೊತ್ತೇ?

ಎಸ್ತರ್ ನೊರೋನ್ಹ

ಉತ್ತರ ಕರ್ನಾಟಕ ಮೂಲದ ಶಿವಾಜಿ ಮಹಾರಾಜರನ್ನು ಆರಾಧಿಸುವ 'ಇನಾಮ್ದಾರ್' ಕುಟುಂಬ ಹಾಗೂ ದಕ್ಷಿಣದ ಕರಾವಳಿ ಭಾಗದ ಕಾಡಿನಲ್ಲಿ ವಾಸಿಸುವ ಹಾಗೂ ಶಿವನ ಆರಾಧಕರಾದ ಕಾಡು ಜನರ ನಡುವೆ ನಡೆಯುವ ವರ್ಣಸಂಘರ್ಷದ ಕಥೆ 'ಇನಾಮ್ದಾರ್'. ಟ್ರೈಲರ್ ತುಂಬಾ ಭರವಸೆ ಮೂಡಿಸುವಂತಿದೆ. ಹಿಂದಿನ ಕಾಲಘಟ್ಟ ಮತ್ತು ಆಧುನಿಕ ಕಾಲಘಟ್ಟವನ್ನು ಮೇಳೈಸಿದ ಕಥಾ ವಸ್ತುವಿನಂತಿದೆ. ಸಹಜವಾಗಿ ಚಿತ್ರದ ಬಗ್ಗೆ ಕುತೂಹಲ ಹುಟ್ಟಿಸಿದೆ.

ಈ ಚಿತ್ರಕ್ಕೆ 'ಕಪ್ಪು ಸುಂದರಿಯ ಸುತ್ತ' ಎಂಬ ಅಡಿಬರಹವಿದೆ. ಈಗಾಗಲೇ ಚಿತ್ರೀಕರಣ ಮುಕ್ತಾಯವಾಗಿದೆ. ಬೆಳಗಾವಿ, ಕುಂದಾಪುರ ಮುಂತಾದ ಕಡೆ ಚಿತ್ರೀಕರಣ ನಡೆದಿದೆ. ಡಬ್ಬಿಂಗ್ ಸಹ ಪೂರ್ಣವಾಗಿದೆ ಎಂದಿದ್ದಾರೆ ನಿರ್ದೇಶಕ ಸಂದೇಶ್ ಶೆಟ್ಟಿ ಆಜ್ರಿ. ನಿರಂಜನ್ ಶೆಟ್ಟಿ ತಲ್ಲೂರು ಈ ಚಿತ್ರದ ನಿರ್ದೇಶಕರು.

ಕಾಡಿನ ನಾಯಕನಾಗಿ ಪ್ರಮೋದ್ ಶೆಟ್ಟಿ: 'ನನ್ನದು ಈ ಚಿತ್ರದಲ್ಲಿ ಕಾಡಿನ ನಾಯಕನ ಪಾತ್ರ. ತುಂಡು ಉಡುಗೆ, ಮೈ ಪೂರ್ತಿ ಕಪ್ಪು ಬಣ್ಣವಿರುತ್ತದೆ. ಬಣ್ಣ ಹಾಕಲು ಎರಡು ಗಂಟೆ, ತೆಗೆಯಲು ಐದು ಗಂಟೆ ಹಿಡಿಯುತ್ತಿತ್ತು' ಎಂದು ಚಿತ್ರೀಕರಣದ ಅನುಭವವನ್ನು ಪ್ರಮೋದ್ ಶೆಟ್ಟಿ ಹಂಚಿಕೊಂಡರು.

'ಅಭಿನಯದ ಅನುಭವವಿಲ್ಲದ ನನಗೆ ಅಭಿನಯ ಹೇಳಿಕೊಟ್ಟವರು ನಿರ್ದೇಶಕರು. ನನ್ನ ಅಭಿನಯ ಚೆನ್ನಾಗಿ ಬಂದಿದ್ದರೆ ಅದಕ್ಕೆ ನಿರ್ದೇಶಕರೆ ಕಾರಣ' ಎಂದರು ನಿರಂಜನ್ ಛತ್ರಪತಿ.

ಚಿರಶ್ರೀ ಅಂಚಿನ್, ಎಸ್ತರ್ ನರೋನ್ಹಾ, ಎಂ.ಕೆ.ಮಠ, ರಘು ಪಾಂಡೇಶ್ವರ ತಾರಾಗಣದಲ್ಲಿದ್ದಾರೆ. ಸಂಗೀತ ನಿರ್ದೇಶಕ ರಾಕಿ ಸೋನು, ಛಾಯಾಗ್ರಾಹಕ ಮುರಳಿ, ಸಂಕಲನಕಾರ ಶಿವರಾಜ್ ಮೇಹು ಹಾಗೂ ನೃತ್ಯ ನಿರ್ದೇಶಕಿ ಗೀತಾ ಸಾಯಿ ತಂಡದಲ್ಲಿದ್ದಾರೆ. ❖

ತಂತ್ರಜ್ಞಾನ

ಗರ್ಭಧಾರಣೆ ಟ್ರ್ಯಾಕಿಂಗ್‌ಗೆ ಸ್ಮಾರ್ಟ್‌ವಾಚ್

ದೇಶದ ಜನಪ್ರಿಯ ಕಂಪನಿಗಳಲ್ಲಿ ಒಂದಾದ 'ಸಿಸ್ಕಾ' ತನ್ನ ಅಕ್ಸೆಸರೀಸ್ ಹೆಸರಿನಲ್ಲಿ 'ಸಿಸ್ಕಾ ಡೊನ್ನಾ ಎಸ್‌ಎಸ್‌ಡಬ್ಲ್ಯು 106' ಸ್ಮಾರ್ಟ್‌ವಾಚ್ ಅನ್ನು ಕೆಲವು ದಿನಗಳ ಹಿಂದೆ ಬಿಡುಗಡೆ ಮಾಡಿದೆ.

ಈ ವಾಚ್ ದೀರ್ಘಾವಧಿಯ ಬ್ಯಾಟರಿ ಬಾಳಿಕೆ, ಆಕರ್ಷಕ ವಿನ್ಯಾಸ ಹಾಗೂ ಹಲವು ವೈಶಿಷ್ಟ್ಯಗಳೊಂದಿಗೆ ಗಮನ ಸೆಳೆಯುತ್ತದೆ. ವಾಚ್ ಅನ್ನು ವಿಶೇಷವಾಗಿ ಮಹಿಳೆಯರಿಗಾಗಿ ವಿನ್ಯಾಸಗೊಳಿಸಲಾಗಿದೆ ಎಂದು ಕಂಪನಿ ಹೇಳಿದೆ.

ಸ್ಮಾರ್ಟ್‌ವಾಚ್‌ನಲ್ಲಿ ಮಹಿಳೆಯರಿಗಾಗಿ ಗರ್ಭಧಾರಣೆಯ ಟ್ರ್ಯಾಕಿಂಗ್ ಅನ್ನು ಸಂಯೋಜಿಸಿದೆ. ಮಗುವಿನ ನಿರೀಕ್ಷೆಯಲ್ಲಿರುವ ಮಹಿಳೆಯರಿಗೆ ಆರೋಗ್ಯವನ್ನು ಹೇಗೆ ಸುಧಾರಿಸುವುದು ಎಂಬುದರ ಕುರಿತು ಶಿಫಾರಸುಗಳನ್ನು ನೀಡುತ್ತದೆ.

ಬೆಲೆ ಮತ್ತು ಲಭ್ಯತೆ: ಸಿಸ್ಕಾ ಡೊನ್ನಾ ಎಸ್‌ಎಸ್‌ಡಬ್ಲ್ಯು 106 ಸ್ಮಾರ್ಟ್‌ವಾಚ್‌ನ ₹5,999 ರಷ್ಟಿದೆ. ಗುಲಾಬಿ, ಚಿನ್ನದ (ಸ್ವರ್ಣ) ಬಣ್ಣದಲ್ಲಿ ಲಭ್ಯವಿದೆ. ಕಂಪನಿ ಹೇಳುವ ಪ್ರಕಾರ ಒಮ್ಮೆ ಪೂರ್ತಿ ಚಾರ್ಜ್ ಮಾಡಿದರೆ 2 ಗಂಟೆಗಳವರೆಗೆ ಬ್ಯಾಟರಿ ಬಾಳಿಕೆ ಬರುತ್ತದೆ.

ವೈಶಿಷ್ಟ್ಯಗಳು: ಮಹಿಳೆಯರ ಆರೋಗ್ಯವನ್ನು ಗಮನಿಸಿ ಮಾಹಿತಿ ನೀಡುವುದು ಸ್ಮಾರ್ಟ್‌ವಾಚ್ ಮುಖ್ಯ ಉದ್ದೇಶ. ಮಹಿಳೆಯರ ಋತುಚಕ್ರ, ಅಂಡಾಣು ಬಿಡುಗಡೆ ಅವಧಿ ಸೇರಿದಂತೆ ಇತರೆ ಆರೋಗ್ಯ ಸಂಬಂಧಿತ ಮಾಹಿತಿಯನ್ನು ವಾಚ್ ಟ್ರ್ಯಾಕ್ ಮಾಡುತ್ತದೆ. ಗೂಗಲ್ ಪ್ಲೇಸ್ಟೋರ್‌ನಲ್ಲಿ (Google Play) 'Syska Donna app' ಡೌನ್‌ಲೋಡ್ ಮಾಡಿಕೊಳ್ಳುವ ಮೂಲಕ ವಾಚ್ ಅನ್ನು ಕಾನ್ಫಿಗರ್ ಮಾಡಬಹುದು.

ಸ್ಮಾರ್ಟ್‌ವಾಚ್ ಬ್ಲೂಟೂತ್ ಮೂಲಕ ಕರೆ ಮಾಡುವ ಕಾರ್ಯವನ್ನು ಹೊಂದಿದ್ದು, ಬಳಕೆದಾರರಿಗೆ ಕರೆಗಳನ್ನು ಮಾಡಲು ಅಥವಾ ಸಂಪರ್ಕ ಕಡಿತಗೊಳಿಸಲು ಅನುಮತಿಸುತ್ತದೆ. ಇದು ಫೋನ್ ಕರೆ ದಾಖಲೆಗಳನ್ನು ಪರಿಶೀಲಿಸಲು, ನೆಚ್ಚಿನ ಸಂಪರ್ಕಗಳನ್ನು ಆಯ್ಕೆ ಮಾಡಲು, ವಿಳಾಸ ಪುಸ್ತಕವನ್ನು ಸಿಂಕ್ ಮಾಡಲು ಮತ್ತು ಗಡಿಯಾರದಿಂದಲೇ ವಾಲ್ಯೂಮ್ ಅನ್ನು ಹೊಂದಿಸಲು ಅನುಮತಿಸುತ್ತದೆ.

ಈ ವಾಚ್ ಸ್ಪ್ಯಾನ್ ಮೋಡ್ ಅನ್ನು ಹೊಂದಿದ್ದು, ಡಿಸ್‌ಪ್ಲೇಯನ್ನು ಎರಡು ಭಾಗಗಳಾಗಿ ವಿಭಜಿಸುವ ಮೂಲಕ ಬಳಕೆದಾರರಿಗೆ ಬಹುಕಾರ್ಯಕ್ಕೆ ಸಹಾಯ ಮಾಡುತ್ತದೆ.

ಇದು ಪಿಪಿಜಿ ತಂತ್ರಜ್ಞಾನದ ಆಧಾರದ ಮೇಲೆ ಹೃದಯ ಬಡಿತ ಮತ್ತು ರಕ್ತದಲ್ಲಿರುವ ಆಮ್ಲಜನಕದ ಮಟ್ಟವನ್ನು ಮೇಲ್ವಿಚಾರಣೆ ಮಾಡುವ SpO2 ಮತ್ತು ಹೃದಯ ಬಡಿತ ಟ್ರ್ಯಾಕಿಂಗ್ ಕಾರ್ಯವನ್ನು ಹೊಂದಿದೆ. ಜೊತೆಗೆ ರಕ್ತದೊತ್ತಡದ ಮಾಪನ (ರೇಟಿಂಗ್ಸ್) ಪರಿಶೀಲಿಸಿಕೊಳ್ಳಬಹುದು. ಸ್ಮಾರ್ಟ್‌ವಾಚ್ ಬಳಕೆದಾರರಿಗೆ ತಾಪಮಾನ ಬದಲಾವಣೆ ಸೇರಿದಂತೆ ಮಳೆ, ಮೋಡ, ಬಿಸಿಲಿನಂಥ ಹವಾಮಾನ ಪರಿಸ್ಥಿತಿಗಳ ಬಗ್ಗೆ ಮಾಹಿತಿ ಒದಗಿಸಲಿದೆ.

ಬಳಕೆದಾರರ ಕ್ಯಾಲೊರಿಗಳನ್ನು ಮತ್ತು ಪ್ರಯಾಣಿಸಿದ ದೂರವನ್ನು ಟ್ರ್ಯಾಕ್ ಮಾಡುತ್ತದೆ. ಜೊತೆಗೆ ಗೌಪ್ಯತೆಯನ್ನು ರಕ್ಷಿಸಲು ಸ್ಮಾರ್ಟ್‌ವಾಚ್‌ನಲ್ಲಿರುವ ಅಂತರ್ನಿರ್ಮಿತ ವೈಶಿಷ್ಟ್ಯವನ್ನು ಬಳಸಿಕೊಂಡು ಬಳಕೆದಾರರು ಪರದೆಯನ್ನು (ಡಿಸ್‌ಪ್ಲೇ) ಲಾಕ್ ಮಾಡಬಹುದು.

ಪ್ಲೇ, ವಿರಾಮ, ಮುಂದಿನ ಮತ್ತು ಹಿಂದಿನ ಹಾಡನ್ನು ಆಯ್ಕೆ ಮಾಡುವ ಮೂಲಕ ಮತ್ತು ವಾಲ್ಯೂಮ್ ಅನ್ನು ಸರಿಹೊಂದಿಸುವ ಮೂಲಕ ಬಳಕೆದಾರರು ವಾಚ್‌ನಿಂದಲೇ ಸಂಗೀತವನ್ನು ನಿಯಂತ್ರಿಸಬಹುದು. ❖

'ಕಬ್ಜ' ಹಿಂದಿ ಹಕ್ಕು ಮಾರಾಟ

ಉಪೇಂದ್ರ ಮತ್ತು 'ಕಿಚ್ಚ' ಸುದೀಪ್ ಅಭಿನಯದ ಪ್ಯಾನ್ ಇಂಡಿಯಾ ಚಿತ್ರ 'ಕಬ್ಜ'ದ ಹಿಂದಿ ಅವತರಣಿಕೆಯ ಹಕ್ಕುಗಳನ್ನು ಬಾಲಿವುಡ್‌ನ ಪ್ರತಿಷ್ಠಿತ ನಿರ್ಮಾಣ ಮತ್ತು ವಿತರಣಾ ಸಂಸ್ಥೆ ಆನಂದ್ ಮೋಷನ್ ಪಿಕ್ಚರ್ಸ್ ಪಡೆದುಕೊಂಡಿದೆ. ಗುರುವಾರ 'ಕಬ್ಜ' ಚಿತ್ರದ ಹಿಂದಿ ಟೀಸರ್ ಬಿಡುಗಡೆಯಾಗಿದೆ.

ಆರ್. ಚಂದ್ರು ನಿರ್ಮಿಸಿ, ನಿರ್ದೇಶಿಸಿರುವ ಈ ಚಿತ್ರದ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಪ್ರಗತಿಯಲ್ಲಿದೆ. ಮುಂದಿನ ವರ್ಷ ಸಿನಿಮಾ ಬಿಡುಗಡೆಯಾಗಲಿದೆ. ಸದ್ಯದಲ್ಲೇ ಚಿತ್ರದ ಬಿಡುಗಡೆ ದಿನಾಂಕವನ್ನು ಅಧಿಕೃತವಾಗಿ ಘೋಷಿಸುವುದಾಗಿ ಚಂದ್ರು ತಿಳಿಸಿದ್ದಾರೆ.

'ಸ್ವಾತಂತ್ರ್ಯ ಹೋರಾಟಗಾರ ಅಮರೇಶ್ವರನ ಮಗ ಅರ್ಕೇಶ್ವರ, 1960-1984ರ ಅವಧಿಯಲ್ಲಿ ಭಾರತದಲ್ಲಿ ಭೂಗತ ಜಗತ್ತಿನ ರಾಜನಾಗುತ್ತಾನೆ ಮತ್ತು ಭಾರತೀಯ ಇತಿಹಾಸದಲ್ಲಿ ತನ್ನ ಛಾಪು ಮೂಡಿಸುತ್ತಾನೆ'... ಇಂಥದ್ದೊಂದು ಕಥೆ ಇರುವ 'ಕಬ್ಜ' ಚಿತ್ರದ ಮೇಲೆ ಇಡೀ ಭಾರತೀಯ ಚಿತ್ರರಂಗದಲ್ಲೇ ಸಾಕಷ್ಟು ಕುತೂಹಲ ಮತ್ತು ನಿರೀಕ್ಷೆಗಳಿವೆ. ಚಿತ್ರದಲ್ಲಿ ಕಿಚ್ಚ ಸುದೀಪ್ ಅವರು 'ಭಾರ್ಗವ್ ಭಕ್ಷಿ' ಎಂಬ ಬಹುಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, 'ಕಬ್ಜ' ಕೋಟೆಯಲ್ಲಿ 'ಮಧುಮತಿ'ಯಾಗಿ ಬಹುಭಾಷಾ ನಟಿ ಶ್ರಿಯಾ ಸರಣ್ ಬಣ್ಣಹಚ್ಚಿದ್ದಾರೆ. ಬಾಲಿವುಡ್‌ನ ಖ್ಯಾತ ನಟ ನವಾಬ್ ಶಾ ಹಾಗೂ ಕೆ.ಜಿ.ಎಫ್ ಸಿನಿಮಾದಲ್ಲಿ ರಾಜೇಂದ್ರ ದೇಸಾಯಿ ಪಾತ್ರ ನಿರ್ವಹಿಸಿದ್ದ ಲಕ್ಷ್ಮೀಶ ಲಕ್ಷ್ಮಣ್, ತಮಿಳಿನ 'ಐ' ಚಿತ್ರದ ಖ್ಯಾತಿಯ ಕಾಮರಾಜನ್, ಜಗಪತಿ ಬಾಬು, ರಾಹುಲ್ ದೇವ್, ಸುನೀಲ್ ಪುರಾಣಿಕ್, ಪ್ರಮೋದ್ ಶೆಟ್ಟಿ, ರಾಹುಲ್ ಜಗತಪ್, ಅನೂಪ್ ರೇವಣ್ಣ, ಜಾನ್ ಕೊಕ್ಕಿನ್, ನವೀನ್, ಕೋಟ ಶ್ರೀನಿವಾಸ್, ಜಯಪ್ರಕಾಶ್, ಕಾಟ್ ರಾಜು, ಸುಬ್ಬರಾಜು ಮುಂತಾದ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ. ❖

ಸಸ್ಪೆನ್ಸ್ ಥ್ರಿಲ್ಲರ್‌ನ 'ರೋನಿ'

ಶ್ರೀಮಂತ ಹುಡುಗಿಯ ಮನೆಯಲ್ಲಿ ದರೋಡೆ ನಡೆದಾಗ ಏನಾಯಿತು? ಇದಕ್ಕೆ ಉತ್ತರಿಸಲಿದೆ 'ರೋನಿ'. ಈ ಚಿತ್ರಕ್ಕೆ ಇತ್ತೀಚೆಗೆ ಪಂಚಮುಖಿ ಗಣಪತಿ ದೇವಸ್ಥಾನದಲ್ಲಿ ಮುಹೂರ್ತ ನೆರವೇರಿದೆ. ಲಕ್ಷೀ ಗಣಪತಿ ಸ್ಟುಡಿಯೋಸ್ ಮತ್ತು ರೋಶಿಕಾ ಎಂಟರ್‌ಪ್ರೈಸಸ್ ಬ್ಯಾನರ್ ಅಡಿ ಎಂ.ರಮೇಶ್ ಹಾಗೂ ಪವನ್‌ಕುಮಾರ್ ಅವರು ಈ ಚಿತ್ರ ನಿರ್ಮಿಸುತ್ತಿದ್ದಾರೆ. ಕಿರಣ್ ಆರ್.ಕೆ. ಚಿತ್ರದ ನಿರ್ದೇಶಕರು.

'ನಾಯಕಿಯ ಮನೆಯಲ್ಲಿರುವ ನಾಯಿ ಪ್ರಕರಣದ ಸುಳಿವು ನೀಡಿತೇ? ಮುಖ್ಯ ಕಥೆಯ ಸಾಗುತ್ತಿದ್ದಂತೆಯೇ ಎರಡು ಕೊಲೆಗಳು ನಡೆದದ್ದು ಏಕೆ? ಪೊಲೀಸರು ತನಿಖೆ ಮಾಡಿದ್ದು ಹೇಗೆ ಎಂಬೆಲ್ಲಾ ಕುತೂಹಲಗಳಿಗೆ ಉತ್ತರ ಸಿಗಲಿದೆ' ಎಂದಿದೆ ಚಿತ್ರತಂಡ.

ಚಿತ್ರಕ್ಕೆ ಧರ್ಮಕೀರ್ತಿರಾಜ್ ನಾಯಕ. ನವಪ್ರತಿಭೆ ಋತ್ವಿಪಟೇಲ್ ನಾಯಕಿ. ಉಳಿದಂತೆ ವರ್ಧನ್, ರಘುಪಾಂಡೇಶ್ವರ್, ಬಲರಾಜವಾಡಿ, ರತನ್‌ಕರತಮಾಡ ಮುಂತಾದವರು ನಟಿಸುತ್ತಿದ್ದಾರೆ. ಎರಡು ಹಾಡುಗಳಿಗೆ ರಾಜ್‌ಕಿಶೋರ್ ಸಂಗೀತ ಸಂಯೋಜಿಸುತ್ತಿದ್ದಾರೆ. ಛಾಯಾಗ್ರಹಣ ನಾಗರಾಜ ವೀನಸ್‌ಮೂರ್ತಿ, ಸಂಕಲನ ವೆಂಕಿ ಯುಡಿವಿ, ಸಾಹಸ ಕುಂಗುಫೂ ಚಂದ್ರು, ನೃತ್ಯ ಗೀತಾಸೈ, ಕಾರ್ಯಕಾರಿ ನಿರ್ಮಾಪಕ ಧರಂ ಸಲ್ವಾನಿ ಅವರದಾಗಿದೆ. ಬೆಂಗಳೂರು, ಮಂಗಳೂರು ಸುಂದರ ತಾಣಗಳಲ್ಲಿ ಚಿತ್ರೀಕರಣ ನಡೆಸಲು ತಂಡವು ಯೋಜನೆ ರೂಪಿಸಿಕೊಂಡಿದೆ. ❖

ಧರ್ಮಕೀರ್ತಿರಾಜ್, ಋತ್ವಿಪಟೇಲ್

'ಟೆಂಪರ್' ಟ್ರೈಲರ್ ಬಂತು

ಕನ್ನಡ ಚಿತ್ರರಂಗದಲ್ಲಿ ಏಳೆಂಟು ವರ್ಷಗಳಿಂದ ಸಾಹಿತಿ, ಸಂಗೀತ ಸಂಯೋಜಕರಾಗಿ ಸೇವೆ ಸಲ್ಲಿಸುತ್ತಿರುವ ಮಂಜುಕವಿ ಈಗ ನಿರ್ದೇಶಕರಾಗಿ 'ಟೆಂಪರ್' ಚಿತ್ರವನ್ನು ತೆರೆಗೆ ತರುತ್ತಿದ್ದಾರೆ.

ಕನ್ನಡ ಹಾಗೂ ತೆಲುಗು ಸೇರಿದಂತೆ 2 ಭಾಷೆಗಳಲ್ಲಿ ನಿರ್ಮಾಣವಾಗಿ, ಬಿಡುಗಡೆಗೆ ಸಿದ್ಧವಾಗಿರುವ ಈ ಚಿತ್ರದ ಟ್ರೈಲರ್ ಕಳೆದ ಸೋಮವಾರ ಚಲನಚಿತ್ರ ಕಲಾವಿದರ ಸಂಘದಲ್ಲಿ ಅನಾವರಣಗೊಂಡಿತು.

'ಮಕ್ಕಳನ್ನು ಚಿಕ್ಕವರಿದ್ದಾಗಲೇ ಸುಸಂಸ್ಕೃತರನ್ನಾಗಿ ಬೆಳೆಸದೆ ಹೋದರೆ ಮುಂದೆ ಅವರು ಹೇಗೆ ಸಮಾಜಕ್ಕೆ ಹೊರೆಯಾಗುತ್ತಾರೆ ಎನ್ನುವುದು ಚಿತ್ರದ ಒನ್‌ಲೈನ್ ಸ್ಟೋರಿ. ಮಕ್ಕಳ ಜೊತೆ ತಂದೆ-ತಾಯಿಯ ಬಾಂಧವ್ಯ ಹಾಗೂ ಸ್ನೇಹದ ಕುರಿತಾಗಿ ಉತ್ತಮ ಸಂದೇಶ ಕೂಡ ಚಿತ್ರದಲ್ಲಿದೆ' ಎಂದಿದೆ ಚಿತ್ರತಂಡ.

ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ಮಂಜುಕವಿ, 'ಕುಟುಂಬ ಸಮೇತ ನೋಡಬಹುದಾದ ಫ್ಯಾಮಿಲಿ ಎಂಟರ್‌ಟೈನರ್ ಚಿತ್ರ ಇದಾಗಿದೆ. ಮಾಸ್ ಸ್ಟೋರಿ ಜೊತೆಗೊಂದು ಪ್ರೇಮಕಥೆಯೂ ಇದೆ. ಬೆಂಗಳೂರು, ಮಂಡ್ಯ, ಮೈಸೂರು, ನಂಜನಗೂಡು, ಶ್ರೀರಂಗಪಟ್ಟಣ, ಚಿಕ್ಕಮಗಳೂರು ಹಾಗೂ ಕುಂದಾಪುರ ಸುತ್ತಮುತ್ತ 50 ದಿನಗಳ ಕಾಲ ಚಿತ್ರದ ಚಿತ್ರೀಕರಣ ನಡೆಸಲಾಗಿದೆ. ನಾಯಕ ಚಿಕ್ಕಹುಡುಗನಾಗಿದ್ದಾಗಿಂದಲೂ ಸಣ್ಣ ವಿಷಯಕ್ಕೂ ತಕ್ಷಣ ಕೋಪಗೊಂಡು ಟೆಂಪರ್ ಆಗುತ್ತಾನೆ. ತನ್ನ ಗುಣ ಆತನನ್ನು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಯಿತು ಎಂದು ಚಿತ್ರದ ಮೂಲಕ ಹೇಳಿದ್ದೇವೆ' ಎಂದರು.

'ಗ್ಯಾರೇಜ್ ಮೆಕ್ಯಾನಿಕ್ ಆದ ನಾಯಕ ಊರ ಗೌಡನ ಮಗಳು ಗೀತಾಳನ್ನು ಪ್ರೀತಿಸುತ್ತಾನೆ. ಗೌಡನ ಅಟ್ಟಹಾಸವನ್ನು ಮುರಿದು ನಾಯಕ ಹೇಗೆ ತನ್ನ ಕುಟುಂಬ ಹಾಗೂ ತನ್ನ ಪ್ರೇಯಸಿಯನ್ನು ಕಾಪಾಡಿಕೊಳ್ಳುತ್ತಾನೆ ಎನ್ನುವುದೇ 'ಟೆಂಪರ್' ಚಿತ್ರದ ಎಳೆ. ಚಿತ್ರದ ಕಥೆ, ಚಿತ್ರಕಥೆ ಹಾಗೂ 5 ಹಾಡುಗಳನ್ನು ನಾನೇ ಬರೆದಿದ್ದೇನೆ. ಈ ಚಿತ್ರದ ಮೂಲಕ ಆರ್ಯನ್ ಸೂರ್ಯ ಹಾಗೂ ಕಾಶಿಮಾ ರಫಿ ಮೊದಲಬಾರಿಗೆ ನಾಯಕ, ನಾಯಕಿಯಾಗಿ ಬಣ್ಣ ಹಚ್ಚಿದ್ದಾರೆ' ಎಂದರು ಅವರು.

ನಾಯಕ ಆರ್ಯನ್ ಸೂರ್ಯ ಮಾತನಾಡಿ, 'ಮೊದಲಚಿತ್ರ ಆರಂಭದಲ್ಲಿ ಭಯ ಇತ್ತು. ತಬಲಾನಾಣಿ ಅವರು ಚೆನ್ನಾಗಿ ಮಾಡು ಎಂದು ಧೈರ್ಯ ತುಂಬಿದರು. ಆಕ್ಷನ್ ಚೆನ್ನಾಗಿ ಮಾಡಲು ಮಾಸ್ ಮಾದ ಅವರೇ ಕಾರಣ' ಎಂದರು.

ನಾಯಕಿ ಕಾಶಿಮಾ ರಫಿ ಮಾತನಾಡಿ, 'ಚಿತ್ರದಲ್ಲಿ ನಾನು ಒಬ್ಬ ವೈದ್ಯಕೀಯ ವಿದ್ಯಾರ್ಥಿನಿ ಹಾಗೂ ಊರಗೌಡನ ಮಗಳು. ಮೆಕ್ಯಾನಿಕ್ ಒಬ್ಬನನ್ನು ಪ್ರೀತಿಸುತ್ತೇನೆ. ಆ ವಿಷಯ ನಮ್ಮ ಮನೆಯಲ್ಲಿ ಗೊತ್ತಾದ ನಂತರ ಏನಾಗುತ್ತೆ ಅನ್ನೋದು ಚಿತ್ರದಲ್ಲಿದೆ' ಎಂದು ಹೇಳಿದರು.

ನಟ ಮಿತ್ರ ಮಾತನಾಡಿ, 'ಮಂಜು ಪ್ರತಿಭಾವಂತ ಬರಹಗಾರ, ಸ್ನೇಹ ಮತ್ತು ಸಂಬಂಧದ ಸಾರವನ್ನು ಹೇಳುವ ಚಿತ್ರವಿದು. ಹಾಸ್ಯ ಇದ್ದರೂ ಮೆಚ್ಯೂರ್ ಆದಂಥ ಪಾತ್ರವನ್ನು ಮಾಡಿದ್ದೇನೆ' ಎಂದು ಹೇಳಿದರು.

ಶ್ರೀಬಾಲಾಜಿ ಎಂಟರ್ ಪ್ರೈಸಸ್ ಮೂಲಕ ವಿ. ವಿನೋದ್‌ಕುಮಾರ್ ಹಾಗೂ ಮೋಹನಬಾಬು ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಪತ್ರಕರ್ತ ಧನು ಯಲಗಚ್ ಹಾಗೂ ಮಜಾಟಾಕೀಸ್ ಪವನ್‌ಕುಮಾರ್ ನಾಯಕನ ಸ್ನೇಹಿತರಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ತಬಲಾನಾಣಿ, ಸುಧಾ ಬೆಳವಾಡಿ ನಾಯಕನ ತಂದೆ, ತಾಯಿಯಾಗಿ ನಟಿಸಿದ್ದಾರೆ. ನಾಯಕನ ಬಾಲ್ಯದ ಪಾತ್ರವನ್ನು ಮಾಸ್ಟರ್ ಪವನ್ ಮೋರೆ ಮಾಡಿದ್ದಾರೆ. ಈ ಚಿತ್ರದಲ್ಲಿ 5 ಹಾಡುಗಳಿದ್ದು ಆರ್.ಹರಿಬಾಬು ಸಂಗೀತ ಸಂಯೋಜನೆ ಮಾಡಿದ್ದಾರೆ. ಆರ್. ಕೆ.ಶಿವಕುಮಾರ್ ಅವರ ಕ್ಯಾಮರಾವರ್ಕ್ ಚಿತ್ರಕ್ಕಿದೆ. ❖

ಆರ್ಯನ್ ಸೂರ್ಯ, ಕಾಶಿಮಾ ರಫಿ

ಡಿ.9ರಂದು ತೆರೆಗೆ

ಪ್ರೀತಿಯ ನಾಲ್ಕು ಆಯಾಮಗಳನ್ನು ತೆರೆದಿಟ್ಟಿದೆ 'ಹೊಸ ದಿನಚರಿ'. ಆದರೆ ಆ ಪ್ರೀತಿ ಕೊನೆಯ ತನಕ ಉಳಿಯುತ್ತದೆಯೇ? ಹಾಗಾದರೆ ಕೊನೆ ತನಕ ನಮ್ಮ ಜೊತೆ ಇರುವವರು ಯಾರು? ಎಂಬದೇ 'ಹೊಸ ದಿನಚರಿ'ಯ ಕಥಾಸಾರಾಂಶ. ಸಿನಿಮಾ ಹೇಗಿದೆ ಎಂದು ತೆರೆಯಲ್ಲಿ ನೋಡಲು ಡಿಸೆಂಬರ್ 9ರವರೆಗೆ ಕಾಯಬೇಕು.

ಸಾಫ್ಟ್‌ವೇರ್ ಹಿನ್ನೆಲೆಯಿಂದ ಬಂದಿರುವ ಈ ಹುಡುಗರ ಹೊಸ ಪ್ರಯತ್ನವೇ ಈ ಚಿತ್ರ. ಶೂಲಿನ್ ಮೀಡಿಯಾ ಹೌಸ್ ಸಹಯೋಗದೊಂದಿಗೆ ಡೀಸ್ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಗಂಗಾಧರ್ ಸಾಲಿಮಠ ಅವರು ಈ ಚಿತ್ರ ನಿರ್ಮಿಸಿದ್ದಾರೆ. ಮೃತ್ಯುಂಜಯ ಶುಕ್ಲ ಹಾಗೂ ಅಲೋಕ್ ಚೌರಾಸಿಯಾ ನಿರ್ಮಾಣಕ್ಕೆ ಕೈಜೋಡಿಸಿದ್ದಾರೆ. ಕೀರ್ತಿ ಶೇಖರ್ ಹಾಗೂ ವೈಶಾಖ್ ಪುಷ್ಪಲತಾ ನಿರ್ದೇಶಕರು. ವೈಶಾಖ್ ವರ್ಮಾ ಅವರ ಸಂಗೀತವಿದೆ. ಅಶ್ವಿನ್ ಹೇಮಂತ್ ಹಿನ್ನೆಲೆ ಸಂಗೀತ ನೀಡಿದ್ದಾರೆ.

ಕಲಾವಿದರಾದ ಬಾಬು ಹಿರಣ್ಣಯ್ಯ, ಅರುಣಾ ಬಾಲರಾಜ್, ದೀಪಕ್ ಸುಬ್ರಹ್ಮಣ್ಯ, ಚೇತನ್ ವಿಕ್ಕಿ, ಮಂದಾರ, ವರ್ಷ ತಾರಾಗಣದಲ್ಲಿದ್ದಾರೆ ಛಾಯಾಗ್ರಹಣ ರಾಕಿ ಅವರದ್ದು. ❖

ಒನ್ ವ್ಯೂ ಸ್ಕ್ರೀನ್‌ಶಾಟ್, ರೆಕಾರ್ಡಿಂಗ್ ನಿರ್ಬಂಧ

ಜನಪ್ರಿಯ ಮೆಸೇಜಿಂಗ್ ಅಪ್ಲಿಕೇಶನ್ ವಾಟ್ಸ್‌ಆ್ಯಪ್, ನೂತನ ಅಪ್‌ಡೇಟ್ ಒಂದನ್ನು ಆ್ಯಂಡ್ರಾಯ್ಡ್ ಮತ್ತು ಐಫೋನ್ ಬಳಕೆದಾರರಿಗೆ ಬಿಡುಗಡೆ ಮಾಡಿದೆ.

ವಾಟ್ಸ್‌ಆ್ಯಪ್ ಮೂಲಕ ಬಳಕೆದಾರರು ಕಳುಹಿಸುವ ಫೋಟೊಗಳಿಗೆ ಒನ್ ವ್ಯೂ ಆಯ್ಕೆ ಮಾಡಿದ್ದರೆ, ಅವುಗಳನ್ನು ಸ್ಕ್ರೀನ್ ಶಾಟ್ ತೆಗೆಯಲು ಸಾಧ್ಯವಾಗುವುದಿಲ್ಲ. ಬಳಕೆದಾರರ ಖಾಸಗಿತನ ಮತ್ತು ಭದ್ರತೆಗೆ ಹೆಚ್ಚಿನ ಆದ್ಯತೆ ನೀಡುವುದಾಗಿ ಕಂಪನಿ ಹೇಳಿದ್ದು, ಒನ್ ವ್ಯೂ ಫೋಟೊವನ್ನು ಸ್ಕ್ರೀನ್ ಶಾಟ್ ತೆಗೆಯಲು ಯತ್ನಿಸಿದರೆ, ತಕ್ಷಣವೇ ಅಲ್ಲಿ ನಿರ್ಬಂಧದ ಸಂದೇಶ ಕಾಣಿಸಿಕೊಳ್ಳುತ್ತದೆ.

ಇದೇ ವೈಶಿಷ್ಟ್ಯವನ್ನು ಒನ್ ವ್ಯೂ ವಿಡಿಯೊಗಳಿಗೂ ವಾಟ್ಸ್‌ಆ್ಯಪ್ ಪರಿಚಯಿಸಿದೆ. ಬಳಕೆದಾರರು, ವಿಡಿಯೊಗಳನ್ನು ಒನ್ ವ್ಯೂ ಮೂಲಕ ಕಳುಹಿಸಿದರೆ, ಅದನ್ನು ಸ್ಕ್ರೀನ್ ರೆಕಾರ್ಡಿಂಗ್ ಮೂಲಕ ರೆಕಾರ್ಡ್ ಮಾಡಲು ಸಾಧ್ಯವಾಗುವುದಿಲ್ಲ. ಹೊಸ ಫೀಚರ್‌ನಿಂದ ಹೆಚ್ಚಿನ ಖಾಸಗಿತನ ಮತ್ತು ಸುರಕ್ಷತೆ ಸಾಧ್ಯವಾಗಲಿದೆ ಎಂದು ವಾಟ್ಸ್‌ಆ್ಯಪ್ ಹೇಳಿದೆಸ್ಕ್ರೀನ್‌ಶಾಟ್, ರೆಕಾರ್ಡಿಂಗ್ ನಿರ್ಬಂಧ ❖

ಕೊನೆಯ ಹಂತದಲ್ಲಿ 'ಆಪರೇಷನ್ ಲಂಡನ್ ಕೆಫೆ'

ಕವೀಶ್ ಶೆಟ್ಟಿ ಮತ್ತು ಮೇಘಾ ಶೆಟ್ಟಿ ಕಾಂಬಿನೇಷನ್ನಿನ ಸಡಗರ ರಾಘವೇಂದ್ರ ನಿರ್ದೇಶನದ ಆಪರೇಷನ್ 'ಲಂಡನ್ ಕೆಫೆ' ಚಿತ್ರ ತಂಡ ಕೊನೆಯ ಹಂತದ ಚಿತ್ರೀಕರಣಕ್ಕೆ ಸಜ್ಜಾಗುತ್ತಿದೆ.

'ಅದಕ್ಕೂ ಮೊದಲು ಮರಾಠಿ ಮೂಲದ ಮತ್ತೊಬ್ಬ ಸ್ಟಾರ್ ಕಲಾವಿದ ವಿರಾಟ್ ಮಡಕೆ ಅವರು ಕಾಣಿಸಿಕೊಂಡಿರುವ ಈ ಚಿತ್ರದ ಮಾಸ್ ಲುಕ್ ಕ್ಯಾರೆಕ್ಟರ್ ಪೋಸ್ಟರ್ ಬಿಡುಗಡೆಗೊಂಡಿದೆ. ಈ ಚಿತ್ರ ಕನ್ನಡ ಮರಾಠಿ ಹಿಂದಿ ತಮಿಳು ತೆಲುಗು ಮತ್ತು ಮಲಯಾಳಂ ಭಾಷೆಗಳಲ್ಲಿ ತಯಾರಾಗುತ್ತಿದೆ. ಚಿತ್ರ ರಸಿಕರಿಗೆ ಇಷ್ಟವಾಗುವ ರೀತಿಯಲ್ಲಿ ತೆರೆಯ ಮೇಲೆ ಕಾಣಿಸಿಕೊಳ್ಳಲಿದೆ' ಎನ್ನುವುದು ನಿರ್ದೇಶಕ ರಾಘವೇಂದ್ರ ಅವರ ಅನಿಸಿಕೆ.

ತನ್ನ ಮೊದಲ ಚಿತ್ರ 'ಜಿಲ್ಕಾ' ನಂತರ ಕವೀಶ್ ಶೆಟ್ಟಿ ಸಂಪೂರ್ಣ ಮಾಸ್ ಶೈಲಿಯಲ್ಲಿ ಈ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಈ ಚಿತ್ರದ ಇನ್ನೊಂದು ಹೈಲೈಟ್ ಅಂದರೆ ನಾಯಕಿ ಮೇಘಾ ಶೆಟ್ಟಿ. ಈ ಚಿತ್ರದಲ್ಲಿ ಬಜಾರಿ ಹಳ್ಳಿ ಹುಡುಗಿಯ ಪಾತ್ರದಲ್ಲಿ ತುಂಬಾ ಲವಲವಿಕೆಯಿಂದ ಕಾಣಿಸಿಕೊಂಡಿದ್ದಾರೆ. ಮರಾಠಿಯ ಶಿವಾನಿ ಸುರ್ವೆ, ವಿರಾಟ್ ಮಡಕೆ ಮುಂತಾದ ಹೆಸರಾಂತ ಕಲಾವಿದರು ಈ ಚಿತ್ರಕ್ಕಾಗಿ ಬಣ್ಣ ಹಚ್ಚಿದ್ದಾರೆ.

ಈಗಾಗಲೇ ಉಡುಪಿ ಚಿಕ್ಕಮಗಳೂರು ಸುತ್ತಮುತ್ತ, ಭಟ್ಕಳ, ಕಳಸದ ಕಾಡು ಮತ್ತು ಬೆಂಗಳೂರು ಇತ್ಯಾದಿ ಪ್ರೇಕ್ಷಣೀಯ ಸ್ಥಳಗಳಲ್ಲಿ ಚಿತ್ರೀಕರಿಸಲಾಗಿದೆ. ಇನ್ನು ಕೆಲವೇ ದಿನಗಳ ಚಿತ್ರೀಕರಣಕ್ಕಾಗಿ ಚಿತ್ರ ತಂಡ ಸಜ್ಜಾಗುತ್ತಿದೆ. ವಿಜಯ್ ಕುಮಾರ್ ಶೆಟ್ಟಿ ಹವರಾಲ್ ದೀಪಕ್ ರಾಣೆ ರಮೇಶ್ ಕೊಠಾರಿ ಮತ್ತು ವಿಜಯ್ ಪ್ರಕಾಶ್ ಇಂಡಿಯನ್ ಫಿಲಂ ಫ್ಯಾಕ್ಟರಿ ಮತ್ತು ದೀಪಕ್ ರಾಣೆ ಫಿಲ್ಮ್ ಲಾಂಛನದಲ್ಲಿ ಅದ್ದೂರಿಯಾಗಿ ನಿರ್ಮಾಣ ಮಾಡುತ್ತಿದ್ದಾರೆ. ❖

ಮೇಘಾ ಶೆಟ್ಟಿ